ಅಂತರ

ಡಾ. ಪಿ. ವಿ. ನಾರಾಯಣ

ಸೌಮ್ಯ ಎಂ.
ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು
ನಂ. 7/1, 'ವೈದೇಹಿ', ಎಂ.ಎಸ್. ಕೃಷ್ಣರಾವ್ ಪಾರ್ಕ್ ಎದುರು
ದಿವಾನ್ ಮಾಧವರಾವ್ ರಸ್ತೆ, ಬಸವನಗುಡಿ,
ಬೆಂಗಳೂರು – 560 004.

Anthara (Kannada): a social novel by Dr. P.V. Narayana ;
published by Sowmya M. No. 7/1, 'Vaidehi', Opp. M.N. Krishnarao
Park, Divan Madhavarao Road, Basavanagudi, Bangalore - 560 004.

First print : 1980
Second print : 2012

ಸಗಟು ಮಾರಾಟಗಾರರು :
ವಸಂತ ಪ್ರಕಾಶನ
360, 10ನೇ 'ಬಿ' ಮುಖ್ಯರಸ್ತೆ, 3ನೇ ಬ್ಲಾಕ್,
ಜಯನಗರ, ಬೆಂಗಳೂರು – 560 011.
ದೂರವಾಣಿ : 080–22443996
email : vasantha_prakashana @rediffmail.com

ಪ್ರಥಮ ಮುದ್ರಣ : 1980
ದ್ವಿತೀಯ ಮುದ್ರಣ : 2012
ಉಪಯೋಗಿಸಿದ ಕಾಗದ : 70 ಜಿಎಸ್‌ಎಂ ಮ್ಯಾಪ್‌ಲಿಥೊ
ಪುಟಗಳು : 158 ಬೆಲೆ : ರೂ. 95

ಅಕ್ಷರ ಜೋಡಣೆ : ವಸಂತಲಕ್ಷ್ಮಿ
ಮುದ್ರಣ : ಸ್ಟ್ಯಾಂಡರ್ಡ್ ಪ್ರಿಂಟರ್ಸ್

ಲೇಖಕನ ಮಾತು

ಇದು ನನ್ನ ಎರಡನೆಯ ಕಾದಂಬರಿ; 1980 ರಲ್ಲಿ ಮೊದಲು ಮುದ್ರಣಗೊಂಡಿತ್ತು; 1995 ರಲ್ಲಿ ಇದು ಮತ್ತೆ ಬೆಳಕು ಕಾಣಲು ಕಾರಣ ಮೈಸೂರು ವಿಶ್ವವಿದ್ಯಾನಿಲಯದ ಮೊದಲನೇ ಪದವಿ ತರಗತಿಗಳಿಗೆ ಪಠ್ಯಪುಸ್ತಕವಾಗಿದ್ದುದು. ಹೀಗಾಗಿ 1995–96 ನೇ ಸಾಲಿನಿಂದ ಕೆಲವು ವರ್ಷಗಳ ಕಾಲ ಇದು ಸಾವಿರಾರು ವಿದ್ಯಾರ್ಥಿಗಳ ಕಣ್ಣಿಗೆ ಬಿದ್ದುದು ಸಂತೋಷದ ವಿಷಯ. ಅದಾದ ಹದಿನೇಳು ವರ್ಷಗಳ ಬಳಿಕ ಈ ಕಾದಂಬರಿ ಮೂರನೆಯ ಮುದ್ರಣವಾಗಿ ಹೊರಬರುತ್ತಿರುವುದು ನಿಜವಾಗಿ ಹೆಮ್ಮೆಯೆನಿಸಿದೆ. ಲೇಖಕನೊಬ್ಬನಿಗೆ ತನ್ನ ಕೃತಿಯೊಂದು ಮತ್ತೆ ಮುದ್ರಣಗೊಳ್ಳುವುದಕ್ಕಿಂತ ಹೆಚ್ಚಿನ ಸಂತಸದ ವಿಷಯ ಬೇರೇನೂ ಇರಲಾರದು; ಅಂತಹ ಸಂತೋಷ ಈಗ ನನ್ನದು. ಅದು ಸಾಧ್ಯವಾಗಿರುವುದು ಶ್ರೀ ಮುರಳಿ ಅವರ ಅಭಿಮಾನ–ಔದಾರ್ಯಗಳಿಂದ. ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಮೊದಲು ಮುದ್ರಣಗೊಂಡಾಗ ಇದಕ್ಕೊಂದು ಬೆನ್ನುಡಿ ಬರೆದಿತ್ತಿದ್ದವರು ಪ್ರೊ. ಎಲ್.ಎಸ್. ಶೇಷಗಿರಿ ರಾವ್ ಅವರು. ಅದನ್ನೀಗಲೂ ಬಳಸಿಕೊಂಡಿದ್ದೇನೆ; ಅವರಿಗೆ ನಮಸ್ಕಾರಗಳು. ಇದರ ಅಕ್ಷರ ಜೋಡಣೆ ಮಾಡಿದ, ಮುದ್ರಿಸಿದ ಹಾಗೂ ರಕ್ಷಾಪುಟವನ್ನು ವಿನ್ಯಾಸಗೊಳಿಸಿದವರಿಗೆಲ್ಲ ನನ್ನ ವಂದನೆಗಳು.

ಬೆಂಗಳೂರು

ಪಿ. ವಿ. ನಾರಾಯಣ

೧

ಬೆಳಿಗ್ಗೆ ಒಂಬತ್ತು ಗಂಟೆಯ ಸಮಯವಾದರೂ ಏಪ್ರಿಲ್ ತಿಂಗಳ ಮಧ್ಯಭಾಗದ ಆಕಾಶ ನಿರಭ್ರವಾಗಿ ಚುರುಕು ಬಿಸಿಲನ್ನು ಚೆಲ್ಲುತ್ತಿತ್ತು. ವಿಶಾಲವಾದ ಹೊಲ ಪ್ರದೇಶವಾದರೂ ಬಂಡೆಗಳಿಂದ ತುಂಬಿದ ಜಾಗವೇ ಹೆಚ್ಚಾದ ಭೂಮಿ. ಅಲ್ಲೊಂದು ಇಲ್ಲೊಂದು ಜಾಲಿಮರವನ್ನು ಬಿಟ್ಟರೆ ಬೇರಾವ ಹೆಚ್ಚು ನೆರಳನ್ನು ನೀಡುವ ಮರವೂ ಕಾಣದ ಬೋಳು ಭೂಪ್ರದೇಶ. ಅದರ ನಡುವೆ ಜನ ನಡೆದೂ ನಡೆದು ಸವೆದಿರುವ ಕಾಲುದಾರಿ ಇಡೀ ಪ್ರದೇಶವನ್ನು ಇಬ್ಭಾಗವಾಗಿ ಸೀಳಿದಂತೆ ಕಾಣುತ್ತದೆ. ಅದರಲ್ಲಿ ಮುಂದೊಬ್ಬರು ಮುದುಕ, ಹಿಂದೆ ಹುಡುಗ ನಡೆಯುತ್ತಿದ್ದಾರೆ ; ದಾರಿ ನಿಧಾನವಾಗಿ ಸಾಗುತ್ತಿದೆ.

ಮುದುಕರೆಂದರೆ ತೀರ ಹಣ್ಣಾದವರೇನಲ್ಲ ; ಸುಮಾರು ಅರವತ್ತು ವಯಸ್ಸಿರಬಹುದು. ಆದರೆ ದೃಢಕಾಯನಾದ ಆತನಿಗೆ ಅಷ್ಟು ವಯಸ್ಸಾಗಿರುವಂತೆ ತೋರುವುದೇ ಇಲ್ಲ. ಶುಭ್ರವಾದ ಕಚ್ಚೆ ಪಂಚೆ, ಮೇಲೊಂದು ಷರಟು ; ಪಂಚೆಯನ್ನು ಕಾಲಿಗೆ ತೊಡದರಂತೆ ಮೇಲಕ್ಕೆ ಸಿಕ್ಕಿಸಿ, ಹುಡುಗ ಹಿಂದೆ ಬಿದ್ದಾನೆಂದು ನಿಧಾನವಾಗಿ ಹೆಜ್ಜೆಯಿಡುವ ಈತನ ಹಿಂದೆಯೇ ಸುಮಾರು ಒಂಬತ್ತು ವರ್ಷದ ಹುಡುಗ, ಸ್ಫುರದ್ರೂಪಿ ಯಾದರೂ ಬಡಕಲು ಶರೀರ. ಕೈಯಲ್ಲೊಂದು ಬ್ಯಾಗ್ ಹಿಡಿದಿದ್ದಾನೆ. ಕಾಲಿಗೆ ಚಪ್ಪಲಿಯಿಲ್ಲದ್ದರಿಂದ ನಡಿಗೆ ಬಹು ನಿಧಾನ, ಹಣೆಯ ಮೇಲೆ ಬೆವರು ಹನಿಗಟ್ಟಿದೆ.

ಯಾಕೋ ಹುಡುಗ ಹಿಂದೆ ಬಿದ್ದನೆಂದು ಮುದುಕರು ಹಿಂದೆ ನೋಡುತ್ತಾರೆ. ಹುಡುಗ ಬಾಗಿ ಕಾಲಿನಿಂದ ನೆಗ್ಗಿಲು ಮುಳ್ಳೊಂದನ್ನು ಕಿತ್ತು ಬಿಸಾಡಿ ಸ್ವಲ್ಪ ಕುಂಟುಗಾಲಿ ನಿಂದ ನಡೆಯಲು ತೊಡಗುತ್ತಾನೆ.

"ಯಾಕಯ್ಯಾ , ಮುಳ್ಳು ಚುಚ್ಚಿತಾ ? ನೋಡಿಕೊಂಡು ನಡಿ" ಎಂದು ಹೇಳಿದರೂ, ಹುಡುಗನಿಗೆ ಆಯಾಸವಾಗಿರಬೇಕೆಂದು ಆಲೋಚಿಸಿ, "ಸ್ವಲ್ಪ ಹೊತ್ತು ಸುಧಾರಿಸಿಕೋಬೇಕಾ ? ಇಲ್ಲೇ ಒಂದು ಹೊಲದ ಹತ್ರ ಬಾವಿ ಇದೆ. ಬಾ ನೀರು ಕುಡಿಯುವಂತೆ" ಎಂದು ಹೇಳುತ್ತಾರೆ. ಹುಡುಗನಿಗೆ ಬೇಕಾಗಿದ್ದದ್ದೂ ಅದೇ ; ಮಾತಿಲ್ಲದೆ ಅವರ ಹಿಂದೆ ಹೊರಡುತ್ತಾನೆ.

ಆಗಾಗ್ಗೆ ಮುಖ ಒರಸಿಕೊಳ್ಳುವ ಹುಡುಗನನ್ನು ಕಂಡರೆ ಅವನಿಗೆ ಇಷ್ಟು ಬಿಸಿಲಿನ ಪ್ರದೇಶದ ಬಳಕೆಯಿಲ್ಲವೆಂಬಂತೆ ಕಾಣುತ್ತದೆ. ಅಲ್ಲದೆ ಒಂಬತ್ತು ವರ್ಷದ ಎಳೆ ಹುಡುಗ. ಅದರಲ್ಲೂ ಅಷ್ಟೊಂದು ದೇಹಶ್ರಮದ ಪರಿಚಯವೂ ಇದ್ದವನಲ್ಲ. ಬಿಸಿಲಿನಿಂದಾಗಿ ಮುಖ ಕೆಂಪಗಾಗಿ ಹುಡುಗನ ಶ್ರಮವನ್ನು ಸೂಚಿಸುತ್ತದೆ.

ಆದರೆ ಆ ಹುಡುಗನಿಗೆ ಈ ನಿರ್ಜನವಾದ, ನೀರವವಾದ ಪರಿಸರ ಬೆರಗನ್ನೇ ತಂದಿದೆ. ಸದಾ ಜನಗಳಿಂದ ಜಿಟಿಗುಟ್ಟುವ ಬೆಂಗಳೂರಿನ ವಾತಾವರಣಕ್ಕೂ ಇಲ್ಲಿನ ಈ

ಬಯಲಿಗೂ ಅವನ ಎಳೆಯ ಕಣ್ಣುಗಳಿಗಾಗಿಲೇ ವ್ಯತ್ಯಾಸ ಗೊತ್ತಾಗಿ ಬಿಟ್ಟಿದೆ. ಅಲ್ಲೊಂದು ಇಲ್ಲೊಂದು ಕಾಣುವ ಮರಗಳನ್ನು ಹಾಯುವಾಗ ಹುಡುಗ ಹಿರಿಯರನ್ನು ಇದಾವ ಮರವೆಂದೋ ಗಿಡವೆಂದೋ ಪ್ರಶ್ನಿಸುತ್ತಾನೆ. ಇಂಥವೆಲ್ಲ ಗಿಡಗಳು ಇರಬಹುದೆಂಬ ಕಲ್ಪನೆ ಬರಲೂ ಬೆಂಗಳೂರಿನಲ್ಲಿ ಅವಕಾಶವಿರಲಿಲ್ಲವಲ್ಲ ! ಬೆಂಗಳೂರಿನಂತೆ ಶಬ್ದ ಇಲ್ಲಿ ಆರ್ಭಟಿಸುವುದಿಲ್ಲ. ಅಲ್ಲೊಂದು ಇಲ್ಲೊಂದು ಹಕ್ಕಿಯ ಕೂಗು ಬಿಟ್ಟರೆ ಶಬ್ದವೇ ಇಲ್ಲ. ಅದಕ್ಕೆ ಮೆತ್ತಗೆ ಮಾತಾಡಿದರೂ ಸ್ಪಷ್ಟವಾಗಿ ಕೇಳಿಸುತ್ತದೆಯಿಲ್ಲಿ.

ಸುತ್ತಲಿನ ಗಜಿಬಿಜಿಯಿಲ್ಲದೆ ಬೆಂಗಳೂರಿನ ಮನೆಯಲ್ಲಿ ಜನಗಳೂ ತುಂಬಿ ಮೊದಲೇ ಚಿಕ್ಕದಾದ ಮನೆ ಮತ್ತಷ್ಟು ಚಿಕ್ಕದಾಗಿರುವಂಥದು. ವಠಾರ ಬೇರೆ ; ಅದರಲ್ಲಿನ ಸಣ್ಣದೊಂದು ಮನೆಯಲ್ಲಿ ಆರು ಮಕ್ಕಳು - ಅವರಲ್ಲಿ ನಾಲ್ಕು ಗಂಡು ಎರಡು ಹೆಣ್ಣು ತಂದೆ - ತಾಯಿ - ಹೀಗೆ ಎಂಟು ಮಂದಿ ವಾಸಮಾಡಬೇಕು. ಬಡತನ ಬೇರೆ. ಗುಮಾಸ್ತನಾದ ತಂದೆಗೆ ಬರುವ ಸಂಬಳದಲ್ಲಿ ಇಷ್ಟು ದೊಡ್ಡ ಸಂಸಾರವನ್ನು ನಿಭಾಯಿಸುವುದೇನೂ ಸುಲಭವಲ್ಲ. ಇದ್ದುದರಲ್ಲಿ ಒಳ್ಳೆಯ ಬಟ್ಟೆಯೆಂದು ಈ ಹುಡುಗ ಹಾಕಿಕೊಂಡು ಬಂದಿದ್ದ ಬಟ್ಟೆಗಳೇ ಅಲ್ಲಲ್ಲಿ ಹರಿದಿದೆಯೆಂದ ಮೇಲೆ ಪ್ರತಿನಿತ್ಯ ಹಾಕಿಕೊಳ್ಳುವ ಉಡುಪಿನ ಸ್ವರೂಪವನ್ನು ಊಹಿಸಬಹುದು.

ಈ ಮುದುಕರ ಪರಿಸ್ಥಿತಿ ಸ್ವಲ್ಪ ಭಿನ್ನವಾದದ್ದು. ರೆವಿನ್ಯೂ ಖಾತೆಯಲ್ಲಿ ಗುಮಾಸ್ತರಾಗಿದ್ದರೂ ಇವರಿಗೆ ಪಿತ್ರಾರ್ಜಿತವಾದ ಸ್ವಲ್ಪ ಆಸ್ತಿಯಿದೆ. ಮಳೆ ಧಾರಾಳವಾಗಿ ಬೀಳುವ ಪ್ರದೇಶವಾಗಿದ್ದರೆ. ಅಥವಾ ನೀರಿನ ಇತರ ಬಗೆಯ ಆಸರೆಯಿದ್ದುದಾಗಿದ್ದರೆ ಸಾಕಷ್ಟು ಚೆನ್ನಾಗಿ ಬೆಳೆ ತೆಗೆದು ಸಾಹುಕಾರರಾಗಬಹುದಾಗಿದ್ದರೂ, ಈ ಬೆಂಗಾಡಿನಲ್ಲಿ ಭೂಮಿ ಹೆಚ್ಚಿದ್ದರೂ ಪ್ರಯೋಜನವಿಲ್ಲ. ತುಮಕೂರು ಜಿಲ್ಲೆಯ ಮೂಲೆಯಲ್ಲಿರುವ ಪಾವಗಡ ತಾಲ್ಲೂಕ್ ಹೀಗೆ ಗಂಗೆಯ ಮಲಮಗು ; ಅದರಲ್ಲಿಯೂ ಈ ಪೆಮ್ಮನಹಳ್ಳಿ ಬಡಕಲು. ಮಳೆ ಬರುವುದೆಂದರೆ ಜನಕ್ಕೆ, ಅದರಲ್ಲಿಯೂ ಮಕ್ಕಳಿಗೆ, ದೊಡ್ಡ ಹಬ್ಬ ಬಂದಂತೆ. ಇಂಥ ಕಡೆ ಭೂಮಿಯನ್ನು ನೆಚ್ಚಿಕೊಂಡವರು ಸಾಹುಕಾರರಾಗಿರಲು ಸಾಧ್ಯವಿಲ್ಲ. ಆದರೆ ಈ ಹಿರಿಯರು ಸಾಕಷ್ಟು ನೆಮ್ಮದಿಯಿಂದ ಬಾಳುವಷ್ಟು ಜಮೀನಿನ ಒಡೆಯರು.

ಒಡೆಯರೆಂದರೆ ಇವರು ನೋಡಿಕೊಳ್ಳುತ್ತಿದ್ದ ಜಮೀನೆಲ್ಲ ಇವರದೇ ಏನಲ್ಲ. ಇವರಿಗೊಬ್ಬ ತಮ್ಮನಿದ್ದಾನೆ. ಇನ್ನೂ ಮೇಷ್ಟರಾಗಿ ಕೆಲಸ ಮಾಡುತ್ತಿರುವ ಆತ ಒಂದೆಡೆ ನಿಲ್ಲುವುದಕ್ಕೆ ಸಾಧ್ಯವಿಲ್ಲ. ಇವರು ತಾನೇ ಇದುವರೆಗೆ ಈ ಹಳ್ಳಿಯಲ್ಲಿ ಎಲ್ಲಿದ್ದರು ? ಈಗೊಂದು ವರ್ಷದಿಂದೀಚೆಗಷ್ಟೇ ಇವರಿಗೆ ರಿಟೈರ್ ಆಯಿತು. ಒಳ್ಳೆಯ ಕೆಲಸಗಾರ, ನಿಷ್ಪಕ್ಷಪಾತಿಯೆಂದು ಹೆಸರು ಪಡೆದಿದ್ದ ನೌಕರ. ಸಾಕಷ್ಟು ಊರುಗಳನ್ನು ಕಂಡು, ವಿವಿಧ ಬಗೆಯ ಜನಗಳ ಜೊತೆಗೆ ಸಂಪರ್ಕ ಬೆಳೆಸಿ ತಮ್ಮ ಅನುಭವವನ್ನು ಶ್ರೀಮಂತವಾಗಿಸಿ ಕೊಂಡವರು. ಮೊದಲೇ ಗಂಭೀರ ಸ್ವಭಾವದವರಾದ ಇವರಿಗೆ ಅನುಭವದ ಆಳ ಸೇರಿಕೊಂಡು ಮುಖದ ಮೇಲೆ ಒಂದು ಬಗೆಯ ತೇಜಸ್ಸು ಕಾಣುತ್ತಿತ್ತು.

ತಮ್ಮನಿಗೆ ಮೂರು ಜನ ಮಕ್ಕಳಾಗಿದ್ದರೂ, ಇವರ ದುರ್ದೈವ, ಇವರಿಗೆ ಒಬ್ಬರೂ ಮಕ್ಕಳಿರಲಿಲ್ಲ. ಮಕ್ಕಳೇ ಆಗಲಿಲ್ಲ ಎಂದೇನೂ ಅಲ್ಲ ; ಒಂದೆರಡು ಆಗಿ ಎಳೆತನದಲ್ಲೇ ತೀರಿಕೊಂಡಿದ್ದವು. ಅನಂತರ ಇವರ ಹೆಂಡತಿ ನಾಲ್ಕಾರು ಗರ್ಭಪಾತಗಳನ್ನು ಎದುರಿಸಿದ್ದರು ಅಷ್ಟೆ. ಪ್ರಾಯಶಃ ಆ ಕಾರಣದಿಂದಲೋ ಏನೋ ನಮ್ಮ ಈ ಹಿರಿಯರ ಮುಖದ ಗಾಂಭೀರ್ಯದ ಹಿಂದೆ ಖಿನ್ನತೆ ಮನೆ ಮಾಡಿಕೊಂಡಿರುವುದು ಸೂಕ್ಷ್ಮಜ್ಞರಿಗೆ ಮಾತ್ರ ಗೊತ್ತಾಗುವಂತಹುದು. ತಮ್ಮ ಮನಸ್ಸಿನಲ್ಲಾಗುವ ಅನಿಸಿಕೆಗಳನ್ನು ಯಾರೊಂದಿಗೂ ತೋಡಿಕೊಳ್ಳದೆ ತಾವೇ ನುಂಗುವ ಸ್ವಭಾವ, ಎಲ್ಲವನ್ನೂ ಎದುರಿಸುವ ಕೆಚ್ಚು ಇವರದು.

ಇವರ ಮಡದಿ ಮಾತ್ರ ಸ್ವಲ್ಪ ಭಿನ್ನ ಸ್ವಭಾವದವರು. ಸರಸಮ್ಮನವರೆಂದರೆ, ಹೆಸರಿಗೆ ಅನುಗುಣವಾಗಿ, ಎಲ್ಲರ ಜೊತೆಗೆ ಬೇರೆಯುವರು. ಹಾಗೆಂದು ಈಕೆಯಾದರೂ ತನ್ನ ದುಃಖವನ್ನು ಎಲ್ಲರಿಗೂ ತೋಡಿ ಹಂಚುವ ಚಪಲಸ್ವಭಾವದವರೇನಲ್ಲ. ಆದರೂ ಹೆಂಗಸು ತಾನೇ ; ತನ್ನ ದುರದೃಷ್ಟವನ್ನು ಹಲವಾರು ಬಾರಿ ತೋಡಿಕೊಂಡು ಕಣ್ಣೀರು ಸುರಿಸಿದ್ದುಂಟು. ಗಂಡನ ತಾತ್ವಿಕ ಸ್ವಭಾವವನ್ನು ಅರ್ಥ ಮಾಡಿಕೊಳ್ಳಬಲ್ಲವರಾಗಿದ್ದರೂ ಸರಸಮ್ಮ ಅವರಂತೆ ಅವರಷ್ಟು ಮಟ್ಟಿಗೆ ಅಂತರ್ಮುಖಿಯಾಗಿರಲಾರರು. ತಮ್ಮ ಒಂಟಿತನದ ಬಾಳುವೆಯನ್ನು ಆದಷ್ಟು ಜನಗಳ ಜೊತೆಗಿದ್ದು ಕಳೆದುಕೊಂಡವರು, ಅವರಿವರ ಕಷ್ಟದಲ್ಲಿ ಆಗ ಕೊಡುಗೈಯಾಗಿದ್ದವರು.

ಗಂಡ-ಹೆಂಡಿರ ಈ ಒಂಟಿತನದ ಬಾಳುವೆ ಕಾಶೀಪತಿಯವರು ಕೆಲಸದಲ್ಲಿರುವಷ್ಟು ಕಾಲ ಅಷ್ಟೊಂದು ಪೀಡಿಸಿರಲಿಲ್ಲ. ಅವರ ಸರ್ವೀಸೆಲ್ಲ ಆಗಿದ್ದದ್ದು ದೊಡ್ಡ ಊರುಗಳಲ್ಲಿಯೇ. ಅವರು ಕಂಡ ಚಿಕ್ಕ ಊರೆಂದರೆ ತಾಲ್ಲೂಕಿನ ಸ್ಥಳವೇ. ಆದರೆ ಅಲ್ಲಿಂದ ಸಾಹೇಬರ ಜೊತೆ ಸರ್ಕೀಟುಗಳಿಗೆ ಹೋಗಿ ನೂರಾರು ಹಳ್ಳಿಗಳನ್ನು ಸುತ್ತಿದ್ದವರು. ಹೀಗಾಗಿ ಜನಗಳ ಸಂಪರ್ಕ, ಓಡಾಟ, ಕೆಲಸಕಾರ್ಯಗಳ ನಡುವೆ ತಮ್ಮ ಸಂತಾನಹೀನತೆಯು ಅವರನ್ನು ಅಷ್ಟೊಂದು ಕಾಡಿರಲಿಲ್ಲ. ಮಧ್ಯೆ ಮಧ್ಯೆ ನಿಟ್ಟುಸಿರುಗಳಾಗಿ ಆ ವ್ಯಥೆ ಹೊರಹೊಮ್ಮಿರಬಹುದೇ ವಿನಾ ಅಸ್ತಿತ್ವವನ್ನೇ ದಹಿಸುವ ಬೆಂಕಿಯಾಗಿರಲಿಲ್ಲ.

ಕಾಶೀಪತಿಯವರಿಗೆ ರಿಟೈರಾಯಿತು, ರಾಮ-ಕೃಷ್ಣ ಎಂದು ಕಾಲಕಳೆಯುವ ಕಾಲ ಬಂತು. ತಮ್ಮ ಹಳ್ಳಿಗೆ ಹಿಂದಿರುಗಿದರು. ಮೊದಲೆ ಗದ್ದಲವಿರದ ಈ ಹಳ್ಳಿಯಲ್ಲಿನ ಪೂರ್ವಿಕರ ದೊಡ್ಡ ಮನೆ ಈಗ ಮತ್ತಷ್ಟು ಬಿಕೋ ಎನ್ನಲು ತೊಡಗಿತ್ತು. ತಮ್ಮಿಬ್ಬರ ಜೊತೆಗೆ ಆ ಮನೆಯಲ್ಲಿದ್ದದ್ದು ಕಾಶೀಪತಿಯವರ ತೀರ ವಯಸ್ಸಾದ ತಾಯಿ ಮಾತ್ರ. ಕಣ್ಣು ಕಾಣದ ಆಕೆ ಓಡಾಡುತ್ತಿದ್ದುದೇ ಇಲ್ಲ. ಇದ್ದ ಕಡೆಯೇ ಹೆಚ್ಚು ಕಾಲವಿರುತ್ತಿದ್ದಳು ; ಮಾತೂ ಕಡಿಮೆಯೇ. ಸಾಯಂಕಾಲದ ವೇಳೆ ಮಾತ್ರ ಆಕೆ ತನ್ನ ಕ್ಷೀಣಧ್ವನಿಯಲ್ಲಿ ಪುರಂದರದಾಸರ ಕೀರ್ತನೆಗಳನ್ನು ಗೊಣಗುಟ್ಟಿಕೊಳ್ಳುತ್ತಿದ್ದಳು. ಹೀಗಾಗಿ ದಿನವಿಡೀ ಮನೆ ಬಿಮ್ಮೆನ್ನುತ್ತಿತ್ತು. ಇದರಿಂದಾಗಿ ಈ ದಂಪತಿಗಳ ಒಂಟಿತನದ ಜೊತೆ ಹೊರಗಿನ ಮೌನ ಬಾಳಿಗಿಳಿದಿತ್ತು.

ಪ್ರತಿಯೊಂದಕ್ಕೂ ತಾವೇ ಓಡಾಡಬೇಕಾದ ಪರಿಸ್ಥಿತಿ, ಬೇರೆ. ಹಣಕಾಸಿನ

ವ್ಯವಹಾರವನ್ನಾಗಲೀ, ಹೊಲದ ಆಗುಹೋಗುಗಳನ್ನಾಗಲೀ ಕಾಶೀಪತಿಯವರು ಸಮರ್ಥವಾಗಿ ನೋಡಿಕೊಳ್ಳಬಲ್ಲವರಾಗಿದ್ದರೂ ತೀರ ಸಣ್ಣ ಪುಟ್ಟ ವಿಷಯಗಳಿಗೂ ತಾವೆ ಗಮನಹರಿಸಲು ಅವರಿಗೆ ಸಾಧ್ಯವಿರಲಿಲ್ಲ. ಉಗ್ರಾಣದಿಂದ ಏನಾದರೂ ತೆಗೆದುಕೊಳ್ಳ ಬೇಕಾದರೆ, ದಾರಿಯಲ್ಲಿ ಬಿದ್ದಿದ್ದ ಬಟ್ಟೆಯನ್ನು ನೂಕಬೇಕಾದರೆ ಮಡಿಯಲ್ಲಿದ್ದಾಗ ಸರಸಮ್ಮನವರು ಗಂಡನನ್ನೇ ಕೂಗಬೇಕಾಗುತ್ತಿತ್ತು. ಊಟಕ್ಕೆ ಎಲೆ ಹಾಕುವುದಾಗಲೀ, ಸಣ್ಣಪುಟ್ಟ ಸಾಮಾನುಗಳನ್ನು ಲಕ್ಷ್ಮೀಕಾಂತಶೆಟ್ಟಿಯ ಅಂಗಡಿಯಿಂದ ತರುವುದಾಗಲೀ, ಪೂಜೆಗೆ ಬಿಲ್ವಪತ್ರೆ ಕಣಗಿಲೆ ಹೂವುಗಳನ್ನು ತರುವುದಾಗಲೀ ಈ ಹಿರಿಯರಿಂದ ಮಾಡುವುದು ಕಷ್ಟವೆನಿಸುತ್ತಿತ್ತು.

ಜೊತೆಗೆ, ಇವೆಲ್ಲದಕ್ಕಿಂತ ಹೆಚ್ಚಾಗಿ, ನೀರು ಸೇದುವುದು, ಅದನ್ನು ತಂದು ಹಾಕುವುದು ಕಷ್ಟದ ಕೆಲಸ. ಗಂಡನಷ್ಟು ಗಟ್ಟಿಮುಟ್ಟಾಗಿ ಇರದ ಸರಸಮ್ಮನವರು ಹೆಚ್ಚಾಗಿ ಸೊರಗಿದ್ದು ಈ ಓಡಾಟದಿಂದ. ನೀರಿಗಾಗಿ ಓಡಾಡಿದ್ದರಿಂದ. ಹನುಮಂತರಾಯನ ಗುಡಿಯ ಪಕ್ಕದಲ್ಲಿದ್ದ ಬಾವಿಯಿಂದ ಪ್ರತಿ ಕೊಡ ನೀರನ್ನೂ ತರಬೇಕಾಗಿತ್ತು. ನೀರೋ ಮೂರು - ನಾಲ್ಕು ಆಳು ಕೆಳಗೆ. ಹಾಗೆ ನೋಡಿದರೆ ಇಲ್ಲೇ ವಾಸಿ. ಊರಿನ ಇತರ ಬಾವಿಗಳಲ್ಲಿ ನೀರು ಇದಕ್ಕಿಂತ ಆಳದಲ್ಲಿರುತ್ತಿತ್ತು. ಬ್ರಾಹ್ಮಣರು ಮಾತ್ರ ಉಪಯೋಗಿಸು ತ್ತಿದ್ದ ಈ ಬಾವಿಯಲ್ಲಿ ನೀರು ಅಷ್ಟೊಂದು ತಳಕ್ಕೆ ಹತ್ತದಿರಲು ಪ್ರಾಯಶಃ ಉಪಯೋಗಿಸುವವರ ಸಂಖ್ಯೆ ಕಡಿಮೆಯಾಗಿದ್ದುದೇ ಕಾರಣ. ಆದರೂ ಪ್ರತಿ ಕೊಡವನ್ನು ಸೇದಿ, ಅದನ್ನು ಮನೆಗೆ ಹೊತ್ತು ತಂದು, ಹಂಡೆ ತುಂಬಿಸಿ, ಕುಡಿಯಲು ಶೇಖರಿಸುವುದೆಂದರೆ ಸೊಂಟ ಬಿದ್ದು ಹೋಗುತ್ತಿತ್ತು. ದುಡ್ಡು ಕೊಡುತ್ತೇನೆಂದರೂ ಈ ಕೆಲಸವನ್ನು ತಮಗಾಗಿ ಮಾಡುವವರು ಆ ಚಿಕ್ಕ ಹಳ್ಳಿಯಲ್ಲಿ ಯಾರೂ ಇರಲಿಲ್ಲ.

ಕಾಶೀಪತಿಯವರು ಹೆಚ್ಚೇನೂ ಪರೀಕ್ಷೆ ಪಾಸುಮಾಡಿದವರಲ್ಲ. ಅವರ ಕಾಲಕ್ಕೆ ಅವರಷ್ಟು ಓದಿದವರೂ ತುಂಬ ಕಡಿಮೆ ಜನರಿದ್ದರು. ಆದರೆ ಅವರು ಕನ್ನಡದ ಸಾಕಷ್ಟು ಪುಸ್ತಕಗಳನ್ನು ಓದಿದ್ದರು, ಹಳೆಯ ಕಾವ್ಯಗಳಲ್ಲಿ ಕೆಲವಕ್ಕೆ ಸ್ವಂತವಾಗಿ ಅರ್ಥಮಾಡಿ ಕೊಳ್ಳುವಷ್ಟು ಜ್ಞಾನ ಅವರಲ್ಲಿತ್ತು. ಜೊತೆಗೆ, ಸಂಸ್ಕೃತದ ಗ್ರಂಥಗಳಿಗೆ ಕನ್ನಡದಲ್ಲಿ ಬರೆದಿದ್ದ ಟೀಕೆಗಳನ್ನು ಅವರು ಓದಿದ್ದರು. ಆದರೆ ಅವರ ರೆವಿನ್ಯೂ ಇಲಾಖೆಯ ಕೆಲಸದಲ್ಲಿ ಓದಿಗೆ ಅಷ್ಟೊಂದು ಕೆಲಸವಿರಲಿಲ್ಲ. ಆದರೆ ಓದಬೇಕೆನ್ನುವ, ತಿಳಿಯಬೇಕೆನ್ನುವ ಹಸಿವು ಅವರಲ್ಲಿನ್ನೂ ಇತ್ತು. ಹೀಗಾಗಿ ಅವರಲ್ಲಿ ಹಲವಾರು ಪುಸ್ತಕಗಳ ಸಂಗ್ರಹವಿತ್ತು. ಅದರಲ್ಲಿ ರಾಮಾಯಣ, ಭಾರತ, ಭಾಗವತಗಳಿಗೆ ಸಂಬಂಧಿಸಿದವುಗಳೇ ಹೆಚ್ಚು. ಜೊತೆಗೆ ಆರ್ಯಕೀರ್ತಿ, ವಚನ ಭಾರತ, ರಾಜಾ ಮಲಯಸಿಂಹದಂತಹ ಕೆಲವು ಹೊಸ ಪುಸ್ತಕಗಳೂ ನೆಮ್ಮದಿ ಕಂಡಿದ್ದವು.

ಸರಸಮ್ಮನವರೂ ಓದಿನ ಬಗ್ಗೆ ಆಸ್ಥೆ ತೋರಿಸುವವರೇ, ಕನ್ನಡವನ್ನು ಓದು ಬರೆಯುವಷ್ಟರಮಟ್ಟಿಗೆ ಅವರ ಶಿಕ್ಷಣ ನಡೆದಿತ್ತು. ತುಂಬ ಭಕ್ತಿಯ ಸ್ವಭಾವದ ಅವರ

ಬಾಯಲ್ಲಿ ಸದಾ ದೇವರ ನಾಮವೇ ಸುಳಿಯುತ್ತಿತ್ತು. ಭಗವದ್ಗೀತೆಯನ್ನು ಸಂಪೂರ್ಣವಾಗಿ ಅವರು ಬಾಯಿಪಾಠ ಮಾಡಿಕೊಂಡಿದ್ದರು. ಅದರ ಸಂಪೂರ್ಣ ಅರ್ಥ ಅವರಿಗೆ ಗೊತ್ತಿಲ್ಲದಿದ್ದುದು ಸ್ಪಷ್ಟವಾಗಿದ್ದರೂ ಸ್ಥೂಲವಾಗಿ ಅದರ ವಿಷಯ ಅವರಿಗೆ ಗೊತ್ತು.

ವಿದ್ಯೆಯ ಬಗ್ಗೆ ಆಸಕ್ತಿಯಿದ್ದ ಇವರಿಗೆ ತಮ್ಮ ಊರಿನಲ್ಲಿ ಆದಷ್ಟೂ ಹೆಚ್ಚಿನ ಓದಿಗೆ ಅವಕಾಶವಿರಬೇಕೆಂದು ಅನ್ನಿಸುತ್ತಿತ್ತು. ನಾಲ್ಕನೆಯ ತರಗತಿಯವರೆಗೆ ಮಾತ್ರವಿದ್ದ ಪ್ರೈಮರಿ ಸ್ಕೂಲು ಪೆಮ್ಮನಹಳ್ಳಿಯಲ್ಲಿತ್ತು. ಅಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆಯೂ ಗಣನೀಯವೇನಲ್ಲ. ಬ್ರಾಹ್ಮಣರು, ಲಿಂಗಾಯಿತರು, ಶೆಟ್ಟರ ಮನೆಯ ಹುಡುಗ- ಹುಡುಗಿಯರು ಶಾಲೆಗೆ ಸರಿಯಾಗಿ ಹೋಗುತ್ತಿದ್ದರೂ, ರೈತರ ಮಕ್ಕಳು ಸ್ಕೂಲಿಗೆ ಬರುವುದು ಕ್ರಮವಾಗಿರಲಿಲ್ಲ. ತಂದೆತಾಯಿಗಳೇ ಮಕ್ಕಳನ್ನು ಕುರಿಕಾಯಲು, ದನ ನೋಡಿಕೊಳ್ಳಲು, ಕಳೆ ಕೀಳಲು ಕಳಿಸುತ್ತಿದ್ದರು.

ಇಷ್ಟಾದರೂ ಕಾಶೀಪತಿಯವರು ತಾವು ರಿಟೈರಾಗಿ ಊರಿಗೆ ಬಂದ ಮೇಲೆ ಮಿಡಲ್ ಸ್ಕೂಲೊಂದನ್ನು ಮಂಜೂರು ಮಾಡಿಸಬೇಕೆಂದು ಪ್ರಯತ್ನಪಟ್ಟಿದ್ದರು. ಮೊದಮೊದಲು ಅಧಿಕಾರಿಗಳು ಇದರ ಬಗ್ಗೆ ಹೆಚ್ಚಿನ ಮುತುವರ್ಜಿಯನ್ನೇನೂ ತೋರಿಸಲಿಲ್ಲ. ಆದರೆ ಕಾಶೀಪತಿಯವರದು ಅವಿರತ ಪ್ರಯತ್ನ. ಸ್ಕೂಲು ಮಂಜೂರಾಗಲು ಕಾಣಬೇಕಾದ ಅಧಿಕಾರಿಗಳನ್ನು ಕಂಡರು, ತಾವು ಸರ್ವಿಸಿನಲ್ಲಿದ್ದಾಗ ಕೆಲಸಮಾಡಿದ್ದ ಕಚೇರಿಯ ಮೇಲಧಿಕಾರಿಗಳ ಮೂಲಕ ಹೇಳಿಸಿದರು, ಅಲ್ಲೊಂದು ಬಾರಿ ಇಲ್ಲೊಂದು ಬಾರಿ ಸ್ಕೂಲಿನ ಅವಶ್ಯಕತೆಯ ಬಗ್ಗೆ ಪೇಪರಿನಲ್ಲಿಯೂ ಬರೆದಿದ್ದರು. ಹೀಗಾಗಿ ಕೊನೆಗೆ ಮಿಡಲ್ ಸ್ಕೂಲೆಂದು ಮಂಜೂರಾಯಿತು. ಆದರೆ ಅದು ಮುಂದುವರೆಯುವ ಸಂಭವವು ಹೆಚ್ಚು ವಿದ್ಯಾರ್ಥಿಗಳು ಸೇರಿದಾಗ ಮಾತ್ರ !

ಕಷ್ಟಪಟ್ಟು ಕೆಲವು ಹುಡುಗರನ್ನು ಐದನೆಯ ತರಗತಿಗೆ ಸೇರಿಸಲು ಊರಿನ ಜನರ ಮನವೊಲಿಸಿದರು. ನೆರೆಯ ಕೆಲವು ಹಳ್ಳಿಗಳಿಗೆ ಹೋಗಿ, ಅಲ್ಲಿನ ಪ್ರಮುಖರನ್ನು ಕಂಡು ಅಲ್ಲಿಂದ ಕೆಲವು ವಿದ್ಯಾರ್ಥಿಗಳು ಸ್ಕೂಲು ಸೇರುವಂತೆ ಮಾಡಿದರು. ಆದರೆ ವಿಚಿತ್ರವೆಂದರೆ, ಯಾವ ಶಾಲೆಗಾಗಿ ತಾವು ಪ್ರಯತ್ನಪಟ್ಟರೋ ಅದಕ್ಕೆ ತಮ್ಮ ಮನೆಯಿಂದಲೇ ಹೋಗುವ ವಿದ್ಯಾರ್ಥಿ ಯಾರೂ ಇರಲಿಲ್ಲ. ಮೊದಲ ವರ್ಷ ಹದಿನಾಲ್ಕು ಬಾಲಕ ಬಾಲಕಿಯರನ್ನು ಕೂಡಿ ಹಾಕಿದ್ದರು. ಆದರೆ ಈಗ, ಅದರ ಮುಂದಿನ ವರ್ಷ ಐದನೆಯ ತರಗತಿಗೆ ಸೇರಿದ್ದದ್ದು ಕೇವಲ ಒಂಬತ್ತು ಮಂದಿ.

ಇವೆಲ್ಲವೂ ಸೇರಿ ಕಾಶೀಪತಿಯವರಲ್ಲಿ ಒಂದು ಆಲೋಚನೆಗೆ ಎಡೆ ಮಾಡಿಕೊಟ್ಟಿತು. ಯಾರಾದರೂ ಒಬ್ಬ ಹುಡುಗನನ್ನು ಕರೆತಂದು ತಮ್ಮ ಮನೆಯಲ್ಲಿರಿಸಿಕೊಂಡರೆ ಹೇಗೆ ? ತಮಗೂ ಸಹಾಯಕ್ಕೆ ಬರುತ್ತಾನೆ. ಶಾಲೆಗೆ ತಮ್ಮ ಮನೆಯಿಂದ ಒಬ್ಬ ಹುಡುಗನನ್ನು ಕಳಿಸಬಹುದು ; ಜೊತೆಗೆ, ಎಲ್ಲಕ್ಕಿಂತ ಹೆಚ್ಚಾಗಿ, ತಮ್ಮ ಒಂಟಿತನಕ್ಕೆ ಮದ್ದಾದೀತೆಂದು ಭಾವಿಸಿದನು. ತಮ್ಮ ಆಲೋಚನೆಗೆ ಹೆಂಡತಿಯ

ಒಪ್ಪಿಗೆಯನ್ನೂ ಪಡೆದರು. ಹಾಗೆ ನೋಡಿದರೆ, ಈ ಯೋಚನೆ ಗಂಡನಲ್ಲಿ ಮೂಡಿದ್ದರೂ ಹೆಚ್ಚು ಸಂತೋಷವಾದದ್ದು ಸರಸಮ್ಮನವರಿಗೇ.

''ಒಳ್ಳೇ ಆಲೋಚನೇಂದ್ರೆ, ಮನೆಗೂ ಒಂದು ಹುಡುಗ ದಿಕ್ಕಾಗುತ್ತೆ'' ಎಂದು ಆಕೆ ಮುಖ ಅರಳಿಸಿದ್ದರು.

ಆದರೆ ಯಾರನ್ನು ಕರೆತರುವುದೆಂಬುದೇ ಸಮಸ್ಯೆಯಾಯಿತು. ತಮ್ಮನ ಸ್ವಭಾವ ಸ್ವಲ್ಪ ವಿಚಿತ್ರ, ತನ್ನ ಮೇಲೆ ಅವನಿಗೆ ಸಂಶಯವೂ ಇರಬಹುದು ತನ್ನ ಪಾಲಿನ ದವಸವನ್ನು ಸರಿಯಾಗಿ ಕೊಡಲಾರನೆಂಬ ಗೊಣಗಾಟ ಕೇಳಿಸಿತ್ತು. ಅಲ್ಲದೆ ಅವನ ಹೆಂಡತಿ ಮಕ್ಕಳಲ್ಲಿ ಯಾರನ್ನೂ ಕಳಿಸಲಾರಳು. ಬೇರೆಯ, ಸಂಬಂಧವಿರದವರ ಮಕ್ಕಳನ್ನು ಕೇಳುವುದಾದರೂ ಹೇಗೆ ? ಯಾರನ್ನು ಕೇಳುವುದು ? ಎಂಬ ಸಮಸ್ಯೆ ಮುಂದಾಯಿತು.

ಕೊನೆಗೆ ಗಂಡ-ಹೆಂಡಿರಲ್ಲಿ ಚರ್ಚೆ ನಡೆದು ಒಮ್ಮತ ಮೂಡಿಬಂತು : ಸರಸಮ್ಮನ ತಮ್ಮ ಭುಜಂಗರಾವ್ ದೊಡ್ಡ ಸಂಸಾರಸ್ಥ ; ಆರು ಮಕ್ಕಳೊಂದಿಗೆ ಬೆಂಗಳೂರಿನಲ್ಲಿ ತನ್ನ ಗುಮಾಸ್ತಿಕೆಯ ಸಂಬಳದಿಂದ ಜೀವನ ನಡೆಸಲು ಹೆಣಗುತ್ತಿರುವವನು. ಅವರ ಗಂಡುಮಕ್ಕಳಲ್ಲಿ ಮೂರನೆಯವನು ಶ್ರೀನಿವಾಸ, ಸೀನು ತುಂಬ ಚೂಟಿಯಾಗಿದ್ದುದನ್ನು ಕಂಡಿದ್ದರು. ಅವನನ್ನೇ ಏಕೆ ಕರೆದುಕೊಂಡು ಬರಬಾರದು ಎಂದು ಆಲೋಚಿಸಿ, ಹಾಗೆ ಭುಜಂಗನಿಗೆ ಕಾಗದ ಹಾಕಿದ್ದರು. ಅಲ್ಲಿಂದ ಒಪ್ಪಿಗೆಯೂ ದೊರೆತಿತ್ತು.

ಬೆಂಗಳೂರಿನಲ್ಲಿ ಕೆಲಸವಿದ್ದಾಗೊಮ್ಮೆ ಹೋಗಿ ಸೀನುವನ್ನು ಕರೆದುಕೊಂಡು ಬರಲು ಕಾಶೀಪತಿಯವರ ನಿರ್ಧರಿಸಿದ್ದರು. ಅದಕ್ಕೀಗ ಸ್ಪಷ್ಟ ಸ್ವರೂಪ ಬಂದಿತ್ತು. ತಮ್ಮೊಡನೆ ಬರಲು ಸೀನು ಸಂತೋಷ-ಉತ್ಸಾಹಗಳನ್ನು ತೋರಿಸಿದ್ದ. ತಾನು ಬರುವುದಿಲ್ಲವೆಂದು ಹಟ ಹಿಡಿದರೆ ಹೇಗೆ ಎಂದು ಯೋಚನೆಗೀಡಾಗಿದ್ದ ಕಾಶೀಪತಿಯವರಿಗೆ ದೊಡ್ಡ ಹೊರೆ ಇಳಿದಿತ್ತು.

''ಸೀನುವಾದರೆ ನಿಮ್ಮ ಸ್ಕೂಲಿಗೆ ಸೇರೋದಕ್ಕೂ ಸರಿಯಾಗುತ್ತೆ. ಈಗ ಅವನು ನಾಲ್ಕನೇ ಕ್ಲಾಸು ಮುಗಿಸಿದ್ದಾನೆ, ಅವನೇನಾದರೂ ಬರೋದಕ್ಕೆ ಹಟ ಮಾಡಿದರೆ ತೀರ ಎಳೆ ಹುಡುಗರನ್ನು ಕರಕೊಂಡು ಬಂದ್ಬಿಡಬೇಡಿ ; ನಾವು ಅವರನ್ನು ನೋಡಿಕೊಳ್ಳೋದು ಕಷ್ಟವಾಗುತ್ತೆ.''

''ಅವನು ಬರಲ್ಲ ಅಂದರೆ ಏನು ಮಾಡಲಿ, ಹಾಗಾದ್ರೆ ?''

''ಏನೂ ಮಾಡಬೇಡಿ, ಬಲವಂತಾನೂ ಮಾಡಬೇಡಿ, ಇಷ್ಟವಿಲ್ಲದ ಮಗುವನ್ನ ಕರಕೊಂಡು ಬಂದು ಯಾಕೆ ಕಟ್ಟಿಹಾಕಬೇಕು, ಬರದಿದ್ದರೆ ಗಂಭೀರವಾಗಿ ಬಂದು ಬಿಡಿ'' ಎಂದು ಸೂಚನೆಯಿತ್ತಿದ್ದರು.

ಕಾಶೀಪತಿಯವರು ಹಾಗೆಂದುಕೊಂಡೇ ಬಂದಿದ್ದರು, ಸೀನುವಾದರೆ ಸುಮಾರು ಎಂಟು-ಒಂಬತ್ತು ವರ್ಷದವನು ; ಅತ್ತೆಗೆ ಸಹಾಯಮಾಡಬಲ್ಲ, ಅಂಗಡಿ - ಮುಂಗಟ್ಟು ಎಂದು ಸಣ್ಣಪುಟ್ಟ ಓಡಾಟ ನಡೆಸಬಲ್ಲ. ಅವನು ಬಾರದಿದ್ದರೆ ಯಾರೂ ಬೇಡ

ಎಂದುಕೊಂಡು ಬೆಂಗಳೂರನ್ನು ಸೇರಿದ್ದರು. ಆದರೆ ಸೀನುವಿನ ಉತ್ಸಾಹ ಅವರ ಯೋಚನೆಯನ್ನು ದೂರವಿರಿಸಿತ್ತು.

ಅವನ ತಂದೆ-ತಾಯಿಗಳು ''ಮಾವನ ಜೊತೆ ಅವರ ಊರಿಗೆ ಹೋಗ್ತೀಯೇನೋ ? ಅಲ್ಲೇ ಓದಿಕೊಂಡಿರ್ತೀಯಾ ?'' ಎಂದು ಕೇಳಿದಾಗ ಸೀನು ''ಹ್ಞೂ'' ಎಂದಿದ್ದ. ಕಾಶೀಪತಿಯವರು ಬಂದಾಗ ಅವರಿಗೆ ಊರಿನ ಬಗ್ಗೆ ಹಲವಾರು ಪ್ರಶ್ನೆ ಹಾಕಿದ್ದ.

''ನಿಮ್ಮ ಊರಲ್ಲಿ ಬತ್ತ ಕಳ್ಳೆಕಾಯಿ ಅವೆಲ್ಲ ಬೆಳೀತಾರಂತೆ ಹೌದಾ ?'' ಎಂದು ಬೆರಗಿನಿಂದ ಕೇಳಿದ್ದ.

''ಅಷ್ಟೇ ಅಲ್ಲ ಕಣಯ್ಯ ರಾಗಿ, ನವಣೆ, ಹಾರಕ, ಸಜ್ಜೆ ಎಲ್ಲ ಬೆಳೀತೀವಿ.''

''ನವಣೆ, ಹಾರಕ ಅಂದರೆ ಏನು ?''

'ಅವೂನು ರಾಗಿ ಬತ್ತ ಇದ್ದಾಗ್ಗೆ ಕಾಳುಗಳು ; ಬೀಸಿ ಹಿಟ್ಟುಮಾಡಿ ರೊಟ್ಟಿ ಮಾಡಬಹುದು.''

''ನಿಮ್ಮ ಊರು ಬೆಂಗಳೂರಷ್ಟು ಇದೆಯಾ ?'' ಎಂದಿದ್ದ.

''ಇಲ್ಲಪ್ಪ ಅದೊಂದು ಸಣ್ಣ ಹಳ್ಳಿ.''

''ಹಳ್ಳಿ ಅಂದರೆ ಹ್ಯಾಗಿರುತ್ತೆ ?'' ಎದೆಂದೂ ಹಳ್ಳಿಯನ್ನು ಕಾಣದ ಸೀನುವಿಗೆ ತಾನು ಹೋಗಬೇಕಾದದ್ದು ಹಳ್ಳಿಗೆ ಎಂದು ತಿಳಿದು ಅದರ ಬಗ್ಗೆ ಕುತೂಹಲ ಉಂಟಾಗಿತ್ತು.

''ಹಳ್ಳಿ ಅಂದರೆ ಚಿಕ್ಕ ಊರು, ಕಡಿಮೆ ಜನ, ಒಂದೇ ಒಂದು ಪ್ರೈಮರಿ ಸ್ಕೂಲು, ಈಗ ತಾನೆ ಮಿಡಲ್ ಸ್ಕೂಲು ಬಂದಿದೆ. ಆದಕ್ಕೇ ನೀನು ಸೇರಬೇಕು'' ಕಾಶೀಪತಿಯವರು ವಿವರಿಸಿದ್ದರು.

''ಹಾಗಾದರೆ ಅಲ್ಲಿ ಸಿಟಿ ಬಸ್ಸಿಲ್ಲವಾ ?''

''ಸಿಟಿ ಬಸ್ ಮಾತ್ರ ಅಲ್ಲ ಯಾವ ಬಸ್ಸು ಇಲ್ಲ.''

''ಹಾಗಾದರೆ ಅಲ್ಲಿಗೆ ಹೋಗೋದು ಹೇಗೆ ?''

''ನಮ್ಮೂರ್ರವರೆಗೂ ಬಸ್ಸಿಲ್ಲಪ್ಪ. ಆದರೆ ಅದರ ಹತ್ರ ಮೂರು ಮೈಲಿ ದೂರದಲ್ಲಿ ರಂಗಾಪುರ ಅಂತ ಇನ್ನೊಂದು ಹಳ್ಳಿ ಇದೆ. ಅಲ್ಲೀವರೆಗೂ ಬಸ್ಸು ಹೋಗುತ್ತೆ ಅಲ್ಲಿಂದ ನಮ್ಮೂರ್ರಿಗೆ ನಡಕೊಂಡು ಹೋಗಬೇಕು.''

ಇದನ್ನು ಕೇಳಿ ಸೀನುವಿನ ಉತ್ಸಾಹ ಸ್ವಲ್ಪ ಕಡಿಮೆಯಾಗಿತ್ತು. ಆದರೆ ಧಾನ್ಯಗಳನ್ನು ಬೆಳೆಯೋ ಗಿಡಗಳ ವಿಚಾರ, ಮಾವನ ಮನೆಯ ವಾಡೆಗಳಲ್ಲಿ ಅವನ್ನು ತುಂಬಿಟ್ಟಿರೋ ವಿಚಾರ, ಬಯಲು ನಾಟಕ, ತೊಗಲುಬೊಂಬೆ ಆಟ ಈ ವಿಚಾರಗಳೆಲ್ಲ ಮಾವನಿಂದ ತಿಳಿದುಕೊಂಡ ಮೇಲೆ ಅವನು ಹೆಚ್ಚು ಸಂತೋಷ ವ್ಯಕ್ತಪಡಿಸಿದ್ದ.

ತಮ್ಮ ಜವಾಬ್ದಾರಿ ಹಲವಾರು ರೀತಿಯಿಂದ ಇನ್ನು ಹೆಚ್ಚಾಯಿತೆಂದು, ಪೆಚ್ಚಾಗಿ ಹಿಂದೆ ಬರುತ್ತಿದ್ದ ಸೀನುವನ್ನು ಕಂಡಾಗ ಕಾಶೀಪತಿಯವರಿಗೆ ಅನ್ನಿಸಿತು.

''ಯಾಕೋ ? ಬೇಜಾರಾಯಿತಾ ?'' ಅವರ ಮಾತಲ್ಲಿ ತುಂಬಿತ್ತು. ತಮ್ಮನ್ನು ನಂಬಿ ಈ ಮಗು ತಂದೆತಾಯಿಯರನ್ನೂ ಬಿಟ್ಟು ಬಂದಿದೆಯಲ್ಲ ಎಂದು ಅವರಿಗೆ ಮನಸ್ಸು ಕಿರುಗುಟ್ಟಿತು.

''ಇಲ್ಲ'' ಎಂದ ಸೀನು ಕ್ಷೀಣದನಿಯಲ್ಲಿ.

''ಕಾಲು ನೋಯುತ್ತಾ?''

''ಸ್ವಲ್ಪ''

''ಹಾಗಾದರೆ ಇಲ್ಲೇ ಸ್ವಲ್ಪ ಹೊತ್ತು ಕೂತುಕೊಳ್ಳೋಣ'' ಎಂದು ಹೊಲದ ಮಧ್ಯೆಯಿಂದ ಬಾವಿಯ ಬಳಿ ಅವನನ್ನು ಕರೆದು ತಂದರು. ಅವನ ಕೈ ಹಿಡಿದು ನಿಧಾನವಾಗಿ ಆ ವಿಶಾಲವಾದ ಬಾವಿಯ ಆಳಕ್ಕೆ ಇಳಿದು ತಾವು ನೀರು ಕುಡಿದು, ಕೈ ಕಾಲು ಮುಖಗಳಿಗೆ ನೀರು ಎರಚಿಕೊಂಡರು. ಸೀನುವೂ ನೀರು ಕುಡಿದ.

ಮೇಲೆ ಬರುವಾಗ ಸೀನು ಒಮ್ಮೆ ಜಾರಿದ.

''ಮೆಲ್ಲಗೆ, ನೀರಿಗೆ ಬಿದ್ದು ಬಿಟ್ಟೀಯೇ, ಕೈ ಭದ್ರವಾಗಿ ಹಿಡಕೋ ಎಲ್ಲಾದ್ರೂ ನೀರಿಗೆ ಬಿದ್ರೆ ಮುಳುಗಿ ಹೋಗ್ತೀಯಾ.''

''ಮತ್ತೆ ಕೆಲವರು ನೀರಲ್ಲಿ ತೇಲ್ತಾರಲ್ಲ ?''

''ಅವರು ಈಜು ಕಲ್ತಿರ್ತಾರೆ ನೀನೂ ಈಜು ಕಲಿತ್ಕೋತೀಯಾ ?''

ಈಗ ಸೀನುವಿನ ಉತ್ಸಾಹ ಹೆಚ್ಚಾಯಿತು, ''ಓ'' ಎಂದ.

''ನಾವು ಬಸ್ಸಿನಿಂದ ಇಳಿದೆವಲ್ಲ, ಅದು ರಂಗಾಪುರ, ಆಮೇಲೆ ನಡಕೊಂಡು ಬರೋವಾಗ ಒಂದು ಪುಟ್ಟಹಳ್ಳಿ ಸಿಗತ್ತಲ್ಲ, ಅದು ಬೆಳ್ಳಿಬಟ್ಟಲು''

''ಬೆಳ್ಳಿಬಟ್ಟಲು ! ಎಷ್ಟು ಚೆನ್ನಾಗಿದೆ ಹೆಸರು'' ಎನ್ನಿಸಿತು ಹುಡುಗನಿಗೆ. ಸ್ವಲ್ಪ ದೂರ ನಡೆದು ಬಂದ ಮೇಲೆ ಎತ್ತರದ ದಿಣ್ಣೆಯ ಮೇಲೆ ಅವರು ನಿಂತಿದ್ದರು. ಅಲ್ಲಿಂದ ಮುಂದೆ ಮರಗಳ ಮಧ್ಯೆ ಮನೆಗಳು ದೂರದಿಂದಲೇ ಕಾಣಿಸಿದವು. ಅವುಗಳ ಪಕ್ಕದಲ್ಲೊಂದು ಕೆರೆ, ಅದರಲ್ಲಿದ್ದುದು ಮಾತ್ರ ಸ್ವಲ್ಪವೇ ನೀರು, ಪಾದ ಮುಳುಗುವಷ್ಟು ಅದರ ಕಡೆಗೆ ಸೀನುವಿನ ಗಮನ ಸೆಳೆದು ಕಾಶೀಪತಿಯವರು ಹೇಳಿದರು.

''ಅಲ್ಲಿ ನೋಡಪ್ಪ ಮನೆಗಳು ಕಾಣಿಸುತ್ತವಲ್ಲ, ಅದೇ ನಮ್ಮೂರು ಇನ್ನೇನು ಹತ್ತು ನಿಮಿಷ, ಊರು ಸೇರಿಬಿಡ್ತೀವಿ.''

''ನಿಮ್ಮೂರ ಹೆಸರೇನು ?''

''ಇನ್ನು ಮೇಲೆ ಇದು ನಿಮ್ಮೂರು ಕಣಪ್ಪ''

''ಹೌದಾ ?'' ಎಂದು ಸೀನು ಬೆರಗಾಗಿ, ಕಣ್ಣರಳಿಸುತ್ತ ತಾನೊಂದು ಇದುವರೆಗೆ ಕಾಣದ ಈ ಊರು ಇನ್ನು ಮೇಲೆ ತನ್ನ ಊರು ಎಂಬ ಭಾವನೆ ಅವನಲ್ಲಿ ವಿಲಕ್ಷಣ ಆಲೋಚನೆಯನ್ನುಂಟು ಮಾಡಿತು.

''ನಾನು ನೋಡೇ ಇಲ್ಲ; ಅದು ಹೇಗೆ ಇದು ನಮ್ಮೂರು ?''

''ಇನ್ನು ಮೇಲೆ ಅಲ್ಲೇ ಇರ್ತೀಯಲ್ಲ, ಯಾವ ಊರಲ್ಲಿ ನಾವು ವಾಸಮಾಡ್ತೀವೋ, ಯಾವ ಊರಿಗೆ ನಾವು ಹೊಂದಿಕೊಂಡಿರ್ತೀವೋ ಅದೇ ನಮ್ಮೂರು. ಹಾಗೆ, ಇನ್ನು ಮೇಲೆ ನೀನು ಇಲ್ಲೇ ಇರ್ತೀಯಲ್ಲ ಅದಕ್ಕೋಸ್ಕರ ಇದು ನಿಮ್ಮೂರೇ ಆಗುತ್ತೆ'' ಅವನಿಗೆ ಅಷ್ಟೊಂದು ಅರ್ಥವಾಗಲಿಲ್ಲ, ಗಮನ ಬೇರೆಡೆ ಸೆಳೆಯಲು ಕೇಳಿದ.

''ಅದರ ಹೆಸರೇನು ?''

''ಪೆಮ್ಮನಹಳ್ಳಿ'' ಆ ಹೆಸರನ್ನು ಸೀನು ಒಂದೆರಡು ಬಾರಿ ಹೇಳಿಕೊಂಡು ತನ್ನಲ್ಲಿ ತಾನು.

೨

ಸೀನು ಬೆಂಗಳೂರಿನಿಂದ ದೂರ ದೂರ ಬಂದಂತೆ ವಾತಾವರಣದ ವ್ಯತ್ಯಾಸ ಹೆಚ್ಚಾಗುತ್ತ ಹೋಗಿತ್ತು. ಪಾವಗಡಕ್ಕೆ ಬೆಂಗಳೂರಿನಿಂದ ಬರುವ ವೇಳೆಗಾಗಲೇ ಸಾಯಂಕಾಲ ಏಳು ಗಂಟೆಯಾಗಿತ್ತು, ಆದ್ದರಿಂದ ಕಳೆದ ರಾತ್ರಿ ಅಲ್ಲೇ ಕಳೆದಿದ್ದರು. ಅಲ್ಲಿನ ಹೆಲ್ತ್ ಇನ್ಸ್‌ಪೆಕ್ಟರ್ ಶಿವರಾಮಯ್ಯ ಹಿಂದಿನಿದಂಲೂ ಕಾಶೀಪತಿಗಳಿಗೆ ಪರಿಚಯವಿದ್ದುದ ರಿಂದ ರಾತ್ರಿ ಅವರ ಮನೆಯಲ್ಲಿ ಕಳೆದಿತ್ತು. ಆ ಹೊತ್ತಿಗೆ ಸೀನುವಿಗೆ ಆಯಾಸದಿಂದಾಗಿ ನಿದ್ದೆ ಆವರಿಸಿ ಬಂದಿತ್ತು. ಸುಮಾರು ಆರೇಳು ಗಂಟೆಗಳ ಸತತ ಬಸ್ ಪ್ರಯಾಣ ಅವನನ್ನು ನಿದ್ದೆಗೆ ದೂಡಿತ್ತು.

ಪೆಮ್ಮನಹಳ್ಳಿಯನ್ನು ಬೆಳಿಗ್ಗೆ ಹತ್ತುಗಂಟೆಗೆ ಸೇರುವ ಹೊತ್ತಿಗೆ, ಬೆಳಿಗ್ಗೆ ತಿಂದಿದ್ದ ತಿಂಡಿ ಸೀನುವಿನಲ್ಲಿ ಎಂದೋ ಕರಗಿ ಹೋಗಿತ್ತು . ನಡಿಗೆಯಿಂದಾಗಿ ಅವನ ಕಾಲುಗಳು ಪದ ಬೇರೆ ಹೇಳುತ್ತಿದ್ದವು.

ಮನೆಯನ್ನು ಸೇರಿದ ಅವನಿಗೆ ಸ್ವಲ್ಪ ಹೊತ್ತು ಏನೂ ತೋಚಿರಲಿಲ್ಲ. ಬಿರು ಬೇಸಿಗೆಯ ಮಧ್ಯಾಹ್ನದ ಬಿಸಿಲಿನಲ್ಲಿದ್ದವನು ಇದ್ದಕ್ಕಿದ್ದಂತೆ ಕಗ್ಗತ್ತಲನ್ನು ಹೊಕ್ಕಂತಾಗಿತ್ತು ಅವನ ಮನಃಸ್ಥಿತಿ. ಬೆಂಗಳೂರಿನ ಮನೆಯಲ್ಲಿ ಇಷ್ಟು ಹೊತ್ತಿಗೆ ಅಣ್ಣತಮ್ಮಂದಿರು, ಅಕ್ಕ-ತಂಗಿಯರ ಜೊತೆಯಲ್ಲಿ ಎಷ್ಟು ಬಾರಿ ಜಗಳವಾಡಿರುತ್ತಿದ್ದನೋ. ಇಲ್ಲಿ ಜನವೇ ಇರದ, ಇದ್ದರೂ ಹಿರಿಯರಿಂದ ತುಂಬಿದ ಪರಿಸರ.

ಬಂದ ತಕ್ಷಣ ಸರಸಮ್ಮ ಮಗುವನ್ನು ವಿಶ್ವಾಸದಿಂದ ಕೂಡಿಸಿಕೊಂಡು ಮಾತನಾಡಿಸಿದ್ದರು. ನಾಚಿಕೆಪಡುತ್ತಿದ್ದರೂ ಬಿಡದೆ ಅವನಿಗೆ ಸ್ನಾನ ಮಾಡಿಸಿದ್ದರು. ಅನಂತರ ಊಟ. ಕಣ್ಣು ಕಾಣದಿದ್ದರೂ ಕಾಶೀಪತಯ್ಯನವರ ತಾಯಿ ಹುಡುಗನನ್ನು

ಮಾತಾಡಿಸಿದ್ದರು. ಅವರ ಮನಸ್ಸಿನ ಮೇಲೆ ಈ ಹುಡುಗನ ಬರುವಿಕೆ ಹೆಚ್ಚು ಪ್ರಭಾವವನ್ನು ಬೀರಿದಂತೆ ಕಂಡಿರಲಿಲ್ಲ.

ಬೆಂಗಳೂರಿನಲ್ಲಾಗಿದ್ದರೆ ರಜಾದಿನಗಳಲ್ಲಿಯೂ ಸೀನು ಮಧ್ಯಾಹ್ನದ ಹೊತ್ತು ಮನೆಯಲ್ಲಿರುತ್ತಿದ್ದವನಲ್ಲ, ವಠಾರದ ಇತರ ಹುಡುಗರೊಡನೆ ಆಟ. ಹೀಗಾಗಿ ನಿದ್ದೆ ಮಾಡುವುದಂತೂ ದೂರದ ಮಾತು. ಅದರಲ್ಲಿ ಊಟವಾದ ನಂತರ ಸ್ವಲ್ಪ ಹೊತ್ತು ಕೂತಿದ್ದ ಮಂಕಾಗಿ, ಏನು ಮಾಡಬೇಕೆಂದು ತೋಚದೆ. ಎಲ್ಲ ಅಪರಿಚಿತವಾದ ಪರಿಸ್ಥಿತಿ. ಎಲ್ಲಿ ಹೋಗಬೇಕು? ಯಾರೊಡನೆ ಮಾತನಾಡಬೇಕು? ಅದನ್ನು ಗಮನಿಸಿದ ಸರಸಮ್ಮ ನವರು ಅವನಿಗೆ ಒಂದೆಡೆ ಚಾಪೆ ಹಾಸಿಕೊಟ್ಟು ಮಲಗಿಕೊಳ್ಳಲು ಹೇಳಿದರು. ಅವನೆಂದೂ ಮಧ್ಯಾಹ್ನದ ಹೊತ್ತು ಮಲಗಿರದಿದ್ದರೂ ಬೇರೇನೂ ಮಾಡಲು ತೋಚದೆ ಅದರ ಮೇಲೆ ಉರುಳಿಕೊಂಡಿದ್ದ. ಬಿಸಿಲಿನ ಝಳ, ನಡೆದು ಬಂದಿದ್ದ ಆಯಾಸಗಳಿಂದಾಗಿ ಅವನನ್ನು ನಿದ್ದೆ ಸ್ವಲ್ಪ ಹೊತ್ತಿನಲ್ಲಿಯೇ ಆವರಿಸಿತ್ತು.

ಏಳುವ ಹೊತ್ತಿಗಾಗಲೇ ಎರಡೂವರೆ ಗಂಟೆಯಾಗಿತ್ತು. ಮಧ್ಯಾಹ್ನ ಬೆಳಿಗ್ಗೆ ಕಂಡ ಅನುಭವವಿದ್ದುದರಿಂದ ನಿಧಾನವಾಗಿ ಬಚ್ಚಲು ಮನೆಯತ್ತ ಹೋಗಿ ಮುಖಕ್ಕೆ ನೀರು ಸಿಂಪಡಿಸಿಕೊಂಡು, ಟವಲ್ ಎಲ್ಲಿ ಎಂದು ಕೇಳುವುದಕ್ಕೆ ಸಂಕೋಚವಾಗಿ, ತನ್ನ ಷರಟಿನಿಂದಲೇ ಒರೆಸಿಕೊಂಡು ಒಂದು ಗೋಡೆಗೊರಗಿ ಕೂತ. ಅತ್ತೆ ಕಾಫಿ ತಂದುಕೊಟ್ಟರು ; ಕುಡಿದು ಕುಳಿತ.

ಏನೋ ಮಾಡುತ್ತಿದ್ದ ಮಾವ ಬಂದು,

''ಸುಮ್ಮನೆ ಕೂತುಕೊಳ್ಳೋದಕ್ಕೆ ಬೇಜಾರೇನಯ್ಯ, ಏನಾದರೂ ಓದುತ್ತೀಯಾ?'' ಎಂದರು. ಅವನಿಗೆ ಏನೂ ಹೇಳಲೂ ತೋಚಲಿಲ್ಲ.

''ಅವನೇನು ಓದ್ತಾನೆ ಬಿಡಿ ; ಓದಿಕೊಳ್ಳೋದು ಇದ್ದೇ ಇದೆ, ಆಟ ಆಡಿಕೊಳ್ಳಲಿ'' ಎಂದು ಅತ್ತೆ ಅವನ ವಕಾಲತ್ತು ವಹಿಸಿದರು.

''ಯಾರ ಜೊತೆ ಆಡಿಕೊಳ್ಳೋದು ? ಅದೂ ಇಷ್ಟು ಹೊತ್ತಿನಲ್ಲಿ'' ಎಂದು ಮಾವ ಗೂಡೊಂದರಲ್ಲಿ ತುಂಬಿದ್ದ ಒಂದಷ್ಟು ಪುಸ್ತಕಗಳನ್ನು ತಂದು ಹಾಕಿದ್ದರು. ಸೀನು ಅದರಲ್ಲಿ ಒಂದು ಹಳೆಯ ಚಂದಮಾಮವನ್ನು ಹೆಕ್ಕಿಕೊಂಡು ಬೊಂಬೆಗಳನ್ನು ನೋಡುತ್ತ ಕುಳಿತ.

ಬೆಂಗಳೂರಿನಲ್ಲಾಗಿದ್ದರೆ ಅವನಿಗೆ ಕಾಲ ಹೋದದ್ದೇ ಗೊತ್ತಾಗುತ್ತಿರಲಿಲ್ಲ. ಅಕ್ಕಪಕ್ಕದ ಹುಡುಗರೆಲ್ಲ ಸೇರಿ ಮಧ್ಯಾಹ್ನದ ಹೊತ್ತು ದಾಂಧಲೆ ಎಬ್ಬಿಸುತ್ತಿದ್ದರು. ಹಿರಿಯರು ಬಂದು ಬೈದಾಗ ಹೊರಗಡೆ ಹೋಗಿ ಬೀದಿಯಲ್ಲಿ ಆಟವಾಡುತ್ತಿದ್ದರು. ಕೆಲವೇಳೆ ತನಗಿಂತ ಸ್ವಲ್ಪ ಹಿರಿಯರಾದ ಹುಡುಗರ ಜೊತೆಗೆ ಎಲ್ಲಾದರೂ ಹೋಗಿಯೂ ಹೋಗುತ್ತಿದ್ದ ; ಎಂದರೆ ಆ ಈ ಸ್ಕೂಲಿನ ಆಟದ ಮೈದಾನಗಳಲ್ಲಿ ಏನಾದರೂ ಆಟ ನೋಡುವುದಕ್ಕೆ. ರಜಾ ದಿನಗಳಲ್ಲಿ ಹೀಗಾದರೆ, ಮಿಕ್ಕ ದಿನಗಳಲ್ಲಿ ಸ್ಕೂಲೇ ಸಾಯಂಕಾಲ

ಐದು ಗಂಟೆಯವರೆಗೆ ಇವರನ್ನು ತುಂಬಿಕೊಂಡಿರುತ್ತಿತ್ತು. ಹೀಗಾಗಿ ದೊಡ್ಡವರಂತೆಯೇ ಹುಡುಗರಿಗೂ ಕಾಲ ಓಡಿಹೋದಂತೆ ತೋರುತ್ತಿತ್ತು.

ಅಂತೂ ಸಾಯಂಕಾಲದವರೆಗೆ ಸೀನು ತುಂಬ ಕಷ್ಟಪಟ್ಟು ಕಾಲಕಳೆದ. ಸಂಜೆ ಅತ್ತೆ ಅವನನ್ನು ಬ್ರಾಹ್ಮಣರ ಮನೆಗಳಿಗೆಲ್ಲ (ಇದ್ದದ್ದೇ ನಾಲ್ಕೈದು) ಕರೆದುಕೊಂಡು ಹೋಗಿ ಪರಿಚಯ ಮಾಡಿಸಿದ್ದರು. ದೊಡ್ಡವರಿಗೆ ಇವನನ್ನು ತೋರಿಸಿದ್ದರು. ಅವರೆಲ್ಲ ಇವನ ಹೆಸರು ಕೇಳಿದ್ದರು, ಕೆನ್ನೆ ಚಿವುಟಿದ್ದರು, ಬರುವಾಗ ಕೈಲಿ ತಿಂಡಿಯ ಚೂರೊಂದನ್ನು ಕೊಟ್ಟು ಕಳಿಸಿದ್ದರು. ಹೊಸಬರ ಜೊತೆಯಲ್ಲಿ ತುಂಬ ಸಲೀಸಾಗಿ ಹೊಂದಿಕೊಳ್ಳುವ ದಾಕ್ಷಿಣ್ಯ ಸ್ವಭಾವೇನಲ್ಲ ಸೀನುವಿನದು. ಕೇಳಿದ್ದಕ್ಕೆ ಮೇಲುದನಿಯಲ್ಲಿ ಉತ್ತರ ಕೊಟ್ಟಿದ್ದ. ಕೊಟ್ಟದ್ದನ್ನು ಬಿಗುಮಾನದಿಂದಲೇ ತೆಗೆದುಕೊಂಡು ಚಡ್ಡಿಯ ಜೇಬಿನಲ್ಲಿ ತುರುಕಿಕೊಂಡಿದ್ದ

ಬ್ರಾಹ್ಮಣರ ಮನೆಗಳಲ್ಲಿನ ಹುಡುಗರು ಇವನನ್ನು ಮುತ್ತಿಕೊಂಡರು. ತಮಗಿಂತ ಭಿನ್ನವಾಗಿದ್ದ ಇವನ ಬಗ್ಗೆ ಅವರಿಗೆಲ್ಲ ಆಶ್ಚರ್ಯ. ಅವನನ್ನು ಏನು ಕೇಳಬೇಕೆಂದು ಅವರಿಗೂ ತೋಚದು, ಅವರನ್ನು ಏನು ವಿಚಾರಿಸಬೇಕೆಂದು ಇವನಿಗೂ ತಿಳಿಯದು, ಪರಸ್ಪರ ಮುಖ ನೋಡುತ್ತ ಕುಳಿತಿರುತ್ತಿದ್ದರು. ಅತ್ತೆಯ ಜೊತೆ ಇವನು ಮನೆಬಿಟ್ಟು ಮುಂದಿನ ಮನೆಗೆ ಅವರೆಲ್ಲ ತಮ್ಮ ಪಾಡಿಗೆ ತಾವು ಆಟಕ್ಕೆ ಹೋಗಿದ್ದರು.

ಇದ್ದ ಬದ್ದ ಮನೆಗಳನ್ನೆಲ್ಲ ಸುತ್ತಿ ಬರುವ ವೇಳೆಗೆ ಸ್ವಲ್ಪ ಕಾಲ ಕಳೆದಿತ್ತು. ಇವನ ಜೊತೆಯೇ ಕುಳಿತಿರಲು ಹಿರಿಯರಿಗೇನು ಬೇರೆ ಕೆಲಸವಿಲ್ಲವೆ ? ಮಾವ ಹೊಲದ ಕಡೆ ಹೋಗಿ ಬರುತ್ತೇನೆಂದು ಹೋಗಿದ್ದರು. ಕಣ್ಣುಕಾಣದ ಅಜ್ಜಿಯ ಜೊತೆ, ಅದೂ ತಾನಾಗಿ ಕರೆದು ಮಾತನಾಡಿಸದ ಮುದುಕಿಯ ಜೊತೆಗೆ ಇವನೇನು ಮಾಡಬಲ್ಲ? ಅತ್ತೆಗೆ ನೀರು ಸೇದುವ ಕೆಲಸವಿದೆ. ಆಕೆ ಪುಟ್ಟ ಕೊಡವೊಂದನ್ನು ತೆಗೆದುಕೊಂಡು ಹೊರಟರು. ಹೊರಡುವಾಗ ಸೀನುವಿಗೆ,

''ಸೀನು ಹೋಗಿ ಹುಡುಗರ ಜೊತೆ ಆಡಿಕೋಪ್ಪ'' ಎಂದಿದ್ದರು.

ಇವನು ಸುಮ್ಮನೆ ಇದ್ದ. ''ಬಾ ನಾನು ಹೇಳ್ತೀನಿ'' ಎಂದಾಗ ಅವರ ಜೊತೆ ನಿಧಾನವಾಗಿ ಹೊರಟ. ದಾರಿಯಲ್ಲಿ ಒಂದಷ್ಟು ಹುಡುಗರು - ಇವನಿಗಿಂತ ವಯಸ್ಸಿನಲ್ಲಿ ಹಿರಿಯರು - ಕಲ್ಲು ಮಣ್ಣು ಆಟವಾಡುತ್ತಿದ್ದರು.

''ಲೋ ರಾಮು, ವೆಂಕಟ, ಇವನನ್ನೂ ಆಟಕ್ಕೆ ಸೇರಿಸಿಕೊಳ್ರೋ'' ಎಂದರು, ಸೀನುವಿನ ಕಡೆ ತೋರಿಸುತ್ತ.

ಆ ಹುಡುಗರಿಗೆ - ಹುಡುಗಿಯರಿಗೆ ಸರಸಮ್ಮನ ಬಗ್ಗೆ ವಿಶ್ವಾಸ, ಆಗಾಗ್ಗೆ ಏನಾದರೂ ತಿಂಡಿ ಕೊಡುತ್ತಾರೆಂಬ ಕಾರಣದಿಂದ. ಇಲ್ಲವೆನ್ನಲಾಗದೆ ''ಆಗಲಿ ಅತ್ತೆ'' ಎಂದಿದ್ದರು.

''ಹೋಗು ಪುಟ್ಟಾ ಆಟ ಆಡಿಕೋ'' ಎಂದು ಹೇಳಿ ಅವರು ನೀರು ಸೇದಲು ಹೊರಟು ಹೋದರು.

ಹುಡುಗರು ಸರಸತ್ತೆಯ ಮುಲಾಜಿಗೆ ಇವನನ್ನು ಆಟಕ್ಕೆ ಸೇರಿಸಿಕೊಳ್ಳಲು ಸಮ್ಮತಿಸಿದ್ದರೂ ಪೇಟೆಯಿಂದ ಬಂದ ಈ ಹುಡುಗನ ಬಗ್ಗೆ ಅವರಿಗೆ ಸಂಶಯ. ಇವನು ತಮಗಿಂತ ಭಿನ್ನವಾಗಿದ್ದ ; ಅವನು ಹಾಕಿ ಕೊಂಡಿದ್ದದ್ದೂ ಷರಟು ಚಡ್ಡಿಗಳಾದರೂ ಅವುಗಳಲ್ಲಿ ಅವರಿಗೆ ಬೇರೆತನವೇ ಕಾಣುತ್ತಿತ್ತು. ಇವನ ಕ್ರಾಪಿನ ರೀತಿ ಅವು ಕಂಡವರಲ್ಲ, ಮಾತುಕತೆಯಲ್ಲಿ ವ್ಯತ್ಯಾಸವಿತ್ತು. ಸೀನು ಹೆಚ್ಚು ಮಾತಾಡಿರಲಿಲ್ಲವಾದರೂ ಆಡಿದ್ದ ಮಾತುಗಳೆ ಅವರಿಗಿಂತ ಇವನು ಬೇರೆಯವನೆಂಬದನ್ನು ಸೂಚಿಸಿತ್ತು. ಆದರೂ ಅವರು ಆಟಕ್ಕೆ ಕರೆದಿದ್ದರು.

''ಆಟಕ್ಕೆ ಸೇರ್ಕಾ ಬಾ'' ಎಂದು ಹುಡುಗನೊಬ್ಬ ಆಹ್ವಾನಿಸಿದ್ದ.

''ತಿರ್ಗಾ ಚಪ್ಪಾಳೆ ಹಾಕಬೇಕಪ್ಪ ಅವನೂ ಬಂದ್ನಲ್ಲ'' ಎಂದಳು ಒಬ್ಬ ಹುಡುಗಿ.

''ಏನೂ ಬ್ಯಾಡಾ ಕಣೆ ಅವನು ಆಟಕ್ಕುಂಟು ಲೆಕ್ಕಕ್ಕಿಲ್ಲ'' ಎಂದ ಇನ್ನೊಬ್ಬ ಸೀನುವಿಗೆ ವ್ಯಥೆಯಾಯಿತು, ಆಟಕ್ಕೆ ಸೇರಿಸಿಕೊಂಡರೂ ಲೆಕ್ಕಕ್ಕೆ ತಾನಿಲ್ಲವೆಂದು ನಿರ್ಧಾರ ಕೇಳಿ. ಆದರೆ ಅವರಾರೂ ತನಗೆ ಗೊತ್ತಿಲ್ಲ. ಬಲವಂತ ಹೇಗೆ ಮಾಡುವುದು. ಆಟಕ್ಕೆ ಸೇರದೆ ಕಾಲ ಹೇಗೆ ಕಳೆಯುವುದು, ಬೇಸರ ಅವನನ್ನು ರಾಜಿಯಾಗಲು ಸಿದ್ಧಪಡಿಸಿತ್ತು.

ಆಟವಾಡುವಾಗಲೂ ದೊಡ್ಡ ಹುಡುಗರು ಇವನಿಗೆ ಸ್ವಲ್ಪ ರಿಯಾಯಿತಿ ತೋರಿಸುತ್ತಿದ್ದರು. ಇವನನ್ನು ಔಟ್ ಮಾಡಬಹುದಾಗಿದ್ದರೂ ಅವರು ಮುಟ್ಟಲು ಸಾಧ್ಯವಾಗದವರ ಹಾಗೆ ನಟಿಸಿ, ಇವನನ್ನು ಹಾಗೆಯೇ ಉಳಿಸಿಬಿಡುತ್ತಿದ್ದರು. ಇತರರನ್ನು ಮುಟ್ಟಿಸಲೆಂದು ಅಟ್ಟಿಸಿಕೊಂಡು ಹೋಗುವಾಗ ಇವನೂ ಓಡುತ್ತಿದ್ದ. ಆದರೆ ಅವರು ಇವನನ್ನು ಮುಟ್ಟಬೇಕೆಂದು ಯೋಚಿಸುತ್ತಲೇ ಇರಲಿಲ್ಲ. ತಮಗೆ ಸರಿಯಾದ ಪ್ರತಿಸ್ಪರ್ಧಿಗಳ ಮೇಲೆ ಅವರ ಗಮನ ಕೇಂದ್ರೀಕೃತವಾಗಿರುತ್ತಿತ್ತು. ಹೀಗಾಗಿ ಇವನ ಸ್ವಾಭಿಮಾನಕ್ಕೆ ಚ್ಯುತಿಯುಂಟಾಗಿತ್ತು.

ಅಲ್ಲಿಂದ ಬಂದು ಅತ್ತೆಯ ಹತ್ತಿರ ಹೋದ. ಆಕೆ ನೀರಿನ ಬವಣೆಯಲ್ಲಿದ್ದಳು.

''ಅತ್ತೆ ಮತ್ತೆ ಮತ್ತೆ....'' ಎಂದು ನೀರು ತರುತ್ತಿರುವ ಸರಸಮ್ಮನ ಬಳಿ ಹೋಗಿ ಹೇಳಿದ. ಆಕೆಯೊಬ್ಬಳೇ ತನಗೆ ತುಂಬ ಹತ್ತಿರವೆಂದು ಅವನಿಗನ್ನಿಸಿತು. ಮಾವ ತನ್ನ ಬಗ್ಗೆ ವಿಶ್ವಾಸ ತೋರಿಸಿದ್ದರಾದರೂ ಮನೆಯಲ್ಲಿ ಹೆಚ್ಚು ಮಾತನಾಡುವ ಸ್ವಭಾವ ಅವರದಲ್ಲ. ಅಲ್ಲದೆ ಅವರೀಗ ಮನೆಯಲ್ಲಿ ಇಲ್ಲವೂ ಇಲ್ಲ. ಉಳಿದವಳು ಈಕೆಯೊಬ್ಬಳೇ.

''ಏನು ಪುಟ್ಟಾ ಏನು ಹೇಳು''

''ಮತ್ತೆ, ಮತ್ತೆ, ನಾನೂ ನೀರು ಸೇದತೀನಿ''

ಅತ್ತೆ ಜೋರಾಗಿ ನಕ್ಕಳು. ''ಇರಲಿ ಬಿಡಪ್ಪ ನೀರು ಸೇದೋದು ಇದ್ದದ್ದೇ. ಇನ್ನೊಂದೆರಡು ದಿನಗಳಾಗಲಿ, ಸಹಾಯಕ್ಕೆ ಬರೋವೆಯಂತೆ. ಈಗ ಆಟ ಆಡ್ಕೋ'' ಸೀನು ಪೆಚ್ಚಾದ. ಆ ಹುಡುಗರೂ ಚಿಕ್ಕವನೆಂದು ಆಟಕ್ಕೆ ಸರಿಯಾಗಿ ಸೇರಿಸಿಕೊಂಡಿರಲಿಲ್ಲ. ಈಗ ನೋಡಿದರೆ, ಅತ್ತೆ ನೀರು ತರಲೂ ಅವಕಾಶವೀಯುತ್ತಿಲ್ಲ. ಚಿಕ್ಕವನು, ಚಿಕ್ಕವನು

ಎಂದು ತನ್ನನ್ನು ಕೆಲಸಕ್ಕೆ ಬಾರದವನೆಂದು ಹೀಗಳೆಯುವರಲ್ಲ ಎಂದು ಮನಸ್ಸಿಗೆ ನೋವಾಯಿತು.

ಅವನ ಪೆಚ್ಚುಮೋರೆಯನ್ನು ಕಂಡು ಸರಸತ್ತೆಗೆ ಪಾಪ ಎನಿಸಿತು, ಬಂದ ಹೊಸತು, ಸಹಜವಾಗಿ ಅವನಿಗೆ ಬೇಸರ. ಬೆಂಗಳೂರಿನಲ್ಲಿ ಜನರ ಮಧ್ಯೆಯಿದ್ದ ಹುಡುಗ, ಈಗ ಹಳ್ಳಿಯ ನಡುವೆ ಗುರುತಿಲ್ಲದ ಪರಿಸರದಲ್ಲಿ ಒಂಟಿಯಾಗಿದ್ದಾನೆ, ಎನಿಸಿತು.

''ಸರಿ ಹೋಗು ಪುಟಾಣಿ ಕೊಡ ಇದೆ ತಗೊಂಡು ಬಾ'' ಎಂದು ಮನೆಗೆ ಕಳಿಸಿದರು. ಅದು ಹೆಸರಿಗೆ ಕೊಡ, ದೊಡ್ಡ ತಂಬಿಗೆ ವಾಸ್ತವವಾಗಿ. ಅವರು ನೀರು ಸೇದಿ ಅದಕ್ಕೆ ಸುರಿದಾಗ ಅವನು ಅದನ್ನು ಹೊತ್ತು ತಂದು ಹಂಡೆಗೆ ಹೊಯ್ಯುತ್ತಿದ್ದ.

ಹೊತ್ತು ಇಳಿದ ಮೇಲೆ ಎಲ್ಲ ಮನೆ ಸೇರಿಕೊಂಡರು. ಬೆಂಗಳೂರಿನಲ್ಲಿ ಎಂದೂ ಅಷ್ಟು ಹೊತ್ತಿಗೇ ಮನೆಗೆ ಬಂದವನಲ್ಲ ಅವನು. ಹುಡುಗರೊಡನೆ ಆಟ, ಆಟ, ಆಟ. ಆದರಲ್ಲಿಯೇ ಮೈಮರೆತುಬಿಡುತ್ತಿದ್ದ ಬೀದಿ ದೀಪದಲ್ಲಿಯೇ ಅವರೆಲ್ಲ ಆಟವನ್ನು ಮುಂದುವರೆಸುತ್ತಿದ್ದರು. ಅಮ್ಮನೋ ಅಪ್ಪನೋ ಕಂಡು ಬೈದಾಗ ಮನೆಗೆ ಬರುವುದು, ಇಲ್ಲ ಅವರ ರಾಯಭಾರವನ್ನು ಹೊತ್ತ ಅಣ್ಣನೋ ಅಕ್ಕನೋ ಕೂಗಿ ಕರೆದಾಗಲೇ ಅವನಿಗೆ ಮನೆಯ ಧ್ಯಾನ.

''ಅಪ್ಪ ಕೂಗ್ತಾ ಇದಾರೆ. ಬಂದು ಓದಿಕೋಬೇಕಂತೆ, ಇಲ್ಲದೇ ಇದ್ದರೆ ಮನೆಗೆ ಸೇರಿಸೊಲ್ಲವಂತೆ'' ಎಂದು ಹೇಳಿದಾಗ ಅವನಿಗೆ ಹೊರಡುವ ಮನಸ್ಸು. ಅಮ್ಮನಿಗಿಂತ ಅಪ್ಪನ ಭಯವೇ ಹೆಚ್ಚು. ಅಪ್ಪ ಮನೆಯಲ್ಲಿ ಇಲ್ಲವೆಂದು ಖಾತರಿಯಾದಾಗ, ಅಮ್ಮ ಹೇಳಿಕಳಿಸಿದ್ದರೂ ಎಷ್ಟೋವೇಳೆ ಕಿವಿಗೆ ಹಾಕಿಕೊಂಡದ್ದೇ ಇಲ್ಲ. ಹೀಗಾಗಿ ತಾಯಿ ಎಷ್ಟೋ ವೇಳೆಗಳಲ್ಲಿ ತಂದೆಯ ಹೆಸರಿನಲ್ಲಿ ಆಜ್ಞೆಗಳನ್ನು ಕಳಿಸಬೇಕಾಗಿತ್ತು ಮನೆಗೆ ಬಂದು ತಂದೆಯು ಕಾಣದಿದ್ದಾಗ, ತನ್ನನ್ನು ಮನೆಗೆ ಕರೆಸಲು ತಾಯಿ ಹೂಡಿದ ಸಂಚು ಇದೆಂದು ತಿಳಿದು ಅಮ್ಮನನ್ನು ಬಯ್ದದ್ದೂ ಉಂಟು. ಮತ್ತೆಷ್ಟೋ ಸಲ ಅಣ್ಣ ಅಕ್ಕಂದಿರು ಹೇಳಿ ಕಳಿಸಿದ್ದಕ್ಕಿಂತ ಕಠೋರವಾಗಿ ಸಂದೇಶವನ್ನು ಸಾರುತ್ತಿದ್ದರು.

ಮಗನಿಗೆ ಕಠಿಣವಾಗಿ ಹೇಳಿ ಕಳಿಸಿದ್ದರೂ ಈ ಹುಡುಗನ ಓದಿನ ಬಗ್ಗೆ ತಂದೆತಾಯಿಗಳಿಗೆ ಭರವಸೆ. ಅವನು ಓದುವುದು ಕಡಿಮೆಯಾಗಿದ್ದರು ಶಾಲೆಯಲ್ಲಿ ಹಿಂದೆ ಬಿದ್ದಿರಲಿಲ್ಲ. ಆದ್ದರಿಂದ ಮಗ ಓದಲಿಲ್ಲವೆಂದು ಕಠಿಣ ಶಿಕ್ಷೆಯನ್ನೆಂದೂ ತಂದೆ ಕೊಟ್ಟವರಲ್ಲ. ಇದೇ ಎಷ್ಟೋ ಸಲ ತನ್ನಲ್ಲಿ ಒಂಟಿತನವನ್ನುಂಟು ಮಾಡುತ್ತಿತ್ತು. ಸೀನುವಿಗೆ ಓದಲಿಲ್ಲವೆಂದು ಇತರರಿಗೆ ಏಟುಗಳನ್ನೂ ಕೊಡುತ್ತಿದ್ದ ತಂದೆ. ಅವನಿಗೆ ಆ ವಿಷಯದಲ್ಲಿ ಬಿರುಸಾಗಿ ನಡೆದುಕೊಂಡಿರಲಿಲ್ಲ. ಹೀಗಾಗಿ ತನ್ನ ಒಡಹುಟ್ಟಿದವರೇ ಇವನನ್ನು ದೂರದವನಂತೆ ಕಾಣುತ್ತಿದ್ದರು. ತಂದೆ ಅವನ ಬಗ್ಗೆ ಇಲ್ಲದ ರಿಯಾಯಿತಿ ತೋರಿಸುತ್ತಾರೆಂಬ ಹೊಟ್ಟೆಕಿಚ್ಚು ಅವರಲ್ಲಿ ಹಲವು ವೇಳೆ ಕಾಣುತ್ತಿತ್ತು. ಒಂದು ರೀತಿಯ ಒಂಟಿತನ ಈ ಕಾರಣದಿಂದ ಅವನನ್ನು ಆಗಲೂ ಬಾಧಿಸುತ್ತಿತ್ತು. ಅವನ ಆಟಗಳೆಲ್ಲ

ಹೆಚ್ಚಾಗಿ ಇತರ ಮನೆಯ ಹುಡುಗರೊಂದಿಗೆ ಸಾಗಲು ಇದು ಕಾರಣವೂ ಆಗಿತ್ತು.

ಇಲ್ಲಿ ಹಾಗಾಗಲು ಸಾಧ್ಯವಿರಲಿಲ್ಲ. ಕತ್ತಲಾದ ಮೇಲೆ ಆಟವಾಡಲು ಇಲ್ಲಿ ಅವಕಾಶವಿಲ್ಲ. ಬೀದಿಯ ದೀಪವಿದ್ದರೆ ತಾನೇ ಆಡಲು ಸಾಧ್ಯ ? ಮನೆಯ ಹೊರಗಡೆಯೆಲ್ಲ ಗಾಢಾಂಧಕಾರ ; ಒಳಗಡೆಯೂ ಒಂದು ರೀತಿ ಕತ್ತಲೆ ಕತ್ತಲೆಯೇ. ಸೀಮೆ ಎಣ್ಣೆಯ ದೀಪದ ಮಂಕು ಬೆಳಕು ; ಅದರಲ್ಲಿ ಯಾವುದೂ ಸ್ಪಷ್ಟವಾಗಿ ಕಾಣುವಂತೆ ತೋರಲಿಲ್ಲ ಇವನಿಗೆ. ಬೆಂಗಳೂರಲ್ಲಿ ಕೊನೆಯ ಪಕ್ಷ ಹಾಲಿಗೆ ಒಂದು ಬಲ್ಬ್ ಹಾಕಿರುತ್ತಿತ್ತು. ಅದು ಇತರರ ಮನೆಯ ದೀಪಗಳಿಗೆ ಹೋಲಿಸಿದರೆ ಮಂಕೆನಿಸಿದ್ದರೂ, ಓದಬಹುದಾಗಿತ್ತು , ಬರೆಯಬಹುದಾಗಿತ್ತು. ಈ ಬೆಳಕಿನಲ್ಲಿ ಓದುವುದು ಸಾಧ್ಯವೇ ಎನಿಸಿತ್ತವನಿಗೆ.

ಕತ್ತಲಾದ ಮೇಲೆ ಸೀನುವಿಗೆ ಕಕ್ಕಸಿಗೆ ಅವಸರವಾಗಿತ್ತು. ಆದರೆ ಎಲ್ಲಿ ಹೋಗುವುದೆಂಬ ಅನುಮಾನ ಅವನನ್ನು ಬಾಧಿಸಿತ್ತು. ಯಾರಿಗೂ ಅವನ ಕಷ್ಟ ತಿಳಿಯುವಂತಿರಲಿಲ್ಲ. ಮಾವ ಇನ್ನೂ ಮನೆಗೆ ಬಂದಿರಲಿಲ್ಲ ಕೂಡ. ಅತ್ತೆ ಅಡಿಗೆ ಮನೆಯಲ್ಲಿ ಕೆಲಸದಲ್ಲಿ ನಿರತಳಾಗಿದ್ದರು. ಹೇಗೆ ಈ ಸಮಸ್ಯೆಗೆ ಪರಿಹಾರವೆಂದು ಮುಜುಗರವಾಯಿತು. ಅಡಿಗೆ ಮನೆಯ ಕಡೆಗೆ ಒಂದೆರಡು ಬಾರಿ ಸುಳಿದಾಡಿದ. ಆದರೆ ಅತ್ತೆಯ ಮುಂದೆ ಈ ವಿಷಯ ಹೇಳಿಕೊಳ್ಳಲು ನಾಚಿಕೆ. ಅಜ್ಜಿ ಕೂತ ಕಡೆಯೇ ಹಿಂದಕ್ಕೂ ಮುಂದಕ್ಕೂ ತೂಗಾಡುತ್ತಿತ್ತೇ ವಿನಾ ಇವನ ಕಷ್ಟವನ್ನು ಅರ್ಥಮಾಡಿಕೊಳ್ಳುವ ಪರಿಸ್ಥಿತಿಯಲ್ಲಿರಲಿಲ್ಲ.

ಆದರೆ ಎಷ್ಟು ಹೊತ್ತು ಈ ಯಾತನೆಯನ್ನು ಅನುಭವಿಸುವುದು ? ಕೊನೆಗೆ ಧೈರ್ಯಮಾಡಿ ಅಡಿಗೆಯ ಮನೆಯ ಬಳಿ ಬಂದು ಬಾಗಿಲಲ್ಲಿ ನಿಂತು ಕೊಂಚ ಹೊತ್ತು ಕಾದ. ಅತ್ತೆಯ ಗಮನ ಇವನೆಡೆಗೆ ಸುಳಿಯದಿದ್ದಾಗ ಒಮ್ಮೆ ಕೆಮ್ಮಿದ. ಈಗ ಅತ್ತೆ ಇವನ ಕಡೆ ನೋಡಿ, ಇದ್ದಕಡೆಯಿಂದಲೇ ''ಏನು ಪುಟ್ಟಾ?'' ಎಂದರು. ಇವನಿಗೋ ತುಂಬ ನಾಚಿಕೆ, ಮಾತನಾಡದೇ ನಿಂತೇ ಇದ್ದ.

''ಹಸಿವಾಗತ್ತಾ?''

''ಇಲ್ಲ'' ಎಂದ ಕ್ಷೀಣವಾಗಿ.

''ನಿದ್ದೆ ಬರುತ್ತೇನು ?''

''ಊಹ್ಞೂ....''

''ಮತ್ತೆ ಇಲ್ಲಿ ಯಾಕೆ ನಿಂತುಕೊಂಡಿದ್ದೀ ? ಅಜ್ಜಿ ಹತ್ತಿರ ಹೋಗಿ ಕೂತುಕೋ. ಮಾವ ಬಂದ ಮೇಲೆ ಊಟಕ್ಕೆ ಬಡಿಸ್ತೀನಿ.''

ಆದರೂ ಅಲ್ಲಿಂದ ಅವನು ಕದಲಲಿಲ್ಲ. ಅತ್ತೆಗೆ ಅನುಮಾನ ಬಂತು. ಉಟ್ಟಿದ್ದುದು ಮಗುಟವಾದ್ದರಿಂದ ಪರವಾಯಿಲ್ಲವೆಂದೆನಿಸಿತು. ಬಂದು ಅವನ ಹಣೆಗೆ ಕೈಯಿಟ್ಟು ''ಹುಷಾರಾಗಿದ್ದೀ ತಾನೆ ?'' ಎಂದರು, ಮತ್ತೆ ಸೀನು ನಿರುತ್ತರನಾದ, ರಮಿಸಿ ಕೇಳಿದರು,

"ಯಾಕೆ ? ಏನಾಗುತ್ತೆ ಹೇಳು, ಹೊಟ್ಟೆನೋವಾ ?"

"ಹ್ಞೂ" ಎಂದ.

"ತಂಬಿಗೆ ತೊಗೊಂಡು ಹೋಗಬೇಕಾ?" ಕೊನೆಗೂ ತನ್ನ ಕಷ್ಟ ಅರ್ಥವಾಯಿ ತೆನಿಸಿ ಇದ್ದುದರಲ್ಲಿ ಸಮಾಧಾನವಾಯಿತು. ಮಾತನಾಡದೆ ಹೌದು ಎಂಬಂತೆ ತಲೆದೂಗಿದ.

"ಬಾ ಕರಕೊಂಡು ಹೋಗ್ತೀನಿ" ಎಂದು ಒಂದು ಲಾಟೀನನ್ನು ಹೊತ್ತಿಸಿ ಕೈಲಿ ಹಿಡಿದು ಅವನೊಡನೆ ಹೊರಟರು. ಅವನು ಅತ್ತೆ ಹೇಳಿದಂತೆ ಅದಕ್ಕಾಗಿಯೇ ಮೀಸಲಾದ ತಂಬಿಗೆಯಲ್ಲಿ ನೀರು ತುಂಬಿಕೊಂಡು ಹೊರಟ. ಮನೆಗಳನ್ನೆಲ್ಲ ದಾಟಿದ ಮೇಲೆ ಕೂತುಕೋ ಎಂದು ಅತ್ತೆ ಹತ್ತಿರವೇ ನಿಂತರು. ಇವನಿಗೆ ನಾಚಿಕೆ ಬೇರೆ, ಭಯ ಕೂಡ. ದೀಪದ ವಿರುದ್ಧ ದಿಕ್ಕಿನಲ್ಲಿ ಕತ್ತಲೆ ದಟ್ಟವಾಗಿತ್ತು, ಎಲ್ಲವನ್ನೂ ನುಂಗುವ ಹಾಕಿತ್ತು. ಆದರೂ ಧೈರ್ಯಮಾಡಿ ಸ್ವಲ್ಪ ದೂರ ಹೋಗಿ ಕೂತ. ಕತ್ತಲೆಯೆಂದು ಅತ್ತೆ ಅವನೆಡೆಗೇ ದೀಪ ತಂದರು. ಮುಜುಗರ.

ಅಂತೂ ಎಲ್ಲವೂ ವಿಚಿತ್ರವೆನಿಸಿತು. ಇದಕ್ಕೆಲ್ಲ ಇಷ್ಟು ದೂರಬರಬೇಕು ಎನಿಸಿತು. ದಿನವೂ ಹೀಗೇನೇ ಎಂಬ ಸಂಶಯ ಮನಸ್ಸಿನಲ್ಲಿ ಸುಳಿದಾಡಿತು. ಸುತ್ತಲೂ ಕತ್ತಲೆಯ ಗರ್ಭ ದಿಂದ ಸೀಳಿಕೊಂಡು ಬರುತ್ತಿದ್ದ ಜೀ ಎಂಬ ಸದ್ದು ಇವನಲ್ಲಿ ಸ್ವಲ್ಪ ದಿಗಿಲನನ್ನೂ ಎಬ್ಬಿಸಿತ್ತು.

ಮನೆಗೆ ಬರುವ ಹೊತ್ತಿಗೆ ಮಾವ ಬಂದಿದ್ದರು. ಕಾಲು ತೊಳೆದುಕೊಂಡು ಮನೆಯೊಳಗೆ ಬಂದ ಮಾವ ಸಂಧ್ಯಾವಂದನೆಯಲ್ಲಿ ತೊಡಗಿದ್ದರು. ಇವನೂ ಅಲ್ಲೇ ಮೌನವಾಗಿ ಕುಳಿತ. ದೀಪದ ಬೆಳಕಿನಿಂದಾಗಿ ಮಾವನ ನೆರಳು ಅವರ ಹಿಂದೆ ಗೋಡೆಯ ಬಹುಭಾಗವನ್ನು ಆಕ್ರಮಿಸಿತ್ತು. ಆದನ್ನೇ ನೋಡುತ್ತ ಕುಳಿತ. ಅವರು ಹೇಳುತ್ತಿದ್ದ ಮಂತ್ರಗಳಿಂದಾಗಿ ಇವನಿಗೆ ನೆರಳನ್ನೂ ಒಂದೇ ಸಮನೆ ನೋಡುವುದಕ್ಕೆ ಅವಕಾಶವಾಗಲಿಲ್ಲ. ಕುಕ್ಕುರುಗಾಲಲ್ಲಿ ಕೂತಿದ್ದವನು ಸಾಕಾಗಿ ಚಕ್ಕಳಮಕ್ಕಳ ಕೂತ.

ಸಂಧ್ಯಾವಂದನೆಯಾದ ಮೇಲೂ ಮಾವ ಮೇಲೇಳದೆ ಇನ್ನೇನೋ ಪ್ರಾರ್ಥನೆಯ ಪದ್ಯಗಳನ್ನು - ಕನ್ನಡದ್ದು ಸಂಸ್ಕೃತದ್ದು - ಹೇಳುತ್ತ ಕುಳಿತಿದ್ದರು. ಅವನಿಗೆ ಬೇಸರವೆನಿಸಿ ಅಲ್ಲಿಂದೆದ್ದು ಹೊರಕ್ಕೆ ಬಂದು ಹಜಾರದ ಲ್ಯಾಂಪಿನ ಬದಿಯಲ್ಲಿ ಕುಳಿತು ಮಧ್ಯಾಹ್ನ ನೋಡಿದ್ದ ಚಂದಮಾಮವನ್ನೇ ನೋಡುತ್ತ ಕುಳಿತ. ಯಾವುದೂ ಆ ಕತ್ತಲೆ-ಬೆಳಕಿನಲ್ಲಿ ಸರಿಯಾಗಿ ಕಾಣಿಸುವುದಿಲ್ಲವೆನಿಸಿತು. ಒಂದೆರಡು ಬಾರಿ ಆಕಳಿಸಿದ.

ಸ್ವಲ್ಪ ಹೊತ್ತಿನ ಮೇಲೆ ಅತ್ತೆ ಕರೆದರು ; ದೇವರಿಗೆ ನಮಸ್ಕಾರ ಮಾಡಲು ಹೇಳಿದರು. ಆನಂತರ ಊಟಕ್ಕೆ ಎಲೆಗಳನ್ನು ಹಾಕಿದರು. ಅಜ್ಜಿಗೆ ಊಟವಿಲ್ಲ, ಏನೋ ಫಳಾರವಂತೆ, ಮುಂದಿಟ್ಟರು. ಆದರ ಪಾಡಿಗೆ ಆದನ್ನು ಬಿಟ್ಟು ಇಷರು ಊಟ ಮಾಡಲು ತೊಡಗಿದರು.

ಊಟಮಾಡಿ ಮಾವ ಕೈತೊಳೆದುಕೊಂಡು ಹಜಾರದಲ್ಲಿದ್ದ ಈಸಿ ಛೇರಿನ ಮೇಲೆ ಕುಳಿತು ಎಲೆ ಅಡಿಕೆ ಹಾಕಿಕೊಳ್ಳತೊಡಗಿದರು. ಇವನೂ ಹೋಗಿ ಅವರ ಮುಂದೆ ಕೂತ. ಅಡಿಕೆಯ ಬಟ್ಟಲಿಗೆ ಕೈ ಹಾಕಿದ.

''ಹುಡುಗರು ಅಡಿಕೆ ತಿನ್ನಬಾರದು ಕಣಯ್ಯ, ನಾಲಗೆ ದಪ್ಪವಾಗುತ್ತೆ ಓದು ಹತ್ತಲ್ಲ'' ಎಂದರು.

ಮನಸ್ಸಿಗೆ ಪೆಚ್ಚಾಯಿತು. ತೆಗೆದುಕೊಂಡಿದ್ದ ಅಡಿಕೆಯನ್ನು ಅಲ್ಲಿಯೇ ಬಿಟ್ಟು ಕೈಯೆತ್ತಿಕೊಂಡ. ಕೂತಲ್ಲಿಂದಲೇ ಮಾವ ಅವರ ತಾಯಿಯನ್ನು ಅದೂ ಇದೂ ಕೇಳುತ್ತಿದ್ದರು, ಇಲ್ಲ ಅವರೇ ಕೇಳುವ ಮಾತುಗಳಿಗೆ ಉತ್ತರ ವೀಯುತ್ತಿದ್ದರು. ಕೆಲವು ವೇಳೆ ಒಳಗೆ ಊಟ ಮಾಡುತ್ತಿದ್ದ ಅತ್ತೆ ಏನಾದರೂ ಜೋರಾಗಿ ಹೇಳುತ್ತಿದ್ದರು. ಇವನು ಮೌನವಾಗಿ ಕಾಲ ಕಳೆಯುತ್ತಿದ್ದ.

ಅತ್ತೆ ತಮ್ಮ ಊಟ ಮುಗಿಸಿ ಸೀನುವನ್ನು ಕೂಗಿದರು. ಲಾಟೀನು ತರುವಂತೆ ಇವನಿಗೆ ಹೇಳಿ, ಉಳಿದಿದ್ದ ಅನ್ನದಲ್ಲಿ ಸ್ವಲ್ಪವನ್ನು ತೆಗೆದುಕೊಂಡು ಮನೆಯ ಹೊರಗೆ ಹೋಗಿ, ನಾಯಿಯನ್ನು ಕರೆದರು. ಯಾವುದೋ ನಾಯಿ ಬಾಲವಲ್ಲಾಡಿಸುತ್ತ ಬಂತು. ಅಲ್ಲಿಯೇ ಇದ್ದ ಸಣ್ಣ ಬಂಡೆಯೊಂದರ ತುದಿಗೆ ತಾವು ತಂದಿದ್ದ ಅನ್ನವನ್ನು ಹಾಕಿದರು. ಅದು ಶಬ್ದಮಾಡುತ್ತ ತಿನ್ನಲು ತೊಡಗಿತು, ತಾವು ಮನೆಯೊಳಗೆ ಬಂದರು.

ಸ್ವಲ್ಪ ಹೊತ್ತಾದ ಮೇಲೆ ಯಾರೋ ''ಸ್ವಾಮಿ'' ಎಂದರು.

''ಯಾರು ?'' ಎಂದರು ಮಾವ ಗಡುಸಾಗಿ, ಕುಳಿತ ಕಡೆಯಿಂದಲೇ.

''ನಾನು ಸ್ವಾಮಿ ನಂಜ''

''ಏನೋ ನಂಜ ಇಷ್ಟೊತ್ನಲ್ಲಿ ?''

''ನಮ್ಮಮ್ಮಂಗೆ ಉಸಾರಿಲ್ಲ ಸ್ವಾಮಿ, ಒಂದೀಟು ಎಸರು ಬಿಡಿಸಿಕೊಂಡು ಓಗಾಣಾಂತ...'' ಅಂದ.

''ಸರಿ ಸರಿ'' ಎಂದು ಗೊಣಗಿಕೊಂಡು ಬಂದರು. ಗಂಟೆ ಎಷ್ಟಾಗಿತ್ತೋ ಗೊತ್ತಾಗುವುದಿಲ್ಲ. ಬೆಂಗಳೂರಿನಲ್ಲಿ ತಮ್ಮ ಮನೆಯಲ್ಲೇನೂ ಗಡಿಯಾರವಿರಲಿಲ್ಲ. ಆದರೆ ಆಚೆ ಮನೆಯ ಸೀನಪ್ಪಯ್ಯನ ಮನೆಯಲ್ಲಿ ಗಡಿಯಾರವಿತ್ತು. ಬೆಳಿಗ್ಗೆ ತಂದೆ ಆಫೀಸಿಗೆ ಹೋಗುವಾಗಲೋ, ತಾವು ಸ್ಕೂಲಿಗೆ ಹೋಗುವಾಗಲೋ ವೇಳೆಯಾಯಿತೆಂದು ತೋರಿದರೆ ಅವರ ಮನೆಗೆ ಹೋಗಿ ''ರೀ, ಗಂಟೆ ಎಷ್ಟು ?'' ಎಂದು ಕೇಳಿಕೊಂಡು ಬರುತ್ತಿದ್ದರು. ಕೆಲವು ವೇಳೆ ಸೀನಪ್ಪಯ್ಯನೇ ಇದ್ದರೆ - ಅವರನ್ನು ಸೀನಪ್ಪ ಮಾವ ಎಂದು ಕರೆಯುತ್ತಿದ್ದುದು - ಗಂಟೆ ಎಷ್ಟು ಎಂದು ಕೇಳಿದರೆ ಎರಡು ಕೈಗಳಲ್ಲೂ ''ಇಷ್ಟು'' ಎಂದು ತೋರಿಸಿ, ನಕ್ಕು ಅನಂತರ ಗಂಟೆ ಹೇಳುತ್ತಿದ್ದರು. ಆದರೆ ಇಲ್ಲಿ ಗಡಿಯಾರವೆ ಇಲ್ಲ. ನೆನಪಿಗೆ ಬಂದಾಗ ಸೀನು,

"ಗಡಿಯಾರ ಇಲ್ಲವಾ, ಮಾವ ?" ಎಂದು ಕೇಳಿದ.

"ನಮಗ್ಯಾಕಯ್ಯ ಗಡಿಯಾರ, ಹಳ್ಳಿಯವರಿಗೆ. ಆಫೀಸಿಗೆ ಹೋಗಬೇಕಾ ?"

"ಮತ್ತೆ ಟೈಂ ಹ್ಯಾಗೆ ಗೊತ್ತಾಗೋದು ?"

"ಟೈಂ ಕಟ್ಟಿಕೊಂಡು ಏನು ಮಾಡೋದು. ನಮ್ಮದೆಲ್ಲ ಕೆಲಸ ಆಗೋ ಹೊತ್ತಿಗೆ ನಿದ್ದೆ ಬಂದಿರತ್ತೆ ಮಲಗೋದು. ಬೆಳಿಗ್ಗೆ ಎಚ್ಚರವಾಗೋ ಹೊತ್ತಿಗೆ ಸೂರ್ಯ ಹುಟ್ಟಿರ್ತಾನೆ. ಇನ್ಯಾಕೆ ಗಡಿಯಾರ ?"

ಮಾವನ ಮಾತು ಚೆನ್ನಾಗಿದೆಯೆನಿಸಿದರೂ. ಅವರ ಉತ್ತರ ಅವನಿಗೆ ಸಮಾಧಾನವನ್ನೀಯಲಿಲ್ಲ. ಆದರೆ ಮುಂದೇನು ಹೇಳಬೇಕೆಂದು ತೋಚದಿದ್ದುದರಿಂದ ಸುಮ್ಮನಾದ. ಅವನಿಗೆ ನಿದ್ದೆ ಬರದಿದ್ದರೂ ಏನೂ ತೋಚಲಿಲ್ಲ. ಮಧ್ಯಾಹ್ನ ಬೇರೆ ನಿದ್ದೆಯಾಗಿತ್ತು. ಆದ್ದರಿಂದ ನಿದ್ದೆ ದೂರ ಉಳಿದಿತ್ತು.

ಸ್ವಲ್ಪ ಹೊತ್ತಾದ ಮೇಲೆ ಅತ್ತ ಹಾಸಿಗೆ ಹಾಸಿದರು. ಗೋಡೆಯ ಕಡೆ ತನಗೆ ಹಾಸಿ ಮಗ್ಗುಲಲ್ಲಿಯೇ ತಮ್ಮಿಬ್ಬರಿಗೂ ಹಾಸಿದರು. ದೀಪವಾರಿಸಿ ಮಲಗಲು ತೊಡಗಿದಾಗ ನಿರ್ವಾಹವಿಲ್ಲದೆ ತಾನೂ ಹಾಸಿಗೆ ಸೇರಬೇಕಾಯಿತು.

ಕತ್ತಲಲ್ಲಿ ಕಣ್ಣು ಮುಚ್ಚಿದಾಗ ಅವನ ಒಂಟಿತನ ಹೆಚ್ಚಾದಂತೆ ಭಾಸವಾಯಿತು. ಬೆಂಗಳೂರಿನಲ್ಲಿ ಎಷ್ಟೊಂದು ಮಾತನಾಡುತ್ತಿದ್ದ. ಜೊತೆಗೆ ಮನೆಯ ಇತರ ಹುಡುಗರ ಆಟ - ಪಾಟ. ಮಲಗಿದ ಮೇಲೂ ಎಷ್ಟೊ ಹೊತ್ತು ಒಬ್ಬರ ಪಕ್ಕದಲ್ಲಿ ಒಬ್ಬರು ಮಲಗಿರುತ್ತಿದ್ದ ಹುಡುಗರ ಸಾಲು ಕತ್ತಲಲ್ಲಿಯೇ ಮಾತನಾಡಿಕೊಳ್ಳುತ್ತಿತ್ತು. ತಂದೆ "ಸುಮ್ಮನೆ ಬಿದ್ದುಕೊಳ್ರೋ" ಎಂದು ಗದರಿಸಿದಾಗ ಗಪ್ ಚುಪ್ ಆಗುತ್ತಿದ್ದ ಮಕ್ಕಳು, ಸ್ವಲ್ಪ ಹೊತ್ತಿನ ನಂತರ ಮೆಲುದನಿಯಲ್ಲಿ ಮತ್ತೆ ಮಾತಿಗೆ ತೊಡಗುತ್ತಿದ್ದವು.

ಈಗ ಎಲ್ಲೆಲ್ಲೂ ನಿಶ್ಶಬ್ದ ಹಾಗೂ ಕತ್ತಲು. ಕಣ್ಣು ತೆರೆದರೂ ಏನೂ ಕಾಣಿಸುತ್ತಿರಲಿಲ್ಲ. ದೂರದಲ್ಲಿ ಗೋಡೆಯ ಮೊಳೆಗೆ ಒಂದು ಬೆಡ್‌ಲ್ಯಾಂಪ್ ತೂಗು ಹಾಕಿದ್ದರೂ ಅದರ ಕಡೆಗೆ ನೋಡಿದಾಗ ಮಾತ್ರ ಬೆಳಕಿನ ಚುಕ್ಕೆ ಕಾಣಿಸುತ್ತಿತ್ತೇ ಹೊರತು,ಆ ಬೆಳಕಿನಲ್ಲಿ ಬೇರೇನೂ ಕಾಣಿಸುತ್ತಿರಲಿಲ್ಲ.

ಈ ಮನೆಯಲ್ಲಿ, ಊರಲ್ಲಿ ತಾನು ಇರಬೇಕೆಂಬ ಕಲ್ಪನೆ ಬಂದಾಗ ಸೀನುವಿನ ಪುಟ್ಟ ಹೃದಯದಲ್ಲಿ ಗಾಬರಿಯಾಯಿತು. ಈಗ ಬೆಂಗಳೂರಲ್ಲಿ ತನ್ನ ಮನೆಯವರು ಏನು ಮಾಡುತ್ತಿದ್ದಾರೆ ಎನ್ನಿಸಿತು. ಅವರೂ ಮಲಗಿರಬಹುದೆ ? ಆದರೆ ಅವರು ಒಂಬತ್ತು ಗಂಟೆಯವರೆಗೂ ಮಲಗುವುದಿಲ್ಲ. ಆದರೆ ಈಗ ಗಂಟೆಯೆಷ್ಟು? ಗಂಟೆ ನೋಡದೆಯೇ ಇವರೆಲ್ಲ ಮಲಗಿದ್ದಾರಲ್ಲ ಎನಿಸಿತು, ಆಶ್ಚರ್ಯವಾಯಿತು.

ಆ ಕಡೆ ಈ ಕಡೆ ಹತ್ತಾರು ಸಲ ಹೊರಳಾಡಿದ. ಸೊಳ್ಳೆಗಳು ಬೇರೆ ಸೊಂಯ್ ಎಂದು ಹಾಡುತ್ತ ಹಾರಾಡುತ್ತಿದೆ. ತಲೆಯ ತುಂಬ ದುಪ್ಪಟಿಯನ್ನು ಗುಬುರು

ಹಾಕಿಕೊಂಡ. ಕತ್ತಲು ಮತ್ತಷ್ಟು ಜಾಸ್ತಿಯಾಯಿತು. ಮೊದಲೇ ಗಾಳಿಯಿಲ್ಲದೆ ಶಕೆಯಾಗುತ್ತಿದ್ದುದಕ್ಕೆ ಇನ್ನಷ್ಟು ಶಾಖವನ್ನು ಸೇರಿಸಿದಂತಾಯಿತು. ಉಸಿರು ಕಟ್ಟಿದಂತಾಯಿತು. ಗಂಟಲಲ್ಲಿ ಏನೋ ಸಿಕ್ಕಿಹಾಕಿಕೊಂಡಂತಾಗಿ ಬಿಕ್ಕುವಂತಾಯಿತು. ಆದರೆ ಅದನ್ನು ಹೊರಗೆ ಬಿಡದೆ ಗೋಡೆಯ ಕಡೆಗೆ ಮುಖ ತಿರುಗಿಸಿ ಮಲಗಿದ.

೩

ಸೀನು ಬೆಳಿಗ್ಗೆ ಏಳುವುದು ಅತ್ತೆ ''ಏಳು ನಾರಾಯಣಾ, ಏಳು ಲಕ್ಷ್ಮೀರಮಣ ಏಳಯ್ಯ ಬೆಳಗಾಯಿತು'' ಎಂದು ಹಾಡಿ, ''ಏಳಪ್ಪ ಸೀನು, ಆಗಲೇ ಹೊತ್ತಾಗಿದೆ'' ಎಂದು ಕೂಗಿದ ಮೇಲೆಯೇ. ಆಗಲೂ ಇನ್ನೂ ಮಂಪರು ಕಣ್ಣನ್ನು ಮೆತ್ತಿಕೊಳ್ಳುತ್ತದೆ. ಮುದುರಿಕೊಳ್ಳುತ್ತಾನೆ. ಎಬ್ಬಿಸಿ ಹೋದ ಅತ್ತೆ ಮತ್ತೆ ಆ ಕಡೆ ಬಂದು ಇನ್ನೊಮ್ಮೆ ಕೂಗಿದಾಗ ಪೂರ್ತಿ ಏಳುತ್ತಾನೆ. ಹಾಸಿಗೆ ಸುತ್ತಿಟ್ಟು ಮುಖ ತೊಳೆಯಲು ಹೊರಡುತ್ತಾನೆ.

ಇವನು ಬೇಗನೇ ಸ್ನಾನ ಮಾಡಿ ಅಡಿಗೆಗೆ ಎಸರಿಡಬೇಕು. ತಣ್ಣನೆ ಬಟ್ಟೆಯುಟ್ಟು ಬಂದು ಅತ್ತೆ ಸಿದ್ಧಪಡಿಸಿದ್ದ ಕುಮ್ಮಟಿಯ ಮೇಲೆ ಬೇಳೆ ಬೇಯಿಸಲು ನೀರಿಡುತ್ತಾನೆ. ಅತ್ತೆ ಪಾತ್ರೆ ತೊಳೆಯುವ ಕೆಲಸ ಮುಗಿಸಿ ಸ್ನಾನ ಮಾಡಿ ಬರುವ ವೇಳೆಗೆ ಬೇಳೆ ಬೆಂದಿರುತ್ತದೆ ; ಆನಂತರ ಅವರು ಅಡಿಗೆ ಮುಂದುವರೆಸುತ್ತಾರೆ.

ಮಾವ ಸ್ನಾನ ಮಾಡುವುದು ಸ್ವಲ್ಪ ತಡವೇ, ಮುಖ ತೊಳೆದ ತಕ್ಷಣ ಅವರಿಗೆ ದೊಡ್ಡ ಲೋಟದ ತುಂಬ ಕಾಫಿಯಾಗಬೇಕು. ಆದ್ದರಿಂದ ತಾವೇ ಕಾಫಿ ತಯಾರಿ ಮಾಡುತ್ತಾರೆ. ಇದೇನೂ ಮಡಿಯಲ್ಲಿ ತಯಾರಾಗಬೇಕಾಗಿಲ್ಲ , ಮೊದಮೊದಲು ಸೀನುವೂ ಕಾಫಿ ಕುಡಿಯುತ್ತಿದ್ದ. ಆದರೆ ಸ್ವಲ್ಪ ದಿನಗಳಾದ ನಂತರ ಅವನಿಗೆ ಉರಿಕುಚ್ಚೆ ಆಯಿತು. ಅಲ್ಪಸ್ವಲ್ಪ ವೈದ್ಯ ತಿಳಿದ ಅತ್ತೆ ತಂಗಡಿ ಹೂವುಗಳನ್ನು ತಂದು ಅದರಿಂದ ಕಷಾಯ ಮಾಡಿ ಹಾಲು ಬೆರೆಸಿ ಕಾಫಿಯಂತೆ ಅವನಿಗೆ ಕೊಡುತ್ತಿದ್ದರು. ಅದು ಸೀನುವಿಗಷ್ಟೇನೂ ರುಚಿಸುತ್ತಿರಲಿಲ್ಲ. ಆದರೆ ಉರಿ ನಿವಾರಣೆಗಾಗಿ ಅದನ್ನು ಕೆಲವು ದಿನ ಕುಡಿದ. ಮುಂದೆ ಅಭ್ಯಾಸದಿಂದಾಗಿ ಕಾಫಿಯನ್ನು ಕುಡಿಯುವುದನ್ನೇ ಬಿಟ್ಟು ಬಿಟ್ಟ

ಸ್ನಾನದ ನಂತರದಿಂದಲೇ ಸೀನುವಿನ ಸ್ಕೂಲಿನ ತಯಾರಿ ನಡೆಯಬೇಕು. ಆಗ ಮಾವ ದೇವರ ಪೂಜೆಯಲ್ಲಿ ತೊಡಗಿರುತ್ತಾರೆ, ಅವರ ಪೂಜೆಯೆಂದರೆ ಸಾಕಷ್ಟು ದೀರ್ಘಕಾಲದ್ದು ; ಪ್ರತಿನಿತ್ಯ ಸಾಲಿಗ್ರಾಮವನ್ನು ಪೆಟ್ಟಿಗೆಯಿಂದ ಹೊರತೆಗೆದು ಷೋಡಶಪೂಜೆ ಮಾಡುತ್ತಾರೆ. ಅಡಿಗೆ ಮನೆಯಲ್ಲಿಯೇ ದೇವರ ಪೀಠವೂ ಇದೇ, ಒಂದು ಜಗಲಿಯ ಮೇಲೆ. ಹೀಗಾಗಿ ಅವರು ಅತ್ತೆಯಿಲ್ಲದಾಗ ಅಗ್ಗಿಷ್ಟಿಕೆಯ ಮೇಲಿಟ್ಟ ಪಾತ್ರೆಯ ಕಡೆಗೆ ಆಗಾಗ ಕಣ್ಣೋಡಿಸುತ್ತಾರೆ. ಏನಾದರೂ ಉಕ್ಕುತ್ತಿದ್ದರೆ,

''ಏನೂಂದ್ರೆ, ಈ ಪಾತ್ರೆ ಕಡೆ ಸ್ವಲ್ಪ ನೋಡ್ತೀಯಾ'' ಎಂದು ಕೂಗು ಹಾಕುತ್ತಾರೆ.

''ಬಂದೆ'' ಎನ್ನುತ್ತಾ ನಿಧಾನವಾಗಿ ಆ ಕಡೆ ಅತ್ತೆ ಕಾಲು ಹಾಕುತ್ತಾರೆ.

ಮೊದಲ ದಿನ ಸ್ಕೂಲಿಗೆ ಹೋದಾಗ ಸೀನುವಿಗೆ ವಿಚಿತ್ರವೆನ್ನಿಸಿತ್ತು. ಬೆಂಗಳೂರಿನಲ್ಲಿ ಅವನು ಹೋಗುತ್ತಿದ್ದ ಶಾಲೆಯೂ ಸರ್ಕಾರಿಯದೇ. ಆದರೆ ಅದು ಸ್ವಲ್ಪ ದೂರವಿದ್ದುದಲ್ಲದೆ ದೊಡ್ಡದಾಗಿತ್ತು. ಆರೆಂಟು ಜನ ಉಪಾಧ್ಯಾಯರುಗಳಿದ್ದರು. ಎಷ್ಟು ಜನರಿರುವರೆಂಬುದು ಅವನಿಗೆ ಖಚಿತವಾಗಿ ತಿಳಿದಿರಲಿಲ್ಲವಾದರೂ ಹೆಚ್ಚು ಜನರಿದ್ದರೆಂಬ ಕಲ್ಪನೆಯಿತ್ತು. ಏಕೆಂದರೆ ಒಂದೊಂದು ಪೀರಿಯಡ್ ಬೆಲ್ಲಾದಾಗಲೂ ಹೊಸ ಮೇಷ್ಟರು ಬರುತ್ತಿದ್ದರು. ಹೊಡೆದಾಗ ಕಟ್ಟಡದ ಹೊರಭಾಗದಲ್ಲಿ ಮೆಟ್ಟಿಲುಗಳಿಗೆ ಕಟ್ಟಿದ್ದ ಕಬ್ಬಿಣದ ತುಂಡಿನ ಮೇಲೆ ಪಕ್ಕದಲ್ಲಿಯೇ ಇದ್ದ ಇವರ ತರಗತಿಗೇ ಮೊದಲು ಕೇಳಿಸುತ್ತಿತ್ತು.

ಇಲ್ಲಿ ಹಾಗಿಲ್ಲ. ಇದ್ದದ್ದು ಒಂದು ಸುಮಾರಾಗಿ ದೊಡ್ಡದಾದ ಗಂಟೆ, ಮಾವ ದೇವರಪೂಜೆಯ ಕಾಲದಲ್ಲಿ ಹೊಡೆಯುತ್ತಿದ್ದುದಕ್ಕಿಂತ ದೊಡ್ಡದು. ಇದ್ದದ್ದು ಎರಡೇ ಕ್ಲಾಸು ತಾನೇ. ಅದಕ್ಕೇ ಹೆಚ್ಚು ಜನವಿಲ್ಲ. ಅದರಲ್ಲೂ ಒಂದೊಂದು ತರಗತಿಯಲ್ಲಿದ್ದದ್ದೂ ತುಂಬ ಕಡಿಮೆ ಹುಡುಗರು. ಆರನೆಯ ಕ್ಲಾಸಿನಲ್ಲಿ ಇಬ್ಬರು ಹುಡುಗಿಯರಿದ್ದರು, ಆದರೆ ತಮ್ಮ ತರಗತಿಯಲ್ಲಿದ್ದವರು ಬರೀ ಹುಡುಗರೇ ; ಅದೂ ಹನ್ನೆರಡೇ ಜನ. ಸ್ಕೂಲು ಬಿಟ್ಟಾಗಲೂ ಇದರಿಂದ ತುಂಬ ಗಲಾಟೆಯಾಗುತ್ತಿರಲಿಲ್ಲ.

ಆದರೆ ಮೇಷ್ಟರುಗಳು ಇವನ ಮನಸ್ಸನ್ನು ಅಪಹರಿಸಿದ್ದರು. ಮೊದಲ ದಿನ ಹೋದಾಗ, ಮೊದಲ ಪಿರೀಡು ತೆಗೆದುಕೊಂಡಿದ್ದವರು, ಆ ಮೇಲೆ ಗೊತ್ತಾಯಿತು, ಮರುಳಪ್ಪ ಮೇಷ್ಟರು. ತಮಗೆ ಅದೇ ವರ್ಷದಿಂದ ಇಂಗ್ಲಿಷ್ ಕಲಿಸುತ್ತಿದ್ದರು.ಅವರೇ ಇಂಗ್ಲಿಷ್ ಮೇಷ್ಟರು. ಆದರೆ ಅವತ್ತು ಎತ್ತಿಕೊಂತಲೇ ಪಾಠ ಮಾಡಿರಲಿಲ್ಲ. ಹುಡುಗರನ್ನೆಲ್ಲ ಅದೂ ಇದೂ ಕೇಳಿದ್ದರು. ತಮ್ಮ ಕ್ಲಾಸ್‌ನಲ್ಲಿ ರೈಲು ನೋಡಿದ್ದವರು ಇಬ್ಬರೇ, ತಾನು ಮತ್ತು ಮೂಡಲಗಿರಿಗೌಡರ ಮನೆಯ ರಂಗ ! ತಮ್ಮಿಬ್ಬರನ್ನು ಬಿಟ್ಟರೆ ಇಷ್ಟು ನೀಟಾಗಿ ಕ್ರಾಪು ಬಾಚಿಕೊಂಡು ಬರುತ್ತಿದ್ದವರೇ ಅಲ್ಲಿರಲಿಲ್ಲ. ಕ್ರಾಪಿದ್ದರೂ ಅಲ್ಲಿ ಎಣ್ಣೆಯ ಸುಳಿವಿರಲಿಲ್ಲ. ಇದರಿಂದಾಗಿ ಸ್ವಲ್ಪ ಹೆಮ್ಮೆ ತನ್ನ ಮನಸ್ಸಿಗೆ !

ಮರುಳಪ್ಪನವರು ತುಂಬ ಮುದ್ದಾಗಿ ಇಂಗ್ಲಿಷ್ ಅಕ್ಷರ ಬರೆಯುತ್ತಿದ್ದರು. ಅವರಿಗೆ ಇಂಗ್ಲಿಷಿನ ಎರಡು ಪ್ರಿಂಟ್ ಟೈಪು, ಬರೆಯುವ ಎರಡು ಟೈಪು - ಒಟ್ಟು ನಾಲ್ಕು ಟೈಪು ಅಕ್ಷರಗಳನ್ನೂ ಪ್ರತಿದಿನ ನಾಲ್ಕು ನಾಲ್ಕು ಸಲ ಬರೆದು ತಂದೊಪ್ಪಿಸಬೇಕಾಗಿತ್ತು. ಇಲ್ಲದಿದ್ದರೆ ಅವರು ಹುಡುಗರಿಗೆ ಸೋಮಾರಿ ಟೋಪಿ ಹಾಕುತ್ತಿದ್ದರು. ರಟ್ಟಿನ ಮೇಲೆ ಭೂತಾಕಾರದ ಮುಖ ಬರೆಯುತ್ತಿದ್ದರು, ಅದಕ್ಕೆ ಕಣ್ಣು ಮೂಗುಗಳನ್ನು ಕತ್ತರಿಸಿ ಮುಖಕ್ಕೆ ಕಟ್ಟುತ್ತಿದ್ದರು. ಸ್ಕೂಲಿನ ಎದುರಿಗಿದ್ದ ಬೀದಿಯಲ್ಲಿ ನಿಲ್ಲಿಸಿ ಓದಲು ಹೇಳುತ್ತಿದ್ದರು. ಆ ಕಡೆ ಸುಳಿಯುವ ಜನರೆಲ್ಲ ಈ ಹುಡುಗರನ್ನೇ ನೋಡಿಕೊಂಡು ಮುಸಿ ಮುಸಿ ನಗುತ್ತ ಹೋಗುತ್ತಿದ್ದರು.

ಆದರೆ ಅವರು ತಮಾಷೆಯಾಗಿಯೂ ಇರುತ್ತಿದ್ದರು. ಒಂದು ದಿನ ಒಂದು ಪದ್ಯ ಪಾಠಮಾಡುವಾಗ ಅವರು ಹೇಳಿದ ರೀತಿ ಕಣ್ಣಿಗೆ ಕಟ್ಟುವಂಥದ್ದು. ಪದ್ಯವು ತಾಯಿ ಮಗುವಿಗೆ ಚಂದ್ರನನ್ನು ತೋರಿಸಿ ವರ್ಣಿಸುವುದಾಗಿತ್ತು. ತೆಳ್ಳಗೆ ಬೆಳ್ಳಗಿದ್ದ ಸೀನು ಅವರನ್ನು ಆಕರ್ಷಿಸಿದ್ದಿರಬೇಕು. ಅವನನ್ನು ಎತ್ತಿಕೊಂಡು.

"Oh, look at the moon

She's shining up there"

ಎಂದು ಅಭಿನಯಿಸಿದರು. ಹುಡುಗರಿಗೆ ಇಂಗ್ಲಿಷ್ ಬಾರದಿದ್ದರೂ ಅಲ್ಲಿರುವ ಪದಗಳಿಗೆ ಹಾವಭಾವಗಳಿಂದಲೇ ಅರ್ಥ ಹೇಳುತ್ತಿದ್ದರು. ಕೆಲವು ಹುಡುಗರಿಗೆ ಇದು ಸ್ವಲ್ಪ ಮೋಜು ಎನಿಸಿತ್ತು ಕೂಡ. ಮೇಷ್ಟರು ಎತ್ತಿಕೊಂಡಿದ್ದ ಸೀನುವಿನ ಕಡೆಗೇ ನೋಡುತ್ತಿದ್ದರು. ಆಕಾಶದಲ್ಲಿ ಚಂದ್ರನಿದ್ದಾನೆಯೋ ಎಂಬಂತೆ ಆದರ ಕಡೆಗೆ ತೋರಿಸುತ್ತ ತರಗತಿಯಲ್ಲೆಲ್ಲ ಅವರು ಓಡಾಡಿದ್ದರು.

ಸೀನುವಿಗೆ ಮಾತ್ರ ಈ ಸಂದರ್ಭದಲ್ಲಿ ಸ್ವಲ್ಪ ಮುಜುಗರವೆ ಆಯಿತು. ಮೇಷ್ಟರ ತೋಳಿನಲ್ಲಿ ಹುಡುಗ ಹಾಯಾಗಿರಲು ಸಾಧ್ಯವೇ ! ಅವರು ಮುಟ್ಟಿದರೇ ಏನೋ ಒಂದು ಥರವಾಗುವಾಗ, ಕೆಲವು ಸಮಯ ಅವರ ತೋಳಿನಲ್ಲಿರಬೇಕೆಂದರೆ ! ಆದರೆ ತಾನು ಬರುವುದಿಲ್ಲವೆಂದು ಹೇಳುವುದಕ್ಕಾಗುತ್ತದೆಯೇ ? ಹೇಗೋ ತಡೆದುಕೊಂಡಿದ್ದ.

ಬೆಂಗಳೂರಿನ ಶಾಲೆಗೆ ಹೋಲಿಸಿದರೆ ಈ ಮೇಷ್ಟರೆಷ್ಟೋ ಉತ್ತಮ. ಅಲ್ಲಿ ಮಾತಾಡುತ್ತಿದ್ದ ಹುಡುಗರನ್ನು ಮೇಷ್ಟರು ಕೋಲಿನ ತುದಿಯಿಂದ ಸುಮ್ಮನಾಗಿಸುತ್ತಿದ್ದರು. ಒಬ್ಬರು ಮೇಷ್ಟರಂತೂ, ಅವರ ಹೆಸರಾರಿಗೆ ಗೊತ್ತು, ಯಾವಾಗಲೂ ಹುಡುಗರನ್ನು ''ಸುಮ್ಮನೆ ಕೂತಿರೋ ಕಪಿಮುಂಡೇದೇ'' ಎಂದೋ ''ನಿನ್ನ ಪಿಂಡ ನಾಯಿ ತಿಂತು'' ಎಂದೋ ಬಯ್ಯುತ್ತಲೇ ಇರುತ್ತಿದ್ದರು. ಅವರನ್ನು ಕಂಡರಂತೂ ತನಗೆ ತುಂಬ ಭಯ. ಏಟಿನ ಭಯದಿಂದಾಗಿ ತಾನು ಯಾವಾಗಲೂ ಸುಮ್ಮನೇ ಇರುತ್ತಿದ್ದ.

ಇಲ್ಲಿನ ಮೇಷ್ಟರೂ ಹೊಡೆಯುತ್ತಿದ್ದರು, ಆದರೆ ತಾನು ಮತ್ತು ರಂಗ ಇವರಿಗೆ ಏಟು ಬಿದ್ದದ್ದು ಕಡಿಮೆ. ತನಗಂತೂ ಇಲ್ಲವೇ ಇಲ್ಲ ಎನ್ನಬಹುದು. ಕೆಲವು ವೇಳೆ ತಾನು ಓದುವಾಗಲೋ, ಅರ್ಥ ಹೇಳುವಾಗಲೋ ತಪ್ಪು ಮಾಡಿದರೂ ಹೊಡೆಯುತ್ತಿರಲಿಲ್ಲ. ಉಳಿದ ಹುಡುಗರನು ಅಂತಹ ಸಮಯಗಳಲ್ಲಿ ನೋಡುವುದು ತನಗೆ ಕಸಿವಿಸಿಯಾಗುತ್ತಿತ್ತು. ಒಬ್ಬ ಹುಡುಗ ಒಮ್ಮೆ

''ನೀನು ಸ್ವಾಮಿಯೋರ ಮನೇವ್ನೊಂತ ಮೇಷ್ಟ್ರು ಒಡೆಯಾಕಿಲ್ಲ'' ಎಂದಿದ್ದ. ತನಗೆ ಆದರಿಂದ ನಾಚಿಕೆಯಾಗಿತ್ತು. ತಪ್ಪು ಮಾಡಿದಾಗ ತನಗೂ ಏಕೆ ಹೊಡೆಯುವುದಿಲ್ಲವೆಂದು ಇವನಿಗೆ ಬೇಸರವಾಗುತ್ತಿತ್ತು. ಆದರೆ ಹೊಡೆಯಿರೆಂದು ಕೇಳುವುದಕ್ಕೆ ಸಾಧ್ಯವೇ ?

ಹೊಡೆಯುವುದರಲ್ಲಿ ಮರಳಪ್ಪನವರಿಗಿಂತ ಭರಮಪ್ಪ ಮೇಷ್ಟರದು ಎತ್ತಿದ ಕೈ. ತನಗೆಂದೂ ಹೊಡೆದಿರದಿದ್ದರೂ. ಹೊಡೆತ ತಿಂದ ಹುಡುಗರು ಆ ನಂತರ ಕೈಹಿಸುಕಿಕೊಳ್ಳುವ ರೀತಿಯಿಂದ, ಮುಖ ಕಿವುಚುವ ರೀತಿಯಿಂದ, ಕಣ್ಣಲ್ಲಿ ತುಳುಕುವ ಹನಿಯಿಂದಾಗಿ ಆ ಹೊಡೆತದ ತೀವ್ರತೆಯು ಅನುಭವಕ್ಕೆ ಬರುತ್ತಿತ್ತು. ಜೋರಾಗಿ ಅಳಲೂ ಬಾರದು. ಹಾಗೆ ಮಾಡಿದರೆ ಇನ್ನೊಂದು ಏಟು ಬೀಳುವುದು ಖಂಡಿತ.

ಭರಮಪ್ಪ ಕನ್ನಡ ಮುಂತಾದವುಗಳನ್ನು ಪಾಠ ಮಾಡುತ್ತಿದ್ದರು. ಕನ್ನಡದ ಪದ್ಯಗಳನ್ನು ರಾಗವಾಗಿ ಓದುತ್ತಿದ್ದರು. ಅವುಗಳಿಗೆ ಆಮೇಲೆ ಅರ್ಥ ಹೇಳುತ್ತಿದ್ದರು. ಹುಡುಗರ ಕೈಲೂ ಪದ್ಯ-ಪಾಠಗಳನ್ನು ಓದಿಸುತ್ತಿದ್ದರು. ಹಾಸ್ಯಭರಿತವಾಗಿ ಕತೆ ಹೇಳುತ್ತಿದ್ದರು. ಕೆಲವು ವೇಳೆ ಹುಡುಗರನ್ನೇ ಕತೆ ಹೇಳಿ ಎಂದು ದೂಡುತ್ತಿದ್ದರು. ಬೇರೆಯವರು ಹೇಳುವಾಗ ಅವರ ಪೇಚಾಟಕ್ಕೆ ನಗುತ್ತಿದ್ದ ಹುಡುಗರು, ತಮ್ಮದೇ ಸರದಿ ಬಂದಾಗ ಒದ್ದಾಡುತ್ತಿದ್ದರು.

ಬೆಂಗಳೂರಿನಲ್ಲಿ ಸ್ಕೂಲು ಬಿಟ್ಟಾಗ ತಾನು, ತನ್ನ ಒಬ್ಬ ಅಣ್ಣ ಒಬ್ಬ ತಮ್ಮ ನಡೆದು ಬರುತ್ತಿದ್ದರು. ತಮ್ಮ ತಮ್ಮ ಕ್ಲಾಸಿನ ಮಿಕ್ಕ ಹುಡುಗರು ಬೇರೆ ದಿಕ್ಕು ಹಿಡಿದು ಹೋಗುತ್ತಿದ್ದರು. ಆದರೆ ಇಲ್ಲಿ ಬಹು ಮಂದಿ ಹುಡುಗರು ಮೇಷ್ಟರುಗಳು ಊರಿನೆಡೆಗೆ ಒಟ್ಟಿಗೆ ನಿಧಾನವಾಗಿ ಬರುತ್ತಿದ್ದರು. ಮೇಷ್ಟರುಗಳು ಮುಂದೆ ಮಾತಾಡುತ್ತ ನಡೆದುಕೊಂಡು ಬರುತ್ತಿದ್ದರೆ, ಹುಡುಗರು ಮೆಲುದನಿಯಲ್ಲಿ ಪಿಸುಗುಟ್ಟುತ್ತ ಅವರನ್ನು ಹಿಂಬಾಲಿಸುತ್ತಿದ್ದರು. ಊರೊಳಗೆ ಬಂದುಮೇಲೇ ಬೇರೆ ಬೇರೆ ದಿಕ್ಕುಗಳಿಗೆ ಹೋಗುತ್ತಿದ್ದುದು. ಬ್ರಾಹ್ಮಣರ ಬೀದಿಯ ಕಡೆಗೆ ಐದಾರು ಜನ ತಿರುಗುತ್ತಿದ್ದರು.

ಮನೆಗೆ ಬಂದು ಸ್ಕೂಲು ಬಟ್ಟೆ ಬಿಚ್ಚಿ ಹಾಕಿ ಸೀನು ಬೇರೆ ಬಟ್ಟೆ ಹಾಕಿಕೊಂಡು ಮುಖ ಕೈ ಕಾಲು ತೊಳೆಯುತ್ತಿದ್ದ. ಊರಲ್ಲಿ ಅಮ್ಮನಾಗಿದ್ದರೆ ತಿಂಡಿಯೇನನ್ನೂ ಒದಗಿಸಲು ಸಾಧ್ಯವಿರಲಿಲ್ಲ. ತಾವು ತುಂಬ ಜನರು, ಪ್ರತಿನಿತ್ಯ ಒಂದೇ ಸಮನೆ ಏನಾದರೂ ಒದಗಿಸುವುದು ತುಂಬ ಕಷ್ಟವೆಂದು ಹೇಳುತ್ತಿದ್ದಳು. ರಾತ್ರಿಯ ಹೊತ್ತು ಕೈ ತುತ್ತು ಹಾಕುತ್ತಿದ್ದಳು. ಕೆಲವು ವೇಳೆ ಸಾಕಾಯಿತೆಂದು ಅನ್ನಿಸುತ್ತಿರಲಿಲ್ಲ. ಆದರೆ ಕೇಳುವುದಕ್ಕೆ ತನಗೇ ಸಾಧ್ಯವಿರಲಿಲ್ಲ. ಪಾತ್ರೆಗಳೆಲ್ಲ ಖಾಲಿಯಾದದ್ದನ್ನು ತಾನೇ ಕಾಣುತ್ತಿರಲಿಲ್ಲವೇ ?

ಇಲ್ಲಿ ಅತ್ತೆ ಮಾತ್ರ ಧಾರಾಳಿ. ಸಾಯಂಕಾಲ ಮನೆಗೆ ಬಂದಾಗ ಜೇಬಿನ ತುಂಬ ಹುರಿಯಕ್ಕಿ ಹಾಕುತ್ತಿದ್ದರು. ಎಷ್ಟೋ ಸಲ ಅತ್ತೆ ಅತ್ತ ಹೋಗಿದ್ದಾಗ ಡಬ್ಬದಲ್ಲಿ ಕೈ ಹಾಕಿ ಚಡ್ಡಿ ಜೇಬಿಗೆ ಇನ್ನಷ್ಟು ತುಂಬಿಕೊಳ್ಳುತ್ತಿದ್ದುದೂ ಉಂಟು. ಇದನ್ನು ತಿಂದುಕೊಂಡೇ ಸ್ವಲ್ಪ ಹೊತ್ತು ನೀರು ತುಂಬುವ ಕೆಲಸ ಮಾಡಬೇಕಾಗಿತ್ತು. ಮೊದ ಮೊದಲು, ಇತರರು ಆಟಕ್ಕೆ ಸೇರಿಸಿಕೊಳ್ಳದಾಗ ನೀರು ತಂದುಹಾಕುತ್ತೇನೆಂದು ತಾನೇ ಮುಂದೆ ಬಂದಿದ್ದ. ಆದರೆ ಈಗ ಅದಕ್ಕಿಂತ ಕೈ ಬೀಸಿಕೊಂಡಿರುವುದೇ ಮೇಲೆನಿಸುತ್ತಿತ್ತು. ಅದಕ್ಕೆ ಅವಕಾಶವಿರಲಿಲ್ಲ, ಅಷ್ಟೇ. ಅತ್ತೆ ಕರೆಯುತ್ತಿದ್ದರು.

''ನನ್ನೊಬ್ಬಳ ಕೈಲಿ ಅಷ್ಟು ಸಲ ಓಡಾಡೋದಕ್ಕಾಗಲ್ಲ. ಸ್ವಲ್ಪ ಸಹಾಯಮಾಡಪ್ಪ''

''ನಾನು ಆಟ ಆಡ್ಕೋಬೇಕು'' ಎನ್ನುತ್ತಿದ್ದ.

''ಸೊಂಟ ಬಿದ್ದು ಹೋಗುತ್ತೆ ಕಣೋ, ಮರಿ, ಒಂದು ನಾಲ್ಕು ಬಿಂದಿಗೆ ತಂದು ಹಾಕು. ಮಿಕ್ಕನಾದದ್ದನ್ನು ನಾನು ತಂದು ಹಾಕ್ತೀನಿ'' ಎಂದು ಗೋಗರೆಯುತ್ತಿದ್ದರು.

ನಡುವಿನಲ್ಲಿ ನೀರು ತುಂಬಿದ ಬಿಂದಿಗೆ ಹೊತ್ತು ನಿಧಾನವಾಗಿ ಬರುತ್ತಿದ್ದ ಅತ್ತೆಯ ಕಷ್ಟ ಅವನಲ್ಲಿ ಮರುಕವನ್ನುಂಟು ಮಾಡುತ್ತಿತ್ತು. ತನಗೆ ಇದು ಹೊಸದು. ಬೆಂಗಳೂರಿನಲ್ಲಿ ತಾನೆಂದೂ ನೀರು ಸೇದಿದವನಲ್ಲ. ಎಲ್ಲ ತಾಯಿ-ಅಕ್ಕ-ತಂಗಿಯರು ಮಾಡುತ್ತಿದ್ದರು. ಬಚ್ಚಲ ಮನೆಗೆ ಬೇಕಾದ ನೀರನ್ನು ವಠಾರದಲ್ಲಿಯೇ ಇದ್ದ ಬಾವಿಯಿಂದ ಸೇದುತ್ತಿದ್ದರು, ಕುಡಿಯುವ ನೀರಿಗೆ ಮಾತ್ರ ವಠಾರದ ಒಂದೇ ನಲ್ಲಿಯನ್ನು ಬಳಸುತ್ತಿದ್ದರು. ಬಾವಿ ಹತ್ತಿರವೇ ಇದ್ದದ್ದರಿಂದ ಬೇಕಾದಾಗ ನೀರು ಸೇದಿಕೊಂಡು ಬರುತ್ತಿದ್ದರು. ಅಲ್ಲದೆ, ಎಷ್ಟಾದರೂ ನೀರನ್ನು ಕೂಡಿಡಲು ಮನೆಯಲ್ಲಿ ಪಾತ್ರೆಗಳೂ ಇರಲಿಲ್ಲ ; ಆ ಪಾತ್ರೆಗಳನ್ನಿಡಲು ಮನೆ ತುಂಬ ದೊಡ್ಡದಾಗಿಯೂ ಇರಲಿಲ್ಲ. ಕುಡಿಯುವ ನೀರನ್ನು ಮಾತ್ರ ರಾತ್ರಿ ಹೊತ್ತು ತರುತ್ತಿದ್ದರು, ಬೆಳಿಗ್ಗೆ ತುಂಬ ಜನರಿರುತ್ತಾರೆಂದು. ಮಧ್ಯಾಹ್ನದ ಹೊತ್ತಿನಲ್ಲಿ ನಲ್ಲಿಯಲ್ಲಿ ನೀರೇ ಬರುತ್ತಿರಲಿಲ್ಲ.

ಮೊದಮೊದಲು ಬೇಜಾರೆನಿಸಿದರೂ ಅನಂತರ ಸಾಯಂಕಾಲದ ವೇಳೆ ಪುಟ್ಟ ಬಿಂದಿಗೆಯಲ್ಲಿ ಅತ್ತೆ ಸೇದಿಕೊಡುವ ನೀರನ್ನು ತಂದುಹಾಕುವುದು ಅನಿವಾರ್ಯವೆನಿಸಿತ್ತು ಸೀನುವಿಗೆ. ಆಟಕ್ಕೆ ಹೋಗುವ ಆತುರದಿಂದ ಬೇಗ ಬೇಗ ಈ ಕೆಲಸ ಮುಗಿಸುತ್ತಿದ್ದ ಜೇಬಿನಲ್ಲಿರುತ್ತಿದ್ದ ತಿಂಡಿ ಅವನಲ್ಲಿ ಉತ್ಸಾಹವನ್ನು ಪ್ರೇರೇಪಿಸುತ್ತಿತ್ತು. ಖಾಲಿ ಬಿಂದಿಗೆ ಹೊತ್ತು ನಡೆಯುವಾಗ ಜೇಬಿಗೆ ಕೈಹಾಕಿ ಬಾಯಲ್ಲಿ ತುಂಬಿಕೊಂಡು, ತುಂಬಿದ ಬಿಂದಿಗೆ ಹೊತ್ತು ನಡೆಯುವಾಗ ಅಗಿಯುತ್ತ ತನ್ನ ಕೆಲಸ ನಿರ್ವಹಿಸುತ್ತಿದ್ದ.

ತುಂಬ ಹೊತ್ತೇನೂ ಆಟವಾಡುವಂತೆಯೂ ಇರಲಿಲ್ಲ. ನೀರು ತಂದು ಹಾಕಿದ ಮೇಲೆ ಸ್ವಲ್ಪ ಹೊತ್ತು ಅದೋ ಇದೋ ಆಡಿ, ಆಮೇಲೆ ಪೂಜೆಗೆ ಹೂ ತರಲು ಗೆಳೆಯರೊಂದಿಗೆ ಹೊರಡಬೇಕಾಗಿತ್ತು. ಅತ್ತೆ ಬೆಳ್ಳಗೆ ತೊಳೆದು ಕೊಟ್ಟ ತಾಮ್ರದ ತಂಬಿಗೆ ಹಿಡಿದು ಅಕ್ಕಪಕ್ಕದ ಹೊಲಗಳಲ್ಲಿ ಕಪಿಲೆ ಬಾವಿಯ ಹತ್ತಿರ ಕಾಲುವೆಯ ಪಕ್ಕದಲ್ಲಿ ಹಾಕಿರುತ್ತಿದ್ದ ಕಣಗಿಲೆ ಹೂವನ್ನು ಬಿಡಿಸಿಕೊಂಡು ಬರಬೇಕಾಗಿತ್ತು. ಇವನೊಡನೆ ಜೋಯಿಸರ ಮನೆಯ ಹುಡುಗರೂ ಬರುತ್ತಿದ್ದರು. ಬಿಳಿ, ಕೆಂಪು ಕಣಗಿಲೆಗಳನ್ನೂ, ಸ್ವಲ್ಪ ತುಂಬೆ ಹೂವನ್ನೂ ಕಿತ್ತು ತಂದು ಮಾರನೆಯ ಬೆಳಿಗ್ಗೆ ಮಾವ ಮಾಡುವ ಪೂಜೆಗೆ ಒದಗಿಸಿದರೆ ಆ ದಿನದ ಮುಖ್ಯ ಕೆಲಸಗಳು ಮುಗಿದಂತೆ.

ಕೆಲವು ದಿನ ಪಾಲುಮಾರಿಕೆಯಿಂದಾಗಿ ಹೆಚ್ಚು ಹೂಗಳನ್ನು ತರಲು ಬೇಸರವಾಗುತ್ತಿತ್ತು. ನಾಲ್ಕಾರು ಕಡೆ ಹೋಗಿ ಹೂಗಳನ್ನು ಕಿತ್ತು ತಂದರೆ ಎಲ್ಲರ ತಂಬಿಗೆಗಳೂ ತುಂಬುತ್ತಿದ್ದವು. ಆದರೆ ಸೋಮಾರಿತನ, ಹೀಗಾಗಿ ಒಂದೋ ಎರಡೋ ಕಡೆ ಹೋಗುವುದು, ಸಿಕ್ಕಿದಷ್ಟು ಕಿತ್ತು ತರುವುದು, ಮಾವನೇನಾದರೂ ''ಏನೋ ಸೀನು, ಇಷ್ಟು ಕಡಿಮೆ ಹೂವು ತಂದಿದ್ದೀಯಾ ಇವತ್ತು ?'' ಎಂದರೆ ''ಇಲ್ಲ ಮಾವ, ನಾವು ಹೋಗೋ ಹೊತ್ತಿಗೆ ಯಾರೋ ಬಂದು ಹೂವನ್ನೆಲ್ಲ ಕಿತ್ತುಬಿಟ್ಟಿದ್ದರು'' ಎಂದು ಉತ್ತರಕೊಟ್ಟರೆ ಆಯಿತು.

ಆಮೇಲೆ ಅತ್ತೆ ಕರೆಯುವವರೆಗೂ ಜೋಯಿಸರ ಮನೆಯಲ್ಲೇ ಕಾಲ ಕಳೆಯುವುದು. ಆ ಮನೆಯ ಅಜ್ಜಿಗಂತೂ ಮಕ್ಕಳನ್ನು ಕಂಡರೆ ತುಂಬ ಇಷ್ಟ ಏನನ್ನಾದರೂ ತಿನ್ನಲು ಕೊಡುತ್ತಿದ್ದರು. ಆದ್ದರಿಂದ ರಾತ್ರಿ ಊಟಕ್ಕೆ ಕೂತಾಗ ಹೆಚ್ಚು ಸೇರುತ್ತಿರಲಿಲ್ಲ. ಅತ್ತೆಗೇನು ಗೊತ್ತಿಲ್ಲವೇ ಇದರ ಕಾರಣ ? ನಕ್ಕು ಸುಮ್ಮನಾಗುತ್ತಿದ್ದರು. ಆದರೆ ಬೇರೆ ಯಾವುದಾದರೂ ಕಾರಣಕ್ಕಾಗಿ ಅನ್ನ ಹಾಕಿದಾಗ ಸಾಕು ಎಂದರೂ ಅತ್ತೆ ''ಜೋಯಿಸರ ಮನೇಲಿ ಏನು ತಿಂದೆಯಪ್ಪ?'' ಎಂದು ಕೇಳುತ್ತಿದ್ದರು.

ಊಟವಾದ ಮೇಲೆ ಸ್ವಲ್ಪ ಹೊತ್ತು ಗೋಡೆಗೆ ತೂಗು ಹಾಕಿರುತ್ತಿದ್ದ ದೊಡ್ಡ ಲ್ಯಾಂಪಿನ ಕೆಳಗೆ ಕುಳಿತು ಓದಿಕೊಳ್ಳುವುದು. ಸ್ವಲ್ಪ ಹೊತ್ತಿಗೆಲ್ಲ ನಿದ್ದೆ ಕಣ್ಣನ್ನಾವರಿಸಿ ಬಿಡುತ್ತಿತ್ತು. ಜೋರಾಗಿ ಓದುತ್ತಿದ್ದವನೇಕೋ ಓದು ನಿಲ್ಲಿಸಿದನೆಂದು ಮಾವ ಈ ಕಡೆಗೆ ತಿರುಗಿ ನೋಡಿದರೆ, ಕಣ್ಣು ಮುಚ್ಚಿ ಪಕ್ಕಕ್ಕೆ ವಾಲುತ್ತಿದ್ದ ಹುಡುಗರನ್ನು ಕಂಡು ''ಏನಯ್ಯಾ, ಆಗಲೇ ನಿದ್ದೆ ಬಂದ್ಬಿಡ್ತಾ? ಹೋಗಿ ಮಲಕ್ಕೋ'' ಎನ್ನುತ್ತಿದ್ದರು. ಹಾಗೆ ಹೇಳುವುದನ್ನೇ ಕಾಯುತ್ತಿದ್ದವನಂತೆ ಮೇಲೆದ್ದು ತನಗೆ ನಿಯತವಾದ ಜಾಗದಲ್ಲಿ ಹಾಸಿಗೆ ಉರುಳಿಸಿ ಬಿದ್ದುಕೊಳ್ಳುತ್ತಿದ್ದ. ನಿದ್ದೆ ಬಲುಬೇಗ ಆವರಿಸಿಬಿಡುತ್ತಿತ್ತು.

ಕೆಲವು ದಿನ, ಊಟವಾದ ಮೇಲೆ ಎಲೆ ಅಡಿಕೆ ಹಾಕಿಕೊಳ್ಳುತ್ತ ಈಸಿ ಛೇರಿನಲ್ಲಿ ಕುಳಿತ ಮಾವನ ಪಕ್ಕದಲ್ಲಿ ಚಾಪೆಯ ಮೇಲೆ ಕುಳಿತು ಕೊಂಡಿರುತ್ತಿದ್ದ. ಸ್ಕೂಲಿನ ಬಗ್ಗೆ ಅದೂ ಇದೂ ಪ್ರಶ್ನೆಗಳನ್ನು ಹಾಕಿದರೆ ಉತ್ತರಿಸುತ್ತಿದ್ದ ; ಅಥವಾ ಮಾವನೇ ಕೆಲವು ವೇಳೆ ಏನಾದರೂ ಪಾಠಕ್ಕೆ ಸಂಬಂಧಿಸಿದ ಪ್ರಶ್ನೆ ಕೇಳುತ್ತಿದ್ದರು. ಎಷ್ಟೋ ಸಲ ಕತೆಗಳನ್ನೂ ಹೇಳುತ್ತಿದ್ದರು. ಮಾವ ಕತೆಯನ್ನು ಸ್ವಾರಸ್ಯವಾಗಿ ಹೇಳುತ್ತಾರೆಂದು ಸೀನುವಿಗೆ ಅನ್ನಿಸುತ್ತಿತ್ತು. ಆದರೆ ಅವರಲ್ಲಿ ತೀರ ಸಲಿಗೆ ಏಕೋ ಬೆಳೆಯಲಿಲ್ಲ.

ಬೆಳಿಗ್ಗೆ ಎದ್ದು ನಿತ್ಯಕರ್ಮಗಳನ್ನು ಮುಗಿಸಿ, ಏನಾದರೂ ಬರೆಯುವುದಿದ್ದರೆ ಮುಗಿಸಿ ಸಿದ್ಧವಾಗುವ ಹೊತ್ತಿಗೆ, ಗವಾಕ್ಷಿಯಿಂದ ಬಿದ್ದ ಬಿಸಿಲುಕೋಲು ಗೋಡೆಯ ಅಂಚಿನವರೆಗೆ ಬಂದುಬಿಟ್ಟಿರುತ್ತಿತ್ತು. ಅಲ್ಲಿಗೆ ಬಿಸಿಲು ಬಿದ್ದರೆ ಸ್ಕೂಲಿಗೆ ಹೋಗಲು ಊಟಕ್ಕೆ ಕುಳಿತುಕೊಳ್ಳುವ ಹೊತ್ತಾಯಿತೆಂದು ಸೂಚನೆ. ಇಲ್ಲೇನು ಗಡಿಯಾರವೇ ? ಮಾವ ಅದನ್ನೇ ಹೇಳಿದ್ದರು : ''ನಮ್ಮೂರಿಗೆಲ್ಲ ಇರೋದು ಒಂದೇ ಗಡಿಯಾರ ಕಣಯ್ಯ, ಸ್ಕೂಲಿಂದು. ನಮಗೆಲ್ಲ ಸೂರ್ಯನೆ ಗಡಿಯಾರ. ಇಲ್ನೋಡು, ಬಿಸಿಲು ಈ ಗೋಡೆ ಅಂಚಿಗೆ ಬಿದ್ದರೆ ಒಂಬತ್ತೂವರೆ ಆಯ್ತೂಂತ. ಆಗ ಊಟಕ್ಕೆ ಕೂತು ಮುಗಿಸಿ ಹೊರಟರೆ ಸರಿಯಾದ ಕಾಲಕ್ಕೆ ಸ್ಕೂಲಿಗೆ ಹೋಗ್ತೀಯ.'' ಅದು ನಿಜವೂ ಆಗಿತ್ತು. ಗಡಿಯಾರದ ಗಂಟೆಯನ್ನು ಆಧರಿಸದೆಯೇ ಸಮಯ ತಿಳಿಯವುದು ಅವನಿಗೂ ಅಭ್ಯಾಸವಾಗಿ ಬಿಟ್ಟಿತ್ತು.

ಈ ಒತ್ತಡದ ದಿನಕೃತ್ಯಗಳಲ್ಲಿ ಅವನಿಗೆ ಬೇರಾವ ಯೋಚನೆಗೂ ಅವಕಾಶವಿರಲಿಲ್ಲ. ಅವನದೇನು ಯೋಚನೆ ಮಾಡುವ ವಯಸ್ಸೇ, ಪಾಪ ! ಆದರೆ ಆಗೊಮ್ಮೆ ಈಗೊಮ್ಮೆ ತಾಯಿಯ ನೆನಪು ಬರುತ್ತಿತ್ತು. ತಂದೆಯದು ಸ್ವಲ್ಪ ಕಡಿಮೆಯೇ.

ಒಂದು ದಿನ ಸ್ಕೂಲಿನಲ್ಲಿ ಬೆಳ್ಳಿಬಟ್ಟಲಿನ ಸಂಜೀವ ಪಾಠ ಬರೆದಿರಲಿಲ್ಲವೆಂದು ಭರಮಪ್ಪ ಮೇಷ್ಟರು ಕೋಲಿನಿಂದ ಒಂದೇಟು ಕೊಟ್ಟಿದ್ದರು ಅವನಿಗೆ. ಅದನು ಅವನು ತಪ್ಪಿಸಿಕೊಂಡು ಕೈಯೆಳೆದುಕೊಂಡು ಬಿಟ್ಟಿದ್ದ. ಸಿಟ್ಟು ಬಂದ ಮೇಷ್ಟ್ರು ಅಂಗೈಯನ್ನು ಕೆಳಗೆ ಮಾಡಿಕೊಂಡು ಗೆಣ್ಣು ತೋರಿಸಲು ಹೇಳಿದರು. ಅವನು ಹಾಗೇ ಮಾಡಿದ್ದಾಗ ಒಂದು ಜೋರಾಗಿ ಬಿಟ್ಟಿದ್ದರು. ಮಧ್ಯದ ಬೆರಳಿನ ಗೆಣ್ಣಿಗೆ ಏಟುಬಿದ್ದು ಅವನು ''ಅಯ್ಯಯ್ಯಪ್ಪಾ'' ಎಂದು ಕೂಗಿದ್ದ. ಅವನು ಕಿರುಚಿದ ಶಬ್ದ ಸೀನುವಿನ ಮನಸ್ಸಿನಲ್ಲಿ ಭಯವುಂಟು ಮಾಡಿತು. ಅವನ ಅಳು ಕಂಡು ಅವನಿಗಾಗಿರಬಹುದಾದ ನೋವು ಅರ್ಥವಾಗಿತ್ತು. ಏಕೆಂದರೆ ಗೆಣ್ಣಿಗೆ ಬಿದ್ದ ಏಟು ಎಂತಹ ಬಾಧೆ ಕೊಡುತ್ತದೆಂದು ಅವನಿಗೆ ತಿಳಿದಿತ್ತು. ಬೆಂಗಳೂರಿನಲ್ಲಿದ್ದಾಗ ಒಂದು ದಿನ ಅಣ್ಣನಿಗೆ ಇಟ್ಟಿದ್ದ ದೋಸೆಗಳನ್ನೂ ತಾನೇ ತಿಂದು ಮುಗಿಸಿದ್ದ. ತಂದೆಗೆ ದೂರು ಹೋಗಿತ್ತು. ಅವರು ಕೈಗೆ ಸಿಕ್ಕಿದ್ದ ಸೌಟು ತಂದು ಸೀನುವಿನ ಎಡದ ಅಂಗೈ ಹಿಡಿದು ತಿರುಗಿಸಿ ಒಂದೇಟು ಕೊಟ್ಟಿದ್ದರು. ಸಂಜೀವನ ಗೋಳುಕರೆ ಅವನಲ್ಲಿ ತಂದೆಯ ನೆನಪುಂಟುಮಾಡಿತ್ತು.

ಅಣ್ಣತಮ್ಮಂದಿರಾಗಲೀ, ಅಕ್ಕತಂಗಿಯರಾಗಲೀ ಅವನಿಗೆ ತುಂಬ ಹತ್ತಿರದವರೆಂದು ಹಿಂದೆಂದೂ ಅನ್ನಿಸಿರಲಿಲ್ಲ. ಆದರೆ ಇಲ್ಲಿಗೆ ಬಂದ ಹೊಸತರಲ್ಲಿ ಒಬ್ಬನೇ ಇರಬೇಕಾದಾಗ ಅವರೊಡನೆ ಆಡಿದ್ದ ಆಟಗಳು, ಮಾತುಗಳು, ಜಗಳ ಜ್ಞಾಪಕಕ್ಕೆ ಬಂದಿದ್ದವು. ಆದರೆ ತಾಯಿಯ ನೆನಪು ಮಾತ್ರ ಕೆಲವೇಳೆ ಕಾಡಿತ್ತು.

ಬಂದ ಹೊಸತು ಇನ್ನೂ ಆಗ. ಯಾವುದೋ ಕಾರಣದಿಂದ ಮೈ ಬಿಸಿಯಾಗಿತ್ತು. ಸಾಯಂಕಾಲ ಸ್ಕೂಲಿನಿಂದ ಬಂದಾಗ, ಮಂಕಾಗಿದ್ದ ಇವನನ್ನು ಕಂಡು ಅತ್ತೆ ಹಣೆ ಮುಟ್ಟಿ ನೋಡಿದ್ದರು. ಬಿಸಿಯಾಗಿದ್ದುದರಿಂದ ಆಗಲೇ ಹಾಸಿಗೆ ಹಾಸಿಕೊಟ್ಟು ಕಸ್ತೂರಿ ಮಾತ್ರೆಯೊಂದನ್ನು ಪುಡಿಮಾಡಿ ಜೇನು ತುಪ್ಪ ಕಲಸಿ ನೆಕ್ಕಿಸಿದ್ದರು. ಜೀರಿಗೆ ಕಷಾಯ ಮಾಡಿ ಕುಡಿಸಿದ್ದರು. ರಾತ್ರಿ ಊಟ ಬೇಡವೆಂದು ರವೆಗಂಜಿ ಮಾಡಿದ್ದರು.

ಅವತ್ತು ರಾತ್ರಿ ಮಲಗಿದಾಗ ತಮ್ಮ ಹೊಟ್ಟೆಗೆ ಒತ್ತರಿಸಿಕೊಂಡು ಸೀನುವಿನ ಪಕ್ಕ ಅತ್ತೆ ಮಲಗಿದ್ದರು. ಇವನಿಗೆ ಏನು ನೆನಪು ಬಂತೋ ಕಣ್ಣು ತೇವಗೊಂಡಿತ್ತು. ಅತ್ತೆಗೇನಾದರೂ ಇದರ ಸುಳಿವು ಹತ್ತಿತ್ತೋ ಏನೋ ಮುಖದ ಮೇಲೆ ಕೈಯಾಡಿಸಿದರು. ಕೈ ಒದ್ದೆಯಾಯಿತು. ಅವರಿಗೆ ಪ್ರೀತಿ ಉಕ್ಕಿಕೊಂಡು ಬಂತು.

''ಯಾಕೆ ಪುಟ್ಟಾ ತುಂಬ ಸಂಕಟವಾಗುತ್ತಾ?''

''ಊಹ್ಞೂ'' ಕ್ಷೀಣ ಧ್ವನಿಯಲ್ಲಿ ಉತ್ತರಿಸಿದ್ದ.

''ಹಾಗಾದರೆ ಅಮ್ಮನ ಜ್ಞಾಪಕ ಬಂತಾ ?''

''ಏನೂ ಇಲ್ಲ''

''ಮತ್ತೆ ಅಳ್ತಾ ಇದ್ದೀ ?''

"ನಾನೇನು ಅಳ್ತಾ ಇಲ್ಲ"

"ಕಣ್ಣಲ್ಲಿ ನೀರು ಬಂದಿತ್ತಲ್ಲೋ ಮರಿ ?"

"ಏನೋ ಧೂಳು ಬಿತ್ತು"

ಅತ್ತೆಗೆ ಅರ್ಥವಾಗಿತ್ತೆಂದು ಕಾಣಿಸುತ್ತದೆ. "ಬಲು ಅಭಿಮಾನಿ ಹುಡುಗ" ಎಂದಿದ್ದರು.

ತಾನು ಪೆಮ್ಮನಹಳ್ಳಿಗೆ ಬಂದ ಮೊದಮೊದಲು ತಂದೆಯಿಂದ ಆಗಾಗ ಕಾಗದ ಬರುತ್ತಿತ್ತು. ಅದರಲ್ಲಿ ತಪ್ಪದೆ ತನ್ನ ಹೆಸರನ್ನು ಬರೆದು 'ಹೇಗಿದ್ದಾನೆ', ಎಂದು ಕೇಳಿರುತ್ತಿದ್ದರು. ಆಗೆಲ್ಲ ತನ್ನ ಮನಸ್ಸಿಗೆ ಬೆಂಗಳೂರಿನ ವಾತಾವರಣದ ಬಗ್ಗೆ ಜ್ಞಾಪಕಕ್ಕೆ ಬರುತ್ತಿತ್ತು. ಕಾಗದ ಬಂದ ದಿನ, ಒಂಟಿಯಾಗಿರುತ್ತಿದ್ದ ಕಾಲವೆಲ್ಲ ಎಲ್ಲರೂ ಕಣ್ಣಮುಂದೆ ಸುಳಿಯುತ್ತಿದ್ದರು. ಆದರೆ ಬರಬರುತ್ತ ಕಾಗದ ಬರುವುದು ಕಡಿಮೆಯಾಗಿ ಕೊನೆಗೆ ನಿಂತೇ ಹೋಗಿತ್ತು.

ಎಂದೂ ತನ್ನನ್ನು ಕಾಗದ ಬರೆಯಲು ಮಾವ ಕೇಳುತ್ತಿರಲಿಲ್ಲ. ಅಪ್ಪನಿಂದ ಬಂದ ಕಾಗದಕ್ಕೆ ತಾವೇ ಉತ್ತರ ಬರೆಯುತ್ತಿದ್ದರು. ಆದರೆ ಹಾಗೆ ಬರೆಯುವಾಗ ಮಾತ್ರ, "ನಿಮ್ಮಪ್ಪನಿಗೆ ಕಾಗದ ಬರೀತಿದ್ದೀನಿ. ಏನಾದ್ರು ತಿಳಿಸಬೇಕೇನಯ್ಯ ?" ಎಂದು ಕೇಳುತ್ತಿದ್ದರು. ತಿಳಿಸುವಂತಹ ವಿಷಯ ತನಗೇನಿದೆ ? ಸುಮ್ಮನಿರುತ್ತಿದ್ದ. ಮಾವನೇ ಏನೋ ಬರೆಯುತ್ತಿದ್ದರು. ಅವರೇನು ಬರೆಯುತ್ತಿದ್ದರೆಂದು ಓದೇನೂ ಹೇಳುತ್ತಿರಲಿಲ್ಲ. ಏನು ಬರೆದಿದ್ದೀರಿ ಎಂದು ಕೇಳಲೂ ಅವನಿಗೆ ತೋಚುತ್ತಿರಲಿಲ್ಲ.

ಬರಬರುತ್ತ ತಂದೆ-ತಾಯಿಯರ, ಒಡಹುಟ್ಟಿದವರ ಮುಖದ ಚಿತ್ರಗಳೆಲ್ಲ ಮನಸ್ಸಿನಲ್ಲಿ ಮಾಸುತ್ತ ಬಂದವು. ಸ್ವಲ್ಪ ದಿವಸಗಳಾದ ಮೇಲೆ ಕಾಗದ ಬಂದಾಗ ಅವರನ್ನು ನೆನೆಸಿಕೊಂಡರೆ ಮುಖಗಳ ನೆನಪೂ ಬಾರದಾಗುತ್ತಿದ್ದವು. ಈಗೀಗಂತೂ ಯಾರ ನೆನಪೂ ಅವನಿಗೆ ಬರುವುದಿಲ್ಲ, ಯಾರ ಮುಖವೂ ಅವನನ್ನು ಕಾಡುವುದಿಲ್ಲ, ಕಣ್ಣ ಮುಂದಿನ ಊರು, ಗೆಳೆಯರು, ಅತ್ತೆ-ಮಾವ, ಅಜ್ಜಿ ಜೋಯಿಸರ ಮನೆ, ಸ್ಕೂಲು, ಮೇಷ್ಟರುಗಳು, ಲಕ್ಷ್ಮೀಪತಿಶೆಟ್ಟಿ ಇತ್ಯಾದಿ ಇಲ್ಲಿನ ಪ್ರಪಂಚ ಅವನನ್ನಾವರಿಸಿತು.

ಈ ಮಧ್ಯೆ ಸೀನುವೂ ಒಂದು ಸಾಧನೆಯನ್ನು ಮಾಡಿದ್ದ. ಈಜಲು ಅವನಿಗೀಗ ಸುಮಾರಾಗಿ ಬರುತ್ತಿತ್ತು. ಈಜು ಕಲಿತದ್ದು ಒಂದು ಕತೆ. ಬೇಸಗೆಯ ಬೇಗೆಯಿಂದಾಗಿ ಅಲ್ಲಿನ ಹುಡುಗರೆಲ್ಲ ವಿಶಾಲವಾದ ಕಪಿಲೆಯ ಬಾವಿಗಳಲ್ಲಿ ಈಜಾಡುತ್ತಿದ್ದರು. ಅವರ ಹಾಗೆ ತೇಲುವುದು ಎಷ್ಟು ಸುಖಕರವಾಗಿರುತ್ತದೆ, ಅದೂ ಬೇಸಿಗೆಯ ತಾಪದಲ್ಲಿ ತಣ್ಣೀರಿನಲ್ಲಿ, ಎನಿಸುತ್ತಿತ್ತು. ತಾನು ಈಜು ಕಲಿಯಬೇಕೆಂದುಕೊಂಡ. ಚಿಕ್ಕ ಹುಡುಗರೆಲ್ಲ ನೀರಿನಲ್ಲಿರುವುದನ್ನು ಕಂಡು ಅದೇನುಕಷ್ಟದ್ದಾಗಿರಲಾರದೆಂದು ಅವನಿಗನ್ನಿಸಿತ್ತು.

ಶ್ಯಾನುಭೋಗರ ದೊಡ್ಡ ಮಗ ಒಂದು ಬಾರಿ ಇವನ ಸೊಂಟಕ್ಕೆ ಉದ್ದದ ಪಂಚೆಯೊಂದನ್ನು ಕಟ್ಟಿ ತಾನು ದಡದ ಮೇಲೆ ನಿಂತು ಒಂದು ತುದಿಯನ್ನು ಹಿಡಿದು,

ಸೀನುವನ್ನು ಬಾವಿಗೆ ಧುಮುಕಿಸಿದ್ದ. ಕಣ್ಣು ಬಾಯಿ ಮೂಗುಗಳಲ್ಲಿ ನೀರು ಸೇರಿಕೊಂಡಿತು ; ನೆತ್ತಿಗೇರಿ ಕೆಮ್ಮು ಬಂತು, ಜೋರಾಗಿ ಕಿರುಚಿಕೊಂಡ. ದಡದಲ್ಲಿ ನಿಂತಿದ್ದ ಶ್ಯಾನುಭೋಗರ ಮಗ ತುದಿಯನ್ನೆಳೆದು ಸೀನುವನ್ನು ದಡದ ಮೇಲಕ್ಕೆತ್ತಿದ್ದ.

ಆದರೆ ಈ ಭಯ ಹೆಚ್ಚು ಕಾಲ ಉಳಿಯಲಿಲ್ಲ. ಈಜು ಬಾರದವರು ನುಗ್ಗೆ ಬೆಂಡು ಕಟ್ಟಿಕೊಂಡು ನೀರಿಗೆ ಧುಮುಕಿ ತೇಲುತ್ತಿದ್ದುದನ್ನು ಕಂಡು ತಾನೂ ಹಾಗೆಯೇ ಈಜು ಕಲಿಯಬಹುದೆಂಬ ಆಸೆ-ಧೈರ್ಯಗಳಾದವು. ಹುಡುಗರ ಹಿಂಡಿನೊಡನೆ ತಾನೂ ಹೋಗಿ ಯಾರಾದರೂ ಈಜಿ ಮುಗಿಸಿದ ನಂತರ ಅವರು ಬೆನ್ನಿಗೆ ಕಟ್ಟಿಕೊಂಡಿದ್ದ ಬೆಂಡನ್ನು ತಾನೂ ಕಟ್ಟಿಕೊಂಡು ನಿಧಾನವಾಗಿ ನೀರಿಗಿಳಿಯುತ್ತಿದ್ದ. ಕ್ರಮವಾಗಿ ಹೆಚ್ಚು ಆಳಕ್ಕೆ ಹೋಗುತ್ತಿದ್ದ; ಎಲ್ಲ ಕಡೆಯಲ್ಲಿಯೂ ಪ್ರಯತ್ನವಿಲ್ಲದೆ ತೇಲುತ್ತಿದ್ದುದು ಅವನ ಅನುಭವಕ್ಕೆ ಬಂದಿತ್ತು. ನುಗ್ಗೆಯ ಬೆಂಡು ಕಟ್ಟಿಕೊಂಡರೆ ಏನು ಮಾಡಿದರೂ ಮುಳುಗುವುದಿಲ್ಲವೆಂಬ ಖಾತರಿ ಅವನಿಗಾಯಿತು.

ಸ್ವಲ್ಪ ದಿನ ಹೀಗಾದ ಮೇಲೆ ಬೆಂಡು ಕಟ್ಟಿಕೊಂಡು ಮೇಲಿನಿಂದ ಹಾರಿದರೇನು ಎನ್ನಿಸಿತು ; ಬೇರೆ ಅನೇಕ ಹುಡುಗರು ಹಾಗೆ ಮಾಡುತ್ತಿದ್ದರು. ಸ್ವಲ್ಪ ಎತ್ತರದಿಂದ ಧುಮುಕಿ ನೋಡಿದ, ಅವನಿಗೆ ಪರಮಾನಂದವಾಯಿತು. ಧುಮುಕಿದ ಕ್ಷಣ ನೀರಿನಲ್ಲಿ ಮುಳುಗಿದರೂ ಬೇಗನೇ ನೀರಿನಲ್ಲಿ ತೇಲುವ ಅನುಭವ ರೋಮಾಂಚಕಾರಿಯಾಗಿತ್ತು. ಹಾಗೆ ಬಿದ್ದಾಗ, ಮೊದಮೊದಲು ಬಾಯಲ್ಲಿ ಸ್ವಲ್ಪ ನೀರು ಹೋಗುತ್ತಿದ್ದುದೂ ಅದರಿಂದ ನೆತ್ತಿಗೇರಿ ಕೆಮ್ಮು ಬರುತ್ತಿದ್ದುದೂ ನಿಜ. ಆದರೆ ಇದು ಬಹಳ ಸ್ವಲ್ಪ ಹೊತ್ತು. ನೀರಲ್ಲಿ ತೇಲುವುದಂತೂ ಖಚಿತವೇ ತಾನೆ ? ಹೀಗೆ ಬೆಂಡಿನಿಂದಾಗಿ ತೇಲುತ್ತಿದ್ದಾಗ ಮುಂದಕ್ಕೆ ಹೋಗಲುಬೇಕಾದ ದಿಕ್ಕಿಗೆ ತಿರುಗಲು, ಕೈಕಾಲುಗಳನ್ನು ಹೇಗೆ ಆಡಿಸಬೇಕೆಂಬುದನ್ನು ಇತರ ಜೊತೆಗಾರರು ಹೇಳಿಕೊಟ್ಟರು. ಬೆಂಡನ್ನು ಕಟ್ಟಿಕೊಂಡು ಬಾವಿಯನ್ನೆಲ್ಲ ಸುತ್ತುಹಾಕುವುದು ಅಭ್ಯಾಸವಾಗಿ ಬಿಟ್ಟಿತ್ತು.

ಒಂದು ಬಾರಿ ಹೀಗೇ ಈಜಲು ಹೋಗಿದ್ದ ಯಥಾ ಪ್ರಕಾರ ಬೆಂಡನ್ನು ಕಟ್ಟಿಕೊಂಡು ತೇಲಾಡಿದ್ದ. ಕೊಂಚ ಹೊತ್ತಾದ ಮೇಲೆ ಮೇಲಿನಿಂದ ಧುಮುಕಬೇಕೆಂದು ಹತ್ತಿ ಧಡುಮ್ಮನೆ ಇದ್ದು ಹತ್ತಿದರೆ ಏನೋ ತುಂಬ ಹಗುರವಾಗಿರುವಂತೆ ಭಾಸವಾಯಿತು. ಅಷ್ಟು ಹೊತ್ತಿಗೆ ಪಕ್ಕದಲ್ಲಿದ್ದ ಹುಡುಗ,

"ಲೋ ಸೀನು, ನೋಡು, ನಿನ್ನ ಬೆಂಡು ಎಲ್ಲಿ ಬಿದ್ದಿದೆ' ಎಂದು ದೂರ ತೋರಿಸಿದ. ನಿಜ, ಬೆಂಡು ಅಲ್ಲಿ ತೇಲುತ್ತಿದೆ ! ತನ್ನ ಬೆನ್ನ ಕಡೆ ತಿರುಗಿ ನೋಡಿಕೊಂಡ, ಬೆಂಡು ಕಾಣದಾಗಿತ್ತು. ಅದಕ್ಕೇ ಏನೋ ಭಾರ ಕಡಿಮೆಯಾದಂತೆ ತೋರುತ್ತಿದ್ದುದು ! ಅಂದರೆ ತಾನು ಬಾವಿಯ ಮಧ್ಯದಿಂದ ದಡದವರೆಗೆ ಬಂದಿದ್ದುದು ಬೆಂಡು ಕಟ್ಟಿಕೊಳ್ಳದೇನೇ ಎನ್ನಿಸಿತು, ಸ್ವಲ್ಪ ಗಾಬರಿಯಾದಂತಾಯಿತು, ಪಕ್ಕದ ಹುಡುಗ ಹೇಳಿದ,

"ನೀನು ಈಜು ಕಲಿತಿದ್ದೀಯಾ ಕಣೋ, ಇನ್ನು ಮೇಲೆ ಬೆಂಡು ಕಟ್ಟಿಕೋಬೇಡ."

ಇವನಿಗೂ ಹಾಗೇ ಅನ್ನಿಸಿತ್ತು. ಈಗ ಈಜಿ ಬಂದಿದ್ದೇನೆ, ಇನ್ನು ಮೇಲೆ ಹಾಗೇ ಈಜಬಹುದು ಎಂದು ನಿಧಾನವಾಗಿ ದಡದ ಬಳಿಯೇ ತೇಲಿ ಖಚಿತಪಡಿಸಿಕೊಂಡು ಅನಂತರ ಬಾವಿಯ ಎಲ್ಲೆಡೆ ಸುಳಿದಾಡತೊಡಗಿದೆ. ಅಂತೂ ಸೀನುವಿಗೆ ಈಜು ಬಂದ ಹಾಗಾಯಿತು!

೪

ಅವತ್ತು ಶನಿವಾರ, ಅದೂ ತಿಂಗಳ ಮೂರನೇ ಶನಿವಾರ. ಮಿಕ್ಕ ಶನಿವಾರಗಳಂದು ಬೆಳಿಗ್ಗೆಯ ಸ್ಕೂಲು; ಹನ್ನೊಂದು ಗಂಟೆಗೆಲ್ಲ ಮುಗಿದು ಹೋಗುತ್ತದೆ. ಮೂರನೆಯ ಶನಿವಾರವಾದರೆ ಮೇಷ್ಟರುಗಳ ಮೀಟಿಂಗೆಂದು ಸ್ಕೂಲಿರುವುದಿಲ್ಲ; ಉಪಾಧ್ಯಾಯರುಗಳು ಬೇರೆಲ್ಲಿಗೂ ಹೋಗದೆ ಮೀಟಿಂಗಿಗೆ ಹೋಗಬೇಕಾದರೂ, ಹುಡುಗರಿಗೆ ರಜ. ಮೀಟಿಂಗು ಪೆಮ್ಮನಹಳ್ಳಿಯಲ್ಲೇ ಅಲ್ಲ, ಏಳು ಮೈಲಿ ದೂರದ ಕ್ಯಾತಗಾನಹಳ್ಳಿಯಲ್ಲಿ; ಅಲ್ಲಿಗೆ ಸುತ್ತಮುತ್ತಲ ಊರಿನ ಮೇಷ್ಟರುಗಳೆಲ್ಲ ಬರುತ್ತಾರೆ. ಸ್ಕೂಲು ಇನಿಸ್ಪೆಕ್ಟರೂ ಬಂದಿರುತ್ತಾರಂತೆ.

ಸೀನು ದೂರದಿಂದ ಒಮ್ಮೆ ಮೀಟಿಂಗಿನ ರೀತಿಯನ್ನು ನೋಡಿದ್ದ. ಯಾವುದೋ ಕಾರಣದಿಂದ ಮಾವನ ಜೊತೆಯಲ್ಲಿ ಕ್ಯಾತಗಾನಹಳ್ಳಿಗೆ ಹೋಗಿದ್ದ. ಅಂದೂ ರಜೆಯಿತ್ತಲ್ಲ. ತಮ್ಮ ಊರಿನ ಸ್ಕೂಲಿಗಿಂತ ದೊಡ್ಡದು ಅದು, ಅಲ್ಲಿ ಮಿಡಲ್ ಸ್ಕೂಲಿನ ನಾಲ್ಕು ಕ್ಲಾಸುಗಳೂ ಇದ್ದವು. ಕಟ್ಟಡವು ದೊಡ್ಡದು, ತಮ್ಮ ಸ್ಕೂಲಿನಂತೆ ಮಂಟಪವಲ್ಲ; ಹೆಂಚು ಹೊದಿಸಿ ನಾಲ್ಕೈದು ಕೊಠಡಿಗಳಿದ್ದ ಸ್ಕೂಲದು.

ಬೇರೆ ಕಡೆಗಳಿಂದೆಲ್ಲ ಮೇಷ್ಟರುಗಳು ಬಂದಿರುತ್ತಾರೆಂದು ತಿಳಿದು ಸೀನುವಿಗೆ ಕಟ್ಟಡಕ್ಕೆ ತೀರ ಹತ್ತಿರ ಹೋಗಲು ಒಂದು ರೀತಿಯ ಭಯ. ಒಬ್ಬ ಮೇಷ್ಟರಿದ್ದಾಗಲೇ ಹೆದರುತ್ತಿದ್ದವನಿಗೆ ಅಷ್ಟೊಂದು ಜನ ಮೇಷ್ಟರುಗಳ ಹತ್ತಿರ ಹೋಗಲಾದೀತೇ? ಮಾವ ಬೇರೆ ಜೊತೆಯಲ್ಲಿದ್ದರು. ಅವರು ಯಾರೊಡನೆಯೋ ಮಾತಾಡುವಾಗ ತಾನು ಸುಮ್ಮನೆ ನಿಂತಿದ್ದ. ರೂಮೊಂದರಲ್ಲಿ ಯಾರೋ ಮಾತಾಡುತ್ತಿದ್ದಾಗ ಮೇಷ್ಟರುಗಳು ಕುಳಿತು ಕೇಳುತ್ತಿದ್ದುದು ಕಾಣಿಸುತ್ತಿತ್ತು. ತಮ್ಮ ಸ್ಕೂಲಿನಲ್ಲಿದ್ದದ್ದು ಬರೀ ಹಲಗೆಗಳು, ಆದರೆ ಬೆಂಗಳೂರಿನ ಸ್ಕೂಲಿನಲ್ಲಿ ಬೆಂಚುಗಳಿರುತ್ತಿದ್ದವು. ಕ್ಯಾತಗಾನಹಳ್ಳಿಯಲ್ಲಿಯೂ ಬೆಂಚುಗಳು. ಹುಡುಗರಂತೆ ಬೆಂಚುಗಳ ಮೇಲೆ ಮೇಷ್ಟರುಗಳು ಅಷ್ಟೊಂದು ಜನ ಕುಳಿತಿದ್ದದ್ದು ಒಂದು ರೀತಿ ಮೋಜೆನಿಸುತ್ತಿತ್ತು!

ಒಬ್ಬರು ಮಾತಾಡಿ ಕುಳಿತ ಮೇಲೆ ಇನ್ನೊಬ್ಬರು ಮಾತನಾಡುತ್ತ ಬೋರ್ಡಿನ ಮೇಲೆ ಏನೇನೋ ಬರೆಯುವುದೂ ಕಾಣುತ್ತಿತ್ತು ಸೀನುವಿಗೆ. ಮೇಷ್ಟರುಗಳಿಗೇ ಯಾರೋ ಪಾಠ ಮಾಡುತ್ತಿದ್ದಂತೆ ತೋರಿತ್ತದು. ಇವನಿಗೆ ಆಶ್ಚರ್ಯ! ಮಾವನನ್ನು ಕೇಳಿದ್ದ.

"ಮೇಷ್ಟರಿಗೆಲ್ಲ ಪಾಠ ಮಾಡುತ್ತಿದ್ದಾರಲ್ಲ. ಅವರು ದೊಡ್ಡ ಮೇಸ್ಟರಾ ?"

"ಅಲ್ಲ ಕಣಯ್ಯ, ಅಲ್ಲಿ ಪಾಠ ಯಾರೂ ಮಾಡಲ್ಲ ಪಾಠ ಹೇಗೆ ಮಾಡಿದರೆ ಚೆನ್ನ ಅಂತ ತೋರಿಸುತ್ತಿದ್ದಾರೆ."

"ಅದ್ಯಾಕೆ ಹಾಗೆ ತೋರಿಸಬೇಕು ?"

"ಯಾವ ರೀತಿ ಹೇಳಿದರೆ ಹುಡುಗರಿಗೆ ಚೆನ್ನಾಗಿ ಅರ್ಥವಾಗುತ್ತೆ ಅಂತ ಒಬ್ಬೊಬ್ಬರೂ ತಮತಮಗೆ ತೋಚಿದಂತೆ ಹೇಳುತ್ತಾರೆ. ಅದರಲ್ಲಿ ತುಂಬ ಸರಿಯಾದದ್ದನ್ನು ಅನುಸರಿಸಬೇಕೂಂತ ತೀರ್ಮಾನ ಮಾಡ್ಕೋತಾರೆ."

ಮಾವ ತಮಗೆ ತಿಳಿದಿದ್ದ ವಿಷಯವನ್ನು ಬೇಸರಪಟ್ಟುಕೊಳ್ಳದೆ ಹೇಳಿದ್ದರು. ಆದರೆ ಸೀನುವಿಗೆ ಸಮಸ್ಯೆಯೇನೂ ಬಗೆಹರಿದಿರಲಿಲ್ಲ. ಮರುಳಪ್ಪ ಮೇಷ್ಟರೂ ಭರಮಪ್ಪ ಮೇಷ್ಟರೂ ಪಾಠ ಮಾಡುತ್ತಿದ್ದದ್ದು ತನಗೆ ತಿಳಿಯುತ್ತಿಲ್ಲ. ಅದರಲ್ಲಿ ಮರುಳಪ್ಪನೋರು ಎಷ್ಟು ಚೆನ್ನಾಗಿ ಪದ್ಯ ಓದ್ತಾರೆ ! ಅವರಿಗಿಂತ ಚೆನ್ನಾಗಿ ಯಾರು ಪಾಠ ಮಾಡುತ್ತಾರೆ ? ಬೇಕಾದರೆ ಬೇರೆಯವರೂ ಅವರಿಂದ ಕಲಿತುಕೊಳ್ಳಲಿ ! ತಮ್ಮ ಮೇಷ್ಟರುಗಳ ಬಗ್ಗೆ ಅವನಿಗೆ ಹೆಮ್ಮೆಯಿತ್ತು.

ಅವತ್ತೂ ಅಂಥದೇ ಒಂದು ಮೂರನೇ ಶನಿವಾರ, ಸ್ಕೂಲಿಗೆ ರಜ. ಮಾವ, "ಹೊಲದ ಕಡೆ ಹೋಗಿ ಬರಾಣ, ಬರ್ತೀಯೇನಯ್ಯಾ" ಎಂದು ಕರೆದಿದ್ದರು. ಆಗಾಗ್ಗೆ ತಾನೂ ಹೊಲದ ಕಡೆ ಹೋಗಿ ಬರುತ್ತಿದ್ದ. ಒಂಟಿಯಾಗಿ ಎಂದೂ ಹೋದದ್ದಿಲ್ಲ. ಮಾವನೇ ಯಾವತ್ತಾದರೊಂದು ದಿನ ಸಾಯಂಕಾಲ ಕರೆಯುತ್ತಿದ್ದರು.

ಉತ್ಸಾಹದಿಂದಲೇ ಹೊರಟ. ಆಗತಾನೇ ಬೆಳಿಗ್ಗೆ ಒಗ್ಗರಣೆ ಅನ್ನ ಮಾಡಿ ಕೊಟ್ಟಿದ್ದರು ಅತ್ತೆ. ಮಾವ ಏನೂ ತಿಂದಿರಲಿಲ್ಲ. ತಾನು ತಿಂದದ್ದು ಹೊಟ್ಟೆಯಲ್ಲಿ ಸುರಕ್ಷಿತವಾಗಿದ್ದಿದ್ದರಿಂದ ಎಲ್ಲಿಗೆ ಹೋಗುವುದಕ್ಕೂ ತೊಂದರೆಯಿರಲಿಲ್ಲ. 'ಪಾಠ ಓದಿಕೋ' ಎಂದೊ 'ಮನೆಪಾಠ ಬರಕೊ' ಎಂದು ಹೇಳುವುದಕ್ಕಿಂತ 'ಹೊಲದ ಕಡೆ ಬರ್ತೀಯಾ' ಅಂತ ಕರೆದದ್ದು ಅವನಿಗೆ ಹೆಚ್ಚು ಇಂಪಾಗಿ ಕೇಳಿಸುತ್ತದೆ. ಸೀನುವೇನು ಪಾಠದಲ್ಲಿ ಹಿಂದೆ ಬಿದ್ದವನಲ್ಲ. ಹಾಗೆ ನೋಡಿದರೆ ಅವನೇ ಎಲ್ಲರಿಗಿಂತ ಮುಂದೆ. ಬೇರೆ ಹುಡುಗರಿಗೆ ತಲೆಗೆ ಹತ್ತಲಿಲ್ಲವೆಂದು ಮೇಷ್ಟರು ತನಗೆ ಗೊತ್ತಿರುವುದನ್ನೇ ಮತ್ತೆ ಹೇಳಿದಾಗ ತನಗೆ ಬೇಜಾರೆನಿಸುತ್ತಿತ್ತು. ಇಷ್ಟು ಸಲ ಹೇಳಿದರೂ ಯಾಕಿವರ ತಲೆಗೆ ಅರ್ಥವಾಗಲ್ಲ ಎಂದು ಬೇರೆ ಹುಡುಗರ ಬಗ್ಗೆ ಕುತೂಹಲವಾಗುತ್ತಿತ್ತು. ತನಗೆ ತಿಳಿದದ್ದು ಇವರಿಗೇಕೆ ತಿಳಿಯಲಾರದು ಎಂದು ಆಶ್ಚರ್ಯವಾಗುತ್ತಿತ್ತು.

ಇಷ್ಟು ಓದಿನಲ್ಲಿ ಮುಂದಿದ್ದರೂ, ತಾನೆಂದೂ ಸೋಮಾರಿ ಟೋಪಿ ಹಾಕಿಸಿಕೊಂಡು ಬೀದಿಯಲ್ಲಿ ನಿಂತು ಇತರರ ಮುಸಿನಗೆಗೆ ಗುರಿಯಾಗದಿದ್ದರೂ ಓದಿದ್ದನ್ನೇ ಓದಲು ಅವನಿಗೆ ಪಾಲುಮಾರಿಕೆಯಾಗುತ್ತಿತ್ತು. ತನಗೆ ಗೊತ್ತಿರುವುದನ್ನೇ

ಓದಲು ಬೇಜಾರಾಗುತ್ತಿತ್ತು. ಆದ್ದರಿಂದ ರಜಾ ದಿನ ಓದಲು ಹೇಳದೆ ಜೊತೆಗೆ ಕರೆದದ್ದರಿಂದ ಚಂಗನೆ ಹೊರಟ.

ಹೊರಡುವಾಗ ಪಡಸಾಲೆಯ ಮೂಲೆಯಲ್ಲಿ ಬಿಟ್ಟಿದ್ದ ಚಪ್ಪಲಿ ಹಾಕಿಕೊಂಡು ಹೊರಟ. ಈವೂರಲ್ಲಿ ಚಪ್ಪಲಿ ಕೊಂಡುಕೊಳ್ಳುವುದು ; ಎಷ್ಟು ವಿಚಿತ್ರ ಎನಿಸಿತ್ತು ಅವನಿಗೆ. ಬೆಂಗಳೂರಲ್ಲಾದರೆ ಯಾವುದಾದರೂ ಚಪ್ಪಲಿ ಅಂಗಡಿಗೆ ಹೋಗುವುದು ; ಸರಿ ಕಂಡ ಚಪ್ಪಲಿಗಳನ್ನು ಕೊಂಡುಕೊಳ್ಳುವುದು. ಇಲ್ಲಿ ಹಾಗಲ್ಲ, ಚಪ್ಪಲಿ ಅಂಗಡಿಗಳೇ ಇಲ್ಲವಲ್ಲ ಈವೂರಲ್ಲಿ ! ತನಗೆ ಚಪ್ಪಲಿಬೇಕೆಂದು ಹೇಳಿದಾಗ ಮಾವ ಮಾದಿಗರ ಪುಟ್ಟನಿಗೆ ಹೇಳಿ ಕಳಿಸಿದ್ದರು. ಅವನು ಬಂದು ದೂರದಲ್ಲಿ ನಿಂತು ಒಂದು ಕಡ್ಡಿಯಲ್ಲಿ ಕಾಲು ಎಷ್ಟುದ್ದ ಇದೆಯೆಂದು ಅಳೆದುಕೊಡಲು ಹೇಳಿದ್ದ. ಮಾವನವರೇ ಒಂದು ಹಂಚಿಕಡ್ಡಿ ತೆಗೆದು ಕೊಂಡು ತನ್ನ ಕಾಲಿನ ಅಳತೆ ತೆಗೆದುಕೊಂಡು, ಗುರುತಿಸಿ ಅವನೆಡೆಗೆ ಕಡ್ಡಿಯನ್ನೆಸಗಿದ್ದರು. ಅವನು ಕಾಲಿನ ಆಕಾರವನ್ನು ಕಣ್ಣಿನಿಂದಲೇ ಗಮನಿಸಿ, ಕಡ್ಡಿಯನ್ನು ತೆಗೆದುಕೊಂಡು ಹೊರಟುಹೋದ. ನಾಲ್ಕೈದು ದಿನಗಳಲ್ಲಿ ಅವನೇ ಚಪ್ಪಲಿಯನ್ನು ತಂದಿದ್ದ. ಅಳತೆಯೇನೋ ಸರಿಯಾಗಿತ್ತು. ಆದರೆ ಬೆಂಗಳೂರಿನಲ್ಲಿ ಸಿಕ್ಕುವ ಚಪ್ಪಲಿಗಳ ಹಾಗೆ ಅವು ಬಣ್ಣ ಬಣ್ಣವಾಗಿರಲಿಲ್ಲ. ''ಇದೇನು ಮಾವ ಹೀಗಿವೆ'' ಎಂದು ಕಣ್ಣರಳಿಸಿ ಕೇಳಿದಾಗ ಅವರೆಂದಿದ್ದರು : ''ಬೆಂಗಳೂರಿನ ಹಾಗೆ ಇಲ್ಲೆಲ್ಲ ಥಳುಕಿಲ್ಲ ಕಣಯ್ಯ. ಬಣ್ಣ ಇಲ್ಲದಿದ್ದರೇನಂತೆ ಬಾಳಿಕೆ ಬರುತ್ವೆ'' ಎಂದಿದ್ದರು. ಅಸಮಾಧಾನದಿಂದಲೇ ಅವುಗಳನ್ನು ಹಾಕಿಕೊಳ್ಳಲು ಪ್ರಾರಂಭಿಸಿದ್ದ. ಮೊದಮೊದು ಕಾಲನ್ನೆಲ್ಲ ಕಚ್ಚಿದ್ದವು, ಒಂದೆರಡು ದಿನ ಹರಳೆಣ್ಣೆ ಹಚ್ಚಿಟ್ಟ ಮೇಲೆ ಕಚ್ಚುವುದು ನಿಂತಿತ್ತು. ಈಗ ಸಲೀಸಾಗಿದ್ದವು.

ಬರೀ ಚಪ್ಪಲಿಯೇನು, ಎಲ್ಲವೂ ವಿಚಿತ್ರವೆಂದು ಮೊದಮೊದಲು ಭಾಸವಾಗಿತ್ತವನಿಗೆ. ಕ್ಷೌರ ಮಾಡಿಸಿಕೊಳ್ಳಬೇಕಾದರೆ ಕ್ಷೌರಿಕನಿಗೆ ಹೇಳಿ ಕಳಿಸಿದರೆ ಮನೆಗೇ ಬರುತ್ತಿದ್ದ. ಸಾಮಾನ್ಯವಾಗಿ ವಾರಕ್ಕೊಂದು ದಿನ ಅವನು ಬಂದು ಮಾವನ ತಲೆಯ ಕೂದಲನ್ನೆಲ್ಲ ಕತ್ತಿಯಿಂದ ಕೆರೆದುಬಿಡುತ್ತಿದ್ದ ನೆತ್ತಿಯ ಮೇಲೆ ಒಂದು ಸಣ್ಣ ಪಿಳ್ಳುಜುಟ್ಟನ್ನು ಮಾತ್ರ ಉಳಿಸಿರುತ್ತಿದ್ದ. ಅವರಿಗೆ ಕ್ಷೌರ ಮಾಡಲು ಬಂದ ದಿನದಂದೇ, ತಿಂಗಳಿಗೋ ಒಂದೂವರೆ ತಿಂಗಳಿಗೋ ಒಮ್ಮೆ ತನಗೂ ಅವನು ಕ್ರಾಪು ಮಾಡುತ್ತಿದ್ದ. ಆದರೆ ತನಗೆ ಕ್ಷೌರ ಮಾಡಲು ಮಿಷೀನು ಉಪಯೋಗಿಸುತ್ತಾನೆಂಬ ಹೆಮ್ಮೆ ಅವನಿಗಿರು ತ್ತಿತ್ತು. ಒಟ್ಟಿನಲ್ಲಿ ಇಲ್ಲಿ ಎಲ್ಲವೂ ಬೆಂಗಳೂರಿಗೆ ವಿರುದ್ಧವೇ ಎಂಬ ಭಾವನೆ ಬಂದಿತ್ತು.

ಮಾವನ ಜೊತೆಯಲ್ಲಿ ನಡೆಯಬೇಕಾದರೆ ಸ್ವಲ್ಪ ಜೋರಾಗೇ ತಾನು ಹೆಜ್ಜೆ ಹಾಕಬೇಕು. ಅವರ ಜೊತೆಯಲ್ಲಿ ಮಾತಾಡುವಾಗ ತಲೆ ಮೇಲೆತ್ತಿ ಅವರೆಡೆ ನೋಡಿಕೊಂಡು ಹೋಗಬೇಕಾದರೆ ಇನ್ನಷ್ಟು ಜೋರಾಗಿ ನಡೆದಂತಾಗುತ್ತಿತ್ತು. ಮಾವ ಕೈಲಿ ಒಂದು ವಾಕಿಂಗ್ ಸ್ಟಿಕ್ ಹಿಡಿದು ನಡೆಯುತ್ತಿದ್ದರು. ಅವರು ಊರಿಕೊಂಡೇನೂ ನಡೆಯುತ್ತಿರಲಿಲ್ಲ, ಬೀಸಿಕೊಂಡು ಮುಂದೆ ಸಾಗುತ್ತಿದ್ದರು. ಹೊಲಗಳ ಬೇಲಿಗೆ

ಹಾಕಿರುತ್ತಿದ್ದ ಜಾಲಿ ಮುಳ್ಳಿನ ಕೊಂಪೆಗಳು ದಾರಿಗೆ ಅಡ್ಡವಾಗಿ ಸರಿದಿದ್ದರೆ ತಮ್ಮ ಕೈಯ ಕೋಲಿನಿಂದ ಅತ್ತಿತ್ತ ಸರಿಸುತ್ತಿದ್ದರು.

ಮಾವನ ಹೊಲ ಇದ್ದದ್ದು ಪೆಮ್ಮನಹಳ್ಳಿಗೆ ಮುಕ್ಕಾಲು ಮೈಲಿ ದೂರವಿದ್ದ ಹನುಮಯ್ಯನ ಪಾಳ್ಯದಲ್ಲಿ, ಅದೊಂದು ಮಜರೇ ಗ್ರಾಮ. ಅಲ್ಲಿಗೆ ಹೋಗಬೇಕಾದರೆ ಹಳ್ಳದ ಗುಂಟ ನಡೆಯಬೇಕಾಗುತ್ತಿತ್ತು. ಮಳೆ ಬಂದಾಗ ನೀರೆಲ್ಲ ಆ ಹಳ್ಳದಲ್ಲಿ ಹರಿಯುತ್ತಿತ್ತು. ಹಳ್ಳ ಹರಿಯಿತು ಎಂದರೆ ಚೆನ್ನಾಗಿ ಮಳೆ ಬಂದಿದೆ ಎಂದರ್ಥ ; ದೋಣೇಲಿ ನೀರು ಬಿತ್ತು ಎಂದರೆ ಸುಮಾರಾಗೆ ಆಗಿದೆ ಎಂದು ಭಾವನೆ. ಎಷ್ಟೋ ಸಲ ಹಳ್ಳ ಹರಿಯುವುದನ್ನು ಕಾಣಲು ಹುಡುಗರು ಮನೆಗಳಿಂದ ಓಡಿ ಬರುತ್ತಿದ್ದರು. ತಮ್ಮ ಪಾದಗಳನ್ನು ಹರಿಯುವ ನೀರಿನಲ್ಲಿ ಮುಳುಗಿಸಿ ನಿಂತು ಸಂತಸಪಡುತ್ತಿದ್ದರು !

ಈಗೀಗ ಸೀನು ನಡೆಯುವಾಗ ಸುಮ್ಮನೆ ನಡೆಯುವುದಿಲ್ಲ, ಏನಾದರೊಂದು ಪ್ರಶ್ನೆ ಕೇಳುತ್ತಲೇ ಇರುತ್ತಾನೆ, ಮಾವನೂ ತಮಗೆ ತೋಚಿದಷ್ಟನ್ನು ಹೇಳುತ್ತಾರೆ.

"ಬೆಂಗಳೂರಲ್ಲಿ ಎಷ್ಟೊಂದು ಮಳೆ ಬರುತ್ತಲ್ಲ, ಇಲ್ಲಿ ಯಾಕೆ ಅಷ್ಟು ಬರಲ್ಲ ?"

"ಬೇರೆ ಬೇರೆ ಊರುಗಳಲ್ಲಿ ಬೇರೆ ಬೇರೆ ಹವಾಗುಣ ಕಣಯ್ಯ. ಇದು ಬೆಂಗಾಡು ಕೊಂಪೆ. ಅದಕ್ಕೆ ಹೆಚ್ಚು ಮಳೆ ಇಲ್ಲ"

"ಅಲ್ಲಿಂದ ಈ ಕಡೆಗೆ ಮೋಡಗಳನ್ನು ತಿರುಗಿಸಿದರೆ ಇಲ್ಲೂ ಮಳೆ ಜಾಸ್ತಿ ಬರುತ್ತಲ್ವ?" ಎಂದಾಗ ಮಾವ ನಸುಗುತ್ತಾರೆ.

ಹಳ್ಳದ ಆ ಕಡೆ ಬರೀ ಹೊಂಗೇ ಮರಗಳು. ಮಳೆ ಬಂದು ಬಿಟ್ಟರಂತೂ ಹೊಂಗೆಯ ಎಲೆಗಳು ಹೊಳೆಯುತ್ತಿರುತ್ತವೆ. ಆದರೆ ಅವುಗಳನ್ನು ಕಡಿಯುವುದನ್ನು ಹಲವೇಳೆ ಸೀನು ಕಂಡಿದ್ದ, ಅವನಿಗೆ ಪ್ರಶ್ನೆ ಕೇಳಲು ಅದೇ ವಿಷಯವಾಗುತ್ತದೆ.

"ಈ ಹೊಂಗೆ ಮರದ ಕೊಂಬೇನಲ್ಲ ಯಾಕೆ ಕಡೀತಾರೆ ?"

"ಸರಬು ತುಳಿಯಕ್ಕೆ"

"ಏನು ಹಾಗಂದ್ರೆ ?"

"ಹೊಂಗೆ ಎಲೆಗಳನ್ನೆಲ್ಲ ಗದ್ದೆಗೆ ಹಾಕಿ ತುಳಿದರೆ ಒಳ್ಳೆ ಗೊಬ್ಬರವಾಗುತ್ತೆ, ಬತ್ತ ಚೆನ್ನಾಗಿ ಬೆಳೆಯುತ್ತೆ"

"ನಮ್ಮ ಹೊಲದಲ್ಲೂ ತುಳೀತಾರ ?"

"ಹೌದು" ಅಲ್ಲಿಗೆ ಸುಮ್ಮನಾಗುತ್ತಾನೆ.

ದಾರಿ ಹೀಗೇ ಸಗಿದಾಗ ಹನುಮಯ್ಯನ ಪಾಳ್ಯ ಬರುತ್ತದೆ, ಅಲ್ಲೂ ಒಂದಷ್ಟು ಮನೆಗಳು. ಮಾವನ ಹೊಲ ಮಾಡುವ ರೈತ ಅಲ್ಲಿಯೇ ವಾಸ ಮಾಡುವುದು. ಮನೆಗಳನ್ನು ತಟಾದು ತಮ್ಮ ಹೊಲದಡೆಗೆ ನೇರವಾಗಿ ಬರುತ್ತಾರೆ. ದಾರಿಯಲ್ಲಿ

ಹಳ್ಳಿಯವರು ಮಾವನಿಗೆ ನಮಸ್ಕಾರ ಮಾಡುತ್ತಾರೆ, ಕುಳಿತವರು ಎದ್ದು ನಿಲ್ಲುತ್ತಾರೆ. ಹೊಲಕಕೆ ಬಂದಾಗ ಅಲ್ಲಿ ಕೆಲಸಮಾಡುತ್ತಿದ್ದ ಕಲಸಗಾರರಲ್ಲಿಮುಂದಾಳು ಮಾವನ ಬಳಿಗೆ ಓಡಿ ಬರುತ್ತಾನೆ.

ಮಾವ ಕಪಿಲೆ ಬಾವಿಯ ಪಕ್ಕದಲ್ಲಿರುವ ನೇರಳೇ ಮರದ ಕೆಳಗೆ ಹಾಕಿರುವ ಕಲ್ಲು ಬೆಂಚಿನ ಮೇಲೆ ಕುಳಿತುಕೊಳ್ಳುತ್ತಾರೆ ; ಸೀನುವೂ ಅವರ ಬದಿಯಲ್ಲಿಯೇ ಕುಳಿತಿರುತ್ತಾನೆ. ಮಾವ ತಮ್ಮ ಬಳಿ ಬಂದ ಜವರನಿಗೆ ಏನೇನೋ ಕೇಳುತ್ತಾರೆ, ಅವನೇನೋ ಉತ್ತರಿಸುತ್ತಾನೆ. ತನಗೆ ಅದಾವುದೂ ಅರ್ಥವಾಗುವುದಿಲ್ಲ. ಅಲ್ಲಿಂದೆದ್ದು ಓಡಾಡುತ್ತಾನೆ. ಇವನು ಹತ್ತಿರ ಬಂದದ್ದು ಕಂಡು ಅಲ್ಲೇ ಬೆಳೆದಿದ್ದ ಅದೂ ಇದೂ ಗಿಡಗಳ ಕೊಂಬೆಗಳನ್ನು ಕಡಿಯುತ್ತಿದ್ದ ತನಗೆ ಪರಿಚಯವಾಗಿದ್ದ ಮಾದ ಮಾತಾಡಿಸುತ್ತಾನೆ.

''ಏನು ಸಣ್ಣ ಸ್ವಾಮಿಯೋರು, ಒಲತ್ತಾವ ಬಂದ್ಬಿಟ್ಟಿದೀರಾ. ಇಸ್ಕೋಲು ಇಲ್ಲವ್ರಾ?''

''ಇವತ್ತು ಮೇಷ್ಟರುಗಳ ಮೀಟಿಂಗು ಕಣಪ್ಪೋ. ಅದ್ಕೇ ನಮಗೆ ರಜ'' ಎಂದು ಸೀನು ಹೇಳುವಾಗ ತನಗೆ ಹೊಸ ವಿಷಯ ಗೊತ್ತಿದೆ, ಮೇಷ್ಟರುಗಳ ಮೀಟಿಂಗನ್ನು ತಾನು ಕಂಡಿದ್ದೇನೆ ಎಂಬ ಹೆಮ್ಮೆ ಅವನ ಮಾತಿನಲ್ಲಿ ಗೋಚರಿಸುತ್ತದೆ.

''ಅಂಗೇ ಬಂದ್ಬಿಟ್ರಲ್ಲ, ರವಷ್ಟು ಅವಲಕ್ಕಿ ತಗಂಬರಾಕಿಲ್ವ ?''

''ಊ ತರ್ತಾರೆ, ಬೇಕಾದ್ರೆ ನೀನು ಕೇಳಿಸ್ಕೋ''

''ನಾನು ಕೇಳಾಕಿಲ್ಲ, ನೀವೇ ತಗಂಬನ್ನಿ, ಮುಂದಿನ ಸಲ ಬಂದಾಗ ತರ್ತೀರಾ ?''

''ನಾನು ತರಲ್ಲ, ಬೇಕಾದರೆ ಮಾವಂಗೆ ಹೇಳ್ತೀನಿ, ಮಾದಣ್ಣಂಗೆ ಅವಲಕ್ಕಿ ಬೇಕಂತೆ ಅಂತ'' ಎಂದು ಆ ಕಡೆ ತಲೆ ತಿರುಗಿಸಿದಾಗ ಮಾದ ಇವನೆಡೆಗೆ, ''ಸುಮ್ಕಿರಿ ಸ್ವಾಮಿ, ನೀವೇನು ಏಳ್ಬೇಡಿ'' ಎಂದು ಕಾತರದಿಂದ ನೋಡುತ್ತಾನೆ.

ಅಷ್ಟು ಹೊತ್ತಿಗೆ ಮಾವ ಜವರನ ಕೈಲಿ ಮಾತು ಮುಗಿಸಿರುತ್ತಾರೆ. ಸೀನುವಿನ ಕಡೆ ತಿರುಗಿ,

''ಸೀನು, ಬಾರಯ್ಯಾ ಹೋಗೋಣ, ಅವನ ಜೋತೆಗೇನು ಮಾತು'' ಎಂದು ಹೋಗುತ್ತಾರೆ. ಇವನು ಅವರೆಡೆಗೆ ಓಡುತ್ತಾನೆ. ಮನಸ್ಸಿನಲ್ಲಿ ಸ್ವಲ್ಪ ಅಸಮಾಧಾನ ; ಮಾದನ ಜೊತೆ ತಾನು ಮಾತಾಡಿದರೆ ಇವರಿಗೇನು ಎಂದು ; ಆದರೆ ಅದನ್ನು ತೋರಿಸಿಕೊಳ್ಳುವುದಿಲ್ಲ.

ಹೋಗುವಾಗ ಮಾವ ಮಾದನ ಕಡೆ ತಿರುಗಿ, ''ಸ್ವಲ್ಪ ಬಲಿತ ಕಟ್ಗೆ ತೊಗೊಂಬಾರೋ, ಬರೀ ಎಳಕಲು ಪುರಲೆ ತಂದಿದ್ದಲ್ಲೋ ಮೊನ್ನೆ'' ಎಂದು ಜೋರಾಗಿ ಕೂಗಿ ಹೇಳುತ್ತಾರೆ.

''ಆಗಲಿ ಸೋಮಿ'' ಎಂದು ಅವನು ಅಲ್ಲಿಂದಲೇ ಉತ್ತರಿಸುತ್ತಾನೆ.

ಬರುವಾಗ ದಾರಿಯಲ್ಲಿದ್ದ ಹುಣಿಸೇಮರದ ಮೇಲಿನ ಎಳೆಕಾಯಿಗಳಿಗೆ ಒಂದು ಕಲ್ಲು ಬೀರಿದಾಗ ಎರಡು-ಮೂರು ಕಾಯಿಗಳುದುರುತ್ತವೆ. ಅವುಗಳನ್ನಾಯ್ದುಕೊಂಡು ಕಚ್ಚಿ ತಿನ್ನುತ್ತಾನೆ, ಹುಳಿಗೆ ಮುಖ ಸಿಂಡರಿಸಿಕೊಂಡರೂ ರುಚಿಯಾಗಿವೆಯೆನಿಸುತ್ತದೆ. ಬೆಂಗಳೂರಿನಲ್ಲಿದ್ದಾಗ ಹುಣಿಸೆ ಹಣ್ಣಿಗೆ ಮೆಣಸಿನಪುಡಿ ಉಪ್ಪು ಜೀರಿಗೆ ಹಾಕಿ ಕುಟ್ಟಿ ಅದನ್ನು ಹಂಚಿನಕಡ್ಡಿಯ ಕೊನೆಗೆ ಸಿಕ್ಕಿಸಿಕೊಂಡು ಚೀಪುತ್ತಿದ್ದ ನೆನಪು ಬರುತ್ತದೆ, ಬಾಯಿ ಚಪ್ಪರಿಸುತ್ತಾನೆ. ಅದನ್ನು ಕಂಡು ಮಾವ, "ಹಸಿ ಹುಣಿಸೇಕಾಯಿ ತಿನ್ಬೇಡಯ್ಯ ಗಂಟಲು ಕಟ್ಟುತ್ತೆ" ಎಂದಾಗ ಈ ಮಾವ ಎಲ್ಲದಕ್ಕೂ ಅಡ್ಡಿ ಮಾಡ್ತಾರಲ್ಲ ಯಾಕೆ ಅನ್ನಿಸುತ್ತೆ. ಉಳಿದವನ್ನು ಜೇಬಿಗೆ ಇಳಿಬಿಟ್ಟು ಅವರ ಜೊತ ಸುಮ್ಮನೆ ನಡೆದು ಬರುತ್ತಾನೆ.

ಮನೆಗೆ ಬಂದಾಗ ಹೊತ್ತು ಆಗತಾನೆ ಮುಳುಗಿರುತ್ತದೆ. ಕಾಲು ತೊಳೆದುಕೊಂಡು ಬಂದು ನೋಡಿದರೆ ಅಜ್ಜಿ ಮಲಗಿಬಿಟ್ಟಿದೆ ! ದಿನ ಕುಳಿತಲ್ಲೇ ಕುಳಿತಿರುತ್ತಿತ್ತೇ ಹೊರತು ಎಂದೂ ಇಷ್ಟು ಹೊತ್ತಿಗೆ ಮಲಗುತ್ತಿರಲಿಲ್ಲ, ಈಗ ನೋಡಿದರೆ ಹಾಸಿಗೆ ಮೇಲೆ ಬಿದ್ದುಕೊಂಡಿದೆ. ಅಂದರೆ ಹಾಸಿಗೆಯನ್ನು ಅತ್ತೆ ಹಾಕಿರಬೇಕು. ಆದರೆ ಅತ್ತೆ ಇಷ್ಟು ಹೊತ್ತಿನಲ್ಲಿ ಇದಾವುದನ್ನು ಮುಟ್ಟುವುದಿಲ್ಲವಲ್ಲ ಮಡಿ ತಾನೇ ? ಬಟ್ಟೆಬರೆ ತೆಗೆದಿಡುವುದು ಇವುಗಳನ್ನೆಲ್ಲ ತನಗೇ ಅತ್ತೆ ಹೇಳುತ್ತಿದ್ದರಲ್ಲ. ಜೋಯಿಸರ ಮನೆಯಿಂದ ಯಾರನ್ನಾದರೂ ಹುಡುಗರನ್ನು ಕರೆದುಕೊಂಡು ಬಂದು ಹಾಸಿಸಿರಬೇಕು.

ಮಾವ ಅತ್ತೆಯನ್ನು ಪ್ರಶ್ನೆ ಮಾಡುತ್ತಾರೆ. "ಕೂತುಕೊಳ್ಳೋಕಾಗಲ್ಲ, ಸುಸ್ತು ಮಲಕ್ಕೋತೀನಿ" ಅಂತಂತೆ ಅಜ್ಜಿ ತುಮ್ಮಗನೂರಿನ ರಾಮಚಂದ್ರ ಇದಾನಲ್ಲ, ಜೋಯಿಸರ ಮನೇಲಿ ಓದಿಕೊಂಡು, ಅವನನ್ನು ಕರೆದು ಹಾಸಿಗೆ ಹಾಕಲು ಹೇಳಿದರಂತೆ. ಫಳಾರ ಮಾಡುತ್ತೀರಾ ಎಂದರೆ ಬೇಡವೆಂದು ಕೈಸನ್ನೆ ಮಾಡಿದರಂತೆ. ಮಾವ ಅಜ್ಜಿಯನ್ನು ಕೇಳಿದಾಗ ಅದು ಏನೇನೋ ಗೊಣಗುತ್ತದೆ ; ತನಗೇನೂ ಅದು ಕೇಳಿಸದು. ಅಜ್ಜಿ ಮಲಗಿರುವಂತೆಯೇ ತಾವೆಲ್ಲ ತಮ್ಮ ಕೆಲಸದಲ್ಲಿ ತೊಡಗಿರುತ್ತಾರೆ. ಅದಕ್ಕೇನೋ ಕಾಯಿಲೆಯಿರಬೇಕೆನಿಸುತ್ತದೆ, ಸೀನುವಿಗೆ.

ಮೂರು ದಿನ ಹೀಗೆ ಇದ್ದಾಗ ನಾಲ್ಕನೇ ಮಧ್ಯಾಹ್ನ ಅತ್ತೆ-ಮಾವ ಇಬ್ಬರೂ ಅಜ್ಜಿಯ ಹಾಸಿಗೆ ಬಳಿ ಕುಳಿತಿರುತ್ತಾರೆ. ಅಜ್ಜಿಯ ಬಾಯಲ್ಲಿ ಮಾತೇ ಹೊರಡುವುದಿಲ್ಲ, ಕಣ್ಣು ಮುಚ್ಚಿರುತ್ತದೆ. ಮಾವಅಜ್ಜಿಯ ಕಾಲು ಕೈಗಳನ್ನು ಉಜ್ಜುತ್ತಾರೆ. ಅತ್ತೆ ಓಡಿಹೋಗಿ ಮಗುಟ ಉಟ್ಟುಕೊಂಡು ಅಡಿಗೆ ಮನೆಗೆ ಹೋಗಿ ದೇವರ ಪೀಠದ ಬಳಿಯಿದ್ದ, ಮುಚ್ಚಿದ್ದ ಡಬ್ಬಿಯಲ್ಲಿನ ಗಂಗೆಯನ್ನು ತರುತ್ತಾರೆ. ಮಾವ ಅದರ ಮುಚ್ಚಳವನ್ನೊಡೆದು ಉದ್ಧರಣೆಯಿಂದ ನೀರನ್ನು ತೆಗೆದು ಅಜ್ಜಿಯ ಬಾಯಿಗೆ ಹಾಕುತ್ತಾರೆ. ಒಂದೆರಡು ತೊಟ್ಟು ಒಳಗೆ ಹೋಗಿ ಉಳಿದದ್ದು ಕೆನ್ನೆಯ ಮೇಲೆಲ್ಲ ಹರಿಯುತ್ತದೆ. ಯಾರೂ ತನ್ನನ್ನು ಮಾತಾಡಿಸದೆ ಇರುವುದನ್ನು ಕಂಡು ಸೀನುವಿಗೆ ವಿಚಿತ್ರವೆನಿಸುತ್ತದೆ ; ಅಜ್ಜಿಯ ಹತ್ತಿರ ಅತ್ತೆ-ಮಾವ ಕುಳಿತಿರುವ ರೀತಿಯನ್ನು ನೋಡಿ ಸ್ವಲ್ಪ ಭಯವೂ ಆಗುತ್ತದೆ.

ಅತ್ತೆ ಅವನ ಹತ್ತಿರ ಬಂದು ದೂರ ನಿಂತು ''ಜೋಯಿಸರ ಮನೆಗೆ ಹೋಗು ನೀನು'' ಎನ್ನುತ್ತಾರೆ. ಅವನು ಅನುಮಾನದಿಂದಲೇ ಹೊರಡುತ್ತಾನೆ. ಅಲ್ಲಿಗೆ ಹೋದರೆ ಸ್ವಲ್ಪ ಹೊತ್ತಿಗೆಲ್ಲ ಅಲ್ಲಿನವರು ಮಾತನಾಡಿಕೊಳ್ಳುತ್ತಾರೆ : ''ಸುಬ್ಬಮ್ಮಜ್ಜಿ ಹೋಗಿ ಬಿಡ್ತಂತೆ.'' ಸತ್ತುಹೋಯಿತು ಅಜ್ಜಿ ಎಂದು ತನಗೆ ಅನ್ನಿಸುತ್ತದೆ. ತಾನು ಆಗ ಎದ್ದು ಮನೆಗೆ ಬಂದಾಗ ಅಜ್ಜಿಯನ್ನು ಹೊರಗಡೆ ಮಲಗಿಸಿರುತ್ತಾರೆ. ಅದರ ಕಾಲನ್ನು ಮಂಡಿಯ ಹತ್ತಿರ ಮಾವ ಮಡಿಸುತ್ತಿರುತ್ತಾರೆ. ಅಜ್ಜಿ ಸತ್ತುಹೋಗಿದ್ದರೂ ಮಾವ-ಅತ್ತೆ ಯಾರೂ ಅಳುತ್ತಿಲ್ಲವಲ್ಲ ಅನ್ನಿಸುತ್ತದೆ. ಬೆಂಗಳೂರಿನಲ್ಲಿ ಪಕ್ಕದ ವಠಾರದವರೊಬ್ಬರು ಆಕ್ಸಿಡೆಂಟಾಗಿ ಸತ್ತುಹೋದಾಗ ಅವರ ಮನೆಯವರು ಎಷ್ಟೊಂದು ಅತ್ತಿದ್ದರು. ಆದರೆ ಅವರು ಅಜ್ಜಿಯ ಹಾಗಿರಲಿಲ್ಲ. ಇನ್ನೂ ಆಫೀಸಿಗೆ ಹೋಗುತ್ತಿದ್ದರು. ಮುದುಕರು ಸತ್ತರೆ ಅಳಬಾರದೇನೋ ಎಂದು ಸೀನುವಿಗನ್ನಿಸುತ್ತದೆ.

''ನೀನ್ಯಾಕೆ ಇಲ್ಲಿಗೆ ಬಂದೋ ಪುಟ್ಟಾ, ಜೋಯಿಸರ ಮನೇಲೇ ಇರು ಹೋಗು'' ಎಂದು ಅತ್ತೆ ಹೇಳುತ್ತಾರೆ. ಅವರನ್ನು ಏನಾದರೂ ಕೇಳಬೇಕು ಎನ್ನಿಸಿದರೂ ಅವರು ಹತ್ತಿರ ಬರುವುದೇ ಇಲ್ಲ. ತನಗೂ ಏನು ಕೇಳಬೇಕೆಂದು ತೋಚುವುದಿಲ್ಲ. ಮಾವನಂತೂ ತನ್ನ ಕಡೆ ಕೂಡನೋಡುವುದಿಲ್ಲ. ಅತ್ತೆ ಹೇಳಿದ ಹಾಗೆಯೇ ಅವನು ಜೋಯಿಸರ ಮನೆಗೆ ಬಂದುಬಿಡುತ್ತಾನೆ.

ಆಮೇಲೆ ಹತ್ತು ದಿವಸ ಜೋಯಿಸರ ಮನೆಯಲ್ಲಿ ತನ್ನ ಊಟ, ನಿದ್ದೆ ಎಲ್ಲ. ಅಲ್ಲಿಂದಲೇ ಸ್ಕೂಲಿಗೆ ಹೋಗುತ್ತಾನೆ. ಅಲ್ಲಿನ ಹುಡುಗರ ಜೊತೆಯಲ್ಲಿ ಊಟ ಮಾಡುವುದು, ಸ್ಕೂಲಿಗೆ ಹೋಗುವುದು ಎಲ್ಲ ಚೆನ್ನಾಗಿ ಕಾಣುತ್ತದೆ. ಇಲ್ಲೇ ಇದ್ದರೆ ಚೆನ್ನ ಎನ್ನಿಸುತ್ತದೆ. ಸಾಯಂಕಾಲದ ಹೊತ್ತು ಬರೀ ಆಟ. ತನ್ನ ಕೈಲಿ ಅವರ ಮನೆಯವರು ನೀರು ಹೊರಿಸುವುದಿಲ್ಲ. ರಾತ್ರಿ ಆ ಮನೆಯವರ ಜೊತೆ ಮಲಗಿಕೊಂಡರೆ ಎಷ್ಟೊಂದು ಮಾತುಕತೆ ! ತಮ್ಮ ಮನೆಯಲ್ಲಾದರೆ ದೀಪ ಸಣ್ಣಗೆ ಮಾಡಿ ಮಲಗಿದರೆ ನಿದ್ದೆಯನ್ನೇ ಮಾಡಬೇಕು, ಯಾರೂ ಮಾತಾಡುವವರೇ ಇಲ್ಲ. ಅತ್ತೆ-ಮಾವ ಕೂಡ ಮಾತನಾಡಿ ಕೊಳ್ಳುವುದಿಲ್ಲ. ಎಷ್ಟೋ ಸಲ ನಿದ್ದೆ ಬಾರದಾಗ ಆಕಡೆ ಈಕಡೆ ಹೊರಳಿ ನಿದ್ದೆ ಬರುವವರೆಗೆ ಕಾಲ ಕಳೆಯಬೇಕು. ಇಲ್ಲಿ ಹಾಗಲ್ಲ. ನಿದ್ದೆ ಬರುತ್ತಿದ್ದರೂ ಮಾತಿನಿಂದ ನಿದ್ದೆ ಮಾಡಬೇಕೆನಿಸುವುದಿಲ್ಲ. ಶ್ರೀನಿವಾಸ ಜೋಯಿಸರು ಹೊರಗಡೆ ತಮ್ಮ ರೂಮಿನಲ್ಲಿ ಮಲಗುತ್ತಾರೆ, ಶ್ರೀಕಂಠಯ್ಯನವರು ಬರುವುದು ಯಾವಾಗಲೋ ತಾವು ನಿದ್ದೆ ಮಾಡಿದ ಮೇಲೆ, ಹೀಗಾಗಿ ಸುಮಾರು ಹೊತ್ತು ಮಾತಾಡಿದ ಮೇಲೆ ನಿದ್ದೆ ಬರುತ್ತದೆ.

ಈ ಹತ್ತು ದಿವಸವೂ ತಾನು ತಮ್ಮ ಮನೆಗೆ ಹೋಗಬೇಕಾಗಿರಲಿಲ್ಲ. ಸೂತಕವಂತೆ, ಮುಟ್ಟಬಾರದಂತೆ. ಸೀತಾ ಲಕ್ಷ್ಮಿ ಅತ್ತೆಯನ್ನು ಇವನು ಕೇಳಿದ್ದ.

''ಸೂತಕ ಅಂದರೇನು ?''

''ಮೈಲಿಗೆ''

''ಮೈಲಿಗೆ ಇರೋವಾಗ ಮುಟ್ಟಿದರೆ ಏನಾಗುತ್ತೆ?''

''ಪಾಪ ಬರುತ್ತೆ''

''ಮೈಲಿಗೆ ಇರೋದು ಹೇಗೆ ಗೊತ್ತಾಗುತ್ತೆ. ಕಾಣಿಸಲ್ಲವಲ್ಲ, ಯಾರೂ ಹೇಳದೆ ಇದ್ದರೆ ಗೊತ್ತಿಲ್ಲದೆ ಮುಟ್ಟಿಬಿಟ್ಟರೆ ?''

''ತಿಳೀದೆ ಮುಟ್ಟಿದರೆ ಪರವಾಯಿಲ್ಲ, ಸ್ನಾನ ಮಾಡಿಬಿಟ್ಟರಾಯಿತು''

''ಸಾನ ಮಾಡಿದಿದ್ದರೇನಾಗುತ್ತೆ, ಸತ್ತು ಹೋಗ್ತಾರಾ ?'' ಎಂದಿವನು ಮುಗ್ಧತೆಯಿಂದ ಕೇಳುತ್ತಾನೆ. ಅವರಿಗೆ ಸ್ಪಷ್ಟವಾಗಿ ಏನು ಹೇಳಲೂ ತೋಚದಾಗುತ್ತದೆ. ''ಸಾಯೋದಿಲ್ಲ, ಆದರೂ ಮುಟ್ಟಬಾರದು'' ಎನ್ನುತ್ತಾರೆ.

ಮಾವ ಪ್ರತಿದಿನ ಬೆಳಿಗ್ಗೆ ತಣ್ಣೀರು ಸ್ನಾನ ಮಾಡಿ ಎಲ್ಲಿಗೋ ಹೋಗ್ತಾರಂತೆ, ಸ್ಮಶಾನವಂತೆ. ಅಲ್ಲೇನಂತೆ ಅಜ್ಜಿಯನ್ನು ಸುಟ್ಟಿದ್ದು ಸುಡೋವಾಗ ಅಜ್ಜೀಗೆ ನೋವಾಗಿರಲ್ಲವಾ ಎಂದು ಭಯವಾಗುತ್ತದೆ. ಹಾಗೆ ಕೇಳಿದಾಗ ತನಗಿಂತ ದೊಡ್ಡವಳಾಗಿದ್ದ ಶ್ರೀಕಂಠಯ್ಯ ಮಾವನ ಮಗಳು ರುಕ್ಮಿಣಿ ಹೇಳಿದ್ದಳು : ''ಸತ್ತುಬಿಟ್ಟರೆ ಏನೂ ಗೊತ್ತಾಗಲ್ವಂತೆ. ಬೆಂಕಿ ಹಾಕಿದರೂ ನೋವಲ್ಲ, ದಬ್ಬಳದಿಂದ ಚುಚ್ಚಿದರೂ ನೋವಲ್ಲ.'' ಅವತ್ತು ಜಾಲಿ ಮುಳ್ಳನ್ನು ತಾನು ತುಳಿದು ಅದು ಮುರಿದು ಕಾಲಲ್ಲಿ ಉಳಿದುಬಿಟ್ಟಿದ್ದಾಗ ಎಷ್ಟು ನೋಯ್ತಿತ್ತು ! ಆಮೇಲೆ ಅತ್ತೇನೆ ಸೂಜಿಯಿಂದ ಮುಳ್ಳನ್ನು ನಿಧಾನವಾಗಿ ತೆಗೆದಿದ್ದರು. ಆದರೆ ಹಾಗೆ ತೆಗೆಯೋವಾಗ ಸೂಜಿ ತುದಿಗೆ ಮುಳ್ಳು ತಾಕಿದರೆ ಎಷ್ಟೊಂದು ನೋಯ್ತಾ ಇತ್ತು. ದಬ್ಬಳದಿಂದ ಬೇಕೂಂತ ಚುಚ್ಚಿದರೂ ನೋಯೋದಿಲ್ಲ ಅಂದರೆ ಎಷ್ಟು ಚೆನ್ನಾಗಿರುತ್ತೆ ಅನ್ನಿಸಿತ್ತು !

ಹತ್ತುದಿನ ಆದಮೇಲೆ ಹನ್ನೊಂದನೇ ದಿನ ಸಮಾರಾಧನೆಯಂತೆ. ಊರಿನ ಬ್ರಾಹ್ಮಣರ ಮನೆಯವರಿಗೆಲ್ಲ ಅವತ್ತು ತಮ್ಮ ಮನೆಯಲ್ಲೇ ಊಟ, ಅಲ್ಲದೆ ಬೇರೆ ಊರಿನಿಂದಲೂ ಯಾರು ಯಾರೋ ಬಂದಿದ್ದರು. ಹತ್ತುದಿನವೂ ಮಾವನ ತಮ್ಮ ಅವರ ಮನೆಯವರೆಲ್ಲ ಇಲ್ಲೇ ಇದ್ದರು. ತನಗ ಮಾತ್ರ ಅವರಾರನ್ನೂ ಮಾತನಾಡಿಸಲು ಆಗಿರಲಿಲ್ಲ, ಸಂಕೋಚ ಬೇರೆ, ಹೆಚ್ಚು ಬಳಕೆಯಿಲ್ಲ. ತಾನೂ ಎಲ್ಲರ ಜೊತೆ ಊಟಕ್ಕೆ ಕೂತಾಗಲೇ ಅವರನ್ನು ಸರಿಯಾಗಿ ಕಂಡದ್ದು. ತಾವೂ ಬಡಿಸುತ್ತಿದ್ದ ಮಾವನ ತಮ್ಮ ತನ್ನನ್ನು ಕಂಡು ''ಏನಯ್ಯ ?'' ಎಂದಷ್ಟೇ ಮಾತನಾಡಿಸಿದ್ದರು. ಆಗ ಇವನು ಏನೂ ಉತ್ತರಿಸಿ ರಲಿಲ್ಲ. ಊಟವೆಲ್ಲ ಆದ ಮೇಲೆ ಮಾವ ಎಲ್ಲರ ಲೋಟದಲ್ಲೂ ಒಂದೊಂದಾಣೆಯನ್ನು ಹಾಕಿಕೊಂಡು ಹೋಗಿದ್ದರು, ತನ್ನ ಲೋಟದಲ್ಲೂ! ಆದರೆ ತನ್ನ ಕಡೆ ಮಾವ ನೋಡೇ ಇರಲಿಲ್ಲ, ಇವರ್‍ಯಾಕೆ ನನ್ನ ಕಡೆ ನೋಡಬಾರದು ಅನ್ನಿಸಿ, ತಾನು ಈ ಗುಂಪು ಜನರ ಮಧ್ಯೆ ಕರಗಿ ಹೋಗಿದ್ದೇನೆಯೇನೋ ಎನ್ನಿಸಿತ್ತು ಸೀನುವಿಗೆ.

ಅವತ್ತೊಂದು ದಿನ ಜೋಯಿಸರ ಮನೆಯಲ್ಲೇ ಮಲಗಿದ್ದು ಮಾರನೆ ದಿವಸ ತಮ್ಮ ಮನೆಗೆ ಬಂದಿದ್ದ. ಆಗಲೇ ಸೀನು ಗಮನಿಸಿದ್ದು ಮನೆಗೆ ಬಾಗಿಲು ಹಾಕಿ, ಕದಗಳ

ನಡುವಿನ ಸಂದಿಗೆ ಮಣ್ಣು ಮೆತ್ತಿದ್ದರು. ನಿನ್ನೆ ಹೊರಗಡೆ ಜಗಲಿಯ ಮೇಲೆ ಊಟ ಮಾಡಿದ್ದರಿಂದ ಇದನ್ನು ಸರಿಯಾಗಿ ನೋಡಿರಲಿಲ್ಲವೆನಿಸಿತು ಅವನಿಗೆ. ಬಚ್ಚಲು ಮನೆ ದೊಡ್ಡದಾಗಿತ್ತಲ್ಲ. ಸ್ನಾನ ಮಾಡುವ ಜಾಗ ಬಿಟ್ಟರೆ ಅಲ್ಲೊಂದು ದೊಡ್ಡ ರೂಮೇ ಇದ್ದ ಹಾಕಿತ್ತು ಅಲ್ಲೇ ಅತ್ತೆ ಅಡಿಗೆ ಮಾಡುತ್ತಿದ್ದರು. ಊಟವೂ ಅಲ್ಲೇ.

ಅವತ್ತು ಮಲಗಿದ್ದಾಗ ನಿದ್ದೆ ಬೇಗ ಬಂದಿರಲಿಲ್ಲ, ಆಕಡೆ ಈಕಡೆ ಮಗ್ಗುಲಾಗುತ್ತಿದ್ದ ಇವನನ್ನು ಕಂಡು ಅತ್ತೆ ಕೇಳಿದ್ದರು.

''ಯಾಕೋ ನಿದ್ದೆ ಬರಲಿಲ್ಲವಾ ?''

ಆದರೆ ಅದನ್ನು ಗಮನಿಸದೆ ಸೀನುಕೇಳಿದ್ದ ''ಈಗ ಅಜ್ಜಿ ಎಲ್ಲಿರ್ತಾರೆ ಅತ್ತೆ ?''

''ನಂಗೊತ್ತಿಲ್ಲಪ್ಪ''

''ಹಾಗಾದ್ರೆ ಮಾವನಿಗೆ ಗೊತ್ತಾ ?'' ಮಾವ ನಿದ್ದೆ ಮಾಡುತ್ತಿರಬೇಕೆಂದು ಹಾಗೆ ಕೇಳಿದ್ದ

''ಉಹ್ಞೂ''

''ಮತ್ತೆ ಅವರೇ ತಾನೇ ಅಜ್ಜೀನ ಬಿಟ್ಟು ಬಂದದ್ದು ?''

''ಅಜ್ಜಿ ಸತ್ತು ಹೋಗಿದ್ದಾರಪ್ಪ ಅವರಿಗೇನೂ ಗೊತ್ತಾಗಲ್ಲ ಈಗ''

ಇಷ್ಟು ದೊಡ್ಡವರಾಗಿದ್ದಾರೆ, ಯಾಕೆ ಇವರಿಗೆ ಈ ವಿಷಯವೆಲ್ಲ ಗೊತ್ತಿರಲ್ಲ, ತಾವೇ ಬಿಟ್ಟು ಬಂದಿದ್ದರೂ ಅಜ್ಜಿ ಎಲ್ಲಿದಾರೇಂತ ಇವರಿಗೇ ಗೊತ್ತಿಲ್ಲವೇ ? ಸುಳ್ಳು ಹೇಳುತ್ತಿದ್ದಾರೇನೋ ; ಅಥವಾ, ಆದರೆ ತನಗೇಕೆ ಸುಳ್ಳು ಹೇಳಬೇಕು ; ತಾನೇನು ಅಜ್ಜಿಯನ್ನು ಹುಡುಕುವುದಕ್ಕೆ ಹೋಗುತ್ತೀನೇನೋ ? ತಲೆ ಚಿಟ್ಟು ಹಿಡಿದ ಹಾಗಾಗಿ ಎಲ್ಲಾದರೂ ಹಾಳಾಗಿ ಹೋಗಲಿ ಎನ್ನಿಸಿತ್ತು.

ರಾತ್ರಿಯೆಲ್ಲ ಏನೇನೋ ಬಡಬಡಿಸುತ್ತಿದ್ದನೆಂದು, ಹೆದರಿಕೊಂಡಿರಬೇಕೆಂದು ಭಾವಿಸಿ ಅತ್ತೆ ಮಾರನೆಯ ದಿವಸದಿಂದ ಜೋಯಿಸರ ಮನೆಯಲ್ಲೇ ಮಲಗಿಕೊಳ್ಳಲು ಅವನಿಗೆ ಹೇಳಿದ್ದರು. ಅವನಿಗೆ ಒಂದು ರೀತಿಯಲ್ಲಿ ಸಂತೋಷವೇ ಆಗಿತ್ತು. ತಿರುಗಾ ಅಲ್ಲಿ ಮಲಗಲು ಹೋದ. ಅಲ್ಲಿನ ಮಾತು, ಹುಡುಗರ ಸಹವಾಸ ಚೆನ್ನಾಗಿಯೇ ಕಾಣಿಸುತ್ತಿತ್ತು. ಜೊತೆಗೆ ಅಲ್ಲಿ ಮಾಡುತ್ತಿದ್ದ ತಿಂಡಿ-ತೀರ್ಥಗಳು ಇವನಿಗೂ ಸಿಕ್ಕುತ್ತಿತ್ತು.

ಇವನು ಮಲಗುತ್ತಿದ್ದುದು ಜೋಯಿಸರ ಮನೆಯ ಲಕ್ಷಮ್ಮಜ್ಜಿಯ ಪಕ್ಕದಲ್ಲಿಯೇ. ಅವರಿಗೆ ಇವನನ್ನು ಕಂಡರೆ ಪ್ರಾಣ. ಅತ್ತೆಗಿಂತ ಇವರಿಗೇ ತನ್ನ ಕಂಡರೆ ಹೆಚ್ಚು ಪ್ರೀತಿಯೇನೊ ಎಂಬ ಅನುಮಾನವೂ ಕೆಲವೇಳೆ ಸೀನುವನ್ನು ಕಾಡುತ್ತಿತ್ತು. ತಲೆಯನ್ನು ನೇವರಿಸುತ್ತಿದ್ದರು, ಮೈಕೈ ಸವರುತ್ತಿದ್ದರು, ಅಜ್ಜಿಯ ಇನ್ನೊಂದು ಪಕ್ಕದಲ್ಲಿ ಅವರ ಮಗಳು ರುಕ್ಮಿಣಿಯೂ ಇರುತ್ತಿದ್ದಳು. ಎಷ್ಟೋ ವೇಳೆ ತಾನು ಅವರಿಬ್ಬರ ನಡುವೆ ಮಲಗಿದ್ದದ್ದೂ ಉಂಟು. ಅಂತ ಸಂದರ್ಭಗಳಲ್ಲಿ ಹೀಗೆ ಇದ್ದರೆ ಚೆನ್ನ ಎಂದು ಅನ್ನಿಸುತ್ತಿತ್ತು. ಆದರೆ ಒಂದು ಬಾರಿ ಹೀಗೆ ಮಲಗಿದ್ದಾಗ ಶ್ರೀಕಂಠಯ್ಯ ಮಾವ ಕಂಡು ಅಜ್ಜಿಯ ಆ ಕಡೆ ಮಲಗಿಕೊಳ್ಳಲು

ತಂಗಿಗೆ ಸೂಚಿಸಿದ್ದರು. ರುಕ್ಮಿಣಿ ಎದ್ದು ಹೋಗಿ ಆ ಬದಿಗೆ ಮಲಗಿದ್ದಳು. ಸೀನುವಿಗೆ ಮನಸ್ಸಿನಲ್ಲಿಯೇ ಒಳಗುದಿಯುಂಟಾಯಿತು. ''ಇಲ್ಲೇ ಮಲಗಿಕೊಂಡಿದ್ದರೆ ಇವರಪ್ಪನ ಗಂಟೇನು ಹೋಗುತ್ತಿತ್ತು'' ಎಂದು ಶ್ರೀಕಂಠಯ್ಯ ಮಾವನ ಮೇಲಿನ ಕೋಪದಿಂದ ಮನಸ್ಸಿನಲ್ಲಿಯೇ ಬೈದುಕೊಂಡಿದ್ದ.

ಹೀಗೆ ಊಟ ತಿಂಡಿ ಸ್ನಾನಗಳೆಲ್ಲ ತಮ್ಮ ಮನೆಯಲ್ಲಿಯೇ ಆದರೂ ವಾಸ ಜೋಯಿಸರ ಮನೆಯಲ್ಲಿಯೇ ನಡೆಯುತ್ತಿತ್ತು. ಆದರೆ ಅದು ಬಹುಕಾಲ ಸಾಗಲಿಲ್ಲ. ಒಂದು ತಿಂಗಳಾದ ನಂತರ ಮಾವ ಮನೆಗೆ ಹಾಕಿದ್ದ ಬಾಗಿಲು ತೆಗೆದಿದ್ದರು. ಮೆತ್ತಿದ್ದ ಮಣ್ಣನ್ನು ಕಿತ್ತಿದ್ದರು. ಒಳಗೆಲ್ಲ ಏನೇನೋ ಮಂತ್ರಗಳನ್ನು ಹೇಳುತ್ತ ಶುಚಿಗೊಳಿಸಿದ್ದರು. ಮತ್ತೆ ಅಲ್ಲಿಯೇ ಮಲಗಿಕೊಳ್ಳಲು ತನಗೆ ಹೇಳಿದರು. ವಿಧಿಯಿಲ್ಲದೆ ಅಲ್ಲಿಯೇ ಇರಲು ತೊಡಗಿದ. ಆದರೆ ಇದುವರೆಗೆ ಆಗಿದ್ದ ಅಭ್ಯಾಸದಿಂದಾಗಿ, ಆದಷ್ಟೂ ಹೊತ್ತು ಜೋಯಿಸರ ಮನೆಯಲ್ಲಿಯೇ ಅವನು ಕಾಲಕಳೆಯುತ್ತಿದ್ದ.

ಜೋಯಿಸರ ಮನೆಯೆಂದರೆ ಸದಾ ಗಿಜಿಗಿಜಿ. ಯಜಮಾನರಾದ ಶ್ರೀನಿವಾಸ ಜೋಯಿಸರು ಸುಮಾರು ಐವತ್ತು-ಐವತ್ತೆರಡು ವರ್ಷದವರಾಗಿದ್ದರೂ ತುಂಬ ಕಟ್ಟುಮಸ್ತಾದ ದೇಹವುಳ್ಳವರು. ಅವರು ತಮ್ಮ ತುಂಬಿದ ಮನೆಯಲ್ಲೇ ಏಕಾಂಗಿ. ಏಕೆಂದರೆ, ಅವರ ಹೆಂಡತಿ ಮಕ್ಕಳಿಲ್ಲದೆ ಬೇಗ ತೀರಿಕೊಂಡಿದ್ದರು. ಜೋಯಿಸರು ಮಾತ್ರ ಮತ್ತೊಂದು ಮದುವೆ ಮಾಡಿಕೊಂಡಿರಲಿಲ್ಲ. ಕಾರಣವೇನೋ ತಿಳಿಯದು ಮನೆ-ಹೊಲಗದ್ದೆಗಳ ಉಸ್ತುವಾರಿಯೆಲ್ಲ ಇವರದೇ. ಕೆಲವು ವೇಳೆ ತುಂಬ ಗಡುಸಾದವರಂತೆ ಕಂಡು ಬಂದರು ಸರಸವಾಗಿ ಮಾತನಾಡುತ್ತಿದ್ದರು. ಯಾವುದನ್ನೂ ತೀರ ತಲೆಗೆ ಹಚ್ಚಿಕೊಳ್ಳದೆ ತಿರುಗಾಡಿಕೊಂಡಿದ್ದರು.

ಹಾಗೆ ನೋಡಿದರೆ ನೆಪಕ್ಕೆ ಕೆಲಸದ ಯಜಮಾನ್ಯ ಇವರದಾದರೂ ಕಷ್ಟಪಟ್ಟು ಸಂಸಾರವನ್ನು ವ್ಯವಸ್ಥೆಗೊಳಿಸಿದವರೆಂದರೆ ಇವರ ಅಣ್ಣನ ಮಗ ಶ್ರೀಕಂಠಯ್ಯನವರು. ಜನರಿಗೆ ಸಣ್ಣ ಸ್ವಾಮಿಯೋರ ಮೇಲೆಯೇ ಹೆಚ್ಚು ವಿಶ್ವಾಸ. ದೊಡ್ಡ ಸ್ವಾಮಿಯವರಿಗೆ ಗೌರವ ತೋರಿಸಿದರೂ, ಅವರು ಉಡಾಫೆ ಸ್ವಭಾವದವರೆಂದು ಎಲ್ಲರ ಅನಿಸಿಕೆ. ಆದರೆ ಶ್ರೀಕಂಠಯ್ಯನವರು ಹಾಗಲ್ಲ. ಎಲ್ಲವನ್ನೂ ಅಚ್ಚುಕಟ್ಟಾಗಿ, ಎಲ್ಲೂ ಯಾವುದೂ ಮುಕ್ಕಾಗದಂತೆ ನಡೆಸಿಕೊಂಡು ಹೋಗುವ ಛಾತಿ ಅವರದು. ಹೀಗಾಗಿ ಅವರು ಮನೆಯಲ್ಲಿ ಕಳೆಯುತ್ತಿದ್ದ ಕಾಲ ಕಡಿಮೆ. ಯಾವುದಾದರೂ ಕೆಲಸದ ಮೇಲೆ ಮನೆಯಿಂದ ಹೊರಗಿರುತ್ತಿದ್ದುದ್ದೇ ಹೆಚ್ಚು. ಇಷ್ಟಾದರೂ ಅವರ ಯೋಚನೆಯ ಪ್ರಕಾರವೇ ಮನೆಯ ಎಲ್ಲ ಕೆಲಸಗಳು ನಡೆಯುತ್ತಿದ್ದದ್ದು.

ತುಂಬಿದ ಮನೆ ಅದು. ಶ್ರೀಕಂಠಯ್ಯನವರ ಹೆಂಡತಿ ಸೀತಾಲಕ್ಷ್ಮಿ, ಇಬ್ಬರು ಗಂಡುಮಕ್ಕಳು, ಒಂದು ಹೆಣ್ಣುಮಗುವಲ್ಲದೆ, ಮಡಿ ಹೆಂಗಸಾದ ಅವರ ತಾಯಿಯೂ ಇದ್ದರು ; ಜೊತೆಗೆ ಅವರ ತಂಗಿಯೊಬ್ಬಳು, ಸುಮಾರು ಹನ್ನೆರಡು ವರ್ಷದ

ಹುಡುಗಿಯಿದ್ದಳು. ಅವರ ತಮ್ಮನೊಬ್ಬ ಕಾಲೇಜಿನಲ್ಲಿ ತುಮಕೂರಿನಲ್ಲಿ ಓದುತ್ತಿದ್ದ.

ಮನೆಗೆ ಸೇರಿದವರು ಇಷ್ಟೇ ಮಂದಿಯಾದರೂ ಅವರ ಮನೆಯಲ್ಲಿ ಯಾವಾಗಲೂ ಜನಗಳು ತುಂಬಿರುತ್ತಿದ್ದರು. ಊರಿಗೆ ಯಾರಾದರೂ ಅಪರಿಚಿತ ಬ್ರಾಹ್ಮಣರು ಬಂದರೆ ಅವರಿಗೆ ಇಲ್ಲೇ ಊಟ-ಉಪಚಾರಗಳು ನಡೆಯುವುದು ; ಯಾರು ಬಂದರೂ ಇಲ್ಲ ಎನ್ನದೆ ಊಟ ಹಾಕುವವರು. ಬ್ರಾಹ್ಮಣರೆಂದೇ ಅಲ್ಲ, ಯಾರಾದರೂ ಸರಿ, ಊಟಕ್ಕೆ ಇಲ್ಲಿಗೇ ಬರಬೇಕು. ಯಾರಾದರೂ ಎಂದರೆ ಯಾರಾದರೂ ಏನಲ್ಲ, ಅಧಿಕಾರಿಗಳು, ಮೇಷ್ಟರು ಇತ್ಯಾದಿ.

ಊಟ ಹಾಕುತ್ತಾರೆಂದಾಕ್ಷಣ ಎಲ್ಲರಿಗೂ ಒಟ್ಟಿಗೆ ಊಟಕ್ಕೆ ಬಡಿಸುವ ಸಂಪ್ರದಾಯವೇನಲ್ಲ ಅವರದು. ಬ್ರಾಹ್ಮಣರು ಬಂದರೆ ಸರಿಯೇ ಸರಿ ; ಇಲ್ಲದಿದ್ದರೆ ಅವರಿಗೆ ಪಡಸಾಲೆಯಲ್ಲಿ ಎಲೆ ಹಾಕಬೇಕು.

ಬ್ರಾಹ್ಮಣರು ಊಟಮಾಡಿದ ಎಲೆಯನ್ನು ಮನೆಯ ಹೆಣ್ಣುಮಕ್ಕಳು ತೆಗೆದು ಗೋಮೆ ಹಚ್ಚುತ್ತಿದ್ದರೆ, ಇತರರು ತಾವು ಊಟ ಮಾಡಿದ ಎಲೆಯನ್ನು ತಾವೇ ತೆಗೆದು ಶುದ್ಧಿಗೊಳಿಸಬೇಕು. ಈ ವಿಚಾರದಲ್ಲಿ ಜೋಯಿಸರ ಮನೆಯವರು ತುಂಬ ಕಟ್ಟುನಿಟ್ಟು. ಎಲ್ಲರೂ ಇದೇ ನಿಯಮವನ್ನು ಅನುಸರಿಸುತ್ತಿದ್ದರು. ಬಂದವರೂ ಇದರಿಂದ ಮುಜುಗರವನ್ನೇನೂ ಪಡುವಂತೆ ಕಾಣುತ್ತಿರಲಿಲ್ಲ. ಅದೂ ಒಂದೆರಡು ಬಾರಿ ಪೆಮ್ಮನಹಳ್ಳಿಗೆ ಬಂದವರಿಗೆ ಇದು ಹೊಸದಲ್ಲ.

೫

ಸೀನು ಬುದ್ಧಿವಂತ ಎಂಬುದರಲ್ಲಿ ಅನುಮಾನವಿರಲಿಲ್ಲ. ಎಲ್ಲರೂ ಹಾಗೆ ಹೇಳುತ್ತಿದ್ದರು. ಮೇಷ್ಟರುಗಳು ಕೂಡ ಆ ಭಾವನೆಯನ್ನಿಟ್ಟುಕೊಂಡಿದ್ದರು. ಅದಕ್ಕೇ ಪಾಠ ಓದಿಸುವುದು, ಬೋರ್ಡಿನ ಮೇಲೆ ಬರೆಸುವುದು ಇತ್ಯಾದಿ ಕೆಲಸಗಳನ್ನು ಅವನ ಕೈಲೇ ಮಾಡಿಸುತ್ತಿದ್ದರು ಕೆಲವು ವೇಳೆ ಉಕ್ತಲೇಖನ ಇತ್ಯಾದಿ ಹೇಳಿದಾಗ ಮಿಕ್ಕ ಕೆಲವು ವಿದ್ಯಾರ್ಥಿಗಳು ಬರೆದುದನ್ನು ಅವನು ನೋಡಿದರೆ ಸಾಕಾಗಿತ್ತು, ಎಲ್ಲರದನ್ನೂ ಮೇಷ್ಟರೇ ನೋಡಲು ಆಗುತ್ತಿರಲಿಲ್ಲ.

ಆದರೆ ಅವನು ತಾನೇ ಎಲ್ಲವನ್ನೂ ಪರಿಪೂರ್ಣವಾಗಿ ಕಲಿಯಲು ಸಾಧ್ಯವೇ ? ಆಗೊಮ್ಮೆ ಈಗೊಮ್ಮೆ ತಪ್ಪು ಮಾಡುತ್ತಿದ್ದ. ಅಂತಹ ಒಂದು ಸಂದರ್ಭದಲ್ಲಿ ಭರಮಪ್ಪ ಮೇಷ್ಟರು "ಬರ್‍ತಾ ಬರ್‍ತಾ ಅರಸರ ಕುದುರೆ ಅಗಸರ ಕತ್ತೆಯಾಗ್ತಾ ಇದೆ" ಎಂದು ಹೇಳಿದ್ದರು. ಸೀನುವಿಗೆ ಇಷ್ಟೇ ಸಾಕಾಗಿತ್ತು. ಅವನದು ಸೂಕ್ಷ್ಮ ಹೃದಯ ; ಒಂದು ಮಾತು ಬೈದರೆ ಅದರ ವಿಚಾರವಾಗಿ ನಾಲ್ಕೈದು ದಿನ ತನ್ನಲ್ಲೇ ಕೊರಗುತ್ತಿದ್ದ. ತಾನು ಮತ್ತೊಮ್ಮೆ ತಪ್ಪು ಮಾಡಬಾರದೆಂದು ನಿರ್ಧರಿಸಿ ಮೊದಲಿಗಿಂತ ಹೆಚ್ಚಾಗಿ ಓದಿಕೊಳ್ಳುತ್ತಿದ್ದ. ತನಗೆ ಗೊತ್ತಿದೆಯೆಂಬ ಖಾತರಿಯಿದ್ದರೂ ಮತ್ತೆ ಮತ್ತೆ ದೃಢಪಡಿಸಿಕೊಳ್ಳುತ್ತಿದ್ದ.

ಆ ದಿನವೂ ಹಾಗೇಯೇ ಆಯಿತು. ಮಾರನೇ ದಿನ ''ಲೋಕದ ಬೆಳಕು'' ಎಂಬ ಪಾಠದ ಬಗ್ಗೆ ಪ್ರಶ್ನೆ ಕೇಳುತ್ತೇನೆಂದು ಪ್ರಶ್ನೆಗಳಿಗೆ ಉತ್ತರಗಳನ್ನು ಗಟ್ಟಿ ಮಾಡಿಕೊಂಡು ಬರುವಂತೆ ಸೂಚಿಸಿದ್ದರು. ಸೀನುವಿಗೆ ಆ ಪಾಠವೇನು ಬಾರದಿರುತ್ತಿರಲಿಲ್ಲ. ಆದರೆ ಬೈಸಿಕೊಂಡ ದಿನದಿಂದ ಅವನು ಪಾಲುಮಾರಿಕೆ ಮಾಡದೆ ಓದುತ್ತಿದ್ದ.

ಅಂದು ಸಾಯಂಕಾಲದ ತನ್ನ ಕೆಲಸಗಳನ್ನೆಲ್ಲ ಬೇಗ ಮಾಡಿದ. ಕಣಗಿಲೆ ಹೂವು ಕಿತ್ತುತಂದ. ಆದರೆ ಜೋಯಿಸರ ಮನೆಯಲ್ಲಿ ಹೆಚ್ಚು ಹೊತ್ತು ಹರಟೆ ಹೊಡೆಯುತ್ತ ಕುಳಿತುಕೊಳ್ಳದೆ ಬೇಗನೆ ಮನೆಗೆ ಬಂದು ಕೈಕಾಲು ತೊಳೆದು, ದೇವರಿಗೆ ನಮಸ್ಕಾರ ಮಾಡಿ ಓದುತ್ತ ಕುಳಿತ. ಇವನು ಇಷ್ಟು ಬೇಗ ಮನೆಗೆ ಬಂದದ್ದು ಸರಸಮ್ಮನವರಿಗೆ ಆಶ್ಚರ್ಯ, ''ಏನಪ್ಪಾ, ಹುಡುಗರೆಲ್ಲ ಊರಿಗೆ ಹೋಗಿದ್ದಾರೇನು ?'' ಎಂದು ತಮಾಷೆ ಮಾಡಿದರು. ಅವರು ಹೇಳಿದ್ದು ಜೋಯಿಸರ ಮನೆಯಲ್ಲಿ ಓದಿಕೊಂಡಿದ್ದ ಹುಡುಗರ ವಿಷಯದ ಬಗ್ಗೆ. ''ಇಲ್ಲ ಅತ್ತೆ, ನಾಳೆ ಮೇಷ್ಟರು ಪ್ರಶ್ನೆ ಕೇಳ್ತಾರಂತೆ, ಓದಿಕೋಬೇಕು'' ಎಂದು ಹೇಳಿದ. ಅತ್ತೆ ಸುಮ್ಮನಾಗಿದ್ದರು. ಮಾವ ಇನ್ನೂ ಮನೆಗೆ ಬಂದಿರಲಿಲ್ಲ. ಅವನು ಓದುತ್ತ ಕುಳಿತ.

ಭರಾಟೆಯಿಂದ ಜೋರಾಗಿ ''ಲೋಕದ ಬೆಳಕು'' ಓದುತ್ತ ಕುಳಿತಿದ್ದ. ಅದು ಏಸುಕ್ರಿಸ್ತನನ್ನು ಕುರಿತ ಪಾಠ. ಶಿಷ್ಯನೊಬ್ಬ ಏಸುವನ್ನು ಹಿಡಿದು ಕೊಟ್ಟು ಅವನು ಶಿಲುಬೆಗೆ ಏರುವಂತೆ ಮಾಡಿದ್ದ. ಆದರೆ ಪಾಠದಲ್ಲಿರುವಂತೆ, ಅವನು ಶಿಲುಬೆಗೇರಿಸಲ್ಪಟ್ಟ ಹನ್ನೊಂದನೇ ದಿನ ತನ್ನ ಶಿಷ್ಯರುಗಳಿಗೆ ''ಜ್ಯೋತಿಷ್ಮತಿಯಾಗಿ ಕಾಣಿಸಿಕೊಂಡಿದ್ದ.''ಈ ಪಾಠವನ್ನು ವಿವರಿಸುವಾಗ ಸೀನುವಿಗೆ ಅಳು ಬಂದ ಹಾಗಾಯಿತು. ಶಿಲುಬೆಗೆ ಸೇರಿಸಿ ಅವನ ಕೈಕಾಲುಗಳಿಗೆ ಮೊಳೆ ಹೊಡೆದಾಗಲೂ ಅವನು ಅಳಲಿಲ್ಲವಂತೆ, ತನ್ನನ್ನು ಸಾಯಿಸುತ್ತಿರುವವರಿಗೆ ಶಾಪ ಹಾಕಲಿಲ್ಲವಂತೆ. ದೇವರನ್ನು ಕುರಿತು ''ತಂದೆಯೇ ಇವರು ತಾವೇನು ಮಾಡುತ್ತಿದ್ದಾರೆಂಬುದನ್ನರಿಯರು. ಅವರನ್ನು ಕ್ಷಮಿಸು'' ಎಂದು ಬೇಡಿಕೊಂಡ ನಂತೆ. ಅವನಿಗೆಷ್ಟು ನೋವಾಗಿರಬಹುದೆಂದು ಊಹಿಸಿ ಇವನ ಕರುಳು ಕಿತ್ತು ಬಂದ ಹಾಗಾಗಿತ್ತು.

ಪಾಠದ ಕೊನೆಯಲ್ಲಿನ ಪ್ರಶ್ನೆಗಳಿಗೆ ಉತ್ತರವನ್ನು ಗಟ್ಟಿ ಮಾಡಿಕೊಳ್ಳುತ್ತಿದ್ದ. ಒಂದೊಂದು ಪ್ರಶ್ನೆಯನ್ನೂ ಓದುವುದು ; ಅದಕ್ಕೆ ಉತ್ತರವನ್ನು ನಾಲ್ಕಾರು ಬಾರಿ ಹೇಳಿಕೊಳ್ಳುವುದು. ಅದರಲ್ಲಿ ಒಂದು ಪ್ರಶ್ನೆ ಹೀಗಿತ್ತು ''ಏಸು ಕ್ರಿಸ್ತನು ಶಿಲುಬೆಗೇರಿದ ಹನ್ನೊಂದನೇ ದಿವಸ ಶಿಷ್ಯರಿಗೆ ಹೇಗೆ ಕಾಣಿಸಿಕೊಂಡ ?'' ಅದನ್ನೋದಿಕೊಂಡು ಸೀನು ಉತ್ತರವನ್ನು ಗಟ್ಟಿ ಮಾಡಿಕೊಳ್ಳತೊಡಗಿದ. ''ಏಸುಕ್ರಿಸ್ತನು ಶಿಲುಬೆಗೇರಿದ ಹನ್ನೊಂದನೆ ದಿವಸ ಜ್ಯೋತಿಷ್ಮತಿಯಾಗಿ ಅಂದರೆ ಜ್ಯೋತಿಷ್ಕನಾಗಿ ತನ್ನ ಶಿಷ್ಯರಿಗೆ ಕಾಣಿಸಿಕೊಂಡ.''

ಇವನು ಈ ರೀತಿ ಓದಿಕೊಳ್ಳುತ್ತಿರುವ ಹೊತ್ತಿಗೆ ಮಾವ ಮನೆಯೊಳಗೆ ಬಂದರು. ಜ್ಯೋತಿಷ್ಮತಿಯಾಗಿ ಅಂದರೆ ಜ್ಯೋತಿಷ್ಕನಾಗಿ ಎಂದು ಹೇಳುತ್ತಿದ್ದುದು ಕೇಳಿಸಿತು.

''ಏನಯ್ಯಾ ಅದು ನೀನು ಹೇಳ್ತಿರೋದು ?''

''ಏಸುಕ್ರಿಸ್ತನು ಶಿಲುಬೆಗೇರಿದ ಹನ್ನೊಂದನೇ ದಿನ ಜ್ಯೋತಿಷ್ಮತ್ರಿಯಾಗಿ ಅಂದರೆ ಜ್ಯೋತಿಷ್ಕನಾಗಿ ತನ್ನ ಶಿಷ್ಯರಿಗೆ ಕಾಣಿಸಿಕೊಂಡ.''

''ಜ್ಯೋತಿಷ್ಮತ್ರಿಯಾಗಿ ಅಂದರೆ ಜ್ಯೋತಿಷ್ಕನಾಗಿ ಅಂತ ಯಾರು ಹೇಳಿಕೊಟ್ಟದ್ದು?'' ಎಂದು ಕೇಳಿದರು ಆಶ್ಚರ್ಯದಿಂದ.

''ನಮ್ಮ ಮೇಷ್ಟ್ರು''

''ಅಂದರೆ ಯಾವ ಮೇಷ್ಟ್ರು?''

ಮಾವ ತಮ್ಮ ಮೇಷ್ಟ್ರ ಬಗ್ಗೆ ವಿಚಾರಿಸುತ್ತಿದ್ದ ಧಾಟಿ ಅವನಿಗೆ ಸರಿ ಹೋಗಲಿಲ್ಲ. ಸ್ವಲ್ಪ ಸಿಡುಕಿನಿಂದಲೇ ''ಭರಮಪ್ಪ ಮೇಷ್ಟ್ರು'' ಎಂದ.

''ನಿನ್ನ ಮೇಷ್ಟ್ರ ಮುಂಡಾ ಮೋಚಿತು. ಜ್ಯೋತಿಷ್ಮತ್ರಿಯಾಗಿ ಅಂದರೆ ಜ್ಯೋತಿಷ್ಕನಾಗಿ ಅಂತಲ್ಲ ಅರ್ಥ, ಬೆಳಕಿನ ಸ್ವರೂಪದಲ್ಲಿ ಕಾಣಿಸಿಕೊಂಡ ಅಂತ.'' ಹೀಗೆ ಹೇಳಿ ಒಂದು ಕತೆ ಹೇಳಿದರು. ಯಾವನೋ ಒಬ್ಬ ಅಗಸ ಮೇಷ್ಟರಿದ್ದನಂತೆ. ಅವನು ಪಾಠ ಮಾಡಬೇಕಾಗಿ ಬಂದದ್ದು ಒಂದು ದಿನ ಪದ್ಯ. ಅದರಲ್ಲಿ ''ಆಗಸ ತೊಳೆಂದಂತೆಸಗಿ ಹುದು'' ಅಂತ ಇತ್ತು. ಈ ಮೇಷ್ಟ್ರು ಹುಡುಗರಿಗೆ ''ಪುಸ್ತಕದಾಗೆ ತಪ್ಪು ಪ್ರಿಂಟಾಗ್ಯೆತೆ ಕಣ್ರಲೆ. ಅಗಸ ತೊಳದಂತೆಸಗಿಹುದು ಅಂತಿರ್ಬೇಕು. ಅಗಸ ಎಂಗೆ ಬಟ್ಟೇನ ಬೆಳ್ಳಗೆ ತೊಳೀತಾನೋ ಅಂಗೆ ಬೆಳ್ಳಗಿತ್ತೂಂತ ಅರ್ಥ, ತಿದ್ದಿಕೊಳ್ರಲೇ'' ಅಂತ ಹೇಳಿದನಂತೆ. ಈ ಕತೆ ಹೇಳಿ ''ನಿಮ್ಮ ಮೇಷ್ಟ್ರು ಅಂತಹವನೇ'' ಎಂದುಬಿಟ್ಟಿದ್ದರು. ತಮ್ಮ ಮೇಷ್ಟ್ರ ಬಗ್ಗೆ ಮಾವ ಹೀಗೆ ಹೇಳಿದ್ದು ಲೇವಡಿ ಮಾಡಿದ್ದು ಸೀನುವಿಗೆ ಸರಿಹೋಗಲಿಲ್ಲ. ಆದರೆ ಮಾವನಿಗೆ ಎದುರು ಹೇಳುವಷ್ಟು ಧೈರ್ಯವಿರಲಿಲ್ಲ. ಅವನಿಗೆ ಮುಂದೆ ಓದಿಕೊಳ್ಳುವ ಮನಸ್ಸು ಹೊರಟುಹೋಯಿತು. ಸಿಡುಕಿನಿಂದಲೇ ಮೇಲೆದ್ದು ಹೊರಟ.

ಮಾರನೇ ದಿನ ಸ್ಕೂಲಲ್ಲಿ ಮೇಷ್ಟರು ಪ್ರಶ್ನೆಗಳನ್ನು ಕೇಳಿದ್ದರು, ಸೀನು ಮಾವ ಹೇಳಿಕೊಟ್ಟ ಹಾಗೆ ''ಜ್ಯೋತಿಷ್ಮತ್ರಿಯಾಗಿ ಅಂದರೆ ಜ್ಯೋತಿಷ್ಕನಾಗಿ, ಅಂತ ಅಲ್ಲವಂತೆ ಸಾ. ಬೆಳಕಿನ ರೀತೀಲಿ ಕಾಣಿಸಿಕೊಂಡ ಅಂತ ಅರ್ಥವಂತೆ'' ಎಂದು ಎಲ್ಲ ಹುಡುಗರ ಮುಂದೆ ಹೇಳಿದ. ಭರಮಪ್ಪನವರಿಗೆ ಸಿಟ್ಟು ಬಂತು.

''ಕುಂತ್ಕಳ್ಳಲೇ. ನಂಗೇ ಏಳಿಕೊಡಕ್ಕೆ ಬತ್ತಾನೆ'' ಎಂದು ಗದರಿಸಿದ್ದರು. ಬಹುಶಃ ತಾವು ಹೇಳಿಕೊಟ್ಟ ಅರ್ಥ ತಪ್ಪೆಂದು ಅವರಿಗೂ ಅನ್ನಿಸಿತ್ತೋ ಏನೋ. ಆದರೆ ಕ್ಲಾಸಲ್ಲಿ ಚಿಳ್ಳೆಪಿಳ್ಳೆಗಳ ಮುಂದೆಲ್ಲ ಇವನು ತಾನು ಹೇಳಿದ ಅರ್ಥ ತಪ್ಪಂತೆ ಅಂತ ಹೇಳಿದ್ದು ಸರಿಹೋಗಲಿಲ್ಲ. ಅಲ್ಲದೆ ಒಳಗೆ ಆರನೇ ಕ್ಲಾಸಲ್ಲಿದ್ದ ಮರುಳಪ್ಪನಿಗೂ ಇದು ಕೇಳಿಸಿರಬಹುದೇನೋ ಎಂದು ಸೀನನ ಮೇಲೆ ಅವರಿಗೆ ಕೋಪ ಬಂದಿತ್ತು. ಆದರೆ ನುಂಗಿಕೊಂಡಿದ್ದರು.

ಮುಂದೊಂದು ದಿನ ಸರ್ವಜ್ಞನ ಪದ್ಯಗಳನ್ನು ಮಾಡಿದ್ದರು. ಆದಾದ ಮೇಲೆ ಒಂದು ಪದ್ಯವನ್ನೋದೆಂದು ಸೀನುವನ್ನು ಕೇಳಿದ್ದರು. ಅವನು ಓದಿದ್ದ:

''ಸಾಲವನ್ನು ಕೊಂಬಾಗ ಹಾಲೋಗರುಂಡಂತೆ
ಸಾಲಿಗರು ಬಂದು ಎಳೆವಾಗ ಕಿಬ್ಬದಿಯ
ಕೀಲು ಮುರಿದಂತೆ ಸರ್ವಜ್ಞ.''

''ಅರ್ಥ ಹೇಳು'' ಎಂದಿದ್ದರು.

ಅರ್ಥ ಹೇಳಲು ತೊಡಗಿದ ಸೀನು. ಆದರೆ ಎಲ್ಲ ಪದಗಳಿಗೂ ಅರ್ಥ ಗೊತ್ತಾಗಲಿಲ್ಲ. ನಿಧಾನವಾಗಿ ಏನೇನೋ ಹೇಳತೊಡಗಿದ.

''ಸಾಲಿಗ ಅಂದ್ರೇನು ?''

ಗೊತ್ತಿರಲಿಲ್ಲ, ಇನ್ನೊಂದು ಸಲ ಅದೇ ಪ್ರಶ್ನೆಯನ್ನೇ ಮೇಷ್ಟರು ಗುಡುಗಿದ್ದರು. ತಲೆತಗ್ಗಿಸಿ ನಿಂತ. ''ಊ್ಞ'' ಎಂದರು.

''ಅಕ್ಕಸಾಲಿಗ'' ಎಂದ. ಕ್ಲಾಸಿನವರೆಲ್ಲ ನಕ್ಕರು. ಇವನಿಗೆ ಅವಮಾನವಾಯಿತು.

''ನಿಮ್ಮಜ್ಜನ ತಲೆ'' ಎಂದು ಬೈದರು. ಕಣ್ಣಲ್ಲಿ ನೀರು ಬಂದಂತಾಯಿತು. ಪಕ್ಕದ ಹುಡುಗನ ಕಡೆ ತಿರುಗಿ ''ಏನಲೇ'' ಎಂದರು ಅವನಿಗೂ ಗೊತ್ತಿರಲಿಲ್ಲ. ಅವತ್ತು ಬಂದಿದ್ದ ಒಂಬತ್ತು ಹುಡುಗರಲ್ಲಿ ಎಂಟು ಜನರ ಸರದಿಯಾಯಿತು ಇನ್ನು ಉಳಿದವನೊಬ್ಬನೇ ; ಅವನು ಎಲ್ಲರಿಗಿಂತ ದೂರ ಕೂತಿದ್ದ ಆ ಕಡೆಯ ತುದಿಯಲ್ಲಿ.

''ಸಾಲಿಗ ಅಂದರೆ ಏನಲೆ ಜುಂಜ ?'' ಎಂದು ಅವನನ್ನು ಕೇಳಿದರು.

''ಸಾಲ ಕೊಟ್ಟೋನು ಸಾ'' ಎಂದು ತಟಕ್ಕನೆ ಉತ್ತರಿಸಿದ.

ಜುಂಜ ಕ್ಲಾಸಿನಲ್ಲಿ ದೂರ, ಯಾರಿಗೂ ಮುಟ್ಟಿಕೊಳ್ಳದ ಹಾಗೆ ಕೂತುಕೊಳ್ಳುತ್ತಾನೆಂದು ಸೀನುವಿಗೆ ಬಂದ ಹೊಸತರಲ್ಲಿ ಗೊತ್ತಾಗಲಿಲ್ಲ. ಬೆಂಗಳೂರಲ್ಲಿ ತಾನು ಓದುತ್ತಿದ್ದ ಶಾಲೆಯಲ್ಲಿ ಯಾರೂ ದೂರ ಕೂತುಕೊಳ್ಳುತ್ತಿರಲಿಲ್ಲ. ತಮ್ಮ ಸ್ನೇಹಿತರು ಎಲ್ಲಿ ಕೂತಿದ್ದರೆ ಅಲ್ಲಿ ಹೋಗಿ ಕೂತುಕೊಳ್ಳುತ್ತಿದ್ದರು ಹುಡುಗರು. ಎಷ್ಟೋ ಸಲ ಒಂದೊಂದು ದಿನ ಒಂದೊಂದು ಕಡೆ ಕೂತುಕೊಳ್ಳುತ್ತಿದ್ದದು. ಆದರೆ ಇಲ್ಲಿ ಜುಂಜನಿಗೆ ಮಾತ್ರ ಒಂದೇ ಜಾಗ ದಿನವೂ ; ಅದೇ ಗೋಡೆಯ ಪಕ್ಕದಲ್ಲಿ, ಎಲ್ಲರಿಗಿಂತ ದೂರಾಗಿ.

ಒಂದು ದಿನ ಕ್ಲಾಸು ಬಿಟ್ಟ ಮೇಲೆ ಸೀನು ಸ್ಕೂಲಿನಿಂದ ಹೊರಗೆ ಬರುವಾಗ ಜುಂಜನಿಗೆ ಹತ್ತಿರ ಬಂದ.

''ದೂರ ಸರ್ಕಳಿ ಮುಟ್ಟಿಸ್ಕಾಬ್ಯಾಡಿ'' ಎಂದಿದ್ದ ಅವನೇ.

''ಯಾಕೆ ?'' ಸೀನುವಿಗೆ ಆಶ್ಚರ್ಯವಾಗಿತ್ತು.

''ನಾವು ಮಾದುಗ್ರು'' ಎಂದಿದ್ದ ಹಾಗಂದರೇನು ಎಂದು ಸೀನುವಿಗೆ ಗೊತ್ತಾಗಲಿಲ್ಲ. ಬೆಂಗಳೂರಲ್ಲಿ ಅವನಿಗೆ ಈ ವಿಷಯವನ್ನು ಯಾರು ಹೇಳಿರಲಿಲ್ಲ. ಏನೋ ವಿಚಿತ್ರವೆನ್ನಿಸಿತ್ತು.

ಆ ದಿನ ಸಾಯಂಕಾಲ ಮನೆಗೆ ಬಂದು ಮಾವನ ಹತ್ತಿರ ಕೇಳಿದ. ''ಮಾದುಗ್ರು ಅಂದರೆ ಯಾರು ?''

''ಅವತ್ತು ನಿನ್ನ ಚಪ್ಪಲಿ ಹೊಲಿದುಕೊಟ್ಟನಲ್ಲಯ್ಯ, ಅವರ ಜಾತಿಯ ಜನ''

''ಅವರನ್ನು ಮುಟ್ಕೋಬಾರ್ದಾ?''

''ಉಹ್ಞೂ, ಯಾರ್ನಾದ್ರೂ ಮುಟ್ಕೊಂಬಿಟ್ಟಿದ್ದೀಯಾ ?'' ಎಂದು ಕೇಳಿದ್ದರು. ಸೀನು ಅವರಿಗೆ ತಗುಲಿಕೊಂಡೇ ಈಸಿ ಛೇರನ್ನು ಹಿಡಿದು ಈ ಪ್ರಶ್ನೆ ಕೇಳಿದ್ದರಿಂದ ಗಾಬರಿಯಾಗಿತ್ತು.

''ಇಲ್ಲ''

''ಮತ್ಯಾಕೆ ಹಾಗೆ ಕೇಳ್ದೆ?''

''ಉಂ ಮತ್ತೆ ನಮ್ಮ ಕ್ಲಾಸಲ್ಲಿ ಜುಂಜ ಅಂತ ಒಬ್ಬ ಹುಡುಗ ಇದ್ದಾನೆ. ಅವನೇ ಹೇಳ್ದ ಅವನು ಮಾದುಗ್ರು ಅಂತ, ಮುಟ್ಟುಕೋಬೇಡ ಅಂದ''

''ಓ'' ಎಂದಿದ್ದರು ಮಾವ.

''ಯಾಕೆ ಮುಟ್ಕೋಬಾರ್ದು ?'' ಎಂದು ಮತ್ತೆ ಕೇಳಿದ್ದ ಸೀನು ತನ್ನ ಪ್ರಶ್ನೆಗೆ ಉತ್ತರ ಗೊತ್ತಾಗದೆ.

''ಅವರು ದನಗಿನ ಎಲ್ಲ ತಿಂತಾರೆ ಅದಕ್ಕೇ''

ದನ ತಿನ್ನುವರೆಂದು ಕೇಳಿದ ಮೇಲೆ ಸೀನುವಿಗೆ ವಾಕರಿಕೆ ಬಂದ ಹಾಗಾಗಿತ್ತು. ಬೆಂಗಳೂರಿನ ತಮ್ಮ ಮನೆಯ ಪಕ್ಕದಲ್ಲಿ ಯಾರೋ ಒಬ್ಬರು ಮನೆಯೋದು ಇದ್ರು. ಅವರು ಮಾಂಸ ತಿಂತಾರಂತೆ. ಒಂದೊಂದು ದಿನ ಗಪ್ ಅಂತ ವಾಸನೆ ಅವರ ಮನೆಯಿಂದ ಬರುತ್ತಿತ್ತು. ಅವತ್ತು ಮಾಂಸದ ಅಡಿಗೆ ಮಾಡಿದಾರೆ ಅವರ ಮನೇಲಿ ಅಂತ ಎಲ್ಲರೂ ಮಾತನಾಡಿಕೊಳ್ಳುತ್ತಿದ್ದರು. ವಾಸನೆ ಕುಡಿದರೆ ಒಂಥರ ಆಗ್ತಿತ್ತು. ಇನ್ನು ದನ ತಿನ್ನೋದು ಅಂದರೆ, ಅಬ್ಬಬ್ಬ ಅಸಯ್ಯ ಅಂದುಕೊಂಡಿದ್ದ. ಆದರೆ ಆಗಲೂ ಅವನಿಗೆ ಉತ್ತರ ಸಿಕ್ಕಿತು ಅನಿಸಿರಲಿಲ್ಲ.

''ದನ ತಿಂದೇ ಇದ್ದರೆ ಮುಟ್ಟಿಸ್ಕೋಬೌದಾ ?''

''ಹೋಗೋ, ಏನಾದ್ರೂ ಹರಟೆ ಹೊಡೀತಿರಬ್ಯಾಡ'' ಎಂದು ಸ್ವಲ್ಪ ಸಿಡುಕಿದ್ದರು. ಉತ್ತರ ಕೊಡಲು ಕಷ್ಟವಾಗಿ ಅವರು ಹಾಗೆ ಕೋಪಿಸಿಕೊಂಡಿದ್ದರೆಂದು ಸೀನುವಿಗೆ ಹೇಗೆ ತಿಳಿಯಬೇಕು ? ಹ್ಯಾಪಮೋರೆ ಹಾಕಿಕೊಂಡು ಅಲ್ಲಿಂದ ಕಾಲು ತೆಗೆದಿದ್ದ.

ಅಂತಹ ಜುಂಜ ಇವತ್ತು ಮೇಷ್ಟ್ರು ಕೇಳಿದ್ದ ಪ್ರಶ್ನೆಗೆ ಸರಿಯಾದ ಉತ್ತರ ಹೇಳಿದ್ದ ಮಿಕ್ಕವರಾರೂ ಉತ್ತರ ಹೇಳದೇ ಇದ್ದ ಪ್ರಶ್ನೆಗೆ ಅವನು ಸರಿಯಾಗಿ ಉತ್ತರವಿತ್ತಿದ್ದ.

''ಈ ಮಾದಿಗ ಬಡ್ಡೀಮಗಂಗೆ ತಿಳಿಯೋ ಅಷ್ಟು ಆರುವಂಗೆ ತಿಳೀಲಾರ್ದೆ ಓಯ್ತು, ಕತ್ತೆಗಳು, ಮೂಗು ಇಡಕಂಡು ಇವ್ರೆಲ್ರಿಗೂ ಎಲ್ಡೆಲ್ಡು ಅಕಳೆಲೇ'' ಎಂದು ಆಜ್ಞೆ

ಮಾಡಿದರು. ಜುಂಜ ಹಿಂದು ಮುಂದೆ ನೋಡಿದ. ತಾನು ಸರಿಯಾದ ಉತ್ತರ ಕೊಟ್ಟದ್ದನ್ನು ಮೇಷ್ಟರು ಮೆಚ್ಚಿಕೊಂಡರೆಂದು ಅವನಿಗೆ ಸಂತೋಷವೆನಿಸಿದ್ದರೂ, ಹೊಸ ಸಮಸ್ಯೆ ಅವನನ್ನು ಎದುರಿಸಿತು. ಇವರಿಗೆಲ್ಲ ಮೂಗು ಹಿಡಿದು ಏಟು ಹೊಡೆಯುವುದು ಹೇಗೆ ?''

ಸೀನು ಜುಂಜನ ಕಡೆ ನೋಡಿದ. ಒಳ್ಳೆ ಚೆನ್ನಾಗಿ ಬೆಳೆದಿದ್ದ ಕಟ್ಟು ಮಸ್ತಾದ ಹುಡುಗ. ಕಪ್ಪಗಿದ್ದಾನೆ, ತನಗಿಂತ ಸ್ವಲ್ಪ ಎತ್ತರ, ಸ್ವಲ್ಪ ದಪ್ಪ. ಹರಕು ಚಡ್ಡಿ, ಹರಕು ಷರ್ಟು ಹಾಕಿಕೊಂಡಿದ್ದಾನೆ. ಅವನು ಎದ್ದುನಿಂತ ಒಂದು ಕಾಲನ್ನು ನೆಲದ ಮೇಲೆ ಭದ್ರವಾಗಿ ಊರಿ, ಇನ್ನೊಂದರ ಹೆಬ್ಬೆರಳನ್ನು ಮಾತ್ರ ನೆಲಕ್ಕೆ ತಾಗಿಸಿ ಒಂದು ಕಡೆ ವಾಲಿ ನಿಂತಿದ್ದ. ಕೈಬೆರಳುಗಳಲ್ಲಿ ಆಟವಾಡುತ್ತ ಕೆಳಗೆ ನೋಡುತ್ತಿದ್ದ. ಈ ಅವನ ಭಂಗಿ ಸೀನುವಲ್ಲಿ 'ಅಂದಿನ' ದೃಶ್ಯವನ್ನು ಮನಸ್ಸಿನಲ್ಲಿ ತಂದಿತು.

ಒಂದು ದಿನ ಮರುಳಪ್ಪ ಮೇಷ್ಟರು ರಜ ಹಾಕಿ ಊರಿಗೆ ಹೋಗಿದ್ದರು. ಇಡೀ ಸ್ಕೂಲಿಗೆ ಭರಮಪ್ಪ ಮೇಷ್ಟರೊಬ್ಬರೇ. ಎರಡು ತರಗತಿಗಳನ್ನೂ ನೋಡಿಕೊಳ್ಳಬೇಕು. ಬೆಳಿಗ್ಗೆ ಪೂರ್ತಿ ಎರಡು ಕ್ಲಾಸುಗಳನ್ನೂ ಸೇರಿಸಿ ಒಂದಕ್ಕೆ ಲೆಕ್ಕ ಕೊಟ್ಟು ಇನ್ನೊಂದು ತರಗತಿಯವರಿಂದ ಓದಿಸಿ, ಒಂದು ಕ್ಲಾಸಿನವರಿಗೆ ಉಕ್ತಲೇಖನ ಬರೆಸುತ್ತ ಇನ್ನೊಂದರವರು ಪದ್ಯ ಗಟ್ಟಿ ಮಾಡುವಂತೆ ಹೇಳಿ ಕಾಲಕಳೆದಿದ್ದರು. ಮಧ್ಯಾಹ್ನ ಅವರಿಗೆ ಬೇಸರವಾಗಿರಬೇಕು.

''ಒಂದು ಪದ ಏಳಲೇ'' ಎಂದು ಯಾವುದೋ ಹುಡುಗನನ್ನು ಕೇಳಿದ್ದರು. ಅವನು ಸುಮ್ಮನೆ ಕೂತಿದ್ದ.

''ಯಾಕೆ ಪದ ಏಳಾಕೆ ಬರಾಕಿಲ್ಲೇನ್ಲೇ ?''

''ಇಲ್ಲ ಸಾ'' ಎಂದು ಬೆರಳು ಉಗುರು ತೆಗೆದುಕೊಳ್ಳತೊಡಗಿದ.

''ನಿಂಗೆ ಬರುತ್ತಾ ?'' ಎಂದು ಸೀನುವನ್ನು ಕೇಳಿದ್ದರು. ಅವನಿಗೆ ನಾಚಿಕೆಯೋ ನಾಚಿಕೆ. ಎದ್ದು ನಿಂತು ನೆಲ ನೋಡುತ್ತ ನಾಚಿಕೆಯ ನಗು ನಗುತ್ತ ''ಇಲ್ಲ ಸಾ'' ಎಂದಿದ್ದ.

ಇಷ್ಟು ಹೊತ್ತಿಗೆ ಎಲ್ಲ ಹುಡುಗರೂ, ಅಲ್ಲಿದ್ದ ಆರನೆಯ ಕ್ಲಾಸಿನ ಇಬ್ಬರು ಹುಡುಗಿಯರೂ ತಲೆತಗ್ಗಿಸಿಬಿಟ್ಟಿದ್ದರು. ತಾವು ಕಣ್ಣಿಗೆ ಬಿದ್ದರೆ ತಮ್ಮನ್ನೆಲ್ಲಿ ಹಾಡು ಹೇಳಲು ಕೇಳುತ್ತಾರೆಯೋ ಎಂಬ ಭಯ ಗಾಬರಿ ಅವರನ್ನಾವರಿಸಿತ್ತು. ಮೇಷ್ಟರು ಮಿಕ್ಕ ಹುಡುಗರಾರನ್ನೂ ಕೇಳಲಿಲ್ಲ. ಅವರಿಗೆ ಉಸಿರುಬಿಡುವಂತಾಯ್ತು. ಆದರೆ ಭರಮಪ್ಪನವರ ದೃಷ್ಟಿ ದೂರ ಕುಳಿತ ಜುಂಜನ ಮೇಲೆ ತಿರುಗಿತ್ತು.

''ಲೇ ಜುಂಜ, ಏಳಲೇ ಮ್ಯಾಕೆ. ಒಂದು ಬಯಲು ನಾಟಕದ ಕುಣಿತ ಕುಣೀಲಾ'' ಎಂದರು. ಜುಂಜ ಸುಮ್ಮನೆ ಕೂತಿದ್ದ.

''ಯಾಕೆ ಬರಾಕಿಲ್ಲೇನೋ ?'' ಎಂದು ಪ್ರಶ್ನಿಸಿದ್ದರು ಮೇಷ್ಟ್ರು.

''ಬತ್ತೈತೆ ಸಾ'' ಎಂದು ತೀರ ಮೆಲ್ಲಗೆ ಹೇಳಿದ.

''ಮತ್ತೆ ಅದ್ಯಾಕೆ ಅಂಗೆ ಸಿಗ್ಗು ಬೀಳ್ತಿ ಇವೆಲ್ಲಕ್ಕಿಂತ ನೀನೇ ವಾಸಿ ಕುಣಿ'' ಎಂದರು. ''ಈ ಕಡೆ ಬಾ'' ಎಂದು ಯಾರೂ ಕುಳಿತುಕೊಳ್ಳದಿದ್ದ ಕಡೆ ತೋರಿಸಿದರು. ಅವನು ಮೆಲ್ಲಗೆ, ಯಾರನ್ನೂ ಮುಟ್ಟಿಕೊಳ್ಳದಂತೆ ಬಂದು ತೋರಿಸಿದ ಕಡೆ ನಿಂತ. ಎಲ್ಲ ಹುಡುಗರ ಕಣ್ಣುಗಳೂ ಅವನ ಮೇಲೇ ಕೇಂದ್ರೀಕೃತವಾಯಿತು. ಒಂದು ಸ್ವಲ್ಪ ಹೊತ್ತು ಜುಂಜ ಸುಮ್ಮನೆ ನಿಂತಿದ್ದ.

''ಉಹ್ನ, ಸುರು ಮಾಡು ಮತ್ತೆ'' ಎಂದು ಮೇಷ್ಟರು ಹೇಳಿದರು.

ಅವನು 'ಥಕ ಥೈಜಣ, ಧಿತ್ತೋಂ ತಕಧೋಂ'' ಎಂದು ಮೇಲೆ ನೆಗೆದು ಆ ಕಡೆ ಈ ಕಡೆ ಹಾರಿ ಕುಣಿದು ''ಈಗ ಬಂದವರದಾರೋ ಧಾರು'' ಎಂದು ಹೇಳಿ ತಾನೇ ''ಅತಳ ವಿತಳ ಸುತಳ ರಸಾತಳ ತಳಾತಳ ಮಹಾತಳ ಪಾತಾಳ ಮುಂತಾದ ಹದಿನಾಲ್ಕು ಲೋಕಗಳಿಗೂ ಒಡೆಯನಾದ, ಅಂಗ ವಂಗ ಕಳಿಂಗ ಕಾಂಭೋಜ ಗೌಡ ಲಾಟ ಮುಂತಾದ ಛಪ್ಪನ್ನೈವತ್ತಾರು ದೇಶಗಳಿಗೂ ಒಡೆಯನಾದ ರಾವಣನೆಂದು ತಿಳಿಯಯ್ಯಾ ಸಾರತಿ, ಮತ್ತಿನ್ನೇನು ಕೇಳುತಿ'' ಎಂದು ಮುಂತಾಗಿ ಮಾತನಾಡಿದ.

ಅವನಷ್ಟು ಲೀಲಾಜಾಲವಾಗಿ, ಮುಂದೆ ಹುಡುಗರು ಮೇಷ್ಟರು ಎಲ್ಲ ಇದ್ದರೂ ಹೆದರಿಕೊಳ್ಳದೆ, ಅತ್ತಿಂದಿತ್ತ ಇತ್ತಿಂದತ್ತ ಕುಣಿದದ್ದು ನೋಡಿ ಸೀನುವಿಗೆ ತಾನೂ ಹಾಗೆ ಕುಣಿಯುವಂತಿದ್ದರೆ ಎನ್ನಿಸಿತ್ತು. ಬೆಂಗಳೂರಿನಲ್ಲಿ ಹೀಗೆ ಯಾರೂ ಕುಣಿದದ್ದನ್ನು ಅವನು ಕಂಡಿರಲಿಲ್ಲ. ಜುಂಜನಿಗೆ ಏನೇನೋ ಬರುತ್ತದೆ, ತನಗೆ ಅದ್ಯಾವುದೂ ಗೊತ್ತಿಲ್ಲವಲ್ಲ ಎಂದವನಿಗೆ ಕಸಿವಿಸಿಯಾಗಿತ್ತು.

''ಚಂದಾಗಿ ಕುಣೀತೀಯಲ್ಲಲೇ ಬಡ್ಡೀಮಗನೆ. ಈಗೊಂದು ಪದ ಏಳು'' ಎಂದಿದ್ದರು ಮೇಷ್ಟರು ಮೆಚ್ಚಿಕೆಯಿಂದ.

''ಎಂತಿಹುದೀ ವನವು

ಸ್ವಾಂತದೊಳಮಿತ ಸಂತಸವೀವುತ

ಎಂತಿಹುದೀ ವನವು''

ಎಂದು ರಾಗವಾಗಿ ಹಾಡಿದ್ದ. ಅವನ ಕಂಠ ಇಂಪಾಗಿತ್ತು. ಚೆನ್ನಾಗಿ ಹಾಡ್ತಾನೆ, ತನಗೆ ಹಾಡು ಹೇಳುವುದಕ್ಕೇ ಬರವಲ್ಲದಲ್ಲ ಎಂದು ತನ್ನ ಬಗ್ಗೆ ಸೀನುವಿಗೆ ತಾತ್ಸಾರವೆನಿಸಿತು.

ಅಂದಿನ ಆ ಸನ್ನಿವೇಶವನ್ನು ನೆನಪಿಸಿಕೊಂಡ. ಜುಂಜ ಬೇರೆ ರೀತಿಯಲ್ಲೂ ತನಗಿಂತ ಮೇಲು ಎಂಬ ಭಾವನೆಯುಂಟಾಯಿತು. ಪಾಠದಲ್ಲಿಯೂ ಇವತ್ತು ತನಗಿಂತ ಅವನು ಉತ್ತಮ. ಯಾರೂ ಹೇಳದಿದ್ದ ಉತ್ತರವನ್ನು ಅನು ಹೇಳಿದ್ದ, ಸೀನುವಿಗೆ ತುಂಬ ನಾಚಿಕೆಯೆನಿಸಿತ್ತು.

''ಏನು ನೋಡ್ತಾ ನಿಂತ್ಕಂಡಿದ್ದೀಯಲ್ಲೇ, ಉಹ್ನ ಮೂಗು ಇಡಿದು ಎಲ್ಡೆಲ್ಡ್ ಏಟು ಆಕು'' ಎಂದು ಭರಮಪ್ಪನವರು ಮತ್ತೊಮ್ಮೆ ಆಜ್ಞೆ ಮಾಡಿದರು. ವಿಧಿಯಿಲ್ಲದೆ,

ಅಳುಕುತ್ತಲೇ ಬಂದ ಜುಂಜ ಒಬ್ಬೊಬ್ಬ ಹುಡುಗ ಹತ್ತಿರ ಬಂದು ಮೂಗು ಹಿಡಿದು ಎರಡೆರಡು ಏಟುಗಳನ್ನು ಕೊಟ್ಟಿದ್ದ. ಸೀನುವಿಗೆ ಏಟುಕೊಡುವಾಗ ಅವನು ಹೆಚ್ಚು ಅಳುಕಿದ್ದಂತೆ ಕಾಣಿಸಿತು. ಅವನು ಕೊಟ್ಟ ಏಟುಗಳಿಂದ ಆದ ನೋವೇನೂ ಹೆಚ್ಚಿನದಲ್ಲ. ಆದರೆ ಅಂದು ಆದ ಅವಮಾನ ಸೀನುವಿನ ಮನಸ್ಸನ್ನು ಕೊರೆಯುತ್ತಿತ್ತು. ಜುಂಜನ ಮೇಲೆ ಕೆಟ್ಟ ಭಾವ ಬರಲು ಸಾಧ್ಯವೇ ಇರಲಿಲ್ಲ. ಎಷ್ಟೋ ಸಲ ಪಾಠ ಓದದ ಉತ್ತರ ಕೊಡದ ಹುಡುಗರಿಗೆ ಇತರರಿಂದ ಕೆನ್ನೆಗೆ ಹೊಡೆಸುವುದು ಸಾಮಾನ್ಯವಾಗಿತ್ತು. ಆದರೆ ಕುಣಿತ-ಹಾಡುಗಳು ಬರದಿದ್ದರೆ ಹೋಗಲಿ, ಪಾಠದಲ್ಲೂ ತಾನು ಹಿಂದೆ ಬಿದ್ದೆನಲ್ಲ ಎಂಬ ಹತಾಶ ಸ್ಥಿತಿ ಅವನಿಗುಂಟಾಯಿತು.

ಸ್ಕೂಲು ಬಿಟ್ಟ ಮೇಲೆ ಸೀನುವನ್ನು ಎದುರಿಸಿದ್ದು ಬೇರೆಯೇ ಪ್ರಶ್ನೆ. ತಾನು ಮನೆಯಲ್ಲಿ ಏನು ಹೇಳುವುದು ? ಮಾದಿಗರೋನು ಬೇರೆ ಮುಟ್ಟಿಸಿಕೊಂಡು ಬಿಟ್ಟಿದ್ದಾನೆ. ಮಾವ ಬೇರೆ ಆದಕ್ಕೆ ಕೋಪಮಾಡಿಕೊಂಡರೇ ? ದಿಕ್ಕು ತೋಚದಂತಾಯಿತು.

ಎಂದಿನಂತೆ ಸ್ಕೂಲಿನಿಂದ ಬಂದವನು ಪುಸ್ತಕ ತೆಗೆದಿಟ್ಟು ಕೈಕಾಲು ತೊಳೆದು ಅತ್ತೆ ಕೊಟ್ಟ ಹುರಿಗಾಳಿಗೋ ಅವಲಕ್ಕಿಗೋ ಜೇಬು ಒಡ್ಡದೆ ಮನೆಯ ತಲೆ ಬಾಗಿಲಲ್ಲಿ ಹಾಗೇ ನಿಂತುಕೊಂಡಿದ್ದ ಸೀನುವನ್ನು ಕಂಡು ಅತ್ತೆಗೆ ಅನುಮಾನವಾಯಿತು.

''ಯಾಕಪ್ಪಾ ಅಲ್ಲೇ ನಿಂತ್ಬಿಟ್ಟೆ?'' ಎಂದು ಕೇಳಿದ್ದರು.

''ಮಾದಿಗರ ಹುಡುಗ ಮುಟ್ಟಿಸ್ಕೊಂಬಿಟ್ಟ'' ಎಂದ ಮೆಲ್ಲನೆ.

ಒಳಗಿನಿಂದ ಬಂದ ಮಾವ ಈ ಮಾತು ಕೇಳಿ ''ಅವನನ್ಯಾಕೆ ಮುಟ್ಟಿಸ್ಕೊಳಕ್ಕೆ ಹೋಗಿದ್ದೆ ನೀನು. ಸ್ಕೂಲು ಬಿಟ್ಟಮೇಲೆ ನಿನ್ನ ಪಾಡಿಗೆ ನೀನು ಮನೆಗೆ ಬರಕ್ಕೆ ಆಗ್ತಿರ್ಲಿಲ್ಲವಾ ?'' ಎಂದರು.

''ನಾನು ಮುಟ್ಟಿಸ್ಕೊಳ್ಳಿಲ್ಲ''

''ಮತ್ತೆ ಅವನೇ ಬಂದು ಮುಟ್ಟಿದ್ನಾ ?''

''ಉಹ್ಞೂ....'' ಎಂದು ಅನುಮಾನಿಸುತ್ತ

''ಮತ್ತಿನ್ನೇನು ?''

''ಪ್ರಶ್ನೆಗೆ ಉತ್ರ ಕೊಡ್ಲಿಲ್ಲಾಂತ ಮೇಷ್ಟ್ರು ಕೆನ್ನೆಗೆ ಹೊಡಿಸಿದ್ರು''

''ಯಾವನೋ ಅವು ಮೇಷ್ಟ್ರು ?''

''ಭರಮಪ್ಪ ಮೇಷ್ಟ್ರು''

ಮಾವನಿಗೆ ಕೋಪವುಕ್ಕಿತು. ''ತಪ್ಪು ತಪ್ಪು ಪಾಠ ಹೇಳಿ ಕೊಡ್ತಾನೆ. ಈ ಕೆಲಸ ಬೇರೆ ಮಾಡ್ತಾನಾ ಅವನು ?'' ಎಂದುಕೊಂಡರು. ಅತ್ತೆ ''ಬಟ್ಟೆ ನೆನಸಿಡಪ್ಪ ನಾಳೆ ಸ್ನಾನ ಮಾಡ್ತೀಯಲ್ಲ, ತಣ್ಣೀರು ಸ್ನಾನಬೇಡ, ಬೇರೆ ಬಟ್ಟೆ ಹಾಕಿಕೊಂಡುಬಿಡು ಸಾಕು'' ಎಂದು

ಬಚ್ಚಲು ಮನೆಗೆ ಕರೆದುಕೊಂಡು ಹೋದರು. ಇವನಿಗೆ ಬರೀ ಮೈಯಲ್ಲಿ ಅತ್ತೆಯ ಮುಂದೆ ನಿಂತುಕೊಳ್ಳಲು ನಾಚಿಕೆ. ಆದರೆ ಈಗ ತಾನು ಮಾಡಿರುವ ತಪ್ಪೇ ಘೋರ ವಾದದ್ದು ಎನ್ನಿಸಿತ್ತು; ಇನ್ನು ಇದಕ್ಕೆಲ್ಲ ಬಿಂಕಮಾಡಿದರೆ ಮಾವ ಉರಿದು ಬೀಳಬಹುದು ಎಂದು ಭಯವಾಯಿತು. ತೊಡೆಯನ್ನು ತುಂಬ ಹತ್ತಿರ ಹತ್ತಿರ ಅದುಮಿ ಕುಳಿತು ಬಟ್ಟೆಯನ್ನು ನೆನಸಲು ತೊಡಗಿದ ; ಅತ್ತೆ ತಣ್ಣೀರು ಸುರಿಯುತ್ತಿದ್ದರು. ಅದನ್ನು ಹಿಂಡಿ ಪೂರ್ತಿ ನೆನಸಿದ. ಒಂದೆರಡು ಹನಿ ನೀರು ಮೈಮೇಲೆ ಸಿಡಿದು ಛಳಿ ಎನಿಸಿತು. ಇವನು ನೆನಸಿದ ಬಟ್ಟೆಯ ಮೇಲೆ ಮತ್ತೆ ಎರಡು ತಂಬಿಗೆ ನೀರು ಸುರಿದು ಅವುಗಳನ್ನು ತೆಗೆದುಕೊಂಡು ಹೋದ ಅತ್ತೆ ಬೇರೆ ಬಟ್ಟೆಗಳನ್ನು ತಂದುಕೊಟ್ಟರು, ಅವುಗಳನ್ನು ಹಾಕಿಕೊಂಡ.

ಅತ್ತೆ ಕೊಟ್ಟ ತಿಂಡಿ ಅಂದು ರುಚಿಸಲಿಲ್ಲ. ತಾನು ತಿಂಡಿ ತಿಂದಾದ ಮೇಲೆ ಮಾವ ಕರೆದರು, ''ನಡಿ ಹೊರಡೋಣ'' ಎಂದರು. ಅತ್ತೆಯನ್ನು ಕರೆತು ''ಆ ಮೇಷ್ಟರನ್ನ ವಿಚಾರಿಸಿ ಬರ್ತೀನಿ'' ಎಂದು ಹೇಳಿದಾಗ ಏನೋ ಭಯಂಕರವಾದದ್ದು ನಡೆಯಲಿದೆಯೆಂದು ಸೀನುವಿನ ಮನಸ್ಸಿನಲ್ಲಿ ಬಿರುಗಾಳಿಯೆದ್ದಿತು. ಆದರೆ ಏನೂ ಹೇಳದಷ್ಟು ಅವನು ಗಾಬರಿ ಗೊಂಡಿದ್ದ. ಮಾವನ ಉರಿಮುಖ ಕಂಡಾಗ ಅವನ ಬಾಯಿಯ ನೀರೆಲ್ಲ ಆರಿಹೋಗಿತ್ತು. ಚಪ್ಪಲಿ ಮೆಟ್ಟಿ ವಾಕಿಂಗ್ ಸ್ಟಿಕ್ ಹಿಡಿದು ಹೊರಟ ಮಾವನ ಹಿಂದೆ ನಿಧಾನವಾಗಿ ಹೆಜ್ಜೆ ಹಾಕಿದ.

ಭರಮಪ್ಪ ಮೇಷ್ಟರ ಮನೆಗೆ ಸೀನುವನ್ನು ಕರೆದುಕೊಂಡು ಬಂದ ಮಾವ ಅವರನ್ನು ಕೂಗಿದರು. ಮೇಷ್ಟರೂ ತಿಂಡಿ ತಿನ್ನುತ್ತಿದ್ದರೆಂದು ಕಾಣುತ್ತದೆ. ಹೊರಗೆ ಬಂದರು. ಮನೆಯಲ್ಲಿ ಯಾರೂ ಇದ್ದಂತಿರಲಿಲ್ಲ, ಊರಿಗೆ ಹೋಗಿದ್ದರೆಂದು ಕಾಣುತ್ತದೆ. ಬಂದವರೇ ಮಾವನನ್ನು ಕಂಡು ಆಶ್ಚರ್ಯಗೊಂಡರು.

''ಏನು ಸ್ವಾಮಿ ?''

''ಭರಮಪ್ಪ ಅಂದರೆ ನೀವೇನಾ ?'' – ಎಂದು ಗುಡುಗಿದರು ಮಾವ.

''ಹೌದು ಸ್ವಾಮಿ, ಏನಾಗಬೇಕಾಗಿತ್ತು?''

''ಇವರಿಗೆಲ್ಲ ಮಾದಿಗರ ಹುಡುಗನ ಕೈಲಿ ಹೊಡಿಸಿದರಂತೆ'' ಎಂದು ಸೀನುವಿನ ಕಡೆ ತೋರಿಸುತ್ತ ಕೇಳಿದರು.

''ಹೌದು, ಸರಿಯಾಗಿ ಉತ್ತರ ಹೇಳಲಿಲ್ಲ ಹೊಡೆಸಿದೆ. ಬೇರೆ ಹುಡುಗರಿಗೂ ಏಟು ಬಿತ್ತು.''

''ಬಿತ್ತು ಬಿತ್ತು. ಮಾದಿಗರ ಹುಡುಗನ ಕೈಲಿ ಬ್ರಾಹ್ಮಣ ಹುಡುಗರಿಗೂ ಹೊಡಿಸಿದ್ದೀಯಾ, ನಿಂಗೆ ಧರ್ಮ ನೀತಿ ಇದೆಯಾ ?'' ಎಂದು ಏಕವಚನ ಪ್ರಯೋಗ ಮಾಡಿದರು ಮಾವ

''ಅದರಲ್ಲೇನು ತಪ್ಪು ? ಸರಿ ಉತ್ತರ ಹೇಳಿದೋನ ಕೈಲಿ ಪಾಠ ಓದದೇ ಇರೋರಿಗೆ ಹೊಡಿಸಿದರೇನು ತಪ್ಪು ?''

''ಯಾಕೆ ತಪ್ಪಿಲ್ಲ. ಊರ ನಿಯಮ ಮೀರಿ ಹಾಗ್ಯಾಕೆ ಮಾಡಿದೆ ನೀನು ?''

''ಸ್ಕೂಲಲ್ಲಿ ಇವೆಲ್ಲ ನಡೆಯೋದಿಲ್ಲ ಸ್ವಾಮಿ. ನಮಗೆಲ್ಲರೂ ಒಂದೇ, ಪಾಠ ಚೆನ್ನಾಗಿ ಓದೋರು ನಮಗೆ ಮುಖ್ಯ.''

''ಹೌದು ಹೌದು. ನಿಂಗೆ ಚೆನ್ನಾಗಿ ಪಾಠ ಗೊತ್ತಿದೆ. ಜ್ಯೋತಿಷ್ಮತಿ ಅಂದರೆ ಜ್ಯೋತಿಷ್ಕ ಅಂತ ಹೇಳಿಕೊಟ್ಟಿದ್ದೀಯಲ್ಲ. ಮೊದಲು ನೀನು ಸರಿಯಾಗಿ ಪಾಠ ಓದಿಕೋ. ಆಮೇಲೆ ಬೇರೆಯೋರಿಗೆ ಹೇಳು. ನೀನು ಹೇಳಿ ಕೊಟ್ಟಿದ್ದು ತಪ್ಪು ಅಂತ ಹೇಳಿದ್ದಕ್ಕೆ ಈ ರೀತಿ ಅವಮಾನ ಮಾಡ್ತೀಯೇನು ? ಇರಲಿ, ಮೇಲಿನೋರಿಗೆ ನಾನು ರಿಪೋರ್ಟ್ ಮಾಡ್ತೀನಿ.''

ಈ ವಿಚಾರ ಸೀನುವಿಗೆ ಅರ್ಥವಾಗಲಿಲ್ಲ. ಭರಮಪ್ಪ ಮೇಷ್ಟರು ಹೇಳಿದ್ದ ಅರ್ಥ ತಪ್ಪಂತೆ ಎಂದು ಹೇಳಿದ್ದ ದಿನ ತನ್ನ ಮೇಲೆ ರೇಗಿದ್ದರು. ಆದರೆ ಇವತ್ತು ಅವರು ಆ ಮಾತು ಎತ್ತೇ ಇರಲಿಲ್ಲ. ತಾನು ಸರಿಯಾಗಿ ಅರ್ಥ ಹೇಳಿರಲಿಲ್ಲ; ಜುಂಜ ಮಾತ್ರ ಸರಿಯಾಗಿ ಉತ್ತರಿಸಿದ್ದ , ಆದ್ದರಿಂದ ತಮ್ಮ ಕೆನ್ನೆಗಳಿಗೆ ಮೇಷ್ಟರು ಹೊಡೆಸಿದ್ದರು. ಆದರೆ ಮಾವ ಏನೇನೋ ಹೇಳುತ್ತಿದ್ದಾರಲ್ಲ!

''ಏನಾರು ಮಾಡಿಕೊಳ್ಳಿ ಸ್ವಾಮಿ. ನಾನೇನೂ ತಪ್ಪು ಮಾಡಿಲ್ಲ'' ಎಂದು ಭರಮಪ್ಪ ಮೇಷ್ಟರು ಮನೆಯೊಳಗೆ ಹೋಗಿಬಿಟ್ಟರು, ಮಾವನ ಮುಖ ಸಣ್ಣದಾಯಿತು. ಸೀನುವಿನ ಕೈ ಹಿಡಿದು ಎಳೆದುಕೊಂಡು ಹೊರಟರು. ಪಂಚಾಯಿತಿ ಹಾಲಿನ ಜಗಲಿ ಮೇಲೆ ಊರ ಪಟೇಲ ಮೂಡಲಗಿರಿಗೌಡರು ಕೂತಿದ್ದರು.

''ಏನಪ್ಪಾ ಮೂಡಲಗಿರಿಯಪ್ಪ ಈ ಮೇಷ್ಟ್ರು ಹಾಂಕಾರ ನೋಡಿದ್ಯಾ ?''

''ಏನ್ ಸ್ವಾಮಿ ಅದು, ಅಂಥದು ?''

''ಈ ಭರಮಪ್ಪನಂತೆ, ಹುಡುಗರು ಉತ್ತರ ಹೇಳಲಿಲ್ಲ ಅಂತ ಮಾದಿಗ್ರ ಹುಡುಗನ ಕೈಲಿ ಎಲ್ಲರಿಗೂ ಕೆನ್ನೆಗೆ ಹೊಡೆಸಿದನಂತಲ್ಲ. ನಿನ್ನ ಮಗನೂ ಇವನ ಕ್ಲಾಸಂತೆ, ಹೇಳ್ಲಿಲ್ವಾ ?''

''ಇಲ್ವಲ್ಲ ಸ್ವಾಮಿ ! ಎಲಾ ಇವನ ಸೊಕ್ಕೇ. ನೀವು ಹೋಗಿ ಸ್ವಾಮಿ, ನಾನು ಅವಯ್ಯಂಗೆ ಹೇಳ್ತೀನಿ.'' ಅವರಿಗೂ ಕೋಪ ಬಂದಂತಿತ್ತು.

''ಹೇಳಿದ್ರೇನು ಬಂತು. ಚೆನ್ನಾಗಿ ಬುದ್ಧಿ ಕಲಿಸಬೇಕು.'' ಎಂದು ವಾಪಸ್ಸು ಮನೆಗೆ ಬಂದಿದ್ದರು ಮಾವ.

ಮಾರನೇ ದಿನ ಸ್ಕೂಲಿಗೆ ಭರಮಪ್ಪ ಮೇಷ್ಟರು ಬಂದಿರಲಿಲ್ಲ. ಮೂರು-ನಾಲ್ಕು ದಿನಗಳಾದ ಮೇಲೆ ಬಂದರೂ ಸೀನುವಿನ ಕಡೆ ನೋಡಿರಲಿಲ್ಲ. ಅವರಿಗೆ ತನ್ನ ಬಗ್ಗೆ ಬೇಸರವಾಗಿದೆಯೇ ಎಂದು ಈ ಹುಡುಗನಿಗೆ ಅನ್ನಿಸಿತು. ತಾನೇನು ಮಾಡಬಹುದಿತ್ತು? ತನ್ನಿಂದಲೇ ಮೇಷ್ಟರನ್ನು ಮಾವ ಬಯ್ದಿದ್ದರು. ಆದರೆ ತಾನೇನು ಚಾಡಿ ಹೇಳಿರಲಿಲ್ಲ. ಇದ್ದ ವಿಷಯವನ್ನು ಹೇಳಿದ್ದ. ಮಾದಿಗರವನು ಮುಟ್ಟಿಸಿಕೊಂಡಿದ್ದರೂ ಹೇಳದೆ ಮನೇನೆಲ್ಲ

ಮೈಲಿಗೆಯಿಂದ ಏಕ ಮಾಡಿಸಿದ್ದರೆ ಏನಾಗುತ್ತದೋ ಎಂದು ಭಯವಾದ್ದರಿಂದ ಹಾಗೆ ನಿಜವನ್ನೇ ತಾನು ನುಡಿದಿದ್ದ. ಆದರೆ ಈಗ ನೋಡಿದರೆ ಅದರಿಂದ ಏನೇನೋ ಆಗಿದೆ. ಮೇಷ್ಟರನ್ನು ನೋಡುವುದಕ್ಕೂ ತನಗೆ ಭಯವಾಗುತ್ತಿತ್ತು. ಏಕಾದರೂ ತಾನು ಬ್ರಾಹ್ಮಣನ ಮನೆಯಲ್ಲಿ ಹುಟ್ಟಿದೆನೋ ಎನ್ನಿಸಿತು. ಜುಂಜನ ಹಾಗೆ ಮಾದಿಗರ ಮನೆಯಲ್ಲಿ ಹುಟ್ಟಿದ್ದಿದ್ದರೆ ತನಗೆ ಬಯಲು ನಾಟಕದಲ್ಲಿ ಕುಣಿಯಲು ಬರುತ್ತಿತ್ತೇನೋ, ತಾನೂ ಆಗ ಹಾಡಬಹುದಾಗಿತ್ತೇನೋ ಎನಿಸಿತು. ಆ ದಿನ ರಾತ್ರಿ ಬಹಳ ಹೊತ್ತಿನವರಗೆ ಸೀನುವಿಗೆ ನಿದ್ದೆ ಬರಲಿಲ್ಲ ಊಟವೂ ಸೇರಲಿಲ್ಲ.

ಇದಾದ ಒಂದು ತಿಂಗಳಲ್ಲಿ ಭರಮಪ್ಪ ಮೇಷ್ಟರಿಗೆ ಬೇರೆ ಊರಿಗೆ ವರ್ಗವಾಗಿತ್ತು. ಮಾವ-ಗೌಡ ಸೇರಿ ಅವರನ್ನು ಬೇರೆ ಊರಿಗೆ ಕಳಿಸಿದ್ದರು ಎಂದು ಹುಡುಗರು ಮಾತಾಡಿಕೊಳ್ಳುತ್ತಿದ್ದರು. ಅದು ಹೇಗೆ ಆಯಿತೋ ಸೀನುವಿಗೆ ಗೊತ್ತಿರಲಿಲ್ಲ. ಯಾರನ್ನಾದರೂ ಕೇಳಿ ವಿಷಯವನ್ನು ತಿಳಿದುಕೊಳ್ಳುವ ಬುದ್ಧಿಯೂ ಅವನದಲ್ಲ. ಮಾವನನ್ನು ಕೇಳಬೇಕೆಂದರೆ, ಅವನಿಗೆ ಯಾಕೋ ಅವರ ಬಗ್ಗೆ ಸಿಟ್ಟು ಬಂದಿತ್ತು. ಪಾಠ ಸರಿಯಾಗಿ ಹೇಳದವನಿಗೆ ಸರಿಯುತ್ತರ ಕೊಟ್ಟವನಿಂದ ಹೊಡೆಸಿದರೆ ಮೇಷ್ಟರನ್ನು ಯಾಕೆ ಬೈಯಬೇಕಾಗಿತ್ತು ಎಂಬ ಮುನಿಸು ಮಾವನ ಬಗ್ಗೆ ಅವನಲ್ಲಿ ತುಂಬಿತ್ತು.

೬

ಭರಮಪ್ಪ ಮೇಷ್ಟರು ಬದಲು ಈಗ ಇನ್ನೊಬ್ಬರು ಬಂದಿದ್ದರು, ಅವರ ಹೆಸರು ಕೆಂಚಪ್ಪ. ಅವರೊಳ್ಳೆ ಚೆನ್ನಾಗಿ ಹಾಡು ಹೇಳುತ್ತಿದ್ದರು. ಯಾವಾಗಲೂ ತಮಾಷೆಯಾಗಿ ಮಾತನಾಡುತ್ತಿದ್ದರು. ಒಳ್ಳೆ ಕುಶಾಲಿನ ಆಸಾಮಿ. ಅವರು ಬಂದ ಮೇಲೆ ಹೊಸದೊಂದು ಯೋಜನೆ ಜಾರಿಗೆ ಬಂದಿತ್ತು, ಅದೆಂದರೆ ಪ್ರಕೃತಿ ಪಾಠಕ್ಕಾಗಿ ಕಾಡಿಗೆ ಹುಡುಗರನ್ನು ಕರೆದುಕೊಂಡು ಹೋಗುವುದು.

'ಪ್ರಕೃತಿ ಪಾಠ'ವೆಂದು ಶನಿವಾರ ಬೆಳಗ್ಗಿನ ಕ್ಲಾಸಿನಲ್ಲಿ ಕೊನೆಯ ಎರಡು ಪಿರೀಡುಗಳಿದ್ದವು. ಆದರೆ ಆ ಕಾಲದಲ್ಲಿ ಡ್ರಿಲ್ ಮಾಡಿಸಿಬಿಡುತ್ತಿದ್ದರು. ಪ್ರತಿದಿನ ಮಧ್ಯಾಹ್ನ ಕೊನೆಯ ಪಿರೀಡಿನಲ್ಲಿ ಡ್ರಿಲ್ ಮಾಡಿಸುವ ಪದ್ಧತಿಯ ಜೊತೆಗೆ, ಶನಿವಾರದ ಈ ಎರಡೂ ಪಿರೀಡುಗಳಲ್ಲಿ ಡ್ರಿಲ್ ಮಾಡಿಸುವ ಪರಿಪಾಠವಿತ್ತು. ಆದರೆ ಕೆಂಚಪ್ಪನವರು ಇದನ್ನು ಮಾರ್ಪಾಟು ಮಾಡಿದ್ದರು ಅದೂ ಈಗ ಸೀತಾಫಲದ ಹಣ್ಣಿನ ಕಾಲ ಬೇರೆ. ಅವರಿಗೊಂದು ಯೋಚನೆ ಹೊಳೆದಿತ್ತು.

ಶನಿವಾರ ಎರಡು ಪಿರೀಡುಗಳಾದ ಮೇಲೆ ಹುಡುಗಿಯರನ್ನು ಮನೆಗೆ ಕಳಿಸಿಬಿಡುತ್ತಿದ್ದರು. ಮಿಕ್ಕೆಲ್ಲ ಹುಡುಗರ ಜೊತೆಗೆ ಇಬ್ಬರು ಮೇಷ್ಟರೂ ಮಾದಪ್ಪನ ಕಣಿವೆಯ ಕಡೆಗೆ ಹೋಗುತ್ತಿದ್ದರು. ಆ ಊರಿನ ಸುತ್ತಮುತ್ತಲಿದ್ದ ಪ್ರದೇಶಗಳಲ್ಲೆಲ್ಲ ಇದು ತುಂಬ ಮರಗಿಡಗಳಿದ್ದ ಪ್ರದೇಶ ; ಹಸುರು ಎದ್ದು ಕಾಣುತ್ತಿತ್ತು. ಅಲ್ಲದೆ ಎರಡು ಗುಡ್ಡಗಳ

ನಡುವೆ ಬಟ್ಟಲಿನ ಹಾಗಿತ್ತು ಅಲ್ಲಿನ ಭೂಮಿ. ಯಾರೋ ಅಲ್ಲೊಂದು ಈರಭದ್ರನ ಗುಡಿ ಕಟ್ಟಿಸಿದ್ದರು. ಬೇರೆ ಊರಿನಿಂದ ಆ ದಾರಿಗುಂಟ ಜನರು ಬರುವಾಗ ಸ್ವಾಮಿಗೆ ಮೊಕ್ಕಿ ಬರುತ್ತಿದ್ದುದು ಸಾಮಾನ್ಯವಾಗಿತ್ತು.

ಊರಿನ ಬೇರೆ ಬಯಲು ಪ್ರದೇಶದಲ್ಲಿ ಬರಿಯ ಜಾಲಿಮರಗಳು, ಹೊಲದ ನಡುವೆ ನಟ್ಟು ಬೆಳೆಸಿದ ಹಲಸು ನೇರಿಳೆ ಮರಗಳು, ಅಲ್ಲೊಂದು ಇಲ್ಲೊಂದು ಕಡೆ ಅಪರೂಪವಾಗಿ ಕಾಣುವ ತೆಂಗಿನ ಮರಗಳು, ಹೊಲಗಳಿಗೆ ಬೇಲಿಯಾಗಿರುವ ಹೊಂಗೆ ಮರಗಳು ಜಾಸ್ತಿ. ಆದರೆ ಒತ್ತಾಗಿ ಮರಗಳು ಬೆಳೆದಿದ್ದುದೆಂದರೆ ಅವೂರಲ್ಲಿ ಮಾದಪ್ಪನ ಕಣಿವೆಯಲ್ಲೇ. ದೂರದಿಂದ ನೋಡಿದರೆ ಬೋಳಾಗಿ ಕಾಣುವ ಗುಡ್ಡಗಳು ಹತ್ತಿರ ಹೋದರೆ ಹಲವಾರು ಮರಗಳನ್ನು ಹೊತ್ತಿರುವುದು ಕಾಣಿಸುತ್ತದೆ. ಬಂಡೆಗಳ ಮಧ್ಯೆ ಮಧ್ಯೆ ಮಧ್ಯೆ ಮರಗಳು ಬೆಳೆದಿರುವುದು ಗೋಚರಿಸುತ್ತದೆ. ಇದರಿಂದಾಗಿ ಕಣಿವೆಗೆ ಬಂದರೆ ನೋಡಲು ತುಂಬ ಚೆಂದವಾಗಿ ಕಾಣುತ್ತದೆ. ಮಿಕ್ಕ ಕಡೆಗಿಂತ ಇಲ್ಲಿ ಕಡಿಮೆ ಸೆಕೆಯೆಂದೂ ಅನ್ನಿಸುತ್ತದೆ.

ಆದ್ದರಿಂದಲೇ ಈ ಜಾಗ ಹುಡುಗರಿಗೆ 'ಪ್ರಕೃತಿ ಪಾಠ'ವನ್ನು ಕಲಿಸಲು ಸೂಕ್ತವಾದದ್ದೆಂದು ಕೆಂಚಪ್ಪ ಮೇಷ್ಟ್ರು ಭಾವಿಸಿದ್ದರು ; ಮರಳಪ್ಪನವರು ಅದನ್ನು ಅನುಮೋದಿಸಿದ್ದರು. ಹೀಗಾಗಿ ಶನಿವಾರ ಹತ್ತುಗಂಟೆಯ ಹೊತ್ತಿಗೆ ಇಡೀ ಮಿಡ್ಲ್ ಸ್ಕೂಲಿನ ಸವಾರಿ ಇತ್ತ ಧಾವಿಸುತ್ತಿತ್ತು. ದಾರಿಯಲ್ಲಿ ಹೋಗುವಾಗ ಮೇಷ್ಟರು ಸುತ್ತಮುತ್ತಲಿನ ಗಿಡ-ಮರಗಳ ಬಗ್ಗೆ ಆಕಾಶದ ಬಗ್ಗೆ ವಿವರಿಸುತ್ತಿದ್ದರು. ಗಿಡಗಳು ಹೇಗೆ ಬೆಳೆಯುತ್ತವೆ, ಅವುಗಳಲ್ಲಿ ಹೇಗೆ ಭೂಮಿಯ ಸಾರ ಬಂದಿರುತ್ತದೆ ಎಂದು ಹೇಳುತ್ತಿದ್ದರು. ಗಿಡಗಳ ವಿಷಯ ರೈತ ಮಕ್ಕಳಿಗೆ ಹೊಸತಲ್ಲವಾದರೂ ಸೀನುವಿಗೆ ಹೊಸತು. ಅದೂ ಈವೂರಲ್ಲಿ ಕಾಣಿಸುವ ಕೆಲವು ಗಿಡಗಳನ್ನು ಅವನೆಂದೂ ಬೆಂಗಳೂರಿನಲ್ಲಿನ ಕಂಡೇ ಇರಲಿಲ್ಲ. ಮೊದಲ ಬಾರಿಗೆ ಕತ್ತಾಳೆ ಗಿಡವನ್ನು ಕಂಡಾಗ ಅವನಿಗೆ ಆಶ್ಚರ್ಯವಾಗಿತ್ತು. ಅದೂ ಗಿಡದ ನಡುವೆ ಉದ್ದಕ್ಕೆ ಕಂಬವೊಂದು ನಿಂತಿರುತ್ತಿದ್ದುದು ಅವನಲ್ಲಿ ತುಂಬ ಆಶ್ಚರ್ಯವನ್ನುಂಟುಮಾಡಿತ್ತು. ಬೆಂಗಳೂರಿನಲ್ಲಿನ ಲೈಟು ಕಂಬಗಳ ಹಾಗೆ ನಿಂತಿದ್ದ ಆ ಕಂಬಗಳಿಗೆ, ಪೆಮ್ಮನ ಹಳ್ಳಿಗೆ ಲೈಟು ಬಂದರೆ ನೇರವಾಗಿ ವೈರು ಹಾಕಬಹುದು, ಬೇರೆ ಕಂಬಗಳ ಅವಶ್ಯಕತೆಯಿಲ್ಲವೆಂದೂ ಅನಿಸಿತ್ತು!

ಹೊಲಗಳಿಗೆ ಬರೀ ಬೇಲಿಯಾಗಿ ಮಾತ್ರವಲ್ಲ, ಅದರಿಂದ ಇನ್ನೂ ಉಪಯೋಗವಿದೆ ಎಂದು ಮಾವ ತಿಳಿಸಿದ್ದರು. ನೀರಲ್ಲಿ ನೆನೆಹಾಕಿದ್ದ ಕತ್ತಾಳೆ ಪಟ್ಟೆಗಳನ್ನು ಅವನು ಕಂಡಿದ್ದ. ಎಷ್ಟೋ ಸಾರಿ ನೀರಿನಲ್ಲಿ ಅವು ಕೊಳೆತು ಗಬ್ಬುನಾತ ಹೊಡೆಯುತ್ತಿದ್ದಾಗ ಮೂಗು ಮುಚ್ಚಿಕೊಂಡಿದ್ದ. ಆದರೆ ಕೆಲಸದವರು ಮಾತ್ರ ಅವನ್ನು ಜಜ್ಜಿ ನಾರು ತೆಗೆಯುತ್ತಿದ್ದರು. ನಾರನ್ನು ಒಣಗಿಸಿ ಹಗ್ಗಗಳನ್ನೂ, ಕಪಿಲೆಗೆ ಕಟ್ಟಲು ಮಿಣಿಗಳನ್ನೂ ಹೆಣೆಯುತ್ತಿದ್ದರು.

ಆದ್ದರಿಂದ ಸೀನುವಿಗೆ ಪ್ರಕೃತಿ ಪಾಠ ಒಂದ ರೀತಿಯಲ್ಲಿ ಪ್ರಯೋಜನಕಾರಿಯಾಗಿತ್ತು. ಅವನೆಷ್ಟೋ ಸಲ ದಾರಿಯಲ್ಲಿ ಕಂಡ ಗಿಡಗಳು ಯಾವುದೆಂದು ತಿಳಿಯದೆ ಸ್ನೇಹಿತರನ್ನು ಕೇಳುತ್ತಿದ್ದ. ಮೇಷ್ಟರನ್ನೇ ಕೇಳಲು ಸಂಕೋಚ ಅಡ್ಡ ಬರುತ್ತಿತ್ತು. ಬೆಂಗಳೂರಿನಲ್ಲಿ ಕಂಡ ಅನೇಕ ವಿಚಾರಗಳ ಬಗ್ಗೆ ಅವುಗಳೇನನ್ನೂ ತಿಳಿಯದ ಹಳ್ಳಿಯ ಗೆಳೆಯರಿಗೆ ಹೇಳುವಾಗ ಸರ್ವಜ್ಞನಂತೆ ಬಿಗುಮಾನದಿಂದ ಮಾತಾಡುತ್ತಿದ್ದ ಸೀನುವಿಗೆ ಈ ಮರಗಿಡ ಪೈರುಪಚ್ಚೆಗಳ ವಿಚಾರ ಬಂದಾಗ ಸಂಕೋಚಗೊಳ್ಳುವಂತಾಗುತ್ತಿತ್ತು. ತನಗೆ ಈ ವಿಚಾರ ತಿಳಿಯದಲ್ಲ ಎಂದು ಮುದುಡಿಕೊಳ್ಳುತ್ತಿದ್ದ.

ಅವತ್ತೊಂದು ದಿನ ಸಾಯಂಕಾಲ ಸರ್ಕಾರದ ಯಾವುದೋ ಇಲಾಖೆಯ ಜೀಪೊಂದು ಊರಿಗೆ ಬಂದಿತ್ತು. ಹಳ್ಳಿಯ ಜನರಿಗೆ, ಅದರಲ್ಲೂ ಹುಡುಗರಿಗೆ ಅಂತಹ ವಾಹನವೊಂದು ಬಂದರೆ ಆಶ್ಚರ್ಯ ! ಬೆಡಗು, ಭಯ. ಆದರ ಹಿಂದೆಯೇ ಹುಡುಗರ ಹಿಂಡೊಂದು ಓಡಿಬರುತ್ತಿತ್ತು. ಆ ದಿನವೂ ಹಾಗೆಯೇ ಆಯಿತು. ಸೀನುವೂ ಕಾರು-ಜೀಪು-ಬಸ್ಸುಗಳನ್ನು ಕಂಡು ಎಷ್ಟೋ ತಿಂಗಳಾಗಿದ್ದವು. ಅವನ ಮನಸ್ಸಿನಲ್ಲಿಯೂ ಇದರಿಂದ ಉತ್ಸಾಹವುಂಟಾಯ್ತು. ಆದರೆ ತಾನು ಇದನ್ನೆಲ್ಲ ಬೆಂಗಳೂರಿನಲ್ಲಿ ಕಂಡವನೆಂಬ ಹೆಮ್ಮೆಯಿಂದ ನಿಧಾನವಾಗಿ, ಜೀಪು ನಿಂತಿದ್ದ ಪಂಚಾಯಿತಿ ಹಾಲಿನ ಮುಂದೆ ಬಂದಿದ್ದ. ಅಲ್ಲಿ ಸೇರಿದ್ದ ಕೆಲವು ಗುರುತಿನ ಗೆಳೆಯರಿಗೆ, ಜೀಪಿನ ವಿವರಣೆ ಕೊಡುತ್ತಿದ್ದ. ಪಕ್ಕದಲ್ಲಿ ಸಿಕ್ಕಿಸಿದ್ದ ಚಕ್ರ ಯಾಕಿರುವುದು, ಅದರ ಮೇಲೆ ಹತ್ತುವುದು ಹೇಗೆ, ಒಳಗೆ ಡ್ರೈವರು ಕುಳಿತುಕೊಳ್ಳುವ ಜಾಗದಲ್ಲಿರುವ ಚಕ್ರ ಏತಕ್ಕಿರುವುದು - ಇತ್ಯಾದಿ ತನ್ನ ಪಾಂಡಿತ್ಯವನ್ನು ಪ್ರದರ್ಶಿಸಿದ.

ಸ್ವಲ್ಪ ಹೊತ್ತಿಗೆ ಜೀಪಿಗೆ ಒಂದು ಲೌಡ್ ಸ್ಪೀಕರ್ ಸೇರಿಸಿದರು. ಜೀಪಿನೊಳಗಡೆಯಿಂದ ಅದರ ಮೂಲಕ ಹಾಡು ಬರತೊಡಗಿತು. ಹುಡುಗರು ದೊಡ್ಡವರು ಕೂಡ, "ಓ ಆಡೇಳೋ ಪೆಟ್ಗೆ ಬಂದೈತೆ" ಎಂದು ಉದ್ಗಾರ ತೆಗೆಯುತ್ತಿದ್ದರು. "ಮಾತಾಡೋ ಪೆಟ್ಗೆ ಆಡೇಳೋ ಪೆಟ್ಗೆ"ಯನ್ನು ನೋಡಲು ಅವರು ಇತರರನ್ನೂ ಕರೆಯುತ್ತಿದ್ದರು. ಸೀನು ಈವೂರಿನ ಜನಕ್ಕೆ ಇವೆಲ್ಲ ಏನೂ ಗೊತ್ತಿಲ್ಲವೇ ಎಂದು ಆಶ್ಚರ್ಯಪಟ್ಟಿದ್ದ. ತಾನು ಮಿಗಿಲಾದ ತಿಳಿವಳಿಕಸ್ಥನೆಂದು ಅವನೆದೆಯುಬ್ಬಿತು. "ಇದು ಮಾತಾಡೋ ಪೆಟ್ಗೆ ಅಂತಲ್ಲ ಕಣೋ. ಗ್ರಾಮಫೋನ್ ಅಂತ ಇದರ ಹೆಸರು. ಬೆಂಗಳೂರಿನಲ್ಲಿ ನಮ್ಮ ಪಕ್ಕದ ಬೀದಿಯ ಹೋಟಲಲ್ಲಿ ಇದನ್ನು ಇಟ್ಟಿದ್ದಾರೆ" ಸ್ನೇಹಿತರಿಗೆ ಹೇಳಿದದು.

"ನಿಮ್ಮನ್ಯಾಗೂ ಇಲ್ಲವಾ ?" ಎಂದೊಬ್ಬ ಕೇಳಿದ.

"ಏ, ಆದಕ್ಕೆ ತುಂಬ ದುಡ್ಡು ಕಣೋ. ನಮ್ಮನೆ ವಠಾರದಲ್ಲಿ ಒಂದು ರೇಡಿಯೋನೂ ಇದೆ"

"ಅಂಗಂದ್ರೇನು ?" ಆಶ್ಚರ್ಯದಿಂದ ಮತ್ತೊಬ್ಬ ಹುಡುಗ ಪ್ರಶ್ನಿಸಿದ್ದ.

''ಅದೂ ಒಂಥರ ಪೆಟ್ಟಿಗೆ. ಎಲೆಕ್ಟ್ರಿಸಿಟಿ ವೈರನ್ನು ಅದಕ್ಕೆ ಜಾಯಿಂಟ್ ಮಾಡಿದರೆ ಅದರಿಂದ ಹಾಡು-ಮಾತು ಎಲ್ಲ ಬರುತ್ತೆ'' ಎಂದಿದ್ದ.

''ಅದೆಂಗೆ ಬತ್ತೈತೆ ?''

''ವೈರು ಇರತ್ತಲ್ಲ ಅದರೊಳಗಿಂದ''

''ಓಗಯ್ಯ, ವೈರ್ ಇಂದ ಮಾತು ಬತ್ತೈತ ಎಲ್ಲಾದ್ರೂ'' ಎಂದು ಒಬ್ಬ ತಾತ್ಸಾರ ಮಾಡಿದಾಗ.

''ಓಗ್ರಲ್ಲೋ, ನಿಮಗೆಲ್ಲ ಅರ್ಥವಾಗಲ್ಲ'' ಎಂದು ಅಸಮಾಧಾನದಿಂದ ಗದ್ದರಿಸಿದ್ದ.

ಜೀಪಿನಲ್ಲಿ ಕೂತುಕೊಂಡೇ ಯಾರೋ ಏನೋ ಮಾತಾಡಿದ್ದರು, ಅದು ಎಲ್ಲರಿಗೂ ಜೋರಾಗಿ ಕೇಳಿಸುತ್ತಿತ್ತು. ಒಳಗಿದ್ದವನು ಏನು ಮಾತನಾಡುತ್ತಾನೆ ಎಂದು ಕೇಳಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಅವನು ಹೇಗೆ ಮಾತಾಡುತ್ತಾನೆ, ಅದು ಹೊರಗೆ ತಪ್ಪಲೆಯ ಹಾಗೆ ಕಟ್ಟಿರುವ ಪಾತ್ರೆಯಲ್ಲಿ ಜೋರಾಗಿ ಕೇಳಿಸುತ್ತದಲ್ಲ, ಅದು ಹೇಗೆ ಎಂದು ಆಶ್ಚರ್ಯ ವ್ಯಕ್ತಪಡಿಸುತ್ತಿದ್ದರು ಜನ.

ಹಾಗೆ ಬೆಂಗಳೂರಿನಲ್ಲಿ ತಾನು ಕಂಡ ವಸ್ತುಗಳನ್ನು ವಿವರಿಸುವಾಗ ಹೆಮ್ಮೆಯಿಂದ ಬೀಗುವಂತಾಗುತ್ತಿದ್ದ ಸೀನುವಿಗೆ ಹಳ್ಳಿಯ ವಿಚಾರ ಬಂದಾಗ, ಅಲ್ಲಿನ ವಸ್ತುಗಳು ತನಗೆ ತಿಳಿದಿಲ್ಲವೆನಿಸಿದಾಗ ತನಗೇನೂ ತಿಳಿಯದೆಂಬ ಭಾವನೆಯುಂಟಾಗುತ್ತದೆ.

ಕಣಿವೆಯನ್ನು ತಲುಪಿದ ಹುಡುಗರನ್ನು ಕೆಂಚಪ್ಪ ಮೇಷ್ಟ್ರು ನಾಲ್ಕು ನಾಲ್ಕು ಮಂದಿಯ ಗುಂಪು ಮಾಡಿ ಬೇರೆ ಬೇರೆ ದಿಕ್ಕಿಗೆ ಕಳಿಸುತ್ತಿದ್ದರು. ಸೀತಾಫಲವನ್ನು ಕಿತ್ತು ತರುವ ಉದ್ದೇಶದಿಂದ. ಅವರು ಹೋಗುವಾಗ ಹುಡುಗರಿಗೆ ಎಚ್ಚರಿಕೆಯೀಯುತ್ತಿದ್ದರು : ''ಎಳಸು ಪಳಸು ಕೀಳ್ಬೇಡ್ರಲೇ. ದೋರಗಾಯಿ ಮಾತ್ರ ಕೀಳ್ಬೇಕು, ಗೊತ್ತಾಯ್ತಾ? ರೆಂಬೆ ಗಿಂಬೆ ಮುರಿಬ್ಯಾಡ್ರೋ''. ಯಾವುದು ಎಳಸು. ಯಾವುದು ದೋರಗಾಯಿ - ಅವುಗಳ ಲಕ್ಷಣಗಳೇನು ಎಂದು ವಿವರಿಸುತ್ತಿದ್ದರು. ಇದ್ದುದರಲ್ಲಿ ದೊಡ್ಡ ಹುಡುಗರನ್ನಾರಿಸಿ ಅವರಿಗೆ ದೋರಗಾಯಿಯನ್ನಾಯುವ ಕೆಲಸ ವಹಿಸುತ್ತಿದ್ದರು.

ಸೀನುವಿಗೆ ತಾನು ಆ ಹುಡುಗರ ಜೊತೆಯಲ್ಲಿ ಹೋಗಿ ಬಂಡೆಗಳನ್ನು ಹತ್ತಿ ರೆಂಬೆಗಳನ್ನು ಬಾಗಿಸಿಕೊಂಡು ಸೀತಾಫಲವನ್ನು ಕೀಳಬೇಕೆಂಬಾಸೆ. ಆದರೆ ಮೇಷ್ಟರು ಮಾತ್ರ ''ನಿನ್ನ ಕೈಲಿ ಆಗಲ್ಲ, ನಮ್ಮ ಜೊತೆಗೆ ಕೂತಿರು ಬಾ'' ಎಂದು ಕರೆಯುತ್ತಿದ್ದರು. ಈ ಪೇಟೆಯ ಸಣಕಲಾದ ಕೋಮಲವಾದ ಹುಡುಗನಿಗೆ ಈ ಕಷ್ಟದ ಕೆಲಸ ಆಗದು ಎಂದವರ ಅಭಿಪ್ರಾಯವಿರಬಹುದು. ಈ ಬ್ರಾಹ್ಮಣ ಹುಡುಗನಿಗೆ ಇವೆಲ್ಲ ಯಾಕೆ ಎನ್ನಿಸಿರಬಹುದು. ಭರಮಪ್ಪ ಮೇಷ್ಟ್ರರ ಪ್ರಕರಣವಾದ ಮೇಲೆ, ಎಲ್ಲರ ಜೊತೆ ಇವನನ್ನು ಕಳಿಸಿದರೆ ಏನು ಆಕ್ಷೇಪ ಬಂದೀತೊ ಎಂದು ಅಂಜಿಕೆಯೂ ಇರಬಹುದು.

ಆದರಿವನಿಗೆ ಕುಳಿತಿರಲು ಬೇಜಾರು. ಮೇಷ್ಟರುಗಳು ಬೀಡಿ ಹಚ್ಚಿ ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತಿರುವಾಗ ಅವನು ಅಲ್ಲಿಂದ ಮೆಲ್ಲಗೆ ಮೇಲೇಳುತ್ತಾನೆ. ಯಾವುದಾದರೊಂದು ತಂಡವನ್ನು ಸೇರುತ್ತಾನೆ. ಅವನಿಗೆ ಎಲ್ಲಿಲ್ಲದ ಉತ್ಸಾಹ ಮೂಡುತ್ತದೆ. ಯಾರಾದರೂ ಕೀಳಬಹುದಾದ ಕಾಯನ್ನು ಕಂಡು ತೋರಿಸಿದಾಗ ತಾನು ಅದನ್ನು ಕೀಳುತ್ತೇನೆಂದು ಮುಂದಾಗುತ್ತಾನೆ.

''ನಿಂಗಾಗಕ್ಕಿಲ್ಲ ಬಾ'' ಎಂದು ದೊಡ್ಡ ಹುಡುಗನೊಬ್ಬ ಅಡ್ಡಿಪಡಿಸುತ್ತಾನೆ.

''ಯಾಕಾಗೋದಿಲ್ಲ?''

''ನೀನಿಷ್ಟೇ ಇದ್ದೀಯಾ, ಸಿಕ್ಕಲ್ಲ''

''ಯಾಕೆ ಇಷ್ಟೇ ಇದ್ದೀನಿ. ನೋಡು, ನಿನ್ನಷ್ಟೇ ಎತ್ತರ ಇದ್ದೀನಿ'' ಎಂದು ಅವನ ಬದಿಗೆ ನಿಂತು ಹೆಗಲಿಗೆ ತನ್ನ ಹೆಗಲು ಸರಿಸಮಾನವಾಗುವಂತೆ ನಿಲ್ಲಲು ಪ್ರಯತ್ನಿಸುತ್ತಾನೆ.

''ಬ್ಯಾಂಬರು ಉಡುಗರಿಗೆ ಇವೆಲ್ಲ ಆಗಾಕಿಲ್ಲ'' ಎಂದು ಮತ್ತೆ ಆ ದೊಡ್ಡ ಹುಡುಗನೇ ಹೇಳುತ್ತಾನೆ.

''ಅದು ಯಾಕೆ ?''

''ನಾವೆಲ್ಲ ಬಾಡು ಉಂಬೋರು. ಶಕುತಿ ಎಚ್ಚು'' ಅವನು ಎದೆಯುಬ್ಬಿಸಿದಾಗ ಸೀನುವಿಗೆ ಕೀಳರಿಮೆಯಾಗುತ್ತದೆ.

''ಲೇ, ಒಂದೇ ಒಂದು ಕೀಳ್ತೀನಿ, ಕಣೋ'' ಎಂದು ಗೋಗರಿಯುತ್ತಾನೆ.

''ಇಲ್ಲಿ ಬ್ಯಾಡ, ಕಾಯಿ ಮೇಲೈತೆ. ಇನ್ನೆಲ್ಲಾದ್ರೂ ಕೆಳಗಿರೊತಾವ ಕೀಳೀವಂತೆ. ನೀನು ಮೇಲತ್ತಿ ಬಿದ್ದುಗಿದ್ದರೆ ಮೇಷ್ಟರು ನಮ್ಮ ಚಮಡಾ ಸುಲ್ದುಬಿಡ್ತಾರೆ'' ಎಂದು ಆತಂಕ ವ್ಯಕ್ತಪಡಿಸುತ್ತಾನೆ.

ಮೇಲೆ ಹತ್ತಿ ಬೀಳುವ ವಿಷಯ ಬಂದಾಗ ಅವನಿಗೊಂದು ಘಟನೆ ನೆನಪಿಗೆ ಬರುತ್ತದೆ. ಒಂದು ತಿಂಗಳ ಹಿಂದೆ ಭಾನುವಾರದಂದು ಇವನು ತನ್ನ ಗೆಳೆಯರೊಂದಿಗೆ ಅಡ್ಡಾಡಿಕೊಂಡಿದ್ದ. ತನ್ನ ಜೊತೆಗಿದ್ದ ನಾಲ್ಕು ಮಂದಿಯೆಂದರೆ ಗೋವಿಂದ, ಭರಮ, ವೆಂಕಟೇಶ ಮತ್ತು ನಂಜ. ಈ ನಂಜನ ಎದೆಗೆ ಮಾತ್ರ ಬರ್ತಾ ಇದ್ದ ಸೀನು-ಎತ್ತರದಲ್ಲಿ. ಅವನ ತುಟಿಗಳ ಮೇಲುಭಾಗದಲ್ಲಿ ಕಂಡೂ ಕಾಣದ ಹಾಗೆ ಕಪ್ಪಾಗುತ್ತಿದ್ದ ಛಾಯೆಯಿತ್ತು. ಗಾಳಿಪಟ ಮೇಲಕ್ಕೇರುವ ಹಾಗೆ ಅವನು ಸರಸರ ಮರವನ್ನು ಹತ್ತಿಬಿಡುತ್ತಿದ್ದ. ಅವನು ಹಾಗೆ ಹತ್ತುತ್ತಿದ್ದರೆ ಗರಿಗಟ್ಟಿಕೊಂಡು ಹಾರ್ತಾ ಇದ್ದಾನೇನೋ ಎಂದು ಬೆರಗಿನಿಂದ ಸೀನು ನೋಡುತ್ತ ನಿಂತುಬಿಡುತ್ತಿದ್ದ. ಅವತ್ತು ಅವರೆಲ್ಲ ಬರ್ತಾ ಇರೋವಾಗ ದಾರಿಯಲ್ಲಿ ಹುಣಸೆ ಮರವೊಂದು ಕಾಣಿಸಿತು. ಮೊದಲು ಓಡಿ ಅವನು ಸರಸರ ಮೇಲೇರಿದ. ಮಿಕ್ಕವರು ಮೇಲಿನ ಅವನ ಕಡೆ ತಲೆಯೆತ್ತಿ ತಮಗಾಗಿ ಅವನು ಕಾಯಿಕಿತ್ತು ಹಾಕುವುದಕ್ಕಾಗಿ ಕಾದಿದ್ದರು. ಕೆಳಕ್ಕೆ ಬಿದ್ದ ಎಳೆಗಾಯಿಗಳನ್ನು ಓಡಿಹೋಗಿ ಆರಿಸಿ ತಂದು

ಚಡ್ಡಿಗಳಿಗೆ ಒರೆಸಿಕೊಂಡು ಕಚ್ಚಿ ತಿನ್ನುತ್ತಿದ್ದರು. ಇವನಿಗೆ ಬಾಯಲ್ಲಿ ನೀರೂರುತ್ತಿತ್ತು. ಆದರೆ ಅವತ್ತೊಂದು ದಿನ ಹಸಿ ಹುಣಸೇಕಾಯಿ ತಿನುತ್ತಿದುದನ್ನು ಕಂಡ ಅತ್ತೆ ''ಥೂ ಅದನ್ಯಾಕೆ ತಿನ್ತೀಯೋ ಕೆಮ್ಮುಗಿಮ್ಮು ಬಂದೀತು'' ಎಂದುದನ್ನು ನೆನಸಿಕೊಂಡ. ಈಗೇನಾದರೂ ತಿಂದರೆ ಕೆಮ್ಮು ಬಂದಾಗ ಅತ್ತೆಗೆ ಗೊತ್ತಾಗಿಬಿಡಬಹುದೆನಿಸಿತು. ಆದರೆ ಆ ಹುಡುಗರು ಸವಿಯುತ್ತಿದ್ದ ರೀತಿಯನ್ನು ಕಂಡು ತನಗೆ ಏನೋ ಕೊರತೆಯೆನ್ನಿಸಿತು.

ನಂಜ ಮೇಲೆ ಮೇಲಕ್ಕೆ ಹೋಗುತ್ತಲೇ ಇದ್ದಾನೆ. ಕೊಂಬೆಯಿಂದ ಕೊಂಬೆಗೆ ಹಾರುತ್ತ ಹತ್ತುತ್ತಿದ್ದಾನೆ. ಒಂದು ಕ್ಷಣಕ್ಕೆ ತುದಿಗೇರಿಬಿಟ್ಟಿದ್ದ. ಸೀನುವಿಗೆ ಭಯ.

''ಲೇ ನಂಜ. ಕೆಳಗೆ ಇಳಿಯೋ ಸಾಕು''

''ಇರಲೇ ಅರುವಯ್ಯಾ, ಯಾಕೆ ಎದರ್‍ಕೊಂಬ್ತಾ ಇದ್ದೀ'' ಎಂದು ತನ್ನ ಪ್ರತಾಪ ಪ್ರದರ್ಶನ ಮಾಡುತ್ತ ಇನ್ನೊಂದು ಕೊಂಬೆಗೆ ನೆಗೆದ. ಅವನ ಕಾಲು ಆಯ ತಪ್ಪಿತ್ತು. ಕೈನ ಹಿಡಿತ ಮೇಲಿನ ಕೊಂಬೆಯಲ್ಲಿ ಸಡಿಲಾಗಿತ್ತು. ಅಲ್ಲಿಂದ ರಪ್ ಎಂದು ಕೆಳಗೆ ಬಿದ್ದ. ಮಧ್ಯೆಯಿದ್ದ ಮರದ ಕೊಂಬೆಗಳಿಗೆ ಸಿಕ್ಕಿ ತರಚಿಕೊಂಡಿದ್ದ. ಅವನು ಬಿದ್ದದ್ದು ಹುಣಿಸೆಕಾಯಿ ಜಜ್ಜುತ್ತಿದ್ದ ಬಂಡೆಯ ಮೇಲೆ. ತಲೆ ಬಂಡೆಗೆ ಬಿದ್ದು ರಕ್ತ ಸುರಿಯಿತು. ಜಂಘಾಬಲ ಉಡುಗಿಹೋದ ಈ ಹುಡುಗರು ''ಅಯ್ಯಯ್ಯಪ್ಪೋ'' ಎಂದು ಕೂಗಿ ಹತ್ತಿರವಿದ್ದ ಹೊಲದ ಕಡೆ ಓಡಿದ್ದರು. ಅಲ್ಲಿ ಕಪಿಲೆ ಹೊಡೆಯುತ್ತಿದ್ದ ಕೆಲವರು ದೊಡ್ಡವರಿಗೆ ನಂಜ ಬಿದ್ದ ಸುದ್ದಿ ಹೇಳಿದ್ದರು.

ಅವರು ಓಡಿ ಬಂದರು. ನಂಜ ಬಂಡೆಯ ಮೇಲೆ ಜ್ಞಾನತಪ್ಪಿ ಬಿದ್ದಿದ್ದ.

''ಯಾರ ಮನೆಯೋನಲೇ ಈ ಉಡುಗ ?'' ಎಂದು ಪ್ರಶ್ನಿಸಿದರು.

''ಎಂಟಣ್ಣನ ಮನೆಯೋನು''

''ಯಾವ ಎಂಟಣ್ಣ?''

''ಅದೇ ಕೋಮಟಿ ಶೀನಪ್ಪನ ಮನೆ ತಾವಿಲ್ಲವಾ ?''

''ಓ'' ಎಂದು ಹುಡುಗನನ್ನು ಅನಾಮತ್ತಾಗಿ ಎತ್ತಿಕೊಂಡು ಅವರು ಹೋದರು. ಹುಡುಗರು ಹಿಂಬಾಲಿಸಿದರು. ನಂಜನ ಮನೆಗೆ ಹೋದಾಗ, ತನ್ನ ಮಗನ ಸ್ಥಿತಿ ನೋಡಿ ಅವರಮ್ಮ ಬಾಯಿ ಬಾಯಿ ಬಡಿದುಕೊಂಡಳು. ತಾವು ಮನೆಗೆ ಬಂದಿದ್ದರು.

ಮೂರು ದಿನವಾದ ಮೇಲೆ ನಂಜ ಸತ್ತು ಹೋಗಿದ್ದನೆಂಬ ವಾರ್ತೆ ಸೀನುವಿಗೆ ತಲುಪಿತ್ತು. ಅವನಿಗೆ ತಕ್ಷಣ ಅಜ್ಜಿ ಸತ್ತದ್ದು ನೆನಪಾಯಿತು. ಅಜ್ಜಿ ಹೋದ ಕಡೆಯೇ ಇವನೂ ಹೋಗಿರಬೇಕೆನಿಸಿತು. ಅದಾದ ಸ್ವಲ್ಪ ದಿವಸದ ಮೇಲೆ ಸ್ನೇಹಿತರಿಬ್ಬರ ಜೊತೆಯಲ್ಲಿ ಕೆರೆಯ ಪಕ್ಕದಲ್ಲಿ ಹೋಗುತ್ತಿದ್ದಾಗ ಅದರಲ್ಲೊಬ್ಬ ಹೇಳಿದ್ದ: ''ಅಲ್ನೋಡು, ಒಂದು ದಿಬ್ಬ ಕಾಣೆಸಾಕಿಲ್ವಾ ?''

''ಹ್ಞೂ''

''ಅದರಾಚೇನೇ ಮತ್ತೆ ಮತ್ತೆ....'' ಎಂದು ಏನೋ ಹೇಳಲು ಹೊರಟು ಮಧ್ಯೆ ಅನುಮಾನಿಸಿದ.

''ಏನೋ ಮತ್ತೆ ಮತ್ತೆ'' ಎಂದು ಸೀನು ಅವಸರಿಸಿದ.

''ಮತ್ತೆ ಅಲ್ಲೇ ನಂಜನ್ನ ಊತಿರೋದು ?''

''ಯಾಕೆ ?''

''ಅವನು ಸತ್ತುಹೋಗಲಿಲ್ವ ?''

''ಲೋ ಹೋಗೋ, ಸತ್ತೋರನ್ನಸುಡ್ತಾರೆ ಕಣೋ. ನಮ್ಮಮನೇಲಿ ಅಜ್ಜಿಸತ್ತಾಗ ಸುಟ್ಟರು ಗೊತ್ತಾ?''

''ಬ್ಯಾಂಬರು ಸುಡ್ತಾರಂತೆ ಕಣಲೇ. ನಮ್ಮಜಾತೀಲಿ ಮಣ್ಣುಮಾಡ್ತಾರೆ'' ಎಂದು ವಿವರಿಸಿದ. ಇದು ಸೀನುವಿಗೆ ಹೊಸ ವಿಷಯ. ಹಾಗಾದರೆ ಅಜ್ಜಿ ನಂಜ ಬೇರೆ ಬೇರೆ ಕಡೆ ಹೋಗಿರಲೂ ಸಾಧ್ಯ ಎನಿಸಿತ್ತು.

''ಹೂತರೆ ಏನಾಗುತ್ತೆ''

''ಮಣ್ಣಾಗ್ಗಿ ಬಿಡುತ್ತೆ ಮೂಳೆ ಮಾತ್ರ ಉಳ್ಕೊಳತ್ತೆ'' ಎಂದು ಆ ಇನ್ನೊಬ್ಬಹುಡುಗ ವಿವರಿಸಿದ್ದ. ನಿಜ ತಾನೂ ಎಷ್ಟೋ ಸಲ ಹೋಗುವಾಗ ಮೂಳೆಗಳನ್ನ ಕಾಡು ದಾರಿಯಲ್ಲಿ ನೋಡಿದ್ದ.

ಈ ಘಟನೆ ನೆನಪಿಗೆ ಬಂದಾಗ ಸೀನುವಿನ ದೇಹ ಕಂಪಿಸಿತು. ಮೇಲಿಂದ ಬಿದ್ದು ತಾನೂ ಸತ್ತರೆ ಎಂಬ ಭಯವಾಯಿತು. ತಾನು ಸತ್ತರೆ ಎಲ್ಲಿಗೆ ಹೋಗ್ತೀನಿ ಎಂಬ ಸಂಶಯವುಂಟಾಯಿತು. ತಾನು ಬ್ರಾಹ್ಮಣರವನು ತಾನೇ ? ಅಂದರೆ ತನ್ನನ್ನೂ ಸುಡಬಹುದು. ಸುಡುವಾಗ ಮೈಗೆ ಉರಿ ತಗಲಿದರೆ ಹೇಗಾಗಬಹುದು ಎಂಬ ಯೋಚನೆ ಬಂತು. ನಡುಕವುಂಟಾಗಿ ದೂರ ನಿಂತ.

ಆದರೆ ಮಿಕ್ಕವರು ಉತ್ಸಾಹದಿಂದ ಪುಟಿಯುತ್ತಿರುತ್ತಾರೆ. ಎಲ್ಲಿದ್ದರೂ ಹೋಗಿ ಸರಸರ ದೋರೆಗಾಯಿಗಳನ್ನು ಕಿತ್ತುತರುತ್ತಾರೆ. ಎಂತಹ ಕಾಯಿಗಳನ್ನು ಕೀಳಬೇಕೆಂದೂ ಅವರಿಗೆ ಗೊತ್ತು. ಸೀನುವಿಗೆ ಮಾತ್ರ ಈ ಮರ್ಮ ಅರ್ಥವಾಗುತ್ತಿರಲಿಲ್ಲ. ಇನ್ನೊಂದೆರಡು ದಿನಕ್ಕೆ ಹಣ್ಣಾಗುತ್ತದೆ ಎಂದು ಕಾಯನ್ನು ಕಂಡ ತಕ್ಷಣ ಹೇಗೆ ಗೊತ್ತಾಗುತ್ತದೆ ಎಂಬುದು ಅವನಲ್ಲಿ ವಿಸ್ಮಯವನ್ನೇ ಉಂಟುಮಾಡುತ್ತದೆ. ತನಗೇಕೆ ಅದು ತಿಳಿಯುವುದಿಲ್ಲಎಂಬುದು ಅವನ ಯೋಚನೆಗೆ ಕಾರಣವಾಗುತ್ತದೆ. ಒಟ್ಟಿಗೆ ಗುಡ್ಡೆ ಹಾಕಿದ ಕಾಯಿಗಳನ್ನು ಚೀಲದಲ್ಲಿ ತುಂಬಿ ಅವನ್ನುಮರಳಿ ಸ್ಕೂಲಿಗೆ ತರುವಾಗ ಬಲಿಷ್ಠರಾದ ಹುಡುಗರು ಸ್ವಲ್ಪಸ್ವಲ್ಪ ಹೊತ್ತು ಸ್ಕೂಲಿನವರೆಗೆ ತರುತ್ತಾರೆ. ಕಾಯಿ ತುಂಬಿದ ಚೀಲ ಹೊರುವುದು ಮೋಜು ಎನಿಸಿದಾಗ ಹಿಂದೊಮ್ಮೆ ತಾನೂ ಚೀಲ ಹೊರಲು ಮುಂದಾಗಿದ್ದ. ಆಗ ಮೇಷ್ಟರು ''ಸುಮ್ನಿರಪ್ಪ ಸೀನಣ್ಣ ನಿಮ್ಮಮಾವ ಕಂಡರೆ ಆಯ್ತು'' ಎಂದಿದ್ದರು. ಆಗ ಮಾವನ ಮೇಲೆ ಅವನಿಗೆ

ಕೋಪ ಬಂದಿತ್ತು. ಜೊತೆಗೆ ''ಸುಮ್ಮಿರಪ್ಪ ಅರುವಯ್ಯ. ನಿನ್ನೈಲಿ ಈ ಕೆಲಸ ಆದಾತಾ ?'' ಎಂಬ ಮಾತನ್ನೂ ಕೇಳಿದ್ದ. ಈ ಹುಡುಗರಿಗಿರುವ ಏನೋ ವಿಶೇಷ ತನಗಿಲ್ಲ ಎಂಬುದು ಆಗ ಅವನಲ್ಲಿ ಅವರಿಸುತ್ತಿತ್ತು.

ಸೋಮವಾರದ ಹೊತ್ತಿಗೆ ಅವುಗಳಲ್ಲಿ ಕೆಲವು ಹಣ್ಣಾಗಿರುತ್ತದೆ. ಕ್ಲಾಸು ಮುಗಿದ ಮೇಲೆ ಮನೆಗೆ ಹೋಗುವಾಗ ಕೆಂಚಪ್ಪ ಮೇಷ್ಟರು ಇಬ್ಬರು ಹುಡುಗರ ಸಹಾಯದಿಂದ ಪ್ರತಿಯೊಬ್ಬರಿಗೂ ಹಣ್ಣು ಹಂಚಿಸುತ್ತಾರೆ. ತಿಂದುಕೊಂಡೇ ಊರ ಕಡೆ ಹುಡುಗರು ಕಾಲು ಹಾಕುತ್ತಾರೆ. ಪ್ರಕೃತಿ ಪಾಠದ ಫಲ ಇದು.

೭

ಪೆಮ್ಮನಹಳ್ಳಿಯಲ್ಲಿ ಬೇಸಗೆಯ ಕಾಲವೆಂದರೆ ಬಿಸಿಲೋ ಬಿಸಿಲು. ''ಸೂರ್ಯ ಪರಮಾತ್ಮಂಗೆ ನಮ್ಮೂರ ಮೇಲೆ ಭಾಳ ಇಸ್ವಾಸ ಸ್ವಾಮಿ'' ಎಂದು ಯಾರೋ ಹೇಳಿದ್ದನ್ನು ಕೇಳಿದ್ದ ಸೀನು. ಒಂದೇ ಸಮನೆ ಬೆವರು ಮೈಯಿಂದ ಇಳಿಯುತ್ತಿರುತ್ತದೆ. ಅದಕ್ಕೇ ಜನ ತುಂಡು ಬಟ್ಟೆ ಬಿಟ್ಟರೆ ಮೈಮೇಲೆ ಹೆಚ್ಚಿನದನ್ನು ಹಾಕಿರುವುದಿಲ್ಲ.

ಪರೀಕ್ಷೆಗಳೆಲ್ಲ ಮುಗಿದು ಹೋದ ಮೇಲೆ ಕೆಲಸವೇ ಇಲ್ಲವಾಗಿತ್ತು ಹುಡುಗರಿಗೆ. ಈವೂರಲ್ಲಿ ಪರೀಕ್ಷೆ ಎಂದರೆ ಹೇಗೆ? ಬೆಂಗಳೂರಲ್ಲಾಗಿದ್ದರೆ, ಗೌರ್ಮೆಂಟ್ ಸ್ಕೂಲಾಗಿದ್ದರೂ ತಮಗೆ, ಕೊನೆಯ ಪಕ್ಷ ದೊಡ್ಡ ಪರೀಕ್ಷೆಗಾದರೂ, ಪೇಪರನ್ನು ಪ್ರಿಂಟ್ ಮಾಡಿಸಿ ಕೊಡುತ್ತಿದ್ದರು. ಆದರೆ ಇಲ್ಲಿ ನೋಡಿದರೆ ಯಾರಿಗೂ ಪ್ರಿಂಟು ಮಾಡಿಸುತ್ತಿರಲಿಲ್ಲ. ಮೊದಲು ಒಂದೆರಡು ದಿನ, ಬೆಳಿಗ್ಗೆ ಮಧ್ಯಾಹ್ನ ಹುಡುಗರನ್ನೆಲ್ಲ ಸ್ಕೂಲಿನಿಂದ ಹೊರಗೆ ಕಳಿಸಿ ಮೇಷ್ಟ್ರು ಮಾತ್ರ ಇರುತ್ತಿದ್ದರು. ತಾವೆಲ್ಲ ಹತ್ತಿರದ ಮರದ ನೆರಳಲ್ಲಿ ಕಾಯುತ್ತಿರುವಾಗ ಒಬ್ಬೊಬ್ಬರನ್ನೇ ಕರೆದು ಪ್ರಶ್ನೆ ಕೇಳುತ್ತಿದ್ದರು. ಈ ಬಾಯಿ ಪರೀಕ್ಷೆ ಮುಗಿದ ಮೇಲೆ ನಾಲ್ಕು ದಿನ ಬರೆಯೋ ಪರೀಕ್ಷೆ. ತಮ್ಮ ಕ್ಲಾಸಿನೋರನ್ನೆಲ್ಲ ದೂರ ದೂರ ಕೂಡಿಸಿ ಬೋರ್ಡಿನ ಮೇಲೆ ಪ್ರಶ್ನೆಗಳನ್ನು ಬರೆಯುತ್ತಿದ್ದರು. ಅದಕ್ಕೆ ತಾವು ಪೇಪರ್ನಲ್ಲಿ ಪೆನ್ಸಿಲ್ಲಿನಿಂದ ಉತ್ತರ ಬರೆಯಬೇಕು.

ಪರೀಕ್ಷೆಗೆ ಪೇಪರನ್ನು ಪ್ರಿಂಟು ಮಾಡಿಸಿಕೊಡ್ತಾರೇಂತ ಸೀನು ಹೇಳಿದಾಗ ಅವನ ಗೆಳೆಯರು ತಮ್ಮ ಬಟ್ಟಗಣ್ಣುಗಳನ್ನು ಅಗಲವಾಗಿಸಿದ್ದರು. ''ಅದು ಎಂಗೆ ಫ್ರೆಂಟ್ ಮಾಡಿಸ್ತಾರೆ?''

''ಫ್ರೆಂಟ್ ಅಲ್ಲವೋ, ಪ್ರಿಂಟ್'' ಎಂದು ಸೀನು ತಿದ್ದಿ ಹೇಳಿದ್ದ ''ಪ್ರೆಸ್ಸುಗಳು ಅಂತ ಮೆಷೀನುಗಳು ಇರುತ್ತವೆ. ಅದರಲ್ಲಿ ಪ್ರಿಂಟ್ ಮಾಡಾರೆ.''

''ದೊಡ್ಡದಾಗಿರ್ತಾವ ಅವು ?''

ಸೀನು ನಿಜವಾಗಿ ಬೆಂಗಳೂರಲ್ಲಿ ಯಾವ ಪ್ರೆಸ್ಸನ್ನೂ ನೋಡಿರಲಿಲ್ಲ. ಕೆಲವೇಳೆ

'ಪ್ರಿಂಟಿಂಗ್ ಪ್ರೆಸ್' ಎಂದು ಬೋರ್ಡ್ ತೂಗು ಹಾಕಿದ್ದ ಅಂಗಡಿಗಳನ್ನು ಕಂಡಿದ್ದ. ಒಳಗೇನಿರುತ್ತವೋ ಎಂಬ ಕುತೂಹಲ ಅವನಿಗಾಗಿತ್ತು. ಕೇವಲ ಶಬ್ದ ಮಾತ್ರ ಕೇಳಿಸುತ್ತಿತ್ತು. ಅವನು ಒಂದೋ ಎರಡೋ ಸಲ ಅಂತಹ ಅಂಗಡಿಗಳಲ್ಲಿ ಇಣುಕು ಹಾಕಬೇಕೆಂದು ಹೊಂಚು ಹಾಕಿದ್ದ.

''ಏನು ಬೇಕಪ್ಪಾ, ಇಲ್ಲಿ ನಿಂತ್ಕೋಬಾರ್ದು, ಹೋಗು''ಎಂದು ಅಲ್ಲಿನವರು ಓಡಿಸಿದ್ದರು. ಆದರೂ ಒಮ್ಮೆ ಅವನಿಗೆ ದೂರದಿಂದ ಯಾವುದೋ ಯಂತ್ರ ಕಾಣಿಸಿತ್ತು. ಅದನ್ನೇ ಪ್ರೆಸ್ ಎಂದು ಅವನು ಅಂದುಕೊಂಡಿದ್ದ. ಆದರೆ ಆ ನೆನಪೂ ಈಗ ಮಸುಕು ಮಸುಕು. ಆದರೂ ತಾನು ಪ್ರೆಸ್ಸು ನೋಡಿಲ್ಲವೆಂದು ಹೇಳಲಾರ. ಆದ್ದರಿಂದ ''ದೊಡ್ಡದಗಿರ್ತಾವಾ ಅವು ?'' ಎಂದು ಪ್ರಶ್ನಿಸಿದಾಗ ''ಊ್ಹೂ'' ಎಂದು ಉತ್ತರಿಸಿದ್ದ.

''ಎಂಗೆ ಪ್ರೆಂಟ್ ಮಾಡ್ತಾರೆ ?''

''ಹ್ಯಾಗೆ ಅಂದರೆ, ಪೇಪರ್‌ನ ಮೇಷಿನ್‌ನಲ್ಲಿಟ್ಟರೆ ಆದರಲ್ಲಿ ಅಕ್ಷರಗಳು ಪ್ರಿಂಟ್ ಆಗುತ್ತವೆ.''

''ಅಕ್ಸರಗಳು ಎಲ್ಲಿರ್ತವೆ ?''

''ಎಲ್ಲ ಮಷೀನ್‌ನಲ್ಲೇ ಇರ್ತವೆ ಕಣೋ. ಸ್ವಿಚ್ ಹಾಕಿಬಿಟ್ರೆ ಎಲ್ಲ ಪ್ರಿಂಟ್ ಆಗಿಬಿಡುತ್ತವೆ'' ಎಂದು ತೊದಲು ತೊದಲಾಗಿ ಹೇಳಿದ್ದ.

ಪರೀಕ್ಷೆ ಎಂದಾಗ ಕೇಳಬೇಕೆ ? ಊರಿಗೆ ಮುಂಚೆ ತಟ್ಟೆ ಹಾಕಿಕೊಂಡು ಕುಳಿತುಬಿಡುತ್ತಿದ್ದ. ಅತ್ತೆಗೆ ಪೀಕಲಾಟಕ್ಕೆ ಬರುತ್ತಿತ್ತು. ಅಡಿಗೆ ಆಗ ಬೇಡವೇ ? ತಾನೊಬ್ಬಳೇ ಬೇರೆ. ''ನನಗೇನು ನಾಲ್ಕು ಕೈಯಿವೆಯೇನಪ್ಪ ಸ್ವಲ್ಪ ನಿಧಾನಿಸಬೇಕು ? ಎನ್ನುತ್ತಿದ್ದರು. ''ನಮಗೆ ಪರೀಕ್ಷೆ ಕಣತ್ತೆ, ನಿನಗೇನು ಗೊತ್ತು ?'' ಎಂದು ಮುನಿಸಿಕೊಂಡರೆ ಅವರು ''ನಂಗೇನಪ್ಪ ಗೊತ್ತು, ನಾನು ಸ್ಕೂಲಿಗೆ ಹೋಗುತ್ತಿದ್ದಾಗ ಪರೀಕ್ಷೆಗಳೆ ಇರಲಿಲ್ಲ'' ಎಂದು ನಗುತ್ತಿದ್ದರು. ಇವನ ತರಾತುರಿ ಕಂಡು ಮಾವ ''ಇಷ್ಟು ಬೇಗ ಹೋಗಿ ಬಿಸಿಲು ಬಾಳೆಹಣ್ಣು ತಿನ್ನಬೇಕೇನಯ್ಯ ?'' ಎಂದು ಕೇಳುತ್ತಿದ್ದರು. ಅತ್ತೆಯ ಹತ್ತಿರ ಸಿಡುಕಿದಂತೆ ಮಾವನ ಮೇಲೆ ಸಿಡುಕುವುದಕ್ಕೆ ಆಗುತ್ತಿರಲಿಲ್ಲ.

ಸೀನುವಿಗೆ ಪರೀಕ್ಷೆ ಕಷ್ಟದ್ದು ಎಂದೇನೂ ಅನ್ನಿಸಲಿಲ್ಲ. ಬಾಯಿ ಪರೀಕ್ಷೆಯಲ್ಲಿ ಕೇಳಿದ್ದಕ್ಕೆಲ್ಲ ಉತ್ತರಿಸಿದ್ದ. ಕೆಲವು ವೇಳೆ ಸ್ವಲ್ಪ ತಡವರಿಸಿರಬಹುದು ; ಆದರೆ ಮೇಷ್ಟರು ಸೂಚನೆಯಿತ್ತಾಗ ಉತ್ತರ ಹೊಳೆಯುತ್ತಿತ್ತು. ಬರೆಯುವ ಪರೀಕ್ಷೆಯೂ ಅಷ್ಟೆ ಎಲ್ಲಕ್ಕೂ ಸರಿಯಾದ ಉತ್ತರ ಗೊತ್ತಿತ್ತು ಎನಿಸಿತ್ತು ; ಸರಿಯಾದ ಉತ್ತರ ಬರೆದಿದ್ದೇನೆ ಎಂದುಕೊಳ್ಳುತ್ತಿದ್ದ. ಎಲ್ಲರಿಗಿಂತ ಮುಂಚೆಯೇ ತನ್ನ ಉತ್ತರಗಳನ್ನು ಪೂರೈಸಿಬಿಡುತ್ತಿದ್ದ. ಅವನು ಬೇಗ ಮುಗಿಸಿದರೆ ಮೇಷ್ಟರು, ''ಇನ್ನೊಂದು ಸಲ ನೋಡು'' ಎನ್ನುತ್ತಿದ್ದವರು. ಆದರೆ ಹಾಗೆ ನೋಡಲು ಅವನಿಗೆ ಬೇಸರ. ಒಂದೈದು ನಿಮಿಷ ಹಾಗೆ ಹೀಗೆ ನೋಡಿ

ಆಯಿತೆಂದು ಹೇಳುತ್ತಿದ್ದ. ಮೇಷ್ಟರು ಪೇಪರು ತೆಗೆದುಕೊಂಡಾಗ ಇವನು ಹೊರಗೆ ಬರುತ್ತಿದ್ದ. ಆದರೇನು, ಬೇಜಾರು. ತನ್ನ ಗೆಳೆಯರಿಗಾಗಿ ಹೊರಗಡೆ ಮರದ ಕೆಳಗೆ ಕಾದಿರಬೇಕಾಗಿತ್ತು. ಇಷ್ಟು ಬೇಗ ಮನಗೆ ಹೋಗಿ ಮಾಡುವುದಾದರೂ ಏನು ?

ಪರೀಕ್ಷೆಗಳೆಲ್ಲ ಮುಗಿದ ಮೇಲೆಯೂ ಸ್ವಲ್ಪ ದಿನ ಸ್ಕೂಲಿಗೆ ಹೋಗಬೇಕು. ಆದರೆ ಅಲ್ಲಿ ಹೋದರೆ ಹಿಂದಾಗಲೇ ಮಾಡಿದ್ದ ಪಾಠಗಳನ್ನೇ ಓದಿಸುತ್ತಿದ್ದರು. ಕೆಲವು ವೇಳೆ ಯಾವುದಾದರೂ ಪಾಠವನ್ನು ತೋರಿಸಿ ''ಬರೆಯಿರಿ'' ಎನ್ನುತ್ತಿದ್ದರು. ಇದು ಯಾಕೆ ಹೀಗೆ ಎಂದು ಅವನಿಗೆ ಇದರಿಂದ ಬೇಸರವಾಗಿತ್ತು. ಆದರೆ ವಿಧಿಯಿರಲಿಲ್ಲ. ಸುಮ್ಮನೆ ಹೇಳಿದ ಹಾಗೆ ಕೇಳಬೇಕಾಗಿತ್ತು.

ಹೀಗೇ ಆದಮೇಲೆ ನಾಳೆಯಿಂದ ಬೇಸಿಗೆ ರಜ ಎಂದು ಹೇಳಿದ ದಿವಸ ಪಾಸು-ಫೇಲು ಹೇಳಿದರು. ಸೀನು ಪಾಸಾಗಿದ್ದ. ಸ್ಕೂಲು ಬಿಟ್ಟ ತಕ್ಷಣ ಮನೆಗೆ ಓಡಿಬಂದು ಅತ್ತೆಯನ್ನು ಹಡುಕಿಕೊಂಡು ಅಡಿಗೆ ಮನೆಯ ಮುಂದೆ ಏದುಸುರು ಬಿಡುತ್ತ ನಿಂತ. ಇವನ ಆತುರ ಕಂಡು, ಏನಾಯಿತೋ ಎಂದುಕೊಂಡು ಅವರು ''ಏನು ?'' ಎಂದರು ''ಅತ್ತೆ, ಅತ್ತೆ, ನಾನು ಪಾಸಂತೆ'' ಎಂದ ಆತುರವಾಗಿ. ''ಅಷ್ಟೇನಾ ! ನೀನು ಓಡಿ ಬಂದ ಥರ ನೋಡಿ ಏನಾಯ್ತೋ ಅಂದ್ಕೊಂಡೆ'' ಎಂದರು ಅವರು ಸಲೀಸಾಗಿ. ಸೀನುವಿಗೆ ಪಿಚ್ಚೆನಿಸಿತು. ತಾನು ಪಾಸಾದರೂ ಈ ಅತ್ತೆಗೆ ಏನೂ ಆಗಲಿಲ್ಲವಲ್ಲ ಎಂದು ಅಸಮಾಧಾನವಾಯಿತು.

ಸೀನುವಿಗೆ ಸಂತೋಷವಾಗಿತ್ತು. ತನ್ನ ನೋಟು ಪುಸ್ತಕಗಳನ್ನೆಲ್ಲ ಗೂಡಿನಿಂದ ಹೊರಕ್ಕೆ ತೆಗೆದ. ಪ್ರತಿಯೊಂದರ ಮೇಲೆಯೂ ತನ್ನ ಹೆಸರಿನ ಕೆಳಗೆ ಬರೆದಿದ್ದ ''ಐದನೆಯ ತರಗತಿ'' ಎಂಬುದನ್ನು ಹೊಡೆದು ಹಾಕಿ ''ಆರನೆಯ ತರಗತಿ'' ಎಂದು ಬರೆದ. ಸಾಯಂಕಾಲ ಮಾವನ ಮುಂದೆಯೂ ತನ್ನ ಪಾಸಿನ ವಿಷಯ ಹೇಳಿದ. ''ಬರೀ ಪಾಸಾದರೆ ಸಾಲದು ಕಣಯ್ಯ. ಕ್ಲಾಸಿಗೇ ಫಸ್ಟ್ ಬರಬೇಕು'' ಎಂದರು ''ಹ್ಞೂ'' ಎಂದ. ಅವನು ಕ್ಲಾಸಿಗೇ ಫಸ್ಟಿರಬೇಕೆಂದು ಕಾಶೀಪತಯ್ಯನವರಿಗೂ ಅನ್ನಿಸಿತ್ತು.

''ನಂಗೆ ಆರನೇ ಕ್ಲಾಸಿನ ಪುಸ್ತಕಗಳನ್ನು ತಕ್ಕೊಡಬೇಕು.''

''ಆಗಲಯ್ಯಾ. ಇನ್ನೂ ಏನವಸರ ?''

''ಮತ್ತೆ ಬೇರೆಯೋರಿಗಿಂತ ಮುಂಚೆ ನಾನು ಓದಿಕೊಂತೀನಿ. ಅದಕ್ಕೇ ಬೇಗ ಕೊಡಿಸಿ.''

''ಇನ್ನೂ ಈಗ ಪರೀಕ್ಷೆ ಆಗಿದೆ. ರಜ ಇದೆ. ಮುಂದಿನ ವರ್ಷದ ಪುಸ್ತಕಗಳು ಇನ್ನೂ ಪ್ರಿಂಟಾಗಿದೆಯೋ ಇಲ್ಲವೋ ಇಲ್ಲವೋ. ಆಗಲಿ, ಸ್ಕೂಲು ಬಾಗಿಲು ತೆಗೀಲಿ'' ಎಂದಿದ್ದರು. ಇವರಿಗೆಲ್ಲ ತನ್ನ ಓದು ಅಂದರೆ ತಾತ್ಸಾರ ಅಂದುಕೊಂಡಿದ್ದ.

ಮುಂದಿನ ದಿವಸಗಳು ಬರಿಯ ಬಿಡುವು. ಆದರೆ ಸೀನುವಿಗೆ ಹೊಸ ಕೆಲಸವೊಂದು ಬಂದಿತ್ತು. ಮುತ್ತುಗದೆಲೆಯನ್ನು ಗಿಡದಿಂದ ಕಿತ್ತು ತರುವುದು. ಅತ್ತೆ-

ಮಾವ ಇಬ್ಬರೂ ತಟ್ಟೆಯಲ್ಲಿ ಊಟ ಮಾಡುತ್ತಿರಲಿಲ್ಲ. ತನಗೇನೋ ಒಂದು ಅಲ್ಯೂಮಿನಿಯಂ ತಟ್ಟೆಯಿತ್ತು. ಅದರಲ್ಲಿ ಊಟ ಮಾಡಿ ತಾನೇ ತೊಳೆದು ಗೋಡೆಗೆ ಒರಗಿಸಿಬಿಡುತ್ತಿದ್ದ. ಆದರೆ ಅವರು ಎಲೆಯನ್ನೇ ಉಪಯೋಗಿಸುತ್ತಿದ್ದರು. ಮುತ್ತುಗದೆಲೆ ತಯಾರಿಸುತ್ತಿದ್ದರು. ಬೆಂಗಳೂರಿನಲ್ಲಿಯೂ ಹಬ್ಬದ ದಿವಸ ಊಟದೆಲೆ ಕೊಂಡು ತರಲು ಅಂಗಡಿಗೆ ಕಳಿಸುತ್ತಿದ್ದರು. ಮಿಕ್ಕ ವೇಳೆಯಲ್ಲಿ ಅಲ್ಲಿ ಎಲ್ಲರಿಗೂ ತಟ್ಟೆಯೇ. ಆದರೆ ಆಗ ಆ ಎಲೆಗಳನ್ನು ಹೇಗೆ ಮಾಡುತ್ತಾರೆ ಎಂಬ ಕಲ್ಪನೆ ಸೀನುವಿಗಿರಲಿಲ್ಲ.

ಬೇಸಗೆಯ ಕಾಲದಲ್ಲಿ ಮುತ್ತುಗದ ಮರಗಳ ತುಂಬ ಎಲೆಗಳಿರುತ್ತಿದ್ದವು. ಮರಗಳಲ್ಲಿ ಹೂವು ಬಿಟ್ಟರಂತೂ ಎಷ್ಟು ದೂರಕ್ಕಾದರೂ ಕಾಣಿಸುತ್ತಿತ್ತು. ಅಷ್ಟು ಕೆಂಪು, ಅಷ್ಟು ದೊಡ್ಡ ಹೂವುಗಳು ಅವು. ಎಲೆ ಸಿಕ್ಕುವ ಕಾಲದಲ್ಲಿ ಹಸಿರು ಎಲೆಗಳನ್ನೇ ಹಚ್ಚಿ ಬಳಸುತ್ತಿದ್ದರು. ಮಾವ ಪ್ರತಿನಿತ್ಯ ಮೂರು ನಾಲ್ಕು ಎಲೆಗಳನ್ನು ಹಚ್ಚುತ್ತಿದ್ದರು. ಮಿಕ್ಕ ಎಲೆಗಳನ್ನು ಗೋಡೆ ದಾರಕ್ಕೆ ಪೋಣಿಸಿಡುತ್ತಿದ್ದರು. ತೊಟ್ಟಿನ ಹತ್ತಿರ ದಬ್ಬಳದಿಂದ ತೂತು ಮಾಡಿ ದಾರಕ್ಕೆ ಹಾಕಿ ಒಣಗಿಸಿಡುತ್ತಿದ್ದರು. ಅವು ಪೂರ್ತಿ ಒಣಗಿಯಾದ ಮೇಲೆ ಸ್ವಲ್ಪ ಸ್ವಲ್ಪವನ್ನೇ ತೆಗೆದು ನೀರಲ್ಲಿ ನೆನೆಸಿ, ಹಂಚಿಕಡ್ಡಿ ಸೀಳಿ ಅದರಿಂದ ಹಚ್ಚುತ್ತಿದ್ದರು. ಬೇಸಿಗೆಯಲ್ಲಿ ಸಂಗ್ರಹಿಸಿ ಒಣಗಿಸಿದ ಎಲೆಗಳನ್ನು ಮಿಕ್ಕಾದಾಗ ಪ್ರತಿದಿನ ಮಧ್ಯಾಹ್ನ ಅತ್ತೆ ನೆನೆಸಿ ನಾಲ್ಕೈದು ಎಲೆಗಳನ್ನು ತಯಾರಿಸಿ ಶೇಖರಿಸುತ್ತಿದ್ದರು.

ಅತ್ತೆ ಬೇರೆ ಊಟದೆಲೆಯನ್ನು ಬಳಸುತ್ತಿರಲಿಲ್ಲ. ಪ್ರತಿನಿತ್ಯ ಎರಡು ಹೊತ್ತು ಮಾವ ಊಟಮಾಡಿ ಎದ್ದಮೇಲೆಯೇ ಅತ್ತೆಯ ಊಟ. ಮಾವ ಮಾಡಿದ ಎಲೆಯಲ್ಲೇ ಅವರೂ ಊಟಮಾಡಿ ಕೊನೆಗೆ ತಾವೇ ಎತ್ತಿ ಹಾಕುತ್ತಿದ್ದರು. ಹೀಗಾಗಿ ಅವರ ಮನೆಗೆ ನಿತ್ಯ ಬೇಕಾಗುತ್ತಿದ್ದುದು ಎರಡು ಎಲೆಗಳು ಮಾತ್ರ ; ಬೆಳಿಗ್ಗೆ ಒಂದು, ರಾತ್ರಿ ಒಂದು.

ಸೀನುವಿಗೆ ಮುತ್ತುಗದೆಲೆಯನ್ನು ತರುವುದು ಮೋಜಿನ ಕೆಲಸವೆನಿಸುತ್ತಿತ್ತು. ತಾನಲ್ಲದೆ ಇನ್ನಿಬ್ಬರು ಬ್ರಾಹ್ಮಣ ಹುಡುಗರು ಜೊತೆಗೆ ಬರುತ್ತಿದ್ದರು, ಜೋಯಿಸರ ಮನೆಯಲ್ಲಿ ಓದಿಕೊಂಡಿದ್ದ ಹುಡುಗರು ತಮ್ಮ ತಮ್ಮ ಊರಿಗೆ ಹೊರಟು ಹೋಗಿದ್ದರು. ಪಾವಗಡದಲ್ಲಿ ಹೈಸ್ಕೂಲು ಓದುತ್ತ ಆಗಾಗ್ಗೆ ಊರಿಗೆ ಬರುತ್ತಿದ್ದ ಸುಬ್ಬ ಬೇಸಿಗೆ ರಜದಲ್ಲಿ ಇಲ್ಲೇ ಇರುತ್ತಿದ್ದ. ಅವನೂ, ಶ್ಯಾನುಭೋಗರ ಚಿಕ್ಕಮಗ ಶ್ಯಾಮ ಇವನೊಡನೆ ಮುತ್ತುಗದೆಲೆಯ ಸಂಗ್ರಹಕ್ಕಾಗಿ ಬರುತ್ತಿದ್ದರು.

ಬೆಳಿಗ್ಗೆ ಅತ್ತೆ ಏನಾದರೂ ತಿಂಡಿ ಮಾಡಿಕೊಡುತ್ತಿದ್ದರು. ಅವಲಕ್ಕಿಯೋ ಉಪ್ಪಿಟ್ಟೋ, ರಾಗಿ ರೊಟ್ಟಿಯೋ ಏನಾದರೂ. ಕೆಲವು ವೇಳೆ ಸಜ್ಜೆಯ ರೊಟ್ಟಿಯನ್ನು ಮಾಡಿಟ್ಟಿರುತ್ತಿದ್ದರು. ಅದಕ್ಕೆ ಚಟ್ನೀಪುಡಿಯನ್ನು ಹಾಕಿಕೊಂಡು ತಿಂದು ಎಲೆ ತರಲು ಹೊರಡುತ್ತಿದ್ದ. ಎಲೆ ತುಂಬಿಕೊಂಡು ಬರಲು ಒಂದು ಸಣ್ಣ ಗೋಣೀಚೀಲವನ್ನು ಹಿಡಿದು ಹೊರಡುತ್ತಿದ್ದ. ಅದರ ತುಂಬ ಕೂರಿ ಕೂರಿ ಎಲೆ ಕಿತ್ತು ಹಾಕುವ ಹೊತ್ತಿಗೆ ಬಿಸಿಲೇರಿರುತ್ತಿತ್ತು. ಅವರು ಮನಗೆ ಹಿಂದಿರುಗುತ್ತಿದ್ದರು.

ಆಗ ಬೇಸಗೆಯಾದ್ದರಿಂದ ಹೊಲಗಳ ಬಳಿ ಹೆಚ್ಚು ಜನರಿರುತ್ತಿರಲಿಲ್ಲ. ಹಾಗಾಗಿ ಈ ಹುಡುಗರು ಎಲೆಗಳನ್ನೆಲ್ಲ ಕಿತ್ತಾದ ಮೇಲೆ ಚೀಲಗಳನ್ನು ದಡದಲ್ಲಿಟ್ಟು ಬಾವಿಗಳಿಗೆ ಇಳಿಯುತ್ತಿದ್ದರು. ಮನದಣಿಯ ಈಜಾಡುತ್ತಿದ್ದರು. ತಮ್ಮ ತಮ್ಮ ಚಡ್ಡಿಗಳಲ್ಲಿಯೇ ನೀರಿಗಿಳಿದು ಹೊರಗೆ ಬಂದ ಸ್ವಲ್ಪ ಹೊತ್ತಿಗೇ ಅದು ಒಣಗಿರುತ್ತಿತ್ತು. ಸುಬ್ಬ ಒಂದು ಕನ್ನಡಿ, ಒಂದು ಬಾಚಣಿಗೆ ತಂದಿರುತ್ತಿದ್ದ. ಆದರಿಂದ ಈಜಿ ಬಂದ ಮೇಲೆ ತಲೆಯೊಣಗಿದ ಮೇಲೆ ತಲೆ ಬಾಚಿಕೊಳ್ಳಲು ಸಾಧ್ಯವಾಗುತ್ತಿತ್ತು. ನೆನೆದ ತಲೆಯಲ್ಲಿ ಮನಗೆ ಹೋದರೆ ಅತ್ತೆ-ಮಾವ ಬೈದಾರೆಂದು ಸೀನುವಿಗೆ ಹೆದರಿಕೆ.

ಒಂದು ದಿನ ಕೆಲಸ ಮುಗಿಸಿದ ಮೇಲೆ ಸುಬ್ಬ ಸೀನುವಿನೊಡನೆ, ''ಲೋ ಸೀನು, ಒಂದು ತಮಾಷೆ ಮಾಡಬಹುದು ಕಣೋ'' ಎಂದ.

''ಏನೋ ?''

''ನಾಳೆಯಿಂದ ಇಲ್ಲಿಗೆ ಬಂದಾಗ ಇಲ್ಲೇ ಕಾಫಿ ಕಾಸಬಹುದಲ್ಲೋ.''

''ಅದು ಹ್ಯಾಗಾಗತ್ತೋ ?'' ಎಂದು ಸೀನು ಆಶ್ಚರ್ಯದಿಂದ.

''ಹೋಗೋ ಪೆಂಗೆ. ನಾನು ನಮ್ಮನೇಲಿರೋ ಸಣ್ಣ ತಿರುಪಿನ ಚಂಬಲ್ಲಿ ಹಾಲು ತರ್‍ತೀನಿ. ನೀನು ಬೆಲ್ಲ ತೊಗೊಂಬಾ. ಶ್ಯಾಮ ಅವರ ಮನೆಯಿಂದ ಕಾಫಿಪುಡಿ ತರಲಿ.''

ಸೀನುವಿಗೆ ತಾನು ಕಾಫಿ ಕುಡಿಯುವುದಿಲ್ಲವೆಂಬುದು ನೆನಪಿಗೆ ಬಂದು ಹೇಳಿದಾಗ ''ಮನೇಲಿ ಕುಡಿದರೆ ಒಂಥರ ಕಣೋ. ಇಲ್ಲಿ ನಾವೇ ಕಾಫಿ ಕಾಸಿದ ಮೇಲೆ ಕುಡಿದು ನೋಡು. ಆಮೇಲೆ ಇನ್ನೂ ಬೇಕೂಂತೀಯ'' ಎಂದ. ಸೀನುವಿಗೆ ಇರಬಹುದು ಎನಿಸಿತು. ತಾವು ತಾವೇ ಇಲ್ಲಿ ಬಾವಿಯ ಹತ್ತಿರ. ಕಾಫಿ ಮಾಡೋದು ಎಷ್ಟು ಚೆನ್ನ ಎಂದು ಕಲ್ಪಿಸಿಕೊಂಡ. ಆಗಲಿ ಎಂದು ಒಪ್ಪಿದ.

ಮಾರನೆಯ ದಿನ ತಿಂಡಿ ತಿಂದು ಹೊರಡುವ ಸಮಯವಾಯಿತು. ಅತ್ತೆ ಮಾತ್ರ ಅಡಿಗೆ ಮನೆಯನ್ನು ಬಿಟ್ಟು ಹೊರಗೇ ಬಂದಿರಲಿಲ್ಲ. ಸೀನು ಹೊಂಚು ಕಾಯುತ್ತಿದ್ದ. ಮಾವ ಸ್ನಾನ ಮಾಡಲೆಂದು ಬಚ್ಚಲು ಮನೆಗೆ ಹೋದವರು ಯಾಕೋ ಅತ್ತೆಯನ್ನು ಕೂಗಿದರು. ಇದೇ ಸಮಯವೆಂದು ಸೀನು ಅಡಿಗೆ ಮನೆಗೆ ನುಗ್ಗಿ ದೇವರ ಮಂದಾಸನವಿದ್ದ ಕಲ್ಲುಬೆಂಚಿನ ಮೇಲೆ ಹತ್ತಿ ಅಟ್ಟದ ಮೇಲಿರಿಸಿದ್ದ ಬೆಲ್ಲದ ಡಬ್ಬದಿಂದ ಒಂದಷ್ಟು ತೆಗೆದು ಜೇಬಿನಲ್ಲಿ ತುರುಕಿ ಕೊಂಡು, ಒಂದು ತುಂಡನ್ನು ಬಾಯಲ್ಲಿ ಹಾಕಿಕೊಂಡು ಮಳ್ಳಿಯಾಗಿ ಹೊರಗೆ ಬಂದ. ಅತ್ತೆ ಈ ಕಡೆ ಬರುತ್ತಿದ್ದರು. ಅವರಿಗೆ ಮುಖ ಕಾಣಿಸದಂತೆ ಕುಳಿತು ಏನೋ ಮಾಡತೊಡಗಿದ, ಊಟದ ಮನೆಯಲ್ಲಿ ಅವರು ಬಂದು ''ಇನ್ನೂ ಹೊರಡಲಿಲ್ಲವೇನಪ್ಪ ?'' ಎಂದರು. ಬಾಯಲ್ಲಿ ಬೆಲ್ಲದ ಉಂಡೆಯಿದ್ದುದರಿಂದ ಪೂರ್ತಿ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ. ಬರೀ ''ಹ್ಞೂ..'' ಎಂದು ಅಲ್ಲಿಂದ ಓಡಿ, ಚೀಲವನ್ನೆತ್ತಿಕೊಂಡು ಮನೆಬಿಟ್ಟ

ಆದರೆ ಅವತ್ತು ತಾನು ಬೆಲ್ಲ ತಂದಿದ್ದರೂ ಕಾಫಿ ಕಾಸಲು ಆಗಿರಲಿಲ್ಲ. ಶ್ಯಾನುಭೋಗರ ಮನೆಯ ಶ್ಯಾಮ ಕಾಫಿಪುಡಿ ತಂದಿರಲಿಲ್ಲ. ಸುಬ್ಬ ಅವನನ್ನು ಬೈದ.

''ಲೇ ನಮ್ಮಪ್ಪ ಇದ್ದರು ಕಣೋ. ಪೂಜೆ ಮಾಡ್ತಾ ಇದ್ದರು. ಎಷ್ಟೋತ್ತಾದರೂ ಮುಗಿಸಲೇ ಇಲ್ಲ.''

''ಹೋಗಲೋ, ಇವತ್ತು ನಿನ್ನಿಂದ ನಾವು ತಂದದ್ದೂ ಹಾಳಾಯಿತು.''

''ಯಾಕೋ ಹಾಳಾಗುತ್ತೆ?''

''ಇನ್ನೇನೋ ಮತ್ತೆ? ಹಾಲು ನಾಳೇವರೆಗೂ ಇಡಕ್ಕಾಗತ್ತಾ?''

''ಹಾಲು ಬೇಡ, ಬೆಲ್ಲ ಇರತ್ತಲ್ಲ. ಇವತ್ತು ರಾತ್ರೀನೇ ನಾನು ಕಾಫಿಪುಡಿ ತೆಗೆದಿಟ್ಟುಕೋತೀನಿ, ನಾಳೆ ಬೆಳಿಗ್ಗೇಂದ್ರೆ ತಿರುಗಾ ಇವತ್ತಿನ ಹಾಗೇ ಆಗುತ್ತೆ.''

''ಎಲ್ಲಾದ್ರೂ ಹಾಳಾಗು'' ಎಂದು ಸುಬ್ಬು ತಂದಿದ್ದ ಹಾಲನ್ನು ಕೋಪದಿಂದ ಬಾವಿಯಲ್ಲಿ ಸುರಿದಿದ್ದ. ಅವನ ಕೋಪ ಆರಿಸುವುದಕ್ಕೆಂದು ಸೀನು ಒಂದುಂಡೆ ಬೆಲ್ಲ ಅವನಿಗೆ ಕೊಟ್ಟ. ಸುಬ್ಬನಿಗೆ ಕೊಟ್ಟ ಮೇಲೆ ಶ್ಯಾಮನಿಗೆ ಕೊಡದೇ ಇರಕ್ಕಾಗುತ್ತಾ?

ಮಾರನೇ ದಿನದ ಹೊತ್ತಿಗೆ ಅರ್ಧದಷ್ಟೇ ಬೆಲ್ಲ ಉಳಿದಿದ್ದುದು. ಆದರೆ ಅವತ್ತು ಇನ್ನೊಂದಷ್ಟು ಬೆಲ್ಲ ಕದಿಯಲು ಸಾಧ್ಯವಾಗಿರಲಿಲ್ಲ; ಮಾವ ಆಗಲೇ ಸ್ನಾನಮಾಡಿ ಪೂಜೆಗೆ ಕುಳಿತುಬಿಟ್ಟಿದ್ದರು. ಜೋಯಿಸರ ಮನೆಯಲ್ಲಿದ್ದ ಹಾಗೆ ಬೇರೆ ದೇವರ ಮನೆ ಇಲ್ಲದಿದ್ದುದು ಒಂದು ಕೊರತೆ ಅನ್ನಿಸಿತು ಅವನಿಗೆ. ವಿಧಿಯಿಲ್ಲದೆ, ತಾನು ಹಿಂದಿನ ದಿನ ಸಾಯಂಕಾಲವೂ ಒಂದಷ್ಟು ತಿಂದಾದ ಮೇಲೆ ಉಳಿದಿದ್ದ ಬೆಲ್ಲವನ್ನೇ ಪೇಪರೊಂದರಲ್ಲಿ ಕಟ್ಟಿಕೊಂಡು ಚಡ್ಡಿ ಜೇಬಿಗೆ ತುರುಕಿಕೊಂಡು ಬಂದ.

ಎಲೆ ಕಿತ್ತು ಚೀಲಕ್ಕೆ ಸೇರಿಸಿ ಎಲ್ಲರೂ ಹತ್ತಿರದ ಬಾವಿಯೊಂದಕ್ಕೆ ಬಂದರು. ಅವರಿಗೆ ಈವತ್ತು ಈಜಾಡುವ ಆತುರವಿರಲಿಲ್ಲ. ಮೂರು ಸಣ್ಣ ಸಣ್ಣ ಗುಂಡುಕಲ್ಲುಗಳ್ನು ಸುಬ್ಬ ಒಟ್ಟು ಮಾಡಿದ. ಹತ್ತಿರದಲ್ಲಿದ್ದ ಪುರುಲೆಗಳನ್ನು ಆರಿಸಿಕೊಂಡು ತಂದು ಅದಕ್ಕೆ ಬೆಂಕಿಕಡ್ಡಿ ಗೀರಿ ಇಟ್ಟ. ತಾನು ತಂದಿದ್ದ ಸಣ್ಣಪಾತ್ರೆಯಲ್ಲಿ ನೀರು ತಂದು ಅದನ್ನು ಒಲೆಯ ಮೇಲಿಟ್ಟ. ನೀರು ಕುದಿಯತೊಡಗಿದಾಗ ಕೆಳಗಿಳಿಸಿ ಅದಕ್ಕೆ ಶ್ಯಾಮ ತಂದಿದ್ದ ಕಾಫಿಪುಡಿಯನ್ನೆಲ್ಲ ಸುರಿದು, ಒಲೆಯ ಮೇಲೆ ಹಾಲಿದ್ದ ತಿರುಪಿನ ಚೆಂಬಿಟ್ಟ. ಹಾಲು ಕಾಯುವ ವೇಳೆಗೆ ಪಾತ್ರೆಯಲ್ಲಿ ತಿಳಿ ಬಿಟ್ಟಿತ್ತು. ಹಾಲಿನ ಚೆಂಬಿಗೆ ಸೀನು ತಂದಿದ್ದ ಬೆಲ್ಲ ದುಂಡೆಗಳನ್ನು ಪುಡಿಮಾಡಿ ಹಾಕಿ ಪಾತ್ರೆಯಲ್ಲಿದ್ದ ತಿಳಿಯನ್ನು ಬಗ್ಗಿಸಿದ. ಕಾಫಿ ಸಿದ್ಧವಾಯಿತು. ಸಿಹಿ ಸಾಲದಾಗಿತ್ತು.

''ಲೋ ಜಿಪುಣಾಗ್ರೇಸರ ಚಕ್ರವರ್ತಿ, ಇಷ್ಟೇನೇನೋ ಬೆಲ್ಲ ತಗಂಬರೋದು ?'' ಸುಬ್ಬ ಆಕ್ಷೇಪಿಸಿದ.

''ನಿನ್ನೆ ಇದರೆರಡಷ್ಟು ತಂದಿದ್ದೆ ಕಣೋ. ನಿಮಗೆ ಕೊಟ್ಟುಬಿಟ್ಟೆನಲ್ಲ ಸ್ವಲ್ಪ. ಇವತ್ತು

ನಮ್ಮ ಮಾವ ಪೂಜೆ ಮಾಡ್ತಾ ಇದ್ದರು. ಅದಕ್ಕೋಸ್ಕರಾನೆ ಇನ್ನೊಂದಿಷ್ಟು ತರಾಕೆ ಆಗ್ಲಿಲ್ಲ''

''ಹೋಗ್ಲಿ ಬಿಡು. ಪಾವಗಡದಲ್ಲಿ ನಾನು ಓದ್ಕೊಂಡಿಲ್ವಾ, ನಮ್ಮವರ ಮನೆ. ಅಲ್ಲಿ ಹೀಗೆ ಸ್ಟ್ರಾಂಗ್ ಮಾಡ್ತಾರೆ'' ಅಂದಿದ್ದ.

ಒಂದು ದಿವಸ ಸುಬ್ಬು ತಮಗೆ ಒಂದು ಆಶ್ಚರ್ಯವನ್ನು ತಂದಿದ್ದ. ಎಲ್ಲಿಯೋ ಒಂದೆರಡು ಬೀಡಿಗಳನ್ನು ಸಂಪಾದಿಸಿದ್ದ. ತನ್ನನ್ನೂ ಸೇದು ಎಂದಾಗ ಸೀನುವಿಗೆ ಭಯವಾಗಿತ್ತು. ತಮ್ಮ ಮಾವ ಬೀಡಿ ಸೇದುತ್ತಿರಲಿಲ್ಲ, ತಾನು ಸೇದಬಾರದು, ಪಾಪ ಬರುತ್ತೆ ಎಂದುಕೊಂಡಿದ್ದ. ಸುಬ್ಬು ತಂದಿದ್ದು ಎರಡೇ ಬೀಡಿ, ಜೇಬಲ್ಲಿ ಬೆಂಕಿಪೆಟ್ಟಿಗೆ ಬೇರೆಯಿತ್ತು. ಶ್ಯಾಮನಿಗೊಂದು ಕೊಟ್ಟ; ಆದರೆ ಅವನೂ ಸೀನುವಿನ ಹಾಗೆ ಬೇಡವೆಂದು, ತಾವಿಬ್ಬರೇ ಸೇದಿದರೆ ಹ್ಯಾಗೆ ಎಂದು ಶ್ಯಾಮ ಹಿಂದುಮುಂದು ನೋಡುತ್ತಿರಬೇಕೆನಿಸಿ ಸುಬ್ಬು ಒಂದು ಉಪಾಯ ಮಾಡಿದ.

''ಲೋ ಸೀನು, ನಾವಿಬ್ಬರೇ ಸೇದಿ ನೀನು ಸೇದದೇ ಇರಬಾರದು ಕಣೋ. ನಿನ್ನ ಬಿಟ್ಟು ನಾವು ಸೇದಬಾರದು. ಒಂದುಪಾಯ ಹೇಳ್ತೀನಿ. ಒಣಗಿದ ಮುತ್ತುಗದೆಲೆ ಇರುತ್ತಲ್ಲ, ಅದನ್ನು ಸಣ್ಣಗೆ ಪುಡಿ ಮಾಡಾಣ, ಅದನ್ನು ಇನ್ನೊಂದೆಲೆಗೆ ಸುತ್ತಿ ಸೇದು. ನೀನೇನೂ ಬೀಡಿ ಸೇದಿದ ಹಾಗೆ ಆಗಲ್ವಲ್ಲ'' ಎಂದು ಬಲವಂತ ಮಾಡಿದ. ವಿಧಿಯಿಲ್ಲದೆ ಸೀನು ಒಪ್ಪಿದ. ಸುಬ್ಬುವೇ ಎದ್ದು ಹೋಗಿ ಬಿದ್ದಿದ್ದ ಒಂದೆರಡು ಒಣಗಿದ ಮುತ್ತುಗದೆಲೆಗಳನ್ನು ತಂದ. ಅದನ್ನೆಲ್ಲ ಸಣ್ಣಗೆ ಪುಡಿಮಾಡಿದ ಇನ್ನೊಂದು ಒಣಗಿದ ಎಲೆಯಲ್ಲಿ ಹಾಕಿ ಸುತ್ತಲು ಹೋದರೆ, ಅದು ಲಟಕ್ ಎಂದು ಮುರಿಯಿತೇ ವಿನಾ ಸುರುಳಿ ಸುತ್ತಲು ಆಗಲಿಲ್ಲ. ಅವನಿಗೆ ಇನ್ನೊಂದು ಉಪಾಯ ಹೊಳೆಯಿತು. ತನ್ನ ಜೇಬಿನಲ್ಲಿದ್ದ ಯಾವುದೋ ಒಂದು ಕಾಗದದ ತುಂಡಿಗೆ ಪುಡಿ ಹಾಕಿ ಸುರಳಿ ಸುತ್ತಿ ಸೀನುವಿಗೆ ಕೊಟ್ಟ. ಹಿಂದು ಮುಂದು ಯೋಚಿಸುತ್ತಲೇ ಸೀನು ಅದನ್ನು ತೆಗೆದುಕೊಂಡು ಬಾಯಲ್ಲಿಟ್ಟುಕೊಂಡ. ಬೆಂಕಿಕಡ್ಡಿ ಗೀಡಿ ಅದನ್ನು ಹತ್ತಿಸಲೆಂದು ಸುಬ್ಬು ಬಂದಾಗ ಸೀನು ಬಾಗಿದ. ಸುರಳಿಯಲ್ಲಿದ್ದ ಪುಡಿಯೆಲ್ಲ ಉದುರಿ ಹೋಗಿ ಕಾಗದದ ಸುರುಳಿ ಹತ್ತಿಕೊಂಡು ಉರಿಯತೊಡಗಿತು. ಸೀನು ಅದನ್ನು ಬಿಸಾಕಿದ.

''ಸರಿಯಾಗಿ ಹಿಡಕಳಕ್ಕೂ ಬರಲ್ವಲ್ಲೋ ನಿಂಗೆ. ಒಳಗೆ ಪುಡಿ ಇದ್ದಿದ್ದರೆ ಒಳ್ಳೆ ಸಿಗರೇಟು ಇದ್ದ ಹಾಗೆ ಇರೋದು'' ಎಂದ. ಆ ವೇಳೆಗೆ ತಾನು ಹತ್ತಿಸಿದ್ದ ಬೀಡಿಯನ್ನೇ ತೋರಿಸುತ್ತ ''ಹೋಗಲಿ ಇದನ್ನೇ ಒಂದು ದಂ ಎಳಿ'' ಎಂದ. ''ಇಲ್ಲಪ್ಪ'' ಎಂದು, ಇನ್ನು ಅಲ್ಲಿದ್ದರೆ ತನಗೆ ಬಲವಂತ ಮಾಡಿಯಾರೆಂದು ತನ್ನ ಚೀಲವನ್ನೆತ್ತಿಕೊಂಡು ಬೇಗ ಬೇಗ ಬಂದ. ಅವರೂ ಹಿಂಬಾಲಿಸಿದರು ''ಲೋ ಯಾರಿಗೂ ಹೇಳ್ಬೇಡ ಕಣೋ'' ಎಂದು ಗೋಗರೆಯುತ್ತ. ''ಆಗಲಿ'' ಎಂದು ಸೀನು ಅವರಿಗೆ ಆಶ್ವಾಸನೆಯಿತ್ತ.

ಕೆಲವು ವೇಳೆ ದೊಡ್ಡ ಎಲೆಗಳನ್ನು ಕೀಳಬೇಕೆಂಬ ಹುಮ್ಮಸ್ಸು ಬರುತ್ತಿತ್ತು ಹುಡುಗರಲ್ಲಿ. ರೆಂಬೆಯನ್ನು, ಮೂರು ಎಲೆಗಳ ತೊಟ್ಟು ಸೇರಿರುತ್ತಿದ್ದ ಕಡೆ ಮುರಿದರೆ ಲಟಕ್ ಎಂದು ಮೂರು ಎಲೆಗಳು ಕೈಗೆ ಬರುತ್ತಿತ್ತು. ಆದರಿಂದ ಒಂದು ಬಗೆಯ

ಸಂತೋಷವಾಗುತ್ತಿತ್ತು ಆದರಲ್ಲೂ ದೊಡ್ಡ ದೊಡ್ಡ ಎಲೆಗಳಿದ್ದರೆ ಇನ್ನೂ ಸಂತೋಷ. ಎಷ್ಟೋ ಸಲ ತುಂಬ ದೊಡ್ಡ ಎಲೆಗಳೇ ಸಿಕ್ಕುತ್ತಿದ್ದವು. ಅದನ್ನು ಕಂಡು ಅತ್ತೆ ''ನಿನ್ನ ತಟ್ಟೆಗಿಂತ ಈ ಎಲೆಯೇ ದೊಡ್ಡದಾಗಿದೆ. ತಟ್ಟೆ ಬದಲು ಈ ಎಲೇನೇ ಹಾಕ್ಕೋ ಇವತ್ತು'' ಎನ್ನುತ್ತಿದ್ದರು. ಇವನು ದೊಡ್ಡ ಎಲೆಗಳನ್ನು ತಂದದ್ದನ್ನು ನೋಡಿ ಅತ್ತೆ ಮೆಚ್ಚಿಕೆ ತೋರಿಸಿದಾಗ ಸೀನುವಿಗೆ ತುಂಬ ಸಂತೋಷವಾಗುತ್ತಿತ್ತು.

ಮಧ್ಯಾಹ್ನದ ಹೊತ್ತು ಜೋಯಿಸರ ಮನೆಯಲ್ಲಿ ಕಾಲ ಕಳೆಯುತ್ತಿದ್ದುದೆಂದರೆ ಚೌಕಾಭಾರಾನೋ, ಪಗಡೆಯೋ ಆಡುತ್ತ. ಆದರೆ ಕೆಲವು ವೇಳೆ ದೊಡ್ಡವರು ಮಧ್ಯಾಹ್ನದ ಹೊತ್ತು ಸ್ವಲ್ಪ ಅಡ್ಡಾಗುತ್ತಿದ್ದರು. ಅಂಥ ಸಮಯಗಳಲ್ಲಿ ಇವರು ಗಲಾಟೆ ಮಾಡುತ್ತಿದ್ದರೆ ಹಿರಿಯರು ಗದರುತ್ತಿದ್ದರು. ''ಬೇರೆ ಕೆಲಸವಿಲ್ಲೇನ್ರೋ ನಿಮಗೆ, ಕವಕವಾಂತ ಒಟಗುಟ್ಟುತ್ತೀರಿ, ಒಂದ್ನಿಮಿಷ ಕಣ್ಮುಚ್ಚಕ್ಕೆ ಬಿಡಲ್ಲ. ನೀವೂ ಹೋಗಿ ಒಂದಿಷ್ಟು ಮಲಗಿ'' ಎಂದಿದ್ದರು. ಈ ಹುಡುಗರು ಸುಬ್ಬನ ರೂಮಿಗೆ ಬರುತ್ತಿದ್ದರು. ಅಲ್ಲಿ ಹಾಸಿರುತ್ತಿದ್ದ ಚಾಪೆಯ ಮೇಲೆ ಮೂವರೂ ಮಲಗಿ ಒಂದೇ ದುಪ್ಪಟಿಯನ್ನು ಹೊದ್ದು ಗುಬುರು ಹಾಕಿಕೊಳ್ಳುತ್ತಿದ್ದರು. ಆದರೆ ಸುಬ್ಬು ಎಷ್ಟೋ ಸಲ ಏನೇನೋ ಮಾತಾಡುತ್ತಿದ್ದ ಎಲ್ಲೆಲ್ಲೋ ಕೈಹಾಕುತ್ತಿದ್ದ. ಸೀನುವಿಗೆ ಹೇಸಿಕೆಯಾಗುತ್ತಿತ್ತು. ತಮ್ಮ ಅಣ್ಣ-ತಮ್ಮಂದಿರ ಜೊತೆಗೆ ಬೆಂಗಳೂರಲ್ಲಿ ಮಲಗಿರುತ್ತಿದ್ದಾಗ ಅವರಾರೂ ಈ ರೀತಿ ಮಾಡುತ್ತಿರಲಿಲ್ಲ. ಬೇಜಾರಾಗಿ ಅಲ್ಲಿಂದೆದ್ದು ಮನೆಗೆ ಬಂದುಬಿಡುತ್ತಿದ್ದ.

೮

ಸೀನು ಆರನೇ ಕ್ಲಾಸಿಗೆ ಬಂದಾಗ ಸ್ಕೂಲಿನಲ್ಲಿ ಮೂರು ತರಗತಿಗಳಾದವು. ಆದಕ್ಕಾಗಿಯೇ ಆ ವರ್ಷ ಇನ್ನೊಬ್ಬ ಮೇಷ್ಟ್ರರು ಬಂದರು ; ಆದರೂ ಮರಳಪ್ಪ ಮೇಷ್ಟರೆ ಹೆಡ್ ಮಾಸ್ಟರಾಗಿದ್ದರು, ಹೋದ ವರ್ಷದಂತೆಯೇ. ಈವರೆಗೆ ಸ್ಕೂಲು ನಡೆಯುತ್ತಿದ್ದ ಕಟ್ಟಡದಲ್ಲಿ ಎರಡೇ ತರಗತಿಗಳನ್ನು ನಡೆಸಲು ಸಾಧ್ಯವಾಗುತ್ತಿದ್ದುದು, ಒಳಗಿನ ಹಾಲಿನಲ್ಲಿನ ಹಾಗೂ ಹೊರಗಡೆಯ ವರಾಂಡದಲ್ಲಿ. ಇನ್ನೊಂದು ತರಗತಿ ಬಂದಮೇಲೆ ಮೂರನೆಯದಕ್ಕೆ ಜಾಗವೇ ಇರಲಿಲ್ಲ. ಆದರೆ ಈ ಹೊತ್ತಿಗೆ ಒಂದು ಬೇರೆ ವ್ಯವಸ್ಥೆಯಾಗಿತ್ತು.

ಊರಿನ ಇನ್ನೊಂದು ತುದಿಯಲ್ಲಿ ಹೊಸ ಕಟ್ಟಡವೊಂದು ಸಿದ್ಧವಾಗಿತ್ತು. ಅಲ್ಲಿ ನಾಲ್ಕು ರೂಮುಗಳು ಸಾಲಾಗಿದ್ದವು. ಈ ವರ್ಷ ಮೂರೇ ಕ್ಲಾಸಾದ್ದರಿಂದ ಒಂದು ರೂಮು ಹೆಡ್ಮಾಸ್ಟರು ಕೂತುಕೊಳ್ಳಲು, ಮೇಷ್ಟರುಗಳು ವಿಶ್ರಾಂತಿ ಪಡೆಯಲು, ರಿಜಿಸ್ಟರು, ಬೆಲ್ಲು ಮ್ಯಾಪುಗಳು ಇವುಗಳನ್ನಿಡಲು ಉಪಯೋಗಿಸಬೇಕೆಂದು ಅಂದುಕೊಂಡಿದ್ದರು. ಈ ವರ್ಷಕ್ಕೆ ಮೂರೇ ರೂಮುಗಳು ಸಾಕಾಗಿದ್ದರೂ, ಮುಂದಿನ ವರ್ಷ ಎಂಟನೇ ಕ್ಲಾಸೂ ಬರುವುದರಿಂದ ಬೇಕಾಗಿತ್ತದೆಂದು ನಾಲ್ಕು ರೂಮುಗಳನ್ನು ಕಟ್ಟಿಸಿದ್ದರು.

ಈ ಕಟ್ಟಡವನ್ನು ಲಕ್ಷ್ಮೀಪತಿ ಶೆಟ್ಟರು ಕಟ್ಟಿಸಿಕೊಟ್ಟಿದ್ದರು. ಶೆಟ್ಟರಿಗೆ ಒಬ್ಬನೇ ಮಗ, ಅವನು ಏಳನೇ ಕ್ಲಾಸಲ್ಲಿ ಓದುತ್ತಿದ್ದ ಹೆಸರು ಬಲರಾಮ ; ನೋಡಲು ತೊಪ್ಪೆತೊಪ್ಪೆಯಾಗಿದ್ದ. ಮಾತಾಡಿದರೆ 'ದದ್ದದ್ದ' ಎನ್ನುತ್ತಿದ್ದ ; ಶೆಟ್ಟರ ಹೆಂಡತಿ ವರಲಕ್ಷ್ಮಮ್ಮನಿಗೆ ಮಗನ ಬಗ್ಗೆ ತುಂಬ ಪ್ರೀತಿ. ಸೀನು ತಮ್ಮ ಸ್ಕೂಲನ್ನು ಲಕ್ಷ್ಮೀಪತಿ ಶೆಟ್ಟರೇ ಕಟ್ಟಿಸಿಕೊಟ್ಟರು ಎಂಬ ವಿಷಯವನ್ನು ಕೇಳಿದಾಗ ಅವನಿಗೆ ಶೆಟ್ಟರ ಬಗ್ಗೆ ಭಕ್ತಿ ಬಂದಿತ್ತು. ಆಶ್ಚರ್ಯದಿಂದ ಈ ವಿಚಾರವನ್ನು ಮಾವನ ಬಳಿ ಕೇಳಿದ್ದ.

''ನಮ್ಮ ಸ್ಕೂಲ್‌ನ ಲಕ್ಷ್ಮೀಪತಿ ಸೆಟ್ಟರು ಕಟ್ಟಿಸಿದ್ದಾರಂತೆ, ಹೌದಾ ?''

''ಎಲ್ಲರ ತಲೆ ಒಡೆದು ದುಡ್ಡು ಸಂಪಾದಿಸಿದ್ದಾನೆ. ಕಟ್ಟಿಸಿಕೊಡಲಿ ಬಿಡು'' ಎಂದಿದ್ದರು ಮಾವ ತಾತ್ಸಾರವಾಗಿ. ಯಾಕೆ ಮಾವ ಹೀಗಾಡುತ್ತಾರೆ ಎನಿಸಿತ್ತು. ಸ್ಕೂಲಿನ ಗೋಡೆಗೆ ''ಲಕ್ಷ್ಮೀಪತಿ ಶೆಟ್ಟರ ದಾನ'' ಎಂದು ಕಲ್ಲಿನಲ್ಲಿ ಕೆತ್ತಿಸಿ ಅಂಟಿಸಿದ್ದರು. ಈ ಮಾವನಿಗೆ ಶೆಟ್ಟರನ್ನು ಕಂಡರೆ ಹೊಟ್ಟೆಕಿಚ್ಚೇನೊ ಎಂಬ ಅನುಮಾನವಾಗಿತ್ತು.

ಸ್ಕೂಲಿನ ಉದ್ಘಾಟನೆಗೆ ತುಮಕೂರಿನಿಂದ ವಿದ್ಯಾ ಅಧಿಕಾರಿಗಳು ಬಂದಿದ್ದರು. ಅವತ್ತು ಎಲ್ಲರೂ ಒಗೆದ ಬಟ್ಟೆ ಹಾಕಿಕೊಂಡು ನೀಟಾಗಿ ಬರಬೇಕೆಂದು ಹೆಡ್ ಮಾಸ್ಟರು ಎಲ್ಲ ಹುಡುಗ - ಹುಡುಗಿಯರಿಗೂ ಹೇಳಿದರು. ''ಕೊಳಕು ಬಟ್ಟೆ ಹಾಕಿಕೊಂಡು ಬಂದರೆ ಸಿಗಿದು ಹಾಕಿ ಬಿಡುತ್ತೇನೆ'' ಎಂದು ಹೆದರಿಸಿದ್ದರು. ಹುಡುಗರೆಲ್ಲ ಚೆನ್ನಾಗಿ ಎಣ್ಣೆ ಹಚ್ಚಿಕೊಂಡು ತಲೆ ಬಾಚಿಕೊಂಡು ಬಂದಿದ್ದರು. ಹುಡುಗಿಯರು ಜಡೆಗಳಿಗೆ ಬೇಲಿಯ ಹೂವುಗಳನ್ನೇ ಮುಡಿದಿದ್ದರು. ಎಲ್ಲ ಹುಡುಗರಿಗೂ ಸಂಭ್ರಮವೋ ಸಂಭ್ರಮ. ಅವರನ್ನೆಲ್ಲ ಹೆಡ್ಮಾಸ್ತರರು ಸ್ಕೂಲಿನ ಮುಂದೆ ದಾರಿಯಲ್ಲಿ ಆ ಕಡೆ ಈ ಕಡೆ ಸಾಲಾಗಿ ನಿಲ್ಲಿಸಿದ್ದರು.

ಹುಡುಗರು ಬೆಳಿಗ್ಗೆ ಸ್ಕೂಲಿಗೆ ಹೋಗುವ ಹೊತ್ತಿಗೆ ಅಲ್ಲಿ ಓಲಗದ ಶಬ್ದವಾಗುತ್ತಿತ್ತು. ಲಕ್ಷ್ಮೀಪತಿ ಶೆಟ್ಟರು ಸಾಮಾನ್ಯವಾಗಿ ಅಂಗಡಿ ಮನೆಯಲ್ಲಿದ್ದಾಗ ಒಂದು ಕಚ್ಚೆಪಂಚೆಯುಟ್ಟು ಮೇಲೊಂದು ಷರ್ಟ್ ಹಾಕಿರುತ್ತಿದ್ದರು. ಆದರೆ ಈಗ ಅವರು ಕೋಟು ಧರಿಸಿ, ತಲೆಗೆ ಜರೀ ರುಮಾಲು ಸುತ್ತಿದ್ದರು. ಮೂಡಲಗಿರಿ ಗೌಡರೂ ಅಲ್ಲಿಗೆ ಬಂದರು. ಮಾವನೂ ಅವತ್ತು ಸ್ಕೂಲಿಗೆ ಬಂದಿದ್ದರು. ಅವರು ಅಲ್ಲಿಗೆ ಬಂದದ್ದನ್ನು ಸೀನು ನೋಡಿದ್ದು ಅವತ್ತೆ ಮೊದಲನೇ ಸಲ.

ಜೀಪಿನಲ್ಲಿ ವಿದ್ಯಾ ಅಧಿಕಾರಿಗಳು ಬಂದಾಗ ಮೇಳದ ಸಮೇತ ಅವರನ್ನು ಎದುರುಗೊಂಡು ಕರೆತಂದರೂ ಮಾವ ಅವರನ್ನು ತುಂಬ ಮಾತಾಡಿಸುತ್ತಿದ್ದದ್ದನ್ನು ಕಂಡು ಸೀನುವಿಗೆ ಮಾವನ ಬಗ್ಗೆ ಹೆಮ್ಮೆಯೆನಿಸಿತ್ತು. ಮಾವ ಏನೇ ಹೇಳಿದಾಗ ಅಧಿಕಾರಿಗಳು ನಗುತ್ತಿದ್ದುದನ್ನು ದೂರದಿಂದಲೇ ಕಂಡ ಅವನಿಗೆ ಜಂಬವೇ ಬಂದಿತ್ತು. ಮೂಡಲಗಿರಿಗೌಡರಾಗಲೀ, ಲಕ್ಷ್ಮೀಪತಿ ಶೆಟ್ಟರಾಗಲೀ ಹೆಚ್ಚು ಮಾತಾಡುತ್ತಿರಲಿಲ್ಲ. ಅವರ ಪಕ್ಕದಲ್ಲಿ ಮುದುಡಿಕೊಂಡು ಕುಳಿತಿದ್ದರು. ತಮ್ಮ ಮೇಷ್ಟರುಗಳೆಲ್ಲ ತುಂಬ ವಿನಯದಿಂದ

ಓಡಾಡುತ್ತಿದ್ದುದನ್ನು ಕಂಡಾಗ ಅವನಿಗೆ ಮೋಜೆನಿಸಿತ್ತು. ಹುಡುಗರಿಗೆ ಹೊಡೆದು ಕಿವಿಹಿಂಡಿ ಬೈಯುತ್ತಿದ್ದವರು ಈಗ ಬಂದ ಸಾಹೇಬರ ಮುಂದೆ ತಲೆಬಾಗಿ ಉತ್ತರ ಕೊಡುತ್ತಿದ್ದುದನ್ನು ಕಂಡು ಅವರು ದೊಡ್ಡವರಿರಬೇಕೆಂದು ಅನ್ನಿಸಿತ್ತು.

ಹುಡುಗರನ್ನೆಲ್ಲ ನೆಲದ ಮೇಲೆ ಕೂಡಿಸಿದ್ದರು ; ಜಗಲಿಯ ಮೇಲೆ ಒಂದೆರಡು ಬೆಂಚುಗಳನ್ನು ಹಾಕಿ ಅಲ್ಲಿ ಊರಿನ ಹಿರಿಯರನ್ನು ಕೂಡಿಸಿದ್ದರು. ಮುಂದೆ ಮೇಜುಗಳೆರಡನ್ನು ಜೋಡಿಸಿ ಅದರ ಮೇಲೆ ಒಗೆದ ಬಟ್ಟೆಯೊಂದನ್ನು ಹೊದಿಸಿದ್ದರು. ಬಂದ ಅಧಿಕಾರಿಗಳು, ಹೆಡ್ಮಾಸ್ತರರು, ಲಕ್ಷ್ಮೀಪತಿ ಶೆಟ್ಟರು, ಮೂಡಲಗಿರಿಗೌಡ ಹಾಗೂ ಮಾವ-ಇವರುಗಳು ಕುರ್ಚಿಯ ಮೇಲೆ ಕುಳಿತಿದ್ದರು. ಮಿಕ್ಕ ಮೇಷ್ಟರುಗಳು ಹುಡುಗರು ಕುಳಿತಿದ್ದ ಜಾಗದ ಆ ಕಡೆ ಈ ಕಡೆ ಕೈಕಟ್ಟಿ ನಿಂತಿದ್ದರು.

ಸೀನುವಿಗೆ ತುಂಬ ಆಶ್ಚರ್ಯ. ಮೊದಲು ಮಾತನಾಡಲು ಎದ್ದು ನಿಂತವರು ಮಾವನೇ. ಊರಿಗೆ ಮಿಡಲ್‌ಸ್ಕೂಲು ಬರಲು ಊರಿನವರು ಪಟ್ಟ ಶ್ರಮ ವಿವರಿಸಿದರು. ಅದು ಬಂದು ಊರಿನ ಹುಡುಗರಿಗೆ ವಿದ್ಯೆ ಹೆಚ್ಚಾಗಲು ಕಾರಣವಾಯಿತೆಂದರು. ವಿದ್ಯೆಯೆಂದರೆ ಬರೀ ಪುಸ್ತಕದ ವಿದ್ಯೆಯಲ್ಲ, ಅದು ಮಕ್ಕೀಕಾಮಕ್ಕಿಯಾಗಬಾರದು ಎಂದರು. ಒಂದು ಕತೆ ಹೇಳಿದರು. ಇಬ್ಬರು ಸ್ನೇಹಿತರು ಒಂದು ಸ್ಕೂಲಲ್ಲಿ ಓದುತ್ತಿದ್ದರಂತೆ. ಅವರಿಬ್ಬರೂ ಯಾವಾಗಲೂ ಒಟ್ಟಿಗೇ ಇರುತ್ತಿದ್ದರಂತೆ. ಇಬ್ಬರೂ ಸ್ಕೌಟಿಗೆ ಸೇರಿದ್ದರಂತೆ. ಕಷ್ಟ ಬಂದವರಿಗೆ ಸಹಾಯ ಮಾಡುವುದನ್ನು ಕಲಿಸುವುದೇ ಸ್ಕೌಟಿನ ಉದ್ದೇಶವಂತೆ. ಒಂದು ಬಾರಿ ಅವರಿಬ್ಬರೂ ಎಲ್ಲಿಯೋ ಹೋಗಿದ್ದರು. ತುಂಬ ಬಾಯಾರಿಕೆಯಾಯಿತಂತೆ. ನೀರು ಕುಡಿಯಬೇಕೆಂದು ಬಾವಿಗಾಗಿ ಹುಡುಕಾಡಿದಾಗ ಕೊನೆಗೊಂಡು ಬಾವಿಯನ್ನು ಕಂಡರಂತೆ. ಆದರೆ ಅದರಲ್ಲಿ ನೀರು ತುಂಬ ಕೆಳಗಿತ್ತು. ಆದರೆ ಮೆಟ್ಟಿಲುಗಳಿದ್ದುದರಿಂದ ಇಬ್ಬರೂ ಇಳಿದರು. ಅವರಲ್ಲಿ ಒಬ್ಬನಿಗೆ ಮಾತ್ರ ಈಜು ಬರುತ್ತಿತ್ತು ; ಆದರೆ ಇನ್ನೊಬ್ಬನಿಗೆ ಈಜು ಗೊತ್ತಿರಲಿಲ್ಲ. ನೀರು ಕುಡಿಯುವಾಗ ಈಜು ಬಾರದವನು ಪಾಚಿಕಟ್ಟಿದ್ದ ಮೆಟ್ಟಿಲ ಮೇಲೆ ಕಾಲಿಟ್ಟಿದ್ದರಿಂದ ಜಾರಿ ನೀರಿನಲ್ಲಿ ಬಿದ್ದುಬಿಟ್ಟನಂತೆ. ಇನ್ನೊಬ್ಬನಿಗೆ, ಈಜು ಬರುತ್ತಿದ್ದವನಿಗೆ, ಕಷ್ಟದಲ್ಲಿರುವ ಸ್ನೇಹಿತನನ್ನು ಕಂಡಾಗ ತಾನು ಸ್ಕೌಟಿಗೆ ಸೇರಿದ್ದುದು ನೆನಪಾಯಿತಂತೆ ; ಅವನಿಗೆ ಸಹಾಯ ಮಾಡಬೇಕಾದ್ದು ತನ್ನ ಕರ್ತವ್ಯ ಎನಿಸಿತಂತೆ. ಆದರೆ ತಾನು ಸ್ಕೌಟಿನ ಡ್ರೆಸ್ ಹಾಕಿಕೊಂಡಿಲ್ಲವಲ್ಲ ಎಂದು ಅದನ್ನು ಧರಿಸಿಬರಲು ಮನೆಗೆ ಓಡಿಬಂದನಂತೆ. ಉಡುಪು ಧರಿಸಿ ಬಾವಿಯ ಹತ್ತಿರ ಬರುವಷ್ಟರಲ್ಲಿ ಸ್ನೇಹಿತ ನೀರಿನಲ್ಲಿ ಮುಳುಗಿಬಿಟ್ಟನಂತೆ. ಹಾಗೆ ಕಲಿತದ್ದನ್ನು ಮಕ್ಕೀಕಾಮಕ್ಕಿ ಒಪ್ಪಿಸುವುದರಿಂದ ಸರಿಯಾದ ವಿದ್ಯೆಬಾರದು. ಚೆನ್ನಾಗಿ ಯೋಚನೆ ಮಾಡುವುದನ್ನು ಕಲಿಯಬೇಕು ಎಂದು ಹೇಳಿದರು.

ಹುಡುಗರಿಗೆ ಕತೆ ಹಿಡಿಸಿತ್ತು. ಎಲ್ಲರೂ ಕತೆ ಕೇಳಿ ಮಂಕು ಸ್ಕೌಟ್ ಹುಡುಗನನ್ನು ಕುರಿತು ನಕ್ಕಿದ್ದರು, ಮಾವ ಹೀಗೆಲ್ಲ ಹೇಳಿಯಾದ ಮೇಲೆ ಊರಿಗೆ ಮಿಡಲ್ ಸ್ಕೂಲ್

ಕೊಟ್ಟಿದ್ದಕ್ಕೆ ಸರ್ಕಾರಕ್ಕೆ ವಂದನೆ ಹೇಳಿದರು. ಸ್ಕೂಲಿನ ಕಟ್ಟಡ ಕಟ್ಟಿಸಿದ ಲಕ್ಷ್ಮೀಪತಿ ಶೆಟ್ಟರನ್ನು ಕರ್ಣನಿಗೆ ಹೋಲಿಸಿದರು. ಸ್ಕೂಲನ್ನು ಉದ್ಘಾಟಿಸಲು ಬಂದ ವಿದ್ಯಾ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸೀನುವಿಗೆ ಸ್ವಲ್ಪ ಆಶ್ಚರ್ಯವಾಯಿತು. ಲಕ್ಷ್ಮೀಪತಿ ಶೆಟ್ಟರು ಸ್ಕೂಲು ಕಟ್ಟಿಸಿ ಕೊಟ್ಟದ್ದು ಬೇರೆಯವರ ತಲೆ ಒಡೆದದ್ದರಿಂದ ಬಂದ ದುಡ್ಡಿನಲ್ಲಿ ಎಂದು ಮಾವ ಹೇಳಿದ್ದರಲ್ಲ; ಆದರೆ ಇಲ್ಲಿ ಅವರನ್ನು ತುಂಬ ಹೊಗಳಿದರು. ಯಾಕೆ ಎಂದು ಅವನಿಗೆ ಆಶ್ಚರ್ಯವಾಯಿತು.

ಮೂಡಲಗಿರಿಗೌಡರೂ ಒಂದೆರಡು ಮಾತನಾಡಿದರು ; ಲಕ್ಷ್ಮೀಪತಿ ಶೆಟ್ಟರು ಮಾತ್ರ ಹೆಚ್ಚು ಮಾತನಾಡಲಾಗಲಿಲ್ಲ. ಎದ್ದುನಿಂತು ತೊದಲತೊಡಗಿದರು. ಕೊನೆಗೆ "ಎಲ್ಲರಿಗೂ ನಮಸ್ಕಾರ" ಎಂದು ಹೇಳಿ ಕೂತು ಬಿಟ್ಟರು. ವಿದ್ಯಾ ಅಧಿಕಾರಿಗಳು ಅರ್ಧಗಂಟೆ ಮಾತನಾಡಿದರು. ಅವರು ಏನು ಹೇಳಿದರೋ ಹೆಚ್ಚು ಅರ್ಥವೇ ಆಗಲಿಲ್ಲ. ಆಗಾಗ ಸರ್ಕಾರ ಎನ್ನುತ್ತಿದ್ದರು. ಯೋಜನೆ ಎನ್ನುತ್ತಿದ್ದರು, ವಿದ್ಯಾಭ್ಯಾಸ ಕಲಿತವರು ಕಮ್ಮಿ ಎನ್ನುತ್ತಿದ್ದರು. ಆ ಹೊತ್ತಿಗೆ ಸೀನುವಿಗೆ ಬೇಸರವಾಗಿತ್ತು, ಇತರ ಹುಡುಗರಿಗೂ ಹಾಗೆಯೇ. ಆದರೆ ಅತ್ತ ಇತ್ತ ಕೈಕಟ್ಟಿ ನಿಂತಿದ್ದ ಮೇಷ್ಟರನ್ನು ಕಂಡು ತಮ್ಮ ತಮ್ಮಲ್ಲೇ ಮಾತನಾಡಿಕೊಳ್ಳಲು ಬಾಯಿ ತೆರೆಯುತ್ತಿದ್ದ ಹುಡುಗರು ಸುಮ್ಮನಾಗುತ್ತಿದ್ದರು. ಕೊನೆಗೆ ಹೆಡ್ಮಾಸ್ಟರರು ಬಂದವರಿಗೂ ಶೆಟ್ಟರಿಗೂ ಹಾರ ಹಾಕಿದರು. ಜನಗಣಮನ ಹಾಡಿದ ಮೇಲೆ ಎಲ್ಲರೂ ಮೇಲೆದ್ದರು. ಹುಡುಗರು ಮಾತ್ರ ಬಂದವರು ಹೋಗುವವರೆಗೂ ಅಲ್ಲೇ ನಿಂತು ಅವರನ್ನು ನೋಡುತ್ತಿದ್ದರು.

ಸ್ಕೂಲಿನ ಪಕ್ಕದಲ್ಲಿ ಒಂದು ಮೈದಾನವಿತ್ತು. ಅದೊಳ್ಳೆ ಬಿಲ್ಲಿನಂತೆ ಬಾಗಿತ್ತು ಮಟ್ಟದಿಂದಿರಲಿಲ್ಲ. ಮೇಲೆ ಸಣ್ಣ ಸಣ್ಣ ಕಲ್ಲುಗಳು ಬೇರೆ. ಆದರೂ ಅಲ್ಲೇ ಹುಡುಗರು ಆಟವಾಡುತ್ತಿದ್ದರು. ಈಗ ಸ್ಕೂಲಲ್ಲಿ ಒಂದು ಫುಟ್ ಬಾಲ್ ಬೇರೆ ಇತ್ತು. ಏಳನೇ ಕ್ಲಾಸಿನ ಹುಡುಗರ ಜೊತೆ ಆರನೇ ಕ್ಲಾಸಿನ ಹುಡುಗರೂ ಕೆಲವರು ಸೇರಿ ಫುಟ್‌ಬಾಲ್ ಆಡುತ್ತಿದ್ದರು. ಈ ವರ್ಷ ಬಂದಗೀ ಸಾಬಿಯೆಂಬುವನನ್ನು ಜವಾನನಾಗಿ ಸರ್ಕಾರದವರು ನೇಮಿಸಿದ್ದರು. ಇಷ್ಟು ದಿನ ಹಳೆಯ ಸ್ಕೂಲನ್ನು ಹುಡುಗರೇ ಉಡುಗುತ್ತಿದ್ದರು. ಬೆಲ್ಲನ್ನು ಅವರೇ ಹೊಡೆಯುತ್ತಿದ್ದರು. ಆದರೆ ಬಂದಗೀ ಸಾಬಿ ಬಂದಾಗಿನಿಂದ ಆ ಕೆಲಸವನ್ನೆಲ್ಲ ಅವನೇ ಮಾಡುತ್ತಿದ್ದ.

ಸಾಯಂಕಾಲ ಫುಟ್‌ಬಾಲ್ ಆಡುವ ಮೊದಲು ಬಂದಗೀ ಸಾಬಿ ಪಂಪಿನಿಂದ ಬ್ಲಾಡರ್‌ಗೆ ಗಾಳಿ ತುಂಬುತ್ತಿದ್ದ. ಅನಂತರ ಮೇಲೆ ಲೇಸು ಕಟ್ಟುತ್ತಿದ್ದ. ಸೀನುವೂ ಹುಡುಗರ ಜೊತೆಯಲ್ಲಿ ಆಟವಾಡಲು ಓಡುತ್ತಿದ್ದ. ಆದರೆ ದೊಡ್ಡ ಹುಡುಗರು ಅದನ್ನು ಇವನಿಗೆ ಸಿಕ್ಕದಂತೆ ಒದ್ದುಕೊಂಡು ಹೋಗುತ್ತಿದ್ದರು. ಆಗೊಮ್ಮೆ ಈಗೊಮ್ಮೆ ತನ್ನ ಬಳಿಗೆ ಬಂದ ಬಾಲನ್ನು ಯಾರಾದರೂ ಬಂದು ಒದ್ದುಬಿಡುತ್ತಿದ್ದರು. ಅವನಿಗೆ ಭಾರೀ ಕೋಪ

ಬರುತ್ತಿತ್ತು. ಹಾಗೆ ಬಾಲನ್ನು ಒದ್ದವನನ್ನೇ ಒದ್ದುಬಿಡುವಷ್ಟು ಸಿಟ್ಟು! ಒಮ್ಮೆ ತನ್ನ ಬಳಿ ಬಂದ ಬಾಲನ್ನು ಜೋರಾಗಿ ಒದ್ದಾಗ, ಕಾಲಿನ ಹೆಬ್ಬೆರಳು ಲೇಸು ಹಾಕಿದ್ದ ಕಡೆ ಒದ್ದದ್ದರಿಂದ, ಬೆರಳಿಗೆ ತುಂಬ ನೋವಾಯಿತು. ಕುಂಟಿಕೊಂಡೇ ಮನೆಗೆ ಬಂದಿದ್ದ, ಅಂದು.

ಬಂದಗೀ ಸಾಬಿ ಕೆಲವು ಹುಡುಗರನ್ನು ಹೆದರಿಸಿ ಅವರಿಂದ ಅದೂ ಇದೂ ತಿಂಡಿ ಗಿಟ್ಟಿಸುತ್ತಿದ್ದ. ಮೇಷ್ಟರು ಬಂದಾಗ ಮಾತ್ರ ಮಳ್ಳಿಯಂತೆ ಸುಮ್ಮನಾಗುತ್ತಿದ್ದ. ಸೀನುವಿಗೆ ಯಾರೋ ಒಂದು ದಿವಸ ಸಾಬರಲ್ಲೂ ಮುಂಜಿ ಮಾಡುತ್ತಾರೆ ಎಂದು ಹೇಳಿದ್ದರು. ಅವನಿಗೆ ಆಶ್ಚರ್ಯವಾಗಿತ್ತು. ಬ್ರಾಹ್ಮಣರೇನೋ ಮುಂಜಿ ಮಾಡುತ್ತಾರೆ. ತೀರ ಚಿಕ್ಕವನಾಗಿ ದ್ದಾಗ ಮುಂಜಿಯಲ್ಲಿ ತೊಡೆ ಕೊಯ್ದು ಕಪ್ಪೆ ಬಿಡುತ್ತಾರೆ ಎಂದು ಹೇಳುತ್ತಿದ್ದುದರಿಂದ ಹೆದರಿದ್ದ. ಆದರೆ ಆಮೇಲೆ ಮುಂಜಿಯಾದ ಒಂದಿಬ್ಬರು ಹುಡುಗರನ್ನೇ ವಿಚಾರಿಸಿದಾಗ ಅದೆಲ್ಲ ಸುಳ್ಳು ಎಂಬುದು ಗೊತ್ತಾಗಿ ನೆಮ್ಮದಿಯಾಗಿತ್ತು. ಶೆಟ್ಟರೂ ಮುಂಜಿ ಮಾಡುತ್ತಾ ರಂತೆ. ಆದರೆ ಅವನೆಂದೂ ಶೆಟ್ಟರ ಮುಂಜಿಯನ್ನು ನೋಡಿರಲಿಲ್ಲ. ಶೆಟ್ಟರು ಜನಿವಾರ ಹಾಕಿಕೊಳ್ಳುವುದನ್ನು ಕಂಡಿದ್ದ. ಆದರೆ ಸಾಬರು ಜನಿವಾರವೆಲ್ಲಿ ಹಾಕಿಕೊಳ್ಳುತ್ತಾರೆ? ಅಂದರೆ ಮುಂಜಿ ಹೇಗಾಗುತ್ತದೆ ಎಂಬ ಸಂಶಯವುಂಟಾಗಿತ್ತು. ಒಂದು ದಿನ ಬಂದಗೀ ಸಾಬಿಯನ್ನೇ ಕೇಳಿದ.

''ಸಾಬರೂ ಮುಂಜಿ ಮಾಡ್ತಾರಂತೆ ಹೌದಾ?''

''ಊಂಕಣಪ್ಪ''

''ಮತ್ತೆ ನೀನೂ ಜನಿವಾರ ಹಾಕ್ಕಂಡಿದ್ದೀಯಾ ಹಾಗಾದ್ರೆ?''

''ನಾವು ಜನಿವಾರ ಆಕ್ಕೊಳಾಕಿಲ್ಲ. ಬೇರೆ ತರ ಮುಂಜಿ ನಮ್ದು''

''ಹೇಗೆ?''

''ಇದನ್ನಿಡಕೊಂಡು ಕುಯ್ಯಾದು'' ಎಂದು ಏನನ್ನೋ ತೋರಿಸಿದ್ದ. ಸೀನುವಿಗೆ ಕೋಪ ಬಂತು. ''ಹಲ್ಕಾ'' ಎಂದು ಅವನಿಂದ ದೂರ ಓಡಿಬಂದಿದ್ದ.

ಸಾಬಿ ಎಷ್ಟೋಸಲ ಹೆಡ್ ಮಾಸ್ಟರರ ಮನೆಗೆ ಹೋಗಿ ಬಟ್ಟೆ ಒಗೆದು ಕೊಡುತ್ತಿದ್ದ. ಸೀನು ಅದನ್ನು ನೋಡಿದ್ದು , ಹೊಸದಾಗಿ ಬಂದಿದ್ದರಲ್ಲ ಶ್ರೀನಿವಾಸರಾವ್ ಮೇಷ್ಟರು, ಅವರ ಮನೆಗೆ ಹೋಗುವಾಗ. ಹೊಸ ಮೇಷ್ಟರು, ಮೊದಲು ಒಬ್ಬರೇ ಬಂದಿದ್ದರು ಪೆಮ್ಮನಹಳ್ಳಿಗೆ. ಅವರಿಗೆ ದಿನಾ ಬೆಳಿಗ್ಗೆ ಸಾಯಂಕಾಲ ಸೀನುವೇ ತಮ್ಮ ಮನೆಯಿಂದ ಸಾರುಕೊಟ್ಟು ಬರುತ್ತಿದ್ದ. ಅದು ಅವನಿಗೊಂದು ಹೆಮ್ಮೆಯ ಕೆಲಸ. ತಾನು ಹಾಗೆ ಹೋಗುವಾಗ ಯಾರಾದರೂ ''ಏನಪ್ಪ ತಗಂಡು ಹೊರಟೆ ?''ಎಂದು ಕೇಳಿದರೆ ''ಒಸ ಮೇಷ್ಟರಿಗೆ, ಸಾರು'' ಎಂದು ಹೇಳಿ ಬೀಗುತ್ತಿದ್ದ.

ಆದರೆ ಸ್ವಲ್ಪ ದಿನಗಳ ಮೇಲೆ ಹೊಸ ಮೇಷ್ಟರ ಹೆಂಡತಿ ಮತ್ತು ತಾಯಿ ಕರ್ತವ್ಯ ನಿಂತಿತ್ತು. ಆದರೂ ಅತ್ತೆ ಏನಾದರೂ ವಿಶೇಷ ಮಾಡಿದಾಗ ಕೊಟ್ಟು ಬರಲು ಸೀನುವನ್ನು

ಕಳಿಸುತ್ತಿದ್ದರು. ಹಾಗೆ ಕೊಟ್ಟು ಬರುವಾಗ ಮೇಷ್ಟರ ಹೆಂಡತಿ ತಿಂಡಿಯೇನನ್ನಾದರೂ ಕೈಲಿಡುತ್ತಿದ್ದರು.

ಅವತ್ತು ಸಾಯಂಕಾಲ ಏಳುಗಂಟೆಯ ಹೊತ್ತಿಗೆ ಅತ್ತೆ ಹೊಸ ಮೇಷ್ಟರ ಮನೆಗೆ ಕೊಟ್ಟು ಬರುವಂತೆ ಮಧ್ಯಾಹ್ನ ಮಾಡಿದ್ದ ಒತ್ತುಶ್ಯಾಮಿಗೆ ಕಳಿಸಿದ್ದರು. ಇವನಿಗೆ ಎಷ್ಟೋ ಸಲ ಅನ್ನಿಸತು ಈ ಮೇಷ್ಟರ ಮನೆಗೆ ಮಾತ್ರ ಯಾಕೆ ಏನಾದರೂ ಕೊಡ್ತಿರ್ತಾರೆ, ಬೇರೆ ಮೇಷ್ಟರುಗಳ ಮನೆಗೇಕೆ, ಅವರ ಮನೆಯವರು ಬರುವ ಮುಂಚೆಯೂ ಏನನ್ನೂ ಅತ್ತೆ ಕೊಟ್ಟು ಕಳಿಸುತ್ತಿರಲಿಲ್ಲ ? ಈಗ ಬಂದವರು ಬ್ರಾಹ್ಮಣ ಮೇಷ್ಟರು, ಅದಕ್ಕೇ ಕೊಡುತ್ತಾರೆ ಎಂದು ಯಾರೋ ತನ್ನ ಸಂದೇಹ ನಿವಾರಣೆ ಮಾಡಿದ್ದರು. ಹಾಗಾದರೆ ಈ ಮೇಷ್ಟರು ನಮ್ಮವರೇ ಎಂದು ಸೀನುವಿಗೆ ಆಶ್ಚರ್ಯ, ಸಂತೋಷಗಳು ಉಂಟಾಗಿದ್ದವು.

ಅತ್ತೆ ಕೊಟ್ಟಿದ್ದ ಒತ್ತುಶ್ಯಾವಿಗೆಯನ್ನು ತೆಗೆದುಕೊಂಡು ಸೀನು ಮೇಷ್ಟರ ಮನೆಯ ಹತ್ತಿರ ಬಂದ. ಅಷ್ಟು ಹೊತ್ತಿಗಾಗಲೇ ಪೂರ್ತಿ ಕತ್ತಲೆಯಾಗಿತ್ತು. ಮೇಷ್ಟರ ಮನೆಯ ಒಳಗಿನಿಂದ ಯಾರನ್ನೋ ಜೋರಾಗಿ ಬೈಯುವ ಶಬ್ದ ಕೇಳಿಸಿತ್ತು. ಆದರೂ ಇವನು ಹೋಗಿ ಮೆಟ್ಟಿಲು ಹತ್ತಿದ. ಪಕ್ಕದ ಕಿಟಕಿಯಲ್ಲಿ ಒಳಗಿನ ದೃಶ್ಯ ಕಾಣಿಸಿತು. ಮೇಷ್ಟರು ತಾಯಿ ಏನೋ ಗೊಣಗುಟ್ಟುತ್ತಿದ್ದಾಗ ಮೇಷ್ಟರು ತಮ್ಮ ಹೆಂಡತಿಯನ್ನು ಒದೆಯುತ್ತಿದ್ದಾರೆ. ಆ ಹೆಂಡತಿ ಸುಮ್ಮನೆ ಬಿಕ್ಕುತ್ತ ಮಂಡಿಯ ಮೇಲೆ ಗಲ್ಲವೂರಿ ಕೂತಿದ್ದಾರೆ. ಸೀನುವಿಗೆ ಈ ದೃಶ್ಯ ನೋಡಿ ಗಾಬರಿಯಾಯಿತು, ಎದೆ ಡವಡವ ಹೊಡೆದುಕೊಳ್ಳಲು ಶುರುವಾಯಿತು. ತಾನು ತಂದಿದ್ದುದನ್ನು ಹಾಗೆಯೇ ವಾಪಸು ತೆಗೆದುಕೊಂಡು ತಮ್ಮ ಮನೆಯ ಕಡೆ ಜೋರಾಗಿ ಕಾಲುಹಾಕಿದ. ಹಿಂದೆ ತಿರುಗಿ ನೋಡಲೂ ಅವನಿಗೆ ಭಯವಾಗಿತ್ತು.

ಜೋರಾಗಿ ಬಂದದ್ದರಿಂದಲೂ ಹೆದರಿಕೆಯಿಂದಲೂ ಸೀನು ಮನೆಗೆ ಬರುವ ಹೊತ್ತಿಗೆ ಮೈಯೆಲ್ಲ ಬೆವತಿತ್ತು. ಹೊಸಮೇಷ್ಟರು ನಮ್ಮವರು ಎಂದು ಅವನಿಗೆ ಹೆಮ್ಮೆಯೆನಿಸಿತ್ತು, ಆದರೆ ಈಗಿನ ದೃಶ್ಯ ಕಂಡು ಅವನ ಮನಸ್ಸೆಲ್ಲ ಕದರಿ ಒಂಡಾಗಿ ಹೋಗಿತ್ತು. ಅವರು ಹೆಂಡತಿಗೆ ಏಕೆ ಹೊಡೆಯುತ್ತಾರೆ ? ಆದರೆ ಏಟು ತಿನ್ನುತ್ತ ಕೂತ ಹೆಂಡತಿ ಒಂದಾದರೂ ಏಟು ವಾಪಸೇಕೆ ಕೊಡಲಿಲ್ಲ ಎಂದು ಅವನಿಗೆ ಆಶ್ಚರ್ಯ ! ಅರವತ್ತೊಂದು ಅವತ್ತೊಂದು ದಿನ ಬೆಂಗಳೂರಲ್ಲಿ ತನ್ನ ಸಹಪಾಠಿಯೊಬ್ಬ ತಾನು ಅವನ ಬಳಪ ಕದ್ದನೆಂದು ಸುಳ್ಳುಸುಳ್ಳು ಹೇಳಿ ಹೊಡೆದಿದ್ದ. ಆಗ ತಾನೂ ಅವನಿಗೆ ಒಂದೆರಡು ಏಟು ಕೊಟ್ಟಿದ್ದ ; ಅವನು ತನ್ನ ಕೈಯನ್ನು ಬಲವಾಗಿ ಹಿಡಿದುಕೊಂಡದ್ದರಿಂದ ಹೆಚ್ಚು ಹೊಡೆಯಲು ತನಗೆ ಆಗಿರಲಿಲ್ಲ, ಅವನ ಕೈಯಲ್ಲಿ ಬಲವಾದ ಶಕ್ತಿಯಿತ್ತು. ಆದರೆ ಎರಡಾದರೂ ಏಟು ಹೊಡೆದಿದ್ದೆನಲ್ಲ. ತನಗಿಂತ ದೊಡ್ಡವರಾದ ಮೇಷ್ಟರ ಹೆಂಡತಿ ಏಕೆ ಹೊಡೆಯಲಾಗಲಿಲ್ಲ, ಅವರು ತುಂಬ ಒಳ್ಳೆಯವರೇನೋ ಎಂದುಕೊಂಡಿದ್ದ. ಅವರ ಬಗ್ಗೆ ಪ್ರೀತಿಯುಂಟಾಗಿತ್ತು. ಕಣ್ಣಲ್ಲಿ ನೀರು ಒಸರಿತು.

ಅಪ್ಪನೂ ಅಮ್ಮನನ್ನು ಆದಕ್ಕೇ ಇದಕ್ಕೆ ಎಂದ ಬೈಯುತ್ತಿದ ನೆನಪು ಬಂತು. ಆದರೆ

ಅವರೆಂದೂ ಅಮ್ಮನನ್ನು ಹೊಡೆದಿರಲಿಲ್ಲ. ಆದರೆ ಬೈಸಿಕೊಂಡ ಅಮ್ಮ ಎಂದೂ ಅಪ್ಪನನ್ನು ಜೋರಾಗಿ ಬೈದಿರಲಿಲ್ಲ. ಎಲ್ಲ ವಿಚಿತ್ರ ಎನಿಸಿತು. ಹೆಂಡತಿಯರು ಬೈಯಬಾರದೇನೋ, ಹೊಡೆಯಬಾರದೇನೋ ಎಂಬ ಭಾವನೆಯುದಿಸಿತು.

ಜೋರಾಗಿ ಏದುಸುರುಬಿಡುತ್ತ ಬೆವರಿ ಕಣ್ಣಲ್ಲಿ ಹನಿಗೂಡಿಸಿಕೊಂಡು ಬಂದ ಸೀನುವನ್ನು ಅತ್ತೆ ಕಾತರದಿಂದ ಪ್ರಶ್ನೆ ಮಾಡಿದ್ದರು. ಏನನ್ನಾದರೂ ಕಂಡು ಹೆದರಿದನೇನೋ ಎನಿಸಿತು. ರಾತ್ರಿಯ ಹೊತ್ತು ತಾನು ಒಂಟಿಯಾಗಿ ಅವನನ್ನು ಕಳಿಸಬಾರದಾಗಿತ್ತೇನೋ ಎನ್ನಿಸಿತು. ಆದರೆ ಹಿಂದೆ ಎಷ್ಟೋ ಬಾರಿ ಒಂಟಿಯಾಗಿ ಹೋಗಿ ಬಂದಿದ್ದನಲ್ಲ! ಅತ್ತೆಯ ಪ್ರಶ್ನೆಗಳನ್ನು ಹಾಕಿದಾಗ ತಕ್ಷಣ ಉತ್ತರಿಸಲು ಸೀನುವಿಗೆ ಸಾಧ್ಯವಾಗಿರಲಿಲ್ಲ. ಸ್ವಲ್ಪ ಹೊತ್ತು ಸುಧಾರಿಸಿಕೊಂಡು ತಾನು ಮೇಷ್ಟರ ಮನೆಯಲ್ಲಿ ಕಂಡ ದೃಶ್ಯವನ್ನು ತೊದಲುತ್ತಲೇ ವರದಿ ಒಪ್ಪಿಸಿದ. ಅತ್ತೆ ಲೊಚಗುಟ್ಟಿಕೊಂಡು ಏನು ಕರ್ಮವೊ ಎಂದುಕೊಂಡರು.

ರಾತ್ರಿ ಮಾವನ ಜೊತೆ ತಾನು ಊಟಕ್ಕೆ ಕೂತಾಗ, ಮತ್ತೆ ಮಧ್ಯಾಹ್ನ ಮಾಡಿದ್ದ ಸ್ಯಾವಿಗೆ ಬೇಕೆ ಎಂದು ಅತ್ತೆ ಕೇಳಿದಾಗ ಮಾವ.

"ಯಾಕೆ, ಶ್ರೀನಿವಾಸರಾಯರ ಮನೆಗೆ ಕಳಿಸಿರಲಿಲ್ಲವಾ ?" ಎಂದರು.

"ಕಲಿಸಿದ್ದೆ ಆದರೆ ಸೀನು ಅದನ್ನು ವಾಪಸ್ಸು ತಂದುಬಿಟ್ಟ"

"ಯಾಕಂತೆ ?"

"ಮೇಷ್ಟರು ಹೆಂಡತೀನ ಹೋಡಿತಿದ್ದದ್ದು ಕಿಟಕೀಲಿ ಕಾಣಿಸಿತಂತೆ. ಹೆದರಿ ವಾಪಸು ತಂದುಬಿಟ್ಟ"

"ಓ" ಎಂದರು ಮಾವ.

"ಅದೇನು ಆ ಮೇಷ್ಟರಿಗೆ ಬಂದಿರೋದು ಧಾಡಿ, ಹೆಂಡತೀನ ಹೊಡೆಯೋಕೆ ?" ಎಂದು ಅತ್ತೆ ಸ್ವಲ್ಪ ಕೋಪದಿಂದಲೇ ಕೇಳಿದ್ದರು.

"ಎಲ್ಲಾದ್ರೂ ಹಾಳಾಗ್ಲಿ ಬಿಡು, ನಮಗ್ಯಾಕೆ ಆ ಸುದ್ದಿ" ಎಂದು ಮಾವ ಆ ವಿಚಾರವನ್ನು ಅಲ್ಲಿಯೇ ಮುಗಿಸಿದ್ದರು. ಈಗ ಮತ್ತೊಮ್ಮೆ ಸೀನುವಿನ ಕಣ್ಣ ಮುಂದೆ ಆ ದೃಶ್ಯ ಬಂದಿತ್ತು. ಊಟ ಸೇರದಾಯಿತು.

ಮಾರನೇ ದಿನ ಸ್ಕೂಲಲ್ಲಿ ಶ್ರೀನಿವಾಸರಾವ್ ಮೇಷ್ಟರನ್ನು ಕಂಡಾಗ ಇವನಿಗೆ ಭಯವಾಯಿತು. ಆದರೆ ಅವರು ಮಾತ್ರ ಇವನನ್ನು ನಗುನಗುತ್ತಾ ಮಾತಾಡಿಸಿದ್ದರು. "ನಿಮ್ಮ ಮಾವ ಚೆನ್ನಾಗಿದ್ದಾರೇನಪ್ಪ?" ಎಂದು ವಿಚಾರಿಸಿದ್ದರು. ಅವನು ಮಾತ್ರ ಉತ್ಸಾಹ ತೋರಲಾಗದಿದ್ದರೂ "ಹ್ಞೂ" ಎಂದಿಷ್ಟೇ ಅನಿವಾರ್ಯವಾಗಿ ಉತ್ತರಿಸಿದ್ದ. ಇವರು ಯಾಕೆ ಹೆಂಡತಿಯನ್ನು ಹೊಡೆಯುತ್ತಿದ್ದರು ಎಂಬ ಪ್ರಶ್ನೆ ಅವನನ್ನು ಕಾಡಿಸಿತು, ಮತ್ತೆ.

ಹೊಸ ಸ್ಕೂಲಿನ ಕಟ್ಟಡದ ಮುಂದೆ ಹುಡುಗರು - ಬಂದಗೀಸಾಬಿ ಇವರ ಸಹಾಯದಿಂದ ಬೇಲಿ ಸಿದ್ಧವಾಯಿತು. ಮಧ್ಯೆ ದಾರಿ ಬಿಟ್ಟು ಎರಡೂ ಕಡೆಗಳಲ್ಲಿ ಹೂವಿನ

ಗಿಡಗಳನ್ನೂ ತರಕಾರೀ ಗಿಡಗಳನ್ನೂ ನೆಟ್ಟರು. ಪ್ರತಿದಿನ ಸಾಯಂಕಾಲದ ಹೊತ್ತು ಕೊನೆಯ ಪೀರಿಯಡ್‌ನಲ್ಲಿ ಹತ್ತಿರದ ಬಾವಿಯಿಂದ ಹುಡುಗರು ನೀರು ತಂದು ಆ ಗಿಡಗಳಿಗೆ ಸುರಿಯುತ್ತಿದ್ದರು. ಸಾಬಿ ಅವುಗಳಿಗೆ ಪಾತಿ ಮಾಡಿ, ಹುಡುಗರು ತಂದ ನೀರನ್ನು ತೆಗೆದುಕೊಂಡು, ಯಾವುದಕ್ಕೇ ಎಷ್ಟು ಬೇಕೋ ಅಷ್ಟು ನೀರನ್ನು ಸುರಿಯುತ್ತಿದ್ದ. ಸ್ವಲ್ಪ ದಿನಗಳಲ್ಲಿಯೇ ತರಕಾರೀ ಗಿಡಗಳಲ್ಲಿ ಕಾಯಿಬಿಡಲು ಶುರುವಾಗಿತ್ತು. ಕೆಲವು ವೇಳೆ ಅವುಗಳನ್ನು ಮೇಷ್ಟರುಗಳ ಮನೆಗೆ ಸರಬರಾಜು ಮಾಡುತ್ತಿದ್ದ ಬಂದಗೀ ಸಾಬಿ.

ಪ್ರಕೃತಿ ಪಾಠ ಪೂರ್ತಿ ನಿಂತು ಹೋಗಿತ್ತು. ಅದರ ಬದಲು ದಿನ ಸಾಯಂಕಾಲ ಗಿಡಗಳಿಗೆ ನೀರು ಹಾಕಬೇಕಾಗಿತ್ತು. ಹುಡುಗರಿಗೆ ಇದರಿಂದ ಸ್ವಲ್ಪ ಬೇಜಾರು. ಹಾಯಾಗಿ ಶನಿವಾರ ಎರಡು ಪಾಠಗಳಾದ ಮೇಲೆ ಓಡಾಡಿಕೊಂಡಿರಬಹುದಾಗಿತ್ತು. ಆದರ ಬದಲು ಈಗ ಶನಿವಾರದ ಕೊನೆಯ ಎರಡು ಪಿರೀಡುಗಳಲ್ಲಿ ಎಲ್ಲ ಕ್ಲಾಸಿನ ಹುಡುಗರನ್ನೂ ಸೇರಿಸಿ, ಹುಡುಗರಿಂದ ಕತೆ ಹೇಳಿಸುತ್ತಿದ್ದರು. ಕೆಲವು ವೇಳೆ ಡಿಬೇಟು ಮಾಡಿಸುತ್ತಿದ್ದರು. ಯಾರು ಕತೆ ಹೇಳುತ್ತೀರಿ, ಯಾರು ಮಾತಾಡುತ್ತೀರಿ ಎಂದು ಮೇಷ್ಟರುಗಳು ಕೇಳಿದಾಗ ತಾವಾಗಿ ಮೇಲೇಳುತ್ತಿದ್ದವರು ಒಬ್ಬರೋ ಇಬ್ಬರೋ. ಮುಂದೆ ಕೆಲವು ದಿನ ಮೇಷ್ಟರೇ ಹುಡುಗರನ್ನು ಕರೆದು ಮಾತಾಡು ಎನ್ನುತ್ತಿದ್ದರು. ಆಗ ತಮ್ಮ ಸರದಿ ಎಲ್ಲಿ ಬಂದುಬಿಡುತ್ತದೋ ಎಂಬ ಭಯ ಮಿಕ್ಕ ಹುಡುಗರಿಗಾಗುತ್ತಿತ್ತು. ಇದನ್ನು ತಪ್ಪಿಸಲು ಇಂಥಿಂಥ ಹುಡುಗರು ಇಂಥಿಂಥ ದಿನ ಮಾತಾಡಬೇಕೆಂದು ರಿಜಿಸ್ಟರಿನಲ್ಲಿದ್ದ ಹುಡುಗರ ಹೆಸರಿಗೆ ಅನುಗುಣವಾಗಿ ಪಟ್ಟಿಮಾಡಲು ಹೆಡ್ಮಾಸ್ಟರು ಸೀನುವನ್ನೇ ನೇಮಿಸಿದ್ದರು. ಡಿಬೇಟಿಂಗ್ ಸೊಸೈಟಿಯ ಕಾರ್ಯದರ್ಶಿಯೆಂದು ಅವನನ್ನು ಕರೆದರು. ಅವನಂತೂ ಪ್ರತಿ ಶನಿವಾರ ಮಾತಾಡಲೇಬೇಕಿತ್ತು.

ಮೊದಮೊದಲು ಸೀನುವಿಗೆ ಮಾತಾಡಲು ಮೇಲೆದ್ದು ನಿಂತರೆ ನಾಲಿಗೆ ಆಡುವುದೇ ಇಲ್ಲವೇನೋ ಎನಿಸಿಬಿಡುತ್ತಿತ್ತು. ಮೊದಲ ದಿನವಂತೂ ಎದ್ದಾಗ ಮುಂದೆ ಯಾರನ್ನೂ ನೋಡುವ ಧೈರ್ಯವಾಗಿರಲಿಲ್ಲ. ಹಿಂದಿನ ದಿನ ಏನೇನೋ ಮಾತಾಡಬೇಕೆಂದು ಗುರುತು ಮಾಡಿಕೊಂಡಿದ್ದ. ಆದರೆ ಶುರು ಮಾಡಲು ಸಾಧ್ಯವೇ ಆಗಲಿಲ್ಲ. ನಿಂತೇ ಬಿಟ್ಟ "ಹ್ಞೂ" ಎಂದಿದ್ದರು ಹೆಡ್ಮಾಸ್ಟರು ಸ್ವಲ್ಪ ಹೊತ್ತಾದ ಮೇಲೆ. ಎಲ್ಲೋ ಯೋಚನೆ ಮಾಡುತ್ತಿದ್ದ ಇವನು ಆ ಹೂಂಕಾರ ಕೇಳಿ ಬೆಚ್ಚಿದ ; ಹುಡುಗರೆಲ್ಲ ನಕ್ಕಿದ್ದರು. ಅವನು ಮೈಮೇಲೆಲ್ಲ ಬೆವರು ಹರಿಯಲು ಪ್ರಾರಂಭಿಸಿತ್ತು. ಹಣೆಯಿಂದ ಕೆನ್ನೆಯ ಮೇಲೆ ಬಂದ ಬೆವರಹನಿ ಅವನಿಗೆ ಕಚಗುಳಿಯಿಟ್ಟ ಹಾಗೆ ಬೇರೆ ಮಾಡಿತ್ತು. ಅದನ್ನು ಒರೆಸಿಕೊಳ್ಳಲೂ ಕೈಯೇಳದು. ಮತ್ತೆ ಹೆಡ್ಮಾಸ್ಟರು ಹೇಳಿದ ಮೇಲೆ ಏನೇನೋ ಎರಡೇ ವಾಕ್ಯವನ್ನು ಕಷ್ಟದಿಂದ ಹೇಳಿ ಮುಗಿಸಿಬಿಟ್ಟಿದ್ದ. ಈ ಶನಿವಾರ ಬರಬಾರದು ಎಂದು ಅವನು ಮನಸ್ಸಿನಲ್ಲಿ ಪ್ರಾರ್ಥಿಸುತ್ತಿದ್ದ.

ಒಂದು ಶನಿವಾರ ಎಂದೂ ಬಾರದ ಮಳೆ ಇನ್ನೇನು ಚರ್ಚೆ ಪ್ರಾರಂಭ

ಮಾಡಬೇಕು ಎನ್ನುವ ಹೊತ್ತಿಗೆ ಬಂತು. ಹುಡುಗರೆಲ್ಲ ಹೋ ಎಂದು ಎದ್ದು ನಿಂತರು. ಇರಿಚಲು ಹೊಡೆಯುತ್ತಿತ್ತು. ಜೊತೆಗೆ ಸೋರಕವಾದ ಸೂರು ಬೇರೆ. ಸೋರದ ಮೂಲೆಯೊಂದರಲ್ಲಿ ನಿಂತರು. ಅದುವರೆಗೆ ಕಟ್ಟಿಹೋಗಿದ್ದ ಬಾಯಿ ಮಳೆ ಹೆಚ್ಚಿದಂತೆಲ್ಲ ಸಡಿಲಾಗತೊಡಗಿತು. ಮೂಲೆಯಲ್ಲಿ ನಿಂತೇ ಸೋರುತ್ತಿದ್ದ ಕಡೆಗೆ ಕೈಚಾಚಿ ಅಂಗೈಯಲ್ಲಿ ಬಿದ್ದ ಹನಿಗಳನ್ನು ತೀರ್ಥದಂತೆ ಕುಡಿಯತೊಡಗಿದ್ದರು. ಪ್ರತಿ ಶನಿವಾರವೂ ಮಳೆ ಬರಬಾರದೇ ಎನಿಸಿರಬೇಕು ಅವತ್ತು.

ಅಂದು ಸೋರುತ್ತಿದ್ದುದನ್ನು ಕಂಡ ಕೆಂಚಪ್ಪನವರು ''ನೋಡಿ ಸಾರ್. ಸ್ಕೂಲು ಬಿಲ್ಡಿಂಗ್ ಉದ್ಘಾಟನೆಯಾಗಿ ಮೂರು ತಿಂಗಳೂ ಆಗಿಲ್ಲ'' ಎಂದರು.

''ಅಗ್ಗದ ಶೆಟ್ಟಿ ಮುಗ್ಗಿದ ಜೋಳ'' ಎಂದು ಮೇಲೆ ನೋಡುತ್ತ ಉತ್ತರವಿತ್ತರು ಹೆಡ್ಮಾಸ್ಟರು.

ಹೆಡ್‌ಮಾಸ್ಟರರು ಹೇಳಿದ ಗಾದೆ ಕೇಳಿ ಸೀನುವಿಗೆ ಲಕ್ಷ್ಮೀಪತಿ ಶೆಟ್ಟರ ನೆನಪಾಯಿತು ; ಜೊತೆಗೆ ಮಾವ ಅವರ ಬಗ್ಗೆ ಹೇಳಿದ್ದ ಮಾತೂ ಜ್ಞಾಪಕಕ್ಕೆ ಬಂತು. ಸ್ಕೂಲೆಲ್ಲ ಸೋರುವ ಹಾಗೆ ಕಟ್ಟಿಸಿದ್ದಾರಲ್ಲ ಎಂದು ಶೆಟ್ಟರ ಬಗ್ಗೆ ಅಸಮಾಧಾನವಾಯಿತು.

ಶೆಟ್ಟರು ತಮ್ಮ ಹತ್ತಿರ ತುಂಬ ದುಡ್ಡಿದೆಯೆಂದು ಎಂದೂ ತೋರಿಸಿ ಕೊಂಡಿರಲಿಲ್ಲ. ಆದರೆ ಜನ ಮಾತ್ರ ಅವರ ಹತ್ತಿರ ಮಡಕೆಗಟ್ಟಲೆ ಹಣವಿದೆಯೆಂದು ಹೇಳಿಕೊಳ್ಳುತ್ತಿದ್ದರು. ಶೆಟ್ಟರ ಮನೆಯ ಪಕ್ಕದಲ್ಲಿಯೇ, ಅವರದಕ್ಕೆ ಹೊಂದಿಕೊಂಡ ಹಾಗೆ ವೀರಪ್ಪಶೆಟ್ಟರ ಮನೆಯಿತ್ತು. ಇವರಿಬ್ಬರೂ ಚಿಕ್ಕಪ್ಪ-ದೊಡ್ಡಪ್ಪರ ಮಕ್ಕಳಂತೆ. ಇವರ ತಾತ ಇದ್ದಾಗ ಆ ಎರಡು ಮನೆಗಳೂ ಒಂದಾಗಿದ್ದುವಂತೆ ; ಇವರ ತಂದೆಯವರ ಕಾಲಕ್ಕೆ ಭಾಗವಾಗಿದ್ದರು. ತಾತ ವೀರಪ್ಪಶೆಟ್ಟರ ಮನೆಯಿರುವ ಜಾಗದಲ್ಲಿ ಬಿಂದಿಗೆಯಲ್ಲಿ ಚಿನ್ನವನ್ನು ತುಂಬಿ ಹೂತಿಟ್ಟಿದ್ದರಂತೆ. ಅದು ಲಕ್ಷ್ಮೀಪತಿಶೆಟ್ಟರ ತಂದೆ ಭಾಗ ಪಡೆದ ಮೇಲೆ ಒಳಗಿನಿಂದಲೇ ಇವರ ಮನಯ ಕಡೆ ಸರಿದು ಬಂದಿತಂತೆ. ಹೀಗೆ ಲಕ್ಷ್ಮೀ ಇವರ ಮನೆಗೆ ಸರಿದ ಮೇಲೆ ಅದು ಮತ್ತೆ ಆ ಕಡೆ ಸರಿಯದ ಹಾಗೆ ಮತ್ತೊಂದು ಗೋಡೆಯನ್ನು ಅಡ್ಡಲಾಗಿ ಕಟ್ಟಿದ್ದರಂತೆ. ಆ ದುಡ್ಡೆಲ್ಲ ಲಕ್ಷ್ಮೀಪತಿಶೆಟ್ಟರ ಹತ್ತಿರವೇ ಇದೆಯೆಂದು ಜನ ಕತೆ ಹೇಳುತ್ತಿದ್ದರು. ಅಷ್ಟೊಂದು ದುಡ್ಡಿರೋವಾಗ ಚೆನ್ನಾಗಿ ಯಾಕೆ ಸ್ಕೂಲು ಕಟ್ಟಿಸಬಾರದಾಗಿತ್ತು ಎನ್ನಿಸಿತ್ತು ಸೀನುವಿಗೆ.

ಶೆಟ್ಟರು ವಿಚಿತ್ರವಾಗಿ ಮಾತನಾಡುತ್ತಿದ್ದರು. ಸೀನುವೂ ಎಷ್ಟೋಸಲ ಅವರ ಅಂಗಡಿ ಮನೆಗೆ ಹೋಗಿ ಸಾಮಾನು ತರಬೇಕಾಗಿತ್ತಲ್ಲ; ಕಳ್ಳೆಕಾಯಿ ಎಣ್ಣೆ ಸೀಮೆ ಎಣ್ಣೆ ಸೋಪು, ಬಟ್ಟೆ ಉಪ್ಪು- ಇವುಗಳನ್ನೆಲ್ಲ ಅಂಗಡಿಯಿಂದಲೇ ತರಬೇಕಾಗಿತ್ತು. ತಾನು ಸುಮ್ಮನೆ ಹೋಗಿ ಮಾವನೋ ಅತ್ತೆಯೋ ಹೇಳಿದಷ್ಟು ಸಾಮಾನು ತರುವುದು ; ಶೆಟ್ಟರು ತಮ್ಮ ಪುಸ್ತಕದಲ್ಲಿ ಅದನ್ನು ಬರೆದುಕೊಳ್ಳುವುದು ; ಮಾವ ಯಾವಾಗಲಾದರೂ ಎಷ್ಟು ಬಾಕಿಯಿದೆಯೆಂದು ಕೇಳಿ ದುಡ್ಡು ತೀರಿಸುತ್ತಿದ್ದರು. ಸಾಮಾನ್ಯವಾಗಿ ಸಾಮಾನನ್ನೆಲ್ಲ

ಅವಾಗಾವಾಗ ತಾನೇ ತರುತ್ತಿದ್ದುದು. ತನಗೆ ಹಬ್ಬಕ್ಕೆಂದು ಬಟ್ಟೆ ಕೊಡಿಸುವ ಸಂದರ್ಭಗಳಲ್ಲಿ ಮಾತ್ರ ಮಾವ ಜೊತೆಗೆ ಬರುತ್ತಿದ್ದರು.

ತಾನೊಬ್ಬನೇ ಹೋದಾಗ ಶೆಟ್ಟರು ಹಾಸ್ಯ ಮಾಡುತ್ತಿದ್ದರು.

''ನೆಗಡಿ ಬಂದರೆ ತಾನೇಪ್ಪ ನೀನು ಬರೋದು'' ಎಂದಿದ್ದರು ಒಂದು ದಿನ. ತನಗದು ಅರ್ಥವಾಗಿರಲಿಲ್ಲ. ಕಣ್ಣು ಕಣ್ಣು ಬಿಟ್ಟಿದ್ದ.

ಇನ್ನೊಂದು ಬಾರಿ ಶೆಟ್ಟರು ಅವನನ್ನು ಭಾರಿ ಅವಮಾನಕ್ಕೆ ಗುರಿಮಾಡಿದ್ದರು ಒಂದು ಭಾನುವಾರ ಮಧ್ಯಾಹ್ನ. ಪಂಚಾಯಿತಿ ಹಾಲಿನ ಪಕ್ಕದಲ್ಲಿದ್ದ ಅರಳೀಕಟ್ಟೆಯ ಮೇಲೆ ಇವನು ಆಟವಾಡುತ್ತಿದ್ದ. ತಮ್ಮ ಅಂಗಡಿ ಮನೆಯ ಮುಂದೆ ಕೂತುಕೊಂಡು ಇತರರೊಂದಿಗೆ ಹರಟುತ್ತಿದ್ದ ಶೆಟ್ಟರು ತನ್ನನ್ನು ಕರೆದಾಗ ಇವನಿಗೆ ಆಶ್ಚರ್ಯವಾಯಿತು. ಏನಾದರೂ ಕೊಡುತ್ತಾರೆಂದು ಇವನು ಸ್ವಲ್ಪ ಆಸೆಯಿಂದ ಹೊರಟ. ಅಲ್ಲಿ ಹೋದಾಗ ಇವನನ್ನು ಕುರಿತು ಶೆಟ್ಟರು.

''ನೆಗಡಿಯಾಗಿ ಬಿಟ್ಟಿದೆ, ಗೌಡರ ಮನೆಗೆ ಹೋಗಿ ಸ್ವಲ್ಪ 'ಸಾಷ್ಟಾಂಗ' ತಗೊಂಡು ಬಾ'' ಎಂದರು. ಇವನು ಇರಬಹುದೇನೋ ಎಂದುಕೊಂಡು ಗೌಡರ ಮನೆಗೆ ಹೋಗಿ, ಅವರ ಹೆಂಡತಿಯನ್ನು ಕೇಳಿದಾಗ ಅವರು ''ನಮ್ಮ ಮನ್ಯಾಗೆ ಅಂತಾದ್ಯಾವ್ದೂ ಇಲ್ಲ'' ಎಂದರು. ಅದನ್ನೇ ಹೇಳಿದಾಗ ಶೆಟ್ಟರು ''ಹಾಗಾದರೆ, ನಮ್ಮ ಗೋವಿಂದ ಸೆಟ್ರ ಮನೆಯಲ್ಲಿ ಇದೆಯೇನೋ ಕೇಳಿಕೊಂಡು ಬಾ'' ಎಂದರು. ಅವರ ಮನೆ ಇದ್ದದ್ದು ಸ್ವಲ್ಪ ಮೇಲೆ. ಬೇಸರದಿಂದಲೇ ಅಲ್ಲಿಗೆ ಹೋದ ; ಅವರ ಮನೆ ಬಾಗಿಲು ಹಾಕಿತ್ತು. ಅದನ್ನೇ ಬಂದು ವರದಿಮಾಡಿದ. ಆಮೇಲೆ ಅವರ ಮನೆ, ಇವರ ಅಂಗಡಿ ಎಂದು ಅಲ್ಲಿ ಇಲ್ಲಿ ಕಳಿಸಿದ್ದರು ಶೆಟ್ಟರು. ಅಲ್ಲೂ ಸಾಷ್ಟಾಂಗ ಸಿಕ್ಕಲಿಲ್ಲ. ಕೊನೆಗೆ ಅವರು ''ನೋಡು, ಎಲ್ಲೂ ಇಲ್ಲ. ಮೂಗು ಕಟ್ಟಿಕೊಂಡು ಬಿಟ್ಟಿದೆ. ನಿಮ್ಮತ್ತೆ ವೈದ್ಯ ಮಾಡ್ತಾರಲ್ಲ. ನಿಮ್ಮನೇಲಿ ಇದ್ದೇ ಇರುತ್ತೆ, ಸ್ವಲ್ಪ ತಗೊಂಡು ಬಾ, ಬೆಲ್ಲ-ಕೊಡ್ತೀನಿ'' ಅಂದಿದ್ದರು.

ತಾನು ಹಾಗೆಯೇ ಮನೆಗೆ ಬಂದಿದ್ದ. ಅತ್ತೆ ಮನೇಲಿರಲಿಲ್ಲ. ಶ್ಯಾಮಲಮ್ಮಜ್ಜಿ ಮನೇಗೆ ಅವಲಕ್ಕಿ ಕುಟ್ಟಲು ಹೋಗಿದ್ದರು, ಮಾವ ಏನನ್ನೋ ಬರೆಯುತ್ತಿದ್ದರು. ಇವನು ಏನೆಂದು ಮನೆಯಲ್ಲಿ ಹುಡುಕಬೇಕು ? ಆಕಡೆ ಈಕಡೆ ನೋಡುತ್ತ ನಿಂತ. ಅದನ್ನು ಗಮನಿಸಿದ ಮಾವ,

''ಏನಯ್ಯ ?'' ಅಂದರು.

''ಮತ್ತೆ ಲಕ್ಷ್ಮೀಪತಿ ಸೆಟ್ಟರಿಗೆ ತುಂಬ ನೆಗಡಿಯಂತೆ, ಅದಕ್ಕೇ ಸ್ವಲ್ಪ ಸಾಷ್ಟಾಂಗ ಬೇಕಂತೆ.''

ಗಮನ ಬೇರೆಡೆಯಿದ್ದ ಮಾಮನಿಗೆ ಸರಿಯಾಗಿ ಕೇಳಿಸಿತೋ ಇಲ್ಲವೋ ಮತ್ತೊಮ್ಮೆ ''ಏನು ಬೇಕಂತೆ ?'' ಎಂದು ಕೇಳಿದರು.

''ಸ್ವಲ್ಪ ಸಾಷ್ಟಾಂಗ'' ಅಂದ.

ಅವರು ಈ ಕಡೆ ತಿರುಗಿದರು. ''ಅಯ್ಯೋ ನಿನ್ನ ಶೆಟ್ಟಿ ಕುಚೋದ್ಯಕ್ಕೆ ಹೇಳಿ ಕಳಿಸಿದಾನೆ. ನಿನಗಿಷ್ಟೇನಾ ತಿಳಿಯೋದು ?'' ಅಂದರು.

''ಯಾಕೆ ?'' ಎಂದ ಆಶ್ಚರ್ಯದಿಂದ.

''ಅಲ್ಲಯ್ಯಾ, ಸಾಷ್ಟಾಂಗ ಅನ್ನೋದು ಏನಾದ್ರೂ ಇದ್ಯೇನಯ್ಯಾ ! ಸಾಷ್ಟಾಂಗ ಅಂದರೆ ನಮಸ್ಕಾರ ಮಾಡೋದಲ್ಲವಾ, ಮೈಯನ್ನೆಲ್ಲ ನೆಲದ ಮೇಲೆ ಚಾಚಿ ನಮಸ್ಕಾರ ಮಾಡೋದಕ್ಕೆ ಸಾಷ್ಟಾಂಗ ನಮಸ್ಕಾರ ಅನ್ನಲ್ಲವಾ ?'' ಎದು ನಕ್ಕರು.

ಶೆಟ್ಟರ ಮೇಲೆ ತುಂಬ ಕೋಪ ಬಂದಿತ್ತು ಅಷ್ಟೊಂದು ಕಡೆ ಸಾಷ್ಟಾಂಗ ಇಸಕೊಂಬಾ ಅಂತ ಹೇಳಿಕಳಿಸಿದ್ದು ಕೆಟ್ಟ ಶೆಟ್ಟರು. ಮಾವನ ಮುಂದೆ ಕೇಳೋ ಹಾಗೆ ಮಾಡಿ, ನನ್ನ ಕಂಡು ನಗೋ ಹಾಗೆ ಮಾಡಿಬಿಟ್ಟರು. ಅಳುವೇ ಬಂದ ಹಾಗಿತ್ತು. ತಾನೆಲ್ಲಾದರೂ ಕಂಡರೆ, ''ಸಾಷ್ಟಾಂಗ ಸಿಗ್ತಾ ?'' ಅಂತ ಚೇಷ್ಟೆ ಮಾಡಿ ಕೇಳುವ ಶೆಟ್ಟರ ಮುಖ ಕಣ್ಣಿಗೆ ಬಂದಂತಾಗಿ ಒಂದಷ್ಟು ದಿನ ಆ ಕಡೆ ತಲೆಯೇ ಹಾಕಿರಲಿಲ್ಲ.

ಇನ್ನೊಂದು ಸಲ ತನ್ನ ಕಂಡು ''ನಿಮ್ಮ ಮಾವ ನಿನ್ನನ್ನ ದತ್ತು ತಗೊಂತಾರ ? ಒಳ್ಳೆ ಚಾನ್ಸ್ ನಿಂದೂನು. ಎಷ್ಟೊಂದು ಆಸ್ತಿ ಸಿಕ್ಕತ್ತೆ'' ಅಂದಿದ್ದರು. ಸೀನುವಿಗೆ ಆಸ್ತಿ, ದತ್ತು ಯಾವುದೂ ಅರ್ಥವಾಗಿರಲಿಲ್ಲ. ದತ್ತು ತಗೋತಾರೆ ಅನ್ನೋ ಮಾತನ್ನು ಕೇಳಿದ್ದರೂ ಹಾಗಂದರೇನೆಂಬ ತಿಳುವಳಿಕೆಯಿರಲಿಲ್ಲ. ಇದನ್ನೆಲ್ಲ ಕೇಳಿದಾಗ ಶೆಟ್ಟರು ವಿಚಿತ್ರವಾಗಿ ಮಾತಾಡ್ತಾರೆ ಎನಿಸಿತ್ತು.

ಎಲ್ಲ ನೆನಪಿಗೆ ಬಂದು ಶೆಟ್ಟರ ಬಗ್ಗೆ ಇಟ್ಟುಕೊಂಡಿದ್ದ ಒಳ್ಳೆಯ ಭಾವನೆ ಕಡಿಮೆಯಾಯಿತು. ಸೋರಿ, ತಾವೆಲ್ಲ ನೆನೆಯುವ ಹಾಗೆ ಮಾಡಿದರಲ್ಲ ಈ ಶೆಟ್ಟರು ಎಂಬ ಅಸಮಾಧಾನವಾಯಿತು. ಮಾವ ಶೆಟ್ಟರ ಬಗ್ಗೆ ಇಟ್ಟುಕೊಂಡಿದ್ದ ತಾತ್ಸಾರ ಮನೋಭಾವವೇ ಸರಿಯೇನೋ ಅನ್ನಿಸಿತು. ಅವತ್ತು, ಸ್ಕೂಲು ಉದ್ಘಾಟನೆಯಾದಾಗ ಒಂದು ನಾಲ್ಕು ಮಾತು ಆಡೋದಕ್ಕೂ ಆಗದೆ ''ಎಲ್ಲರಿಗೂ ನಮಸ್ಕಾರ'' ಅಂದು ಕೂತುಕೊಂಡು ಬಿಟ್ಟರಲ್ಲ ! ಮಾವ ಎಷ್ಟು ಚೆನ್ನಾಗಿ ಮಾತಾಡಿದ್ದರು. ವಿದ್ಯಾ ಅಧಿಕಾರಿಗಳು ತಾವು ಮಾತಾಡಿದಾಗ ಮಾವನನ್ನು ಹೊಗಳಿದ್ದರಲ್ಲ, ಅದು ಸರಿ ಎನ್ನಿಸಿತು.

ಈ ಹೊತ್ತಿಗೆ ಮಳೆ ಬಿಟ್ಟಿತ್ತು; ಆದರೆ ಸ್ಕೂಲು ಬಿಡುವ ಸಮಯವೇನಾಗಿರಲಿಲ್ಲ. ಆದರೆ ಕುಳಿತುಕೊಳ್ಳಲು ಜಾಗವೆಲ್ಲಿದೆ ? ಕುಳಿತುಕೊಳ್ಳುವ ಹಲಗೆಗಳೆಲ್ಲ ಒದ್ದೆಯಾಗಿವೆ. ''ಎಲ್ಲ ಮನೆಗೋಳ್ಗೆ ಓಗ್ರಲಾ, ಇನ್ನೊಂದ್ಸಲ ಮಳೆ ಬರೋದ್ರೊಳಗೆ ಮನೆ ಸೇರ್ಕಳಿ'' ಎಂದು ಹೆಡ್ಮಾಸ್ತರರು ಹೇಳಿದರು. ಬಂದಗೀ ಸಾಬಿ ಹೆಡ್ಮಾಸ್ಟರ ಮಾತುಗಳನ್ನು ಅರ್ಥ ಮಾಡಿಕೊಂಡವನಂತೆ, ಒಳಗಿನಿಂದ ಗಂಟೆ ತಂದು ಹೊಡೆದ. ಹುಡುಗರೆಲ್ಲ ಸಣ್ಣದಾಗಿ ಹನಿಯುತ್ತಿದ್ದ ಮಳೆಗೆ ಪುಸ್ತಕದ ಚೀಲಗಳನ್ನು ತಲೆಯ ಮೇಲೆ ಅಡ್ಡವಿಟ್ಟುಕೊಂಡು ಓಡಿದರು.

೬

ಅಂದು ಮಾವಕೊಟ್ಟಿದ್ದ ಒಂದಾಣೆ ಬಿಲ್ಲೆಯನ್ನು ತನ್ನ ಜ್ಯಾಮಿಟ್ರಿ ಪೆಟ್ಟಿಗೆಯಲ್ಲಿ ಜೋಪಾನವಾಗಿಟ್ಟುಕೊಂಡು ಪ್ರತಿನಿತ್ಯ ನೋಡಿ ಸೀನು ಸಂತೋಷಪಡುತ್ತಿದ್ದ. ಅದರಿಂದ ಏನು ಮಾಡಬೇಕೆಂದು ಅಷ್ಟಾಗಿ ತೋಚಿರಲಿಲ್ಲ ಅವನಿಗೆ. ಊಟ-ತಿಂಡಿಯೆಲ್ಲ ಮನೆಯಲ್ಲಿಯೇ ಆಗುತ್ತಿತ್ತು. ಬೆಂಗಳೂರಿನಲ್ಲಾಗಿದ್ದರೆ ಸ್ಕೂಲಿನಲ್ಲಿ ಮಧ್ಯಾಹ್ನ ಇಂಟರ್‌ವೆಲ್‌ಗೆ ಬಿಟ್ಟಾಗ, ಹೊರಗಡೆ ಚೇಪೆಕಾಯಿ - ಕಳ್ಳೇಕಾಯಿ ಮಾರುವವರಿರುತ್ತಿದ್ದರು. ಕೆಲವು ಹುಡುಗರು ಅವುಗಳನ್ನು ಕೊಂಡು ತಿನ್ನುತ್ತಿದ್ದರು, ಒಂದು ದಿವಸ ಇವನ ತರಗತಿಯ ಹುಡುಗನೊಬ್ಬ ಒಂದು ಹಸಿರು ಕಿತ್ತಲೆ ಹಣ್ಣನ್ನು ಕೊಂಡಿದ್ದ. ಅದನ್ನು ಅರ್ಧಕ್ಕೆ ಕತ್ತರಿಸಿ, ಉಪ್ಪುಕಾರ ಹಾಕಿದ್ದರು. ಒಂದು ಒಪ್ಪನ್ನು ಇವನಿಗೆ ಸ್ನೇಹಿತ ಕೊಟ್ಟಿದ್ದ. ಅದನ್ನು ಚೀಪಿದಾಗ ಉಂಟಾಗಿದ್ದ ಆನಂದ ಜ್ಞಾಪಕವಾಯಿತು. ಅಲ್ಲಿ ತನ್ನ ಬಳಿ ದುಡ್ಡಿರುತ್ತಿರಲಿಲ್ಲ. ಆದರೆ ಕೊಂಡುಕೊಳ್ಳಲು ಬೇಕಾದಷ್ಟು ಅವಕಾಶವಿರುತ್ತಿತ್ತು. ಇಲ್ಲಿ ತನ್ನ ಹತ್ತಿರ ಈಗ ದುಡ್ಡಿದೆ, ಆದರೆ ಕೊಳಲು ಏನೂ ಇಲ್ಲ. ಲಕ್ಷ್ಮೀಪತಿ ಸೆಟ್ಟರ ಅಂಗಡಿಯಲ್ಲಿ ಏನಾದರೂ ಕೊಂಡು ಕೊಳ್ಳೋಣವೆಂದರೆ, ಆತ ಮಾವನಿಗೆ ಹೇಳಿಬಿಟ್ಟರೆ ಎಂದು ಭಯವಾಯಿತು. ಬೆಂಗಳೂರಿನಲ್ಲಿದ್ದರೆ ಏನನ್ನಾದರೂ ಕೊಂಡು ಕೊಳ್ಳಬಹುದಿತ್ತು, ಇಲ್ಲಿಗಿಂತ ಅಲ್ಲೇ ಚೆನ್ನ ಎನ್ನಿಸಿತ್ತು. ಏನನ್ನಾದರೂ ತೆಗೆದುಕೊಳ್ಳುವ ಅವಕಾಶವಿರದಿದ್ದರೂ ದುಡ್ಡನ್ನು ಮಾತ್ರ ತುಂಬ ಜೋಪಾನವಾಗಿ ಕಾಪಾಡಿದ.

ಒಂದು ಭಾನುವಾರ ಬೆಳಿಗ್ಗೆ ತಿಂಡಿ ತಿಂದು ಗೆಳೆಯರೊಡನೆ ಆಡುತ್ತಿದ್ದ. ಆಗ ಜೋಯಿಸರ ಮನೆಯಲ್ಲಿ ಓದಿಕೊಂಡಿದ್ದ ಕೃಷ್ಣಮೂರ್ತಿ ಒಂದು ವಿಚಾರ ಹೇಳಿದ : ಬೆಳ್ಳಿಬಟ್ಟಲಿನಲ್ಲಿ ಯಾರದೋ ಒಬ್ಬರ ಮನೆಯಲ್ಲಿ ಸಮಾರಾಧನೆಯಂತೆ ; ಅಲ್ಲಿಗೆ ಹೋಗಬಹುದು, ಬರುತ್ತೀಯಾ ಎಂದು ಕೇಳಿದ್ದ, ಹನ್ನೊಂದು ದಿನಗಳ ಹಿಂದೆ ಆ ಊರ ಜಮೀನ್ದಾರರ ಮನೆಯಲ್ಲಿನ ಮುದುಕರೊಬ್ಬರು ತೀರಿಕೊಂಡಿದ್ದರಂತೆ. ತಮ್ಮ ಮನೆಯಲ್ಲಿ ಅಜ್ಜಿ ಸತ್ತಾಗ ಮಾಡಿದ್ದರಲ್ಲ, ಅದೇ ರೀತಿಯ ಸಮಾರಾಧನೆಯಂತೆ, ಆ ದಿನ ಊಟವಾದ ಮೇಲೆ ಮಾವ ಎಲ್ಲರ ಲೋಟದಲ್ಲೂ ಲೊಳಕ್ ಎಂದು ಒಂದಾಣೆ ನಾಣ್ಯವನ್ನು ಹಾಕಿದ ನೆನಪು ಬಂತು. ಇಲ್ಲಿಗೆ ಹೋದರೂ ದುಡ್ಡು ಸಿಗುತ್ತದೆಯೇನೋ ಎನ್ನಿಸಿತು.

"ಇಲ್ಲೂ ಊಟ ಆದ್ಮೇಲೆ ದಕ್ಷಿಣೆ ಕೊಡ್ತಾರೇನೋ ?" ಎಂದು ವಿಚಾರಿಸಿದ.

"ಊ್ನನೋ. ಅವರು ದೊಡ ಸಾಹುಕಾರರಂತೆ, ಬೇಕಾದಷ್ಟು ದುಡ್ಡಿದೆಯಂತೆ. ಜಾಸ್ತಿ ದಕ್ಷಿಣೆ ಕೊಡ್ತಾರಂತೆ."

"ಎಷ್ಟು ಕೊಡ್ತಾರೋ ?"

"ಎಂಟಾಣೆ ಕೊಡ್ತಾರೆ ಅಂತಿದ್ದರಪ್ಪ"

ಸೀನುವಿನ ಬಾಯಲ್ಲಿ ನೀರೂರಿತು. ಎಂಟಾಣೆ ಸಿಕ್ಕುತ್ತದಂತಲ್ಲ, ಇಂತ ಅವಕಾಶ ಬಿಡಬಾರದು ಎನ್ನಿಸಿತ್ತು. ತನ್ನಬಳಿ ಆಗಲೇ ಇದ್ದ ನಾಲ್ಕಾಣೆ ನಾಣ್ಯ ಅವನ್ನು ಲೋಭಿಯನ್ನಾಗಿ ಮಾಡಿತ್ತು

''ಶ್ಯಾನ್‌ಭೋಗರ ದೊಡ್ಡ ಮಗ ಇದ್ದಾನಲ್ಲ, ಅವನು ಹೇಳಿದ್ದು. ಅವನಿಗೆ ದಾರಿಯಲ್ಲಿ ಸಿಕ್ಕಿದಾಗ, ಆವೂರಿನೋರೊಬ್ಬರು ಹೇಳಿದ್ದರಂತೆ'' ಎಂದು, ''ಬರ್ತೀಯೇನೋ ಅವನ ಜೊತೆ ನೀನೂ ನಾನು ಹೋಗಾಣ ?'' ಎಂದು ಪ್ರಶ್ನಿಸಿದ.

''ನಮ್ಮ ಮಾವ ಕಳಿಸೋದಿಲ್ಲ ಕಣೋ''

''ಓಗಲೇ, ಇಂತವನ್ನೆಲ್ಲ ಅವರನ್ನ ಕೇಳಬಾರ್ದು ಕಣೋ. ಯಾರಿಗೂ ಹೇಳದೆ ಹೋಗಿ ಬಂದ್ಬಿಡಾಣ.''

''ಆಮೇಲೇನಿಲ್ಲ, ಮಾವಂಗೆ ಗೊತ್ತಾದರೆ ಸುಮ್ಮನೆ ಬಿಡಲ್ಲ, ಅತ್ತೆ ಹಾಗಲ್ಲ ಅವರು''

''ಅದು ಹ್ಯಾಗೆ ಗೊತ್ತಾಗತ್ತೋ ? ಸಾಯಂಕಾಲ ನಾಲ್ಕು ಗಂಟೆಗೆಲ್ಲ ವಾಪಸ್ಸು ಬಂದ್ಬಿಡ್ತೀವಲ್ಲ.''

''ಮತ್ತೆ ಊಟಕ್ಕೆ ಅಂದೆಯಲ್ಲ, ಇಲ್ಲಿ ಊಟ ಮಾಡಲ್ಲ ಅಂದರೆ ಅವರು ಸುಮ್ನೆ ಇರ್ತಾರಾ?''

''ಇಲ್ಲಿ ಊಟಮಾಡ್ಕೊಂಡೇ ಹೋಗಾಣವೋ. ಅಲ್ಲೀಗೆ ಹೋಗೋ ಹೊತ್ತಿಗೆ ತಿರುಗಾ ಹಸಿವಾಗ್ತಿರತ್ತೆ. ಮೂರು ಮೈಲಿ ನಡೀಬೇಡವಾ ? ಇನ್ನೊಂದ್ಸಲ ಊಟ ಮಾಡೋದು. ದಕ್ಷಿಣೆ ಬೇರೆ ಸಿಕ್ಕತ್ತೆ.''

ಸಲಹೆ ತುಂಬ ಆಪ್ಯಾಯಮಾನವಾಗಿತ್ತು, ದಕ್ಷಿಣೆ, ಅದೂ ಎಂಟಾಣೆ, ಪಡೆಯುವುದಂತೂ ಅವನನ್ನಾಗಲೇ ಆವರಿಸಿಬಿಟ್ಟಿತ್ತು. ಜೊತೆಗೆ ಊಟದ ಯೋಚನೆ ಬೇರೆ ಬಂತು. ಪ್ರತಿದಿನ ಊಟಮಾಡುವುದು ಒಂದೇ ರೀತಿಯದು. ಅದೂ ಈವೂರಲ್ಲಿ ಹಬ್ಬದ ದಿನ ಬಿಟ್ಟರೆ ತರಕಾರಿಯನ್ನೇ ಮಾಡೋದಿಲ್ಲ. ಸಿಕ್ಕಿದರೆ ತಾನೇ ಪುಷ್ಕಳವಾದ ಸಮಾರಾಧನೆಯ ಊಟದ ಕಲ್ಪನೆ ಬಾಯನ್ನಾಗಲೇ ತೇವಗೊಳಿಸಿತ್ತು.

ಬೆಂಗಳೂರಿನಲ್ಲಿ ಇವನು ಒಂದೆರಡು ಬಾರಿ ಸೀತಾಪತಿ ಅಗ್ರಹಾರದಲ್ಲಿದ್ದ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಮಾಡುತ್ತಿದ್ದ ಆರಾಧನೆಯ ಸಮಾರಾಧನೆಗೆ ಹೋಗಿದ್ದ. ಅಲ್ಲೋ ತುಂಬ ಜನ. ಎಷ್ಟೋ ಸಲ ಸಾಯಂಕಾಲ ಐದು ಗಂಟೆಯವರೆಗೂ ಊಟದ ಪಂಕ್ತಿಗಳು ಮುಂದುವರೆಯುತ್ತಿದ್ದವು. ತಮ್ಮ ಬೀದಿಯಲ್ಲೇ ಇದ್ದ ಆಚಾರ್ರ ಮನೆ ಹುಡುಗರು ಯಾವತ್ತು ಆರಾಧನೆ ಎಂಬ ಸುದ್ದಿ ಸಂಗ್ರಹ ಮಾಡಿರುತ್ತಿದ್ದರು. ತಾನೂ ತನ್ನ ಅಣ್ಣ ತಮ್ಮಂದಿರು ಕೂಡ ಅವರ ಜೊತೆಯಲ್ಲಿ ಆರಾಧನೆಯ ಊಟಕ್ಕೆ ಹೋಗಿ ಬಂದಿದ್ದರು. ನಾನಾ ಬಗೆಯ ಅಡಿಗೆಗಳು ಬಹುದಿನದ ಅವರ ನಾಲಗೆಯ ಬಯಕೆಯನ್ನು ಪೂರ್ತಿ ಮಾಡುತ್ತಿತ್ತು. ಎಷ್ಟೋಸಲ ಊಟದ ಆಸೆಯಿಂದ ತಿಗಳರ ಮನೆಯಿಂದ ಹುಡುಗರೂ ಒಂದಿಬ್ಬರು ತಮ್ಮ ಜೊತೆಯಲ್ಲಿ ಬಂದಿದ್ದರು, ಸಮಾರಾಧನೆ ಬರೀ ಬ್ರಾಹ್ಮಣರಿಗೆ ಎಂದಿದ್ದರೂ. ಅದನ್ನಾರೂ ಗುಡಿಯಲ್ಲಿ ಗಮನಿಸಿರಲಿಲ್ಲ. ಆ ಹುಡುಗರು ಮಾತ್ರ ಬಡಿಸುವವರು ಎಲೆಯ ಮುಂದೆ ಬಂದಾಗಲೆಲ್ಲ ನೆಲದ ಕಡೆಗೆ ನೋಡುತ್ತಿದ್ದರು,

ಎಲ್ಲಿ ಏನಾದರೂ ಪ್ರಶ್ನಿಸಿಬಿಡುತ್ತಾರೋ ಎಂಬ ಭಯದಿಂದ, ಆದರೆ ಎಂದೂ ಅವರು ಸಿಕ್ಕಿಹಾಕಿಕೊಂಡಿರಲಿಲ್ಲ!

ಈವೂರಲ್ಲಿ ಅಂತಹ ಅವಕಾಶಗಳು ಕಡಿಮೆ. ರಾಮೋತ್ಸವವೊಂದೇ ವರ್ಷಕ್ಕೊಂದು ಬಾರಿ ನಿಯತವಾಗಿ ತಮಗೆ ಸಮಾರಾಧನೆಯ ಊಟವನ್ನು ದೊರಕಿಸುವ ಸಂದರ್ಭ. ಮಿಕ್ಕಾಗ, ಅಜ್ಜಿ ಸತ್ತ ಹಾಗೆ, ಯಾರಾದರೂ ಬ್ರಾಹ್ಮಣರ ಮನೆಯಲ್ಲಿ ಸತ್ತಾಗ ಮಾತ್ರ ಸಮಾರಾಧನೆ. ಆದರೆ ತಾನು ಬಂದಾಗಿನಿಂದ ಅಜ್ಜಿ ಮಾತ್ರವೇ ಸತ್ತಿದ್ದದ್ದು, ಅವನಿಗೆ ಅಜ್ಜಿಯಹಾಗೆ ತುಂಬ ವಯಸ್ಸಾದ ಬ್ರಾಹ್ಮಣರು ಯಾರಿದ್ದಾರೆ ಎಂಬ ಲೆಕ್ಕಾಚಾರ ಮನಸ್ಸಿನಲ್ಲಿ ಸುಳಿಯಿತು. ಆದರೆ ಅಷ್ಟೊಂದು ಮುದುಕರು ಯಾರೂ ಇರಲಿಲ್ಲ. ಇದರಿಂದಾಗಿ ಕೃಷ್ಣಮೂರ್ತಿಯ ಸಲಹೆ ಅವನಿಗೆ ಸಮಂಜಸವೆನಿಸಿತ್ತು.ಸದವಕಾಶವನ್ನು ಕಳೆದುಕೊಳ್ಳಬಾರದು ಅಂದುಕೊಂಡ.

''ಲೇ, ಬೇಗ ಬಂದ್ಬಿಡಬೌದು ಅಲ್ವಾ ?''

''ನಾನೆಲ್ಲ ಕರ್‌ಕೊಂಡು ಬರ್ತೀನಿ, ನಿಂಗ್ಯಾಕೋ ಯೋಚನೆ ?''

''ಲೇಟೇನಾದರೂ ಆದರೆ ನಮ್ಮ ಮಾವ ಬೈತಾರೆ ಕಣೋ ಅದಕ್ಕೆ''

''ಏನೂ ಲೇಟಾಗೋಲ್ಲ. ನಾಲ್ಕು ಗಂಟೆಗೆ ವಾಪಸ್ಸು ಬಂದ್ಬಿಡ್ತೀವಿ. ಊಟ ಆದ ಮೇಲೆ ಅಲ್ಲೇನು ಕೆಲಸ ? ಬಂದು ಬಿಡೋದೇ ತಾನೆ ?''

''ಸರಿ, ಹಾಗಾದರೆ ಬರ್ತಿನಿ. ಯಾರ್‍ಯಾರು ಹೋಗೋದು ?''

''ನಾನೂ ನೀನೂ ಶ್ಯಾನುಭೋಗರ ಮಗ ಇಷ್ಟೇ. ಹೆಚ್ಚು ಜನ ಆದರೆ ಜಾಸ್ತಿ ದಕ್ಷಿಣೆ ಕೊಡ್ತಾರೋ ಇಲ್ಲವೋ, ನೀನು ಯಾರಿಗೂ ಹೇಳಿಬಿಡಬೇಡಪ್ಪ.''

''ಇಲ್ಲಪ್ಪ, ನಾನ್ಯಾಕೆ ಹೇಳ್ಲೀ ?''

''ಹಾಗಾದರೆ ಅರಳೀಕಟ್ಟೆ ಹತ್ತಿರ ಕಾದಿರ್ತೀನಿ ಅಂತ ಶ್ಯಾನುಭೋಗರ ಮಗ ಹೇಳಿದ್ದಾನೆ. ಅಲ್ಲೀಗೆ ಹೋಗಾಣ, ಊಟ ಮಾಡಿಕೊಂಡು ನಮ್ಮನೇಗೆ ಬಾ''

ಯಥಾಪ್ರಕಾರ ಊಟಮಾಡಿ ತಕ್ಷಣವೇ ಸೀನು ಹೊರಗೆ ಹೊರಟದ್ದನ್ನು ಕಂಡು ಮಾವ ವಿಚಾರಿಸಿದ್ದರು.

''ಯಾಕಯ್ಯಾ ಹೊರಗೆ ಬಿಸಿಲು ಬಾಳೆಹಣ್ಣು ಕೊಳೀತಿದೆ ಅಂತ ಈಗಲೇ ಹೊರಟೆಯಾ ? ರಜ ದಿನವಾದರೂ ಮನೇಲಿ ಕೂತು ಸ್ವಲ್ಪ ಓದಿಕೋ.''

''ನಾಳೆ ಪಾಠದ ಮೇಲೆ ಪ್ರಶ್ನೆ ಕೇಳ್ತೀನಿ ಅಂತ ಹೇಳಿದ್ದಾರೆ...''

ಅವನಿನ್ನೂ ವಾಕ್ಯಪೂರ್ತಿ ಮಾಡುವ ಮೊದಲೇ ಮಾವ, ''ಅದಕ್ಕೇ ? ಹೊರಗೆ ಅಲೆಯೋಕೆ ಹೋಗ್ತಿದ್ದೀಯಾ ?''

''ಇಲ್ಲ ಮಾವ, ಪಾಠ ಗಟ್ಟಿಮಾಡಿಕೊಳ್ಳೋಕೆ ಸ್ನೇಹಿತನ ಮನೆಗೆ ಹೋಗಿತೇನಿ.''

''ಯಾವ ಸ್ನೇಹಿತನ ಮನೆಗೆ ?''

ಜೋಯಿಸರ ಮನೆಗೆ ಹೋಗುತ್ತೇನೆಂದರೆ ಆಕಸ್ಮಾತ್ ಯಾವಾಗಲಾದರೂ ತ್ತೆ ಹುಡುಕಿಕೊಂಡು ಬಂದುಬಿಟ್ಟರೇ ? ಅದಕ್ಕೇ ಒಂದು ಉಪಾಯ ಮಾಡಿದ ''ಅಕ್ಕಸಾಲಿಗರ ವೆಂಕಣ್ಣನ ಮನೆಗೆ''

''ಅವನ ಪಿಂಡ. ಅವನ ಜೋತೇಲೇನು ನೀನು ಓದಿಕೊಳ್ಳೋದು ? ಅವನಿಗೆ ಓ ಅಂದರೆ ಠೋ ಅನ್ನಕ್ಕೆ ಬರಲ್ಲ. ಅಂಥವನ ಜೋತೇನಾ ಸೇರೋದು ? ಇಲ್ಲೇ ಕುಕ್ಕರಬಡಕೊಂಡು ಓದಿಕೋ'' ಎಂದು ಗದ್ದರಿಸಿದ್ದರು.

''ಅವನಿಗೆ ಬರ್ತೀನಿ ಅಂತ ಹೇಳಿಬಿಟ್ಟಿದ್ದೀನಿ.''

''ಏನೂ ಪರವಾಗಿಲ್ಲ. ಹರಿಶ್ಚಂದ್ರ ಮಹಾರಾಜ ಇವನು, ಹೇಳಿದ ಮಾತಿಗೆ ತಪ್ಪೋಲ್ಲ!''

ಸೀನುವಿಗೆ ಬೇರೆ ಮಾರ್ಗವಿರಲಿಲ್ಲ. 'ಇವರಪ್ಪನ ಮನೆ ಗಂಟೇನು ಹೋಗುತ್ತೆ ನಾನು ಹೋದರೆ' ಎಂದು ಮನಸ್ಸಿನಲ್ಲೇ ಬೈದುಕೊಂಡ. ಆದರೆ ತನ್ನ ಕೋಪವನ್ನು ಮಾವನ ಮೇಲೆ ತೋರಿಸಲು ಸಾಧ್ಯವಿರಲಿಲ್ಲ. ಸುಮ್ಮನೆ ಹೋಗಿ ಒಂದು ಪುಸ್ತಕವನ್ನು ತೆಗೆದುಕೊಂಡು ಚಾಪೆಯ ಮೇಲೆ ಮೂಲೆಯೊಂದರಲ್ಲಿ ಕುಳಿತ. ಆದರೆ ಏನು ಓದುವುದು ? ಕೃಷ್ಣಮೂರ್ತಿ ಮತ್ತು ಶ್ಯಾನುಭೋಗರ ಮಗ ಅಲ್ಲಿ ಕಾಯುತ್ತಿರುತ್ತಾರೆ. ತಾನು ಹೋಗದೆ ಹೋದರೆ ಅವರೇ ಹೊರಟು ಹೋಗ್ತಾರೆ. ತನಗೆ ಸಿಕ್ಕಬಹುದಾದ ಎಂಟಾಣೆ ತಪ್ಪಿಹೋಗುತ್ತೆ. ಮಾರನೇ ದಿವಸ ಕೃಷ್ಣಮೂರ್ತಿ ತನ್ನ ಮುಂದೆ ಬಂದು ಕೈಯಲ್ಲಿ ಎಂಟಾಣೆ ಹಿಡಿದು ತನ್ನ ಮೂತಿಗೆ ಒಡ್ಡಿದಾಗ ತಾನು ಹೊಟ್ಟೆಕಿಚ್ಚು ಪಡುವುದೇ ತನ್ನ ಅದೃಷ್ಟ ಎನಿಸಿತು. ಈ ಮಾವ ತನ್ನನ್ನು ಬೆಂಗಳೂರಿನಿಂದ ಕರ್ಕೊಂಡು ಬಂದು ತನಗೆ ಮಾಡ್ತಿರೋ ಉಪಕಾರ ಇದೇ ಎನ್ನಿಸಿ ಅಸಮಾಧಾನವಾಯಿತು.

ಸ್ವಲ್ಪ ಹೊತ್ತು ಹೀಗೇ ಕಳೆಯಿತು. ಮಾವ ಏನೋ ಕೆಲಸ ಮಾಡುತ್ತಿದ್ದವರು ಮಧ್ಯದಲ್ಲಿ ಮೇಲೆದ್ದರು. ತಂಬಿಗೆಗೆ ನೀರು ಹಾಕಿ, ಅದನ್ನೆತ್ತಿಕೊಂಡು ಹೊರಟರು. ಕಿವಿಗೆ ಜನಿವಾರ ಸಿಕ್ಕಿಸಿಕೊಂಡಿದ್ದನ್ನು ಕಂಡು ಇದೇ ಸರಿಯಾದ ಸಮಯವೆಂದು ಸೀನು ಭಾವಿಸಿದ. ಅವರು ಅತ್ತ ಹೋದ ಕೂಡಲೇ ಈ ಕಡೆ ಸೀನು ಮೇಲೆದ್ದು, ಅಡಿಗೆಮನೆಯಲ್ಲಿ ಏನೋ ಮಾಡುತ್ತ ಕುಳಿತಿದ್ದ ಅತ್ತೆಗೆ ಕೇಳಿಸುವಂತೆ ''ಅತ್ತೆ, ನಾನು ಸ್ನೇಹಿತನ ಮನೆಗೆ ಓದಿಕೊಳ್ಳೋಕೆ ಹೋಗ್ತೀನಿ'' ಎಂದು ಕೂಗಿ ಹೇಳಿ ಹೊರಟ.

ಹೊತ್ತಾಯಿತೇನೋ ; ಅವರು ಹೋಗಿಯೇ ಬಿಟ್ಟಿರುತ್ತಾರೇನೋ ಎಂಬ ಆತಂಕವಾಯಿತು. ಕಾಲು ಜೋರಾಗಿ ಹಾಕಿ ಅರಳೀಕಟ್ಟೆಯ ಕಡೆ ನಡೆಯತೊಡಗಿದ. ಎದುರಿಗೆ ಜೋಯಿಸರ ಮನೆಯ ಅಜ್ಜಿ ಸಿಕ್ಕಿದರು ''ಏನಪ್ಪಾ, ಇಷ್ಟು ಅವಸರವಸರವಾಗಿ ಹೊರಟಿದ್ದೀಯಾ ?'' ಎಂದು ಕೇಳಿದರು.

''ನಾನು ಓದಿಕೊಳ್ಳಾಕೆ ಹೋಗ್ಬೇಕಜ್ಜಿ'' ಎಂದವನೇ ಅವರ ಕಡೆ ನೋಡದೆಯೇ ಮುಂದುವರೆದು ಅರಳೀಕಟ್ಟೆಯ ಬಳಿ ಬಂದ.

ಅಷ್ಟು ಹೊತ್ತಿಗಾಗಲೇ ಅಲ್ಲಿ ಶ್ಯಾನುಭೋಗರ ಮಗ ಮತ್ತು ಕೃಷ್ಣಮೂರ್ತಿ ನಿಂತಿದ್ದರು. ಇವನು ಹೋದ ತಕ್ಷಣವೇ ಕೃಷ್ಣಮೂರ್ತಿ ''ಎಷ್ಟು ಹೊತ್ತೋಲೋ ನಿಂಗೇ ಕಾಯಾದು ? ಮಹಾರಾಜ, ನಿಂಗೆ ನಾವು ಕಾಯ್ಬೇಕಾ ?'' ಎಂದು ಆಕ್ಷೇಪಿಸಿದ. ಮಾವ ಹಾಕಿದ ಪ್ರಶ್ನೆ, ಅವರನ್ನು ನಿವಾರಿಸಿಕೊಂಡು ಬರಲು ತಡವಾಯಿತೆಂದು ಸೀನು ಸಮಜಾಯಿಷಿ ನೀಡಿದ. ಆಗ ಶ್ಯಾನುಭೋಗರ ಮಗ, ''ಇರಲಿ, ಬೇಗ ನಡೀರಿ, ಹೊತ್ತಾಗಿ ಬಿಡುತ್ತೆ'' ಎಂದು ಸರಸರ ಹೆಜ್ಜೆ ಹಾಕಲು ಪ್ರಾರಂಭಿಸಿದ. ಇನ್ನಿಬ್ಬರೂ ಆ ಹಿರಿಯನನ್ನು ಹಿಂಬಾಲಿಸಿದರು.

ತಲೆಯ ಮೇಲೆ ಸುಡುವ ಬಿಸಿಲು, ಸ್ವಲ್ಪ ಹೊತ್ತಿನ ಮುಂಚೆ ತಾನೇ ಊಟ ಮಾಡಿದ್ದು - ಇವುಗಳಿಂದಾಗಿ ಸೀನುವಿಗೆ ಬೇಗ ನಡೆಯಲು ಸಾಧ್ಯವಾಗುತ್ತಿರಲಿಲ್ಲ. ಅವರಿಬ್ಬರೇನೋ ಇವನಿಗಿಂತ ದೊಡ್ಡವರು. ಇಂತಹ ಕಾರ್ಯಕ್ರಮಗಳನ್ನು ಇವನಿಗಿಂತ ಹೆಚ್ಚಾಗಿ ಕಂಡವರು. ಸರಸರನಡೆದರೆ ಹೊಟ್ಟೆ ಹಿಡಿದಂತಾಗುತ್ತಿತ್ತು, ತಾನಾಗಿಯೇ ಅಂತಹ ಸಂದರ್ಭದಲ್ಲಿ ಹೆಜ್ಜೆ ಹಾಕುವುದು ನಿಧಾನವಾಗುತ್ತಿತ್ತು, ಹಿಂದೇ ಬೀಳುತ್ತಿದ್ದ. ಅವರಿಬ್ಬರೂ ಮುಂದೆ ಹೋಗಿದ್ದವರು ನಿಂತು ಹಿಂದೆ ನೋಡುತ್ತಾ ''ಬೇಗ ಬಾರೋಲೋ, ಹೊತ್ತಾಗಿ ಹೋಗುತ್ತೆ, ಇಲ್ಲದಿದ್ದರೆ ನಿನ್ನ ಬಿಟ್ಬಿಟ್ಟು ಹೋಗ್ತೀವಿ'' ಎಂದು ಹೆದರಿಸುತ್ತಿದ್ದರು. ತಾನೊಬ್ಬನೇ ಆಗುವ ಭಯದಿಂದ ಜೋರಾಗಿ ಹೆಜ್ಜೆಯಿಡುತ್ತಿದ್ದ.

ಬೆಳ್ಳಿಬಟ್ಟಲು ಸೇರದಾಗ, ಅವರಿಗೆ ಜಮೀನ್ದಾರರ ಮನೆಯನ್ನು ಹುಡುಕುವುದು ಕಷ್ಟವಾಗಲಿಲ್ಲ. ಶ್ಯಾನುಭೋಗರ ಮಗನಿಗೆ ಅವರ ಮನೆ ತಿಳಿದಿತ್ತೇನೋ. ಆದರೆ ಅದರ ಅವಶ್ಯಕತೆಯೇ ಇರಲಿಲ್ಲ. ಇವರು ಊರಲ್ಲಿ ಕಾಲಿಟ್ಟು ಎರಡು ಹೆಜ್ಜೆ ಹಾಕಿದಾಗಲೇ ಅವರ ಮನೆ ಸಿಕ್ಕಿತ್ತು, ದೊಡ್ಡಮನೆ. ಆದರೆ ಸಮಾರಾಧನೆ ಮನೆಯಲ್ಲಿ ಮಾತ್ರ ನಡೆಸಲು ಸಾಧ್ಯವಾಗುತ್ತಿರಲಿಲ್ಲ. ತುಂಬ ಜನ, ಅದಕ್ಕೋಸ್ಕರವೇ ಅವರ ಮನೆಯ ಮುಂದೆಯೇ ಇದ್ದ ನರಸಿಂಹನ ಗುಡಿಯಲ್ಲೂ ಎಲೆ ಹಾಕಿದ್ದರು. ಇವರು ಊರು ಸೇರುವಾಗಾಗಲೇ ಒಂದು ಪಂಕ್ತಿಯ ಊಟ ಮುಗಿದು, ಆ ಪಂಕ್ತಿಯವರೆಲ್ಲ ಕೈತೊಳೆಯುತ್ತಿದ್ದರು.

ಮುಂದಿನ ಪಂಕ್ತಿಯ ಹೊತ್ತಿಗೆ ಇವರು ಸರಿಯಾಗಿ ಬಂದಿದ್ದರು. ಅಲ್ಲದೆ ಬಂದ ಆಯಾಸ ಪರಿಹಾರ ಮಾಡಿಕೊಳ್ಳಲು ಒಂದ್ಯೆದು ನಿಮಿಷದ ಅವಧಿಯೂ ಸಿಕ್ಕಿತ್ತು. ''ನನ್ನ ಲೇಟು ಅಂದಿರಲ್ಲ, ಎಲ್ಲಪ್ಪ ಸರಿಯಾಗಿ ಬಂದಿದ್ದೀವಲ್ಲ'' ಎಂದು ಸೀನು ಮುಖವರಳಿಸಿ ಹೇಳಿದ. ''ಉಸ್ಸಾ ಬಂದಿದ್ದೀವಿ, ಆಗಲೇ ಒಂದು ಪಂಕ್ತಿ ಊಟ ಆಗಿರೋದು ಕಾಣಿ ಸ್ತಿಲ್ಲವಾ?'' ಎಂದ ವ್ಯಂಗ್ಯವಾಗಿ ಶ್ಯಾನುಭೋಗರ ಮಗ. ಸೀನು ಮಾರುತ್ತರವೀಯದೇ ಅವರನ್ನು ಹಿಂಬಾಲಿಸಿ ಗುಡಿಯಲ್ಲಿ ಹಾಕಿದ ಎಲೆಯ ಮುಂದೆ ಕುಳಿತ.

ಮನೆಯ ಹಿರಿಯರು ಊಟ ಪ್ರಾರಂಭವಾದ ಮೇಲೆ ಬಂದು ''ನಿಧಾನವಾಗಿ

ಆಗಬೇಕು'' ಎಂದು ಕೈಮುಗಿದು ಉಪಚರಿಸುತ್ತಿದ್ದರು. ತಮ್ಮ ಪಂಕ್ತಿಯ ಮುಂದೆ ಬಂದ ಅವರು ''ಈ ಹುಡುಗ ಯಾರು ?'' ಎಂದು ಸೀನುವನ್ನು ತೋರಿಸಿ ಕೇಳಿದಾಗ, ಅವನಿಗೆ ಭಯವಾಯಿತು, ತಮ್ಮ ಮಾವನ ಹೆಸರನ್ನೆಲ್ಲಿ ಕೃಷ್ಣಮೂರ್ತಿ ಹೇಳಿ ಬಿಡುತ್ತಾನೋ ಎಂದು. ಆದರೆ ಶ್ಯಾನುಭೋಗರ ಮಗ, ಪೆಮ್ಮನಹಳ್ಳಿಯಲ್ಲಿ ಮಿಡಲ್ ಸ್ಕೂಲಲ್ಲಿ ಓದಕ್ಕೆ ಬಂದಿದ್ದಾನೆ ಎಂದ. ಅವನು ಬೇಕೆಂದು ಹಾಗೆಂದನೋ, ಅಥವಾ ಕೃಷ್ಣಮೂರ್ತಿಯ ಬಗ್ಗೆ ಕೇಳಿದರೆಂದು ಹಾಗೆ ಉತ್ತರಕೊಟ್ಟನೋ ಸೀನುವಿಗೆ ಸ್ಪಷ್ಟವಾಗಲಿಲ್ಲ. ಹಿರಿಯರು ''ಓ'' ಎಂದು ಉದ್ಗರಿಸಿ ಮುಂದೆ ಹೋಗಿದ್ದರು.

ಸೀನುವಿಗೆ ಹೆಚ್ಚೇನೂ ಊಟಮಾಡಲು ಸಾಧ್ಯವಾಗಲಿಲ್ಲ. ಮೊದಲಾಗಲೇ ಒಂದು ಬಾರಿ ಊಟಮಾಡಿದ್ದ. ಮೂರು ಮೈಲಿ ನಡೆದು ಬಂದಿದ್ದರೂ ಒಂದೆರಡು ಗಂಟೆಗಳ ಮುಂಚೆ ಮಾತ್ರ ಊಟಮಾಡಿದ್ದರಿಂದ ಹೊಟ್ಟೆ ಬೇಗ ಭರ್ತಿಯಾಗಿತ್ತು. ಹೊಟ್ಟೆ ತುಂಬಿದ್ದರಿಂದಾಗಿ ಊಟದ ರುಚಿಯೂ ಅವನಿಗೆ ಹೆಚ್ಚು ಗೊತ್ತಾಗಲಿಲ್ಲ. ಸೀತಾಪತಿ ಅಗ್ರಹಾರದ ಆರಾಧನೆಯ ಊಟದ ರುಚಿ ಅವನಿಗೆ ಇದರಲ್ಲಿ ಕಾಣಿಸಲಿಲ್ಲ. ಆದರೆ ಅವನ ಆಸಕ್ತಿ ಇನ್ನೂ ಮುಂದಿತ್ತು. ಬಡಿಸುತ್ತಿದ್ದುದು ನಿಧಾನವೇನೋ ಎನ್ನಿಸಿತು ಅವನಿಗೆ. ಕೊನೆಗೂ ಮಜ್ಜಿಗೆ ಬಂದಾಗ ತನ್ನ ನಿರೀಕ್ಷೆಯ ವಸ್ತು ಇನ್ನು ಹೆಚ್ಚು ದೂರವಿಲ್ಲವೆಂದು ಸಮಾಧಾನ ಅವನಲ್ಲುಂಟಾಯಿತು. ಆದರೆ ಅಲ್ಲಿ ಅವು ಮುನ್ನೋಡುತ್ತಿದ್ದ ಫಲ ದೊರಕಿರಲಿಲ್ಲ. ಪದ್ಧತಿಯಂತೆ ಲೋಟದಲ್ಲಿ ನಾಣ್ಯಗಳನ್ನು ಹಾಕುತ್ತ ಹರಿಯರು ಮುಂದೆ ಹೋದಾಗ ಇವನು ಲೋಟದಲ್ಲಿ ನೋಡಿದ್ದ. ಅಲ್ಲಿ ನಿರೀಕ್ಷಿಸಿದ್ದ ಎಂಟಾಣೆ ನಾಣ್ಯದ ಬದಲು ನಾಲ್ಕಾಣೆ ಕಾಣಿಸಿತು. ಸ್ವಲ್ಪ ನಿರಾಸೆಯೇ ಆಯಿತು. ಆದರೆ ಅಜ್ಜಿ ಸತ್ತಾಗ ಮಾವ ಹಾಕಿದ್ದುದು ಒಂದೇ ಆಣೆ ಎಂಬುದು ನೆನಪಿಗೆ ಬಂದಾಗ ಪರವಾಯಿಲ್ಲ ಎನಿಸಿತು. ಇಲ್ಲಿ ದೊಡ್ಡವರಿಗೆ ಎಂಟಾಣೆಯನ್ನೇ ಹಾಕಿದ್ದರು. ತಮ್ಮಲ್ಲಿ ಶ್ಯಾನುಭೋಗರ ಮಗನಿಗೆ ಮಾತ್ರ ಆ ಲಭ್ಯವಿತ್ತು. ಊಟ ಮುಗಿಸಿ ಹೊರಬಂದಾಗ ಈ ಅಸಮ ದೃಷ್ಟಿಯ ಬಗ್ಗೆ ಸೀನು ಕೇಳಿದಾಗ ಅವನು ''ನಿಮಗಿನ್ನು ಮುಂಜಿ ಆಗಿಲ್ಲವಲ್ಲ, ಅದಕ್ಕೇ ಕಡಿಮೆ'' ಎಂದು ವಿವರಣೆ ನೀಡಿದ್ದ. ಅಲ್ಲದೇ ''ಅದಕ್ಕೇ ನಿಮ್ಮ ಮಾವಂಗೆ ಬೇಗ ಮುಂಜಿ ಮಾಡಕ್ಕೆ ಹೇಳು'' ಎಂದೂ ಸಲಹೆ ನೀಡಿದ್ದ. ಸೀನು ಏನೂ ಮಾತಾಡಲಿಲ್ಲ.

ಊಟ ಆಗುವ ಹೊತ್ತಿಗಾಗಲೇ ಮೂರುಗಂಟೆಯಾಗಿತ್ತು. ಇನ್ನು ಹೆಚ್ಚು ಹೊತ್ತು ಇಲ್ಲಿ ಕಾಯುವ ಹಾಗಿರಲಿಲ್ಲ. ಆದರಲ್ಲೂ ಸೀನುವಿಗೆ ಚಡಪಡ ಹೆಚ್ಚಾಯಿತು. ಊರು ತಲುಪುವ ಹೊತ್ತಿಗೆ ತಡವಾಗಿಬಿಟ್ಟರೇನು ಗತಿಯೆಂಬ ಆತಂಕ ಅವನದು. ಹೀಗಾಗಿ ಇನ್ನಿಬ್ಬರನ್ನೂ ಅವನು ಅವಸರಪಡಿಸಿದ. ಕೃಷ್ಣಮೂರ್ತಿಗೂ ಸ್ವಲ್ಪ ಈ ಆತಂಕವಿತ್ತು. ಎಷ್ಟಾದರೂ ಅವನು ಬೇರೆಯವರ ಮನೆಯಲ್ಲಿ ಓದಿಕೊಂಡಿದ್ದ ಹುಡುಗ, ಅವರೇನಾದರೂ ಕೇಳಿದರೆ ಉತ್ತರಿಸಲು ಸ್ವಲ್ಪ ಭಯವೆನಿಸುತ್ತುತ್ತು. ಆದರೆ ಶ್ಯಾನುಭೋಗರ ಮಗ ದೊಡ್ಡವನು, ಅವನಾರಿಗೂ ಹೆದರಬೇಕಾಗಿರಲಿಲ್ಲ. ಸ್ವಲ್ಪ ಧುಂಡಿಗ ಬೇರೆ. ಆದರೂ

ಇವರಿಬ್ಬರ ಒತ್ತಾಯಕ್ಕೆ ಮಣಿದು ಊರಕಡೆ ಹೆಜ್ಜೆ ಹಾಕಿದ. ಊರು ತಲುಪುವ ವೇಳೆಗಾಗಲೇ ನಾಲ್ಕೂವರೆಯಾಗಿತ್ತು.

ಏನೂ ಗೊತ್ತಿಲ್ಲದವನಂತೆ ಮನೆಯಲ್ಲಿ ಕಾಲಿಟ್ಟಾಗ, ಅತ್ತೆ ಹೂಬತ್ತಿ ಮಾಡುತ್ತ ಕುಳಿತಿದ್ದರು. ಮಾವ ಏನನ್ನೋ ಓದಿಕೊಳ್ಳುತ್ತಿದ್ದರು. ಇವನು ಅಂಜಿಕೆಯಿಂದಲೇ ಮನೆಹೊಕ್ಕ. ಮಾವ ಗಂಭೀರವಾಗಿದ್ದಂತೆ ಕಾಣಿಸಿತು ; ಮೊದಲು ತನ್ನ ಕಡೆ ಗಮನಿಸದಿದ್ದರೂ ಆ ನಂತರ ಇವನನ್ನು ನೋಡಿ ಕನ್ನಡಕ ತೆಗೆದರು. ಇವನಿಗೆ ಭಯವಾಯಿತು.

''ಇಲ್ಲಿ ಬಾ'' ಎಂದರು ಅದೇ ಗಾಂಭೀರ್ಯದಿಂದ. ಇವನು ವಿಧೇಯನಾಗಿ ಅಲ್ಲಿ ಹೋದ. ''ಇಷ್ಟು ಹೊತ್ತು ಎಲ್ಲಿಗೆ ಹೋಗಿದ್ದೆ ?'' ಅವರ ಪ್ರಶ್ನೆಯಲ್ಲಿ ಕಾಠಿಣ್ಯವಿತ್ತು ಧ್ವನಿಯಲ್ಲಿ ಕೋಪಕಾಣುತ್ತಿತ್ತು. ಅವನು ಅತ್ತೆಯ ಕಡೆ ನೋಡಿದ. ಅವರು ತಮ್ಮ ಪಾಡಿಗೆ ತಾವು ಕೆಲಸದಲ್ಲಿ ಮಗ್ನನಾಗಿದ್ದರು.

''ಹ್ಞೂ ಹೇಳು, ಅಲ್ಲೇನು ನೋಡ್ತೀಯ, ಎಲ್ಲಿ ಹೋಗಿದ್ದೆ?''

''ಓದಿಕೊಳ್ಳಾಕೆ''

''ಯಾರ ಮನೆಗೆ ?''

''ಅಕ್ಕಸಾಲಿಗರ ವೆಂಕಟಣ್ಣನ ಮನೆಗೆ''

''ವೆಂಕಟಣ್ಣನ ಮನೇಗಾ ? ಕೇಳೇ ಇಲ್ಲಿ'' ಎಂದು ಅತ್ತೆಯ ಗಮನ ಸೆಳೆದರು ಮಾವ, ''ವೆಂಕಟಣ್ಣನ ಮನೆಗೆ ಹೋಗಿದ್ದನಂತೆ, ಓದಾಕೆ'' ಎಂದು ಮತ್ತೆ ಹೇಳಿದ್ದನ್ನೇ ಹೇಳಿದರು.

''ಅವನೇ ಇಲ್ಲಿ ಬಂದಿದ್ದನಲ್ಲೋ ನೀನು ಹೋದಮೇಲೆ'' ಎಂದರು ಅತ್ತೆ. ಆದರೆ ಸೀನುವಿಗೆ ಆ ಮಾತಿನಲ್ಲಿ ತಾನು ಮುಂದೆ ಹೇಳಬೇಕಾದ ಉತ್ತರದ ಎಳೆ ಸಿಕ್ಕಿದಂತಾಯಿತು.

''ನಾನು ಈ ಕಡೆ ಹೋದಾಗ ಅವನು ಈ ಆ ಕಡೆಯಿಂದ ಇಲ್ಲಿಗೆ ಬಂದಿದ್ದ. ಅವರ ಮನೇಲಿ ಹಾಗೆ ಹೇಳಿದ್ರು. ಅದಕ್ಕೇ ಅವನಿಗೋಸ್ಕರ ಕಾದಿದ್ದೆ. ಅವನು ವಾಪಸ್ಸು ಬಂದಮೇಲೆ ಇಬ್ಬರೂ ಓದಿಕೊಂಡಿವಿ.''

''ನಿನ್ನ ಪುಸ್ತಕ ಎಲ್ಲಿ ?''

''ಅವನು ಉತ್ತರ ಕಾಪಿ ಮಾಡಕೋಬೇಕು ಅಂತ ಹೇಳಿದ. ಅಲ್ಲೇ ಬಿಟ್ಟು ಬಂದೆ, ನಾಳೆ ತಂದುಕೊಡ್ತಾನಂತೆ.'' ತಾನು ಸಮಂಜಸವಾಗಿ ಇವರ ಸವಾಲುಗಳಿಗೆಲ್ಲ ಉತ್ತರ ಕೊಡುತ್ತಿದ್ದೇನೆ ಎಂಬ ಧೈರ್ಯವುಂಟಾಯಿತು. 'ನನ್ನ ಸಿಕ್ಕಿಹಾಕಿಸಬೇಕಂತ ಅಂದ್ಕೊಂಡಿದೀಯಾ, ಅದು ಸಾಧ್ಯವಿಲ್ಲ' ಎಂಬ ಭಾವನೆ, ಮಾವನ ಬಗ್ಗೆ ತಾತ್ಸಾರ ಅವನಲ್ಲಿ ಮೊಳೆಯಿತು.

''ಪುಸ್ತಕ ಬಿಟ್ಟು ಬಂದನಂತೆ, ನಾಳೆ ತಂದ್ಕೊಡ್ತಾನಂತೆ'' ಎಂದು ಅವಡುಗಚ್ಚಿ ಹೇಳುತ್ತ ಆ ಕಡೆ ಕೆನ್ನೆಗೊಂದು ಈ ಕಡೆ ಕೆನ್ನೆಗೊಂದು ಏಟು ಕೊಟ್ಟರು. ಸೀನುವಿನಲ್ಲಿ ಪ್ರತಿಭಟನೆಯ ರೊಚ್ಚು ಮೇಲೆದ್ದಿತು.

''ಓದಿಕೊಳ್ಳಾಕೆ ಹೋಗಿದ್ದರೆ ಯಾಕೆ ಹೊಡೆಯೋದು ?'' ಎಂದು ಅಳುತ್ತಲೇ ಹೇಳಿದ.

''ತಿರುಗಾ ನೋಡು, ಓದಿಕೊಳ್ಳಾಕೆ ಹೋಗಿದ್ದನಂತೆ'' ಮತ್ತೆ ಕೈಯೆತ್ತಿದರು, ಇವನು ಕೈಯನ್ನು ಮುಖಕ್ಕೆ ಅಡ್ಡಹಿಡಿದ. ಅವರು ಇವನ ಜೇಬಿಗೆ ಕೈಹಾಕಿ ಅಲ್ಲಿದ್ದ ನಾಲ್ಕಾಣೆ ಬಿಲ್ಲೆಯನ್ನು ತೆಗೆದು ಇವನೆಡೆ ತೋರಿಸುತ್ತ ''ಇದೆಲ್ಲಿತ್ತು?'' ಎಂದು ಪ್ರಶ್ನಿಸಿದರು.

''ನೀವು ನಿಡಗಲ್ಲು ಬೆಟ್ಟಕ್ಕೆ ಹೋದಾಗ ಕೊಟ್ಟಿದ್ದು'' ಎಂದು ಸಲೀಸಾಗಿ ಸುಳ್ಳು ಹೇಳಿದ.

''ನೋಡೇ ಸುಳ್ಳು ಹೇಳೋ ರೀತಿ ಇವನದು ?'' ಎಂದು ಅತ್ತೆಯ ಕಡೆ ತಿರುಗಿ ಹೇಳಿದರು.

''ಇರಬಹುದು, ಬಿಡಿ ಅಂದ್ರೆ'' ಎಂದು ಅತ್ತೆ ಸಮಾಧಾನ ಹೇಳಿದರು.

''ನಿನ್ನಗಿನ್ನೂ ಗೊತ್ತಿಲ್ವ ಹಾಗಾದರೆ, ಇವನೆಲ್ಲಿ ಹೋಗಿದ್ದಾ ಅಂತ ? ಮಧ್ಯಾಹ್ನ ಮೂಡಲಗಿರಿಗೌಡ ಸಿಕ್ಕಿದ್ದ. ಎಲ್ಲೋ ನಿಮ್ಮ ಮನೆ ಹುಡುಗ. ಶ್ಯಾನುಭೋಗರ ಹಿರೇಮಗನ ಜೊತೆ ಓಗ್ತಿದ್ದ. ಅವನಂಥ ಧಾಂಡಿಗನ ಜೊತೆ ಎಳೆ ಹುಡುಗ ಸೇರಿದರೆ ಕೆಟ್ಹೋಯ್ತಾನೆ. ಸ್ವಲ್ಪ ನೋಡಿ ಕಳಿ'' ಅಂತ ಹೇಳಿದ. ಆಮೇಲೆ ನಾನು ಅವರ ಮನೇಲಿ ಕೇಳಿದ್ರೆ ಬೆಳ್ಳಿ ಬಟ್ಲಗೆ ವೈಕುಂಠ ಸಮಾರಾಧನೆಗೆ ಹೋಗಿದಾನೇಂತ ಹೇಳಿದ್ರು'' ಎಂದರು. ಹಾಗಾದರೆ ಈ ಆಸಾಮಿಗೆ ಎಲ್ಲ ತಿಳಿದುಬಿಟ್ಟಿದೆ ! ಏನೂ ಗೊತ್ತಿಲ್ಲವೇನೋ ಅಂತ ತಾನು ಏನೇನೋ ಉತ್ತರಗಳನ್ನು ಧೈರ್ಯದಿಂದ ಹೇಳಿದ್ದ. ಈಗ ಅವನ್ನೆಲ್ಲ ನೆನೆಸಿಕೊಂಡು ಭಯವಾಯಿತು.

''ಹೌದಲ್ಲವೇನೋ, ಬೊಗಳು'' ಎಂದು ಮಾವ ಕಿರುಚಿದರು.

ವಿಧಿಯಿಲ್ಲದೆ ಸೀನು ''ಉಹ್ನೂ'' ಎಂದು ಮೆಲ್ಲಗೆ ಉಸುರಿದ.

''ಹೌದೇನೋ ಸೀನು ?'' ಎಂದು ಅತ್ತೆ ಆಶ್ಚರ್ಯದಿಂದ ಕಣ್ಣರಳಿಸಿ ಕೇಳಿದರು. ಆ ಹೊತ್ತಿಗೆ ಅವರೂ ಮೇಲೆದ್ದು ಇವರ ಹತ್ತಿರವೇ ಬಂದಿದ್ದರು. ಮಾವನಿಗೆ ಉತ್ತರ ಕೊಟ್ಟಾಗಿತ್ತು, ಅತ್ತೆಗೂ ಅದೇ ಉತ್ತರ ತಾನೇ ? ಮೌನವಾಗಿದ್ದ.

''ಮತ್ತೆ ವೆಂಕಣ್ಣನ ಮನೇಗೆ ಹೋಗಿದ್ದೇಂತ ಸುಳ್ಳು ಬೊಗಳ್ದೆ ?'' ಮಾವ ಕೋಪದಿಂದ ಕಿರುಚಿದರು. ಅದಕ್ಕೇನು ಹೇಳುವುದು ? ತನ್ನ ಗುಟ್ಟೆಲ್ಲ ಬಟಾ ಬಯಲಾಗಿತ್ತು, ಸುಮ್ಮನಿದ್ದ.

''ಸುಳ್ಳು ಬೇರೆ ಬೊಗಳ್ತೀಯಾ ?''ಎಂದು ಮತ್ತೆ ಮಾವ ಕೈಯೆತ್ತಿದಾಗ ಅತ್ತೆ ಅಡ್ಡಬಂದರು.

''ಕಂಡೋರ ಮನೆ ಹುಡುಗನ್ನ ಯಾಕೆ ಹೊಡೀಬೇಕು ಬಿಡಿ'' ಎಂದು ಮಾವನನ್ನು ತಡೆದು, ತನ್ನ ಕಡೆ ತಿರುಗಿ, ''ಯಾಕಪ್ಪಾ ಸೀನು, ಹೀಗಾಗಿಬಿಟ್ಟೆ ? ಒಳ್ಳೇ

ಹುಡುಗ ಅಂತಿದ್ದರೆ ಹೀಗೇನಪ್ಪ ಮಾಡೋದು ? ಯಾರಾದರೂ ಕರೀದೇ ಊಟಕ್ಕೆ ಹೋಗ್ತಾರೇನೋ, ಅದೂ ತಿಥೀ ಊಟಕ್ಕೆ ? ನಮ್ಮ ಮರ್ಯಾದೆ ಗತಿಯೇನಾಗಬೇಕಪ್ಪಾ ?'' ಎಂದು ಕೇಳಿದಾಗ ಅವರ ಕಣ್ಣಂಚಿನಲ್ಲಿ ನೀರಿತ್ತು. ಮಾವನ ಬಗ್ಗೆ ಅವನಿಗೆ ತಿರಸ್ಕಾರ ವುಂಟಾಗಿದ್ದರೂ ಅತ್ತೆಯ ಕಣ್ಣೀರು ಕಂಡು ಅವನಿಗೆ ಮತ್ತಷ್ಟು ಅಳು ಬಂತು. ಅತ್ತೆ ಅವನನ್ನು ಎದೆಗೊರಗಿಸಿಕೊಂಡರು. ಎರಡು ದಿನಗಳಲ್ಲೇ ಸೀನುವಿಗೆ ಆದದ್ದು ಮರೆತು ಹೋಗಿತ್ತು. ಅವನ ಜ್ಯಾಮಿಟ್ರಿ ಬಾಕ್ಸಲ್ಲಿ ಈಗ ಎರಡು - ಒಂದು ಒಂದಾಣೆ ಇನ್ನೊಂದು ನಾಲ್ಕಾಣೆ ನಾಣ್ಯಗಳು ಹೊಳೆಯುತ್ತಿದ್ದವು. ಅವನನ್ನು ಕಂಡಾಗಲೆಲ್ಲ ಅಂದು ತಿಂದ ಏಟು ನೆನಪಾದರೂ ನಾಣ್ಯದ ಹೊಳಪು ನೆನಪಿನ ಕಹಿಯನ್ನು ಕಡಿಮೆ ಮಾಡುತ್ತಿತ್ತು. ಹೀಗೇ ದುಡ್ಡು ಕೂಡಿ ಹಾಕಿದರೆ ಎಷ್ಟು ಚೆನ್ನ ಎನ್ನಿಸಿತ್ತವನಿಗೆ. ಜಾಸ್ತಿ ದುಡ್ಡಾದರೆ ಏನಾದರೂ ಕೊಂಡುಕೋ ಬಹುದು. ಆದರೆ ಏನು ಕೊಂಡುಕೋಬಹುದು ಎಂಬ ಯೋಚನೆಯಲ್ಲಿ ತೊಡಗುತ್ತಿದ್ದ. ಬಟ್ಟೆ ತಗೊಳ್ಳೋದಾ ? ಆದರೆ ಎಲ್ಲಿ ಬಂತೂಂತ ಮಾವ ಕೇಳಿದರೆ ? ಪೆನ್ಸಿಲ್ಲು ತಗೊಂಡರೆ ? ಅದ್ಯಾಕೆ ಮಾವನೇ ಕೊಡಿಸುತ್ತಾರಲ್ಲ. ಬೇಕಾದಾಗ ಲಕ್ಷ್ಮೀಪತಿ ಶೆಟ್ಟರ ಅಂಗಡಿಗೆ ಹೋಗಿ ಲೆಕ್ಕ ಬರೆಸಿ ತಾನೇ ಎಷ್ಟೋ ಸಲ ಪೆನ್ಸಿಲು - ಎಕ್ಸರ್‌ಸೈಸ್ ಪುಸ್ತಕ ತಂದಿದ್ದ. ಇನ್ನು ಮೇಲೂ ಹಾಗೇ ಮಾಡಬಹುದು, ಆದರೂ ಏನೂ ತೆಗೆದುಕೊಳ್ಳಬಹು ದೆಂಬ ಸ್ಪಷ್ಟಕಲ್ಪನೆ ಅವನಿಗೆ ಉಂಟಾಗಲಿಲ್ಲ. ಯಾಕೆ ಅದರ ಬಗ್ಗೆ ಈಗಲೇ ಯೋಚಿಸಬೇಕು ? ಜಾಸ್ತಿ ದುಡ್ಡು ಕೂಡಿಹಾಕಿದ ಮೇಲೆ ತಾನೇ ಅದರ ಚಿಂತೆ ? ಈಗ ಏನು ತೆಗೆದುಕೊಳ್ಳಬೇಕೆಂಬುದಕ್ಕಿಂತ ದುಡ್ಡು ಕೂಡಿಹಾಕುವುದೇ ಮುಖ್ಯವೆನಿಸಿತ್ತು.

ಮುಂದೆ ಒಂದು ದಿನ ಮಧ್ಯಾಹ್ನ ಮಾವ ಏನೋ ಬರೆಯುತ್ತಿದ್ದರು. ಅವರು ಬರೆಯುತ್ತಿದ್ದ ಸ್ಟೀಲನ್ನು ಅದ್ದುವ ದವತಿಯಲ್ಲಿ ಮಸಿ ಆಗಿ ಹೋಗಿತ್ತು. ಆಗ ಸೀನುವನ್ನವರು ಕರೆದು ''ಆ ಕೋಣೇಲಿ ಇಂಕ್ ಬಾಟಲ್ ಇದೆ ತಗೊಂಬಾ'' ಎಂದಿದ್ದರು.

''ಎಲ್ಲಿದೆ ?''

''ಆ ರೂಮಲ್ಲಿ ಒಂದು ಟ್ರಂಕ್ ಇದೆ ನೋಡು. ಅದರ ಮೂಲೇಲಿದೆ ತೊಗೊಂಬಾ. ಟ್ರಂಕ್ ಮೇಲಿರೋ ಪುಸ್ತಕಾನೆಲ್ಲ ಮೆಲ್ಲಗೆ ಕೆಳಗಿಡು, ಎತ್ತಿ ಹಾಕಿಬಿಡಬೇಡ.''

''ಹ್ಞೂ'' ಎಂದು ಸೀನು ಕೋಣೆಯನ್ನು ಪ್ರವೇಶಿಸಿದ. ಆ ರೂಮಿಗೆ ಅವನು ಬರುತ್ತಿದ್ದುದೇ ಕಡಿಮೆ. ತನ್ನನ್ನು ಆಕರ್ಷಿಸಬಲ್ಲ ಯಾವ ವಸ್ತುವೂ ಅಲ್ಲಿ ಕಂಡಿರಲಿಲ್ಲ. ಒಂದೆರಡು ಮಡಕೆಗಳು, ಆ ಟ್ರಂಕ್, ಒಂದಷ್ಟು ಪುಸ್ತಕ, ಮೇಲೆ ಗಳುವಿನ ಮೇಲೆ ಒಣಗಿ ಹಾಕಿದ್ದ ಮಾವನ ಪಂಚೆ ಬನೀನು ಇಷ್ಟೇ. ಅತ್ತೆ ತಮ್ಮ ಸೀರೆಯನ್ನೆಲ್ಲ ಅಡಿಗೆ ಮನೆಯಲ್ಲಿ ಕಟ್ಟಿದ್ದ ಗಳುವಿನ ಮೇಲೆ ಹಾಕಿರುತ್ತಿದ್ದರು. ತನ್ನ ಬಟ್ಟೆಗಳನ್ನು ತಾನೇ ಆಗಾಗ್ಗೆ ಸೋಪು ಹಾಕಿ ಒಗೆದು ಹೊರಗೆ ಒಣಗಿ ಹಾಕಿ, ಒಣಗಿದ ಮೇಲೆ ಮಡಿಸಿಡುತ್ತಿದ್ದ.

ಮಾವ ಹೇಳಿದ ಹಾಗೆಯೇ ಟ್ರಂಕಿನ ಮೇಲೆ ಪುಸ್ತಕಗಳಿದ್ದವು. ಅವುಗಳನ್ನೆಲ್ಲ

ನಿಧಾನವಾಗಿ ಕೆಳಗಿಳಿಸಿ ಅದರ ಬಾಗಿಲು ತೆಗೆದ. ಅದರಲ್ಲಿ ಕೆಲವು ಪೋಸ್ಟು ಕಾರ್ಡುಗಳು, ಇನ್‌ಲ್ಯಾಂಡ್ ಲೆಟರ್‌ಗಳೂ, ಬಿಳೀ ಹಾಳೆಯ ಒಂದು ಸುರುಳಿ ಕಾಣಿಸಿತು. ಅವನ್ನೆಲ್ಲ ಪಕ್ಕಕ್ಕೆ ಸರಿಸಿದಾಗ ಒಂದೆರಡು ಅನಂತನ ದಾರಗಳು, ಜನಿವಾರಗಳು ಕಾಣಬಂದವು. ಇಲ್ಲಿಲ್ಲವೆಂದು ಟ್ರಂಕ್‌ನ ಆಕಡೆಯ ಮೂಲೆಯಲ್ಲಿ ಕೈಯಾಡಿಸಿದ. ಅಲ್ಲಿ ಇಂಕಿನ ಸೀಸೆ ಇತ್ತು. ಅದರ ಜೊತೆಗೆ ಇನ್ನೊಂದು ಸಿಲ್ವರ್ ಲೋಟ ಅವನ ಗಮನ ಸೆಳೆಯಿತು. ಅದರಲ್ಲಿ ಬರೀ ಚಿಲ್ಲರೆ ನಾಣ್ಯಗಳನ್ನು ತುಂಬಿತ್ತು. ಸೀನುವಿನ ಕಣ್ಣುಗಳು ಅರಳಿದವು.

''ಸಿಕ್ಕಲಿಲ್ಲವೇನಯ್ಯಾ ?'' ಎಂದು ಮಾವ ಕೂಗುಹಾಕಿದರು. ಅವರೇ ಎಲ್ಲಿ ಎದ್ದು ಬಂದು ಬಿಡುತ್ತಾರೋ ಎಂಬ ಗಾಬರಿಯಾಯಿತು.

''ಸಿಕ್ತು ಬಂದೆ'' ಎಂದು ಇಂಕಿನ ಸೀಸೆಯನ್ನು ಹೊರಗಿಟ್ಟುಕೊಂಡು ಶಬ್ದವಾಗದ ಹಾಗೆ ಒಂದೆರಡು ನಾಣ್ಯಗಳನ್ನು ಚಡ್ಡಿ ಜೇಬಿಗೆ ಸೇರಿಸಿದ. ಮತ್ತೆ ಮಾವನಿಗೆ ಕೇಳುವಂತೆ ಟ್ರಂಕ್ ಬಾಗಿಲನ್ನು ಮುಚ್ಚಿ ಅದರ ಮೇಲೆ ಮೊದಲಿದ್ದ ಹಾಗೆಯೇ ಪುಸ್ತಕಗಳನ್ನು ಪೇರಿಸಿ ಬಂದ.

ಸೀನುವಿಗೆ ಈಗ ಹೊಸದೊಂದ ನಿಧಿ ಕಾಣಿಸಿತ್ತು. ಮಾವ ಅತ್ತೆಯರ ಕಣ್ಣು ತಪ್ಪಿಸಿ ಆ ರೂಮಲ್ಲಿ ಹೋಗಿ, ಟ್ರಂಕಿನ ಮೇಲಿದ್ದ ಪುಸ್ತಕಗಳನ್ನಿಳಿಸಿ ಅಲ್ಲಿಂದ ಚಿಲ್ಲರೆ ಕದಿಯುವುದು ಸುಲಭವಾಗಿರಲಿಲ್ಲ. ಹೇಗೋ ಪುಸ್ತಕಗಳನ್ನು ತೆಗೆದಿಟ್ಟರೂ ಟ್ರಂಕ್ ಬಾಗಿಲು ತೆಗೆಯುವುದು ಕಷ್ಟ. ಹಳೆಯ ಟ್ರಂಕಾದ್ದರಿಂದ ಅದರ ಬಾಗಿಲು ತೆಗೆದಾಗಲೂ ಹಾಕಿದಾಗಲೂ ಕಿರ್ರೋ ಎಂಬ ಶಬ್ದವಾಗುತ್ತಿತ್ತು. ಹೀಗಾಗಿ ತುಂಬ ಹೊಂಚಿನಿಂದ ಕಾದು ಚಿಲ್ಲರೆ ತೆಗೆದುಕೊಳ್ಳಬೇಕಾಗುತ್ತಿತ್ತು. ಎಷ್ಟೋ ವೇಳೆ ಮಾವ ಅಲ್ಲಿ ಚಿಲ್ಲರೆಯನ್ನು ಎಣಿಸಿಟ್ಟಿದ್ದಾರೇನೋ ಎಂಬ ಭಯ ಕಾಡುತ್ತಿತ್ತು. ಹಾಗೇನಾದರೂ ಎಣಿಸುವಾಗ ದುಡ್ಡು ಕಡಿಮೆ ಬಂದು ತಾನು ಸಿಕ್ಕಿಬಿದ್ದರೇನು ಗತಿ ಎನಿಸುತ್ತಿತ್ತು. ಆದ್ದರಿಂದಲೇ ಎಷ್ಟೇ ಆಸೆಯಿದ್ದರೂ ಲೋಟದ ಕಡೆ ತಟ್ಟನೆ ನೋಡಿದರೆ ಅಲ್ಲಿ ಕಡಿಮೆ ಕಾಣದ ಹಾಗೆ, ಒಂದೆರಡು ನಾಣ್ಯಗಳನ್ನು ಮಾತ್ರ ತೆಗೆದುಕೊಳ್ಳುತ್ತಿದ್ದ. ಹೀಗೆ ಅವನ ಜ್ಯಾಮಿಟ್ರಿ ಬಾಕ್ಸಿನ ಹಣ ಮರಿಯಿಡುತ್ತಿತ್ತು - ನಿಧಾನವಾಗಿ.

೧೦

ಹೊನ್ನ ಕುಡಿಕೆ ಜಾತ್ರೆಯೆಂದರೆ ಆ ಸುತ್ತಮುತ್ತಲಲ್ಲಿ ತುಂಬ ದೊಡ್ಡ ಘಟನೆ. ಸುಬ್ಬರಾಯನ ಷಷ್ಠಿಯ ದಿನ ಅಲ್ಲಿ ಸುಬ್ರಮಣ್ಯಸ್ವಾಮಿಯ ತೇರು. ಅದರ ಕಾರಣದಿಂದ ದೊಡ್ಡ ಪರಿಷೆ ಸೇರುತ್ತದೆ. ಮಾರ್ಗಶಿರ ಮಾಸವಾದ್ದರಿಂದ ತೀರ ಶಕೆಯಿರುವುದಿಲ್ಲ. ಪಕ್ಕದಲ್ಲಿಯೇ ಹರಿಯುವ ಸೌಮ್ಯಮುಖಿ ನದಿಯಲ್ಲಿ ಸ್ವಲ್ಪ ನೀರು ಹರಿಯುತ್ತಿರುತ್ತದೆ. ಆದರೂ ನದಿ ಜೀವನದಿಯಲ್ಲ. ಅಂದರೆ ಎಲ್ಲ ಕಾಲದಲ್ಲೂ ಹರಿಯುವುದಿಲ್ಲ. ಮಳೆಗಾಲದಲ್ಲಿ ಸ್ವಲ್ಪ ಮೈ ತುಂಬಿಕೊಂಡು ಸೌಮ್ಯಮುಖಿಯು ಬರಬರುತ್ತ

ಕೃಶವಾಗತೊಡಗುತ್ತಾಳೆ. ಹೆಸರು ಹೀಗಿದ್ದರೂ, ಬಹು ಸಂದರ್ಭಗಳಲ್ಲಿ ಸೌಮ್ಯವೇ ಆಗಿದ್ದರೂ, ಕೆಲವು ವೇಳೆ ಇದ್ದಕ್ಕಿದ್ದಂತೆ ಪ್ರವಾಹ ಬಂದು ಬಿಡುತ್ತದಂತೆ. ಪ್ರತಿ ವರ್ಷ ಹೀಗೆ ಬರುವುದೆಂದೇನೂ ಇಲ್ಲ; ಯಾವಾಗಲಾದರೊಮ್ಮೆ ನಾಲ್ಕು ವರ್ಷಗಳ ಹಿಂದೆ ಹೀಗೆ ಪ್ರವಾಹ ಬಂದು ನಾಲ್ಕೈದು ಜನ, ಕೆಲವು ದನಗಳು ಕೊಚ್ಚಿಕೊಂಡು ಹೋದುವಂತೆ. ಆದಕ್ಕೇ ಈ ನದಿಯನ್ನು 'ಕಳ್ಳನದಿ'ಯೆಂದೂ ಕರೆಯುತ್ತಾರೆ.

ಪ್ರತಿವರ್ಷವೂ ಜಾತ್ರೆಗೆ ಎಲ್ಲ ಕುಟುಂಬಗಳವರೂ ಎಲ್ಲಿ ಹೋಗಲು ಸಾಧ್ಯ ? ಹೀಗಾಗಿ ಹೋಗುವವರ ಕೈಯಲ್ಲಿ ಸ್ವಾಮಿಗೆ ತಮ್ಮ ಮುಡಿಪು ಕಳಿಸಿಕೊಡುತ್ತಾರೆ. ಜೋಯಿಸರ ಮನೆಯವರು ಸುಬ್ರಹ್ಮಣ್ಯಸ್ವಾಮಿಯ ಒಕ್ಕಲು. ಆದ್ದರಿಂದ ಅಲ್ಲಿ ಬ್ರಾಹ್ಮಣರಿಗೆ ಹತ್ತುದಿನಗಳ ಕಾಲ ನಡೆಯುವ ಸಮಾರಾಧನೆಯಲ್ಲಿ ಒಂದು ದಿನದ ಸೇವೆ ಪ್ರತಿವರ್ಷವೂ ಈ ಮನೆಯದ್ದೇ. ಆದರೂ ಪ್ರತಿವರ್ಷ ಮನೆಮಂದಿಯೆಲ್ಲ ಜಾತ್ರೆಗೆ ಹೋಗಲು ಸಾಧ್ಯವಾಗುವುದಿಲ್ಲ, ಏನಾದರೂ ತೊಂದರೆಯಿರುತ್ತದೆ. ಯಾರಿಗಾದರೂ ಮೈಯಲ್ಲಿ ಸರಿಯಿರುವುದಿಲ್ಲ, ಹೆಣ್ಣುಮಕ್ಕಳಲ್ಲಿ ಯಾರಾದರೂ ಒಳಗಿರುವುದಿಲ್ಲ, ಇಲ್ಲ, ಯಾರಾದರೂ ನೆಂಟರು ಮನೆಗೆ ಬಂದಿರುತ್ತಾರೆ. ಹೀಗಾಗಿ, ಎಲ್ಲ ಜಾತ್ರೆಗೆ ಹೋಗುವುದು ತುಂಬ ಅಪರೂಪ. ಶ್ರೀನಿವಾಸ ಜೋಯಿಸರು ಮಾತ್ರ ಪ್ರತಿ ವರ್ಷ ಹತ್ತು ದಿನವೂ ಅಲ್ಲೇ ಕಾಲ ಕಳೆಯುತ್ತಾರೆ.

ಈ ವರ್ಷ ಅವರ ಮನೆಯವರೆಲ್ಲ ಜಾತ್ರೆಗೆ ಹೋಗಬೇಕೆಂದು ನಿರ್ಧಾರ ಮಾಡಿ ಕಾಶೀಪತಯ್ಯನವರನ್ನೂ ಸರಸಮ್ಮನವರನ್ನೂ ಜೊತೆಗೆ ಬರಲು ಆಹ್ವಾನಿಸಿದರು. ಆದರೆ ಅವರಿಗೆ ಹೋಗಲು ಏನೋ ಅನಾನುಕೂಲ ; ಹೀಗಾಗಿ ಬರಲಾಗುವುದಿಲ್ಲವೆಂದರು. ''ಹೋಗಲಿ ಸೀನುವನ್ನು ಕಳಿಸಿಕೊಡಿ'' ಎಂದರು. ''ನೋಡೋಣ'' ಎಂದರು ಅತ್ತೆ. ಅವರು ಹೇಳಿದ ದಿನದಿಂದಲೇ ಸೀನು ಅತ್ತೆಯ ದುಂಬಾಲು ಬಿದ್ದ. ''ತಾಳು ಇನ್ನೂ ಒಂದು ವಾರ ಇದೆಯಲ್ಲ, ಏನವಸರ ?'' ಆದರೆ ಪ್ರತಿನಿತ್ಯ ಅವನ ರಾಗ ಇದ್ದದ್ದೇ. ಕೊನೆಗೆ ಅತ್ತೆ ''ಆಗಲಿ'' ಎಂದರು. ಮಾವನೂ ಹೆಚ್ಚು ತಕರಾರಿಲ್ಲದೆ ''ಹ್ಞೂ'' ಅಂದಿದ್ದರು. ಜೋಯಿಸರ ಮನೆಯವರೆಲ್ಲ ಹೋಗುತ್ತಾರಲ್ಲ ಎಂಬುದೇ ಅದಕ್ಕೆ ಕಾರಣ; ಅಲ್ಲದೆ ಕ್ರಿಸ್‌ಮಸ್ ರಜೆಯೂ ಬಂದಿದ್ದುದರಿಂದಾಗಿ ಸ್ಕೂಲಿಗೆ ಚಕ್ಕರ್ ಹೊಡೆಯುವ ಪ್ರಮೇಯವೂ ಇರಲಿಲ್ಲ.

ಸೀನುವಿಗೆ ವಾರದಿಂದಲೇ ಸಂಭ್ರಮ. ಜೋಯಿಸರ ಮನೆಯವರು ಹೊನ್ನಕುಡಿಕೆಯಲ್ಲಿ ಹತ್ತು ದಿನವೂ ಇರುವವರಲ್ಲ; ತಮ್ಮ ಮನೆಯ ಸೇವೆಯಿದ್ದ ಹಿಂದಿನ ದಿನ ಹೋಗಿ, ಸೇವೆ ಮುಗಿಸಿಕೊಂಡು ಒಂದು ದಿನ ಇದ್ದು ಮಾರನೇ ದಿನ ಬಂದು ಬಿಡುವವರು. ಅಲ್ಲಿ ಕಳೆಯುವುದು ಮೂರು ಹಗಲು ಎರಡು ರಾತ್ರಿಗಳನ್ನು ಮಾತ್ರ. ಗುಡಿ ಆವರಣದಲ್ಲಿಯೇ ಒಂದಷ್ಟು ಕೊಠಡಿಗಳನ್ನು ಕಟ್ಟಿದ್ದರು, ಭಕ್ತಾದಿಗಳ ವಸತಿ ಸೌಕರ್ಯಕ್ಕಾಗಿ. ಅದಕ್ಕೆ ಸಾಕಷ್ಟು ಬೇಡಿಕೆಯಿದ್ದರೂ, ಜೋಯಿಸರ ಮನೆಯವರು ಸೇವಾಕರ್ತರಾಗಿದ್ದುದರಿಂದ ಮುಂಚೆ ಒಂದು ಸೂಚನೆ ಕೊಟ್ಟಿದ್ದರೆ ಸಾಕಾಗಿತ್ತು. ಹೀಗಾಗಿ

ಶ್ರೀನಿವಾಸ ಜೋಯಿಸರು ಹೇಳಿ ಎರಡು ಕೊಠಡಿಗಳನ್ನು ತಮ್ಮ ಮನೆಯವರಿಗಾಗಿ ಬಿಡಿಸಿಕೊಂಡಿದ್ದರು.

ಶ್ರೀನಿವಾಸ ಜೋಯಿಸರು ಮೊದಲನೇ ದಿನದ ಹೊತ್ತಿಗೇ ಎಂದಿನಂತೆ ಹೊನ್ನ ಕುಡಿಕೆಗೆ ಹೋಗಿದ್ದರು. ಇನ್ನು ಮಿಕ್ಕವರೆಲ್ಲ ಹೊರಡುವ ದಿನ ಸಾಯಂಕಾಲ ಗಾಡಿ ಕಟ್ಟಿಸಿದ್ದರು. ಮೂರು ಮೈಲಿ ಬೈರಾಪುರಕ್ಕೆ ಹೋದರೆ ಬಸ್ಸು ಸಿಕ್ಕುತ್ತಿತ್ತು. ಈಗೇನು ಮಸ್ತು ಬಸ್ಸುಗಳು, ಹೊನ್ನಕುಡಿಕೆಗೆ ಸಾಮಾನ್ಯವಾಗಿ ಹೋಗುವ ಎರಡು ಬಸ್ಸುಗಳಲ್ಲದೆ, ಎಲ್ಲ ಕಡೆಗಳಿಂದ ಬರುವ ಬಸ್ಸುಗಳನ್ನ ಆವೂರ ಮೂಲಕವಾಗಿ ಓಡಿಸುತ್ತಿದ್ದರು, ಇಲ್ಲ ಆವೂರವರೆಗೆ ಮುಂದುವರೆಸುತ್ತಿದ್ದರು. ಆದರೆ ಅಲ್ಲಿಯವರೆಗೆ ಗಾಡಿಯಲ್ಲಿ ಹೋಗಿ, ಅಲ್ಲಿಂದ ಬಸ್ಸು ಹಿಡಿಯುವುದೇಕೆ ? ಅಲ್ಲದೆ, ಜಾತ್ರೆಯ ಸಮಯವೆಂದರೆ ಎಲ್ಲ ಬಸ್ಸುಗಳ ಗರ್ಭವೂ ಒಂಬತ್ತು ತಿಂಗಳು ತುಂಬಿದಂತಿರುತ್ತವೆ. ಆ ಗಿಜಿಗಿಜಿಯಲ್ಲಿ ಪ್ರಯಾಣಮಾಡಿ ಮೈ ಕೈ ನೋಯಿಸಿಕೊಳ್ಳುವುದರ ಬದಲು ಪೂರ್ತಿ ಗಾಡಿಯಲ್ಲಿಯೇ ಪ್ರಯಾಣ ಮಾಡಲು ನಿರ್ಧರಿಸಿದ್ದರು.

ಅಂದು ಪೆಮ್ಮನಹಳ್ಳಿಯಿಂದ ಜೋಯಿಸರ ಮನೆಯವರನ್ನು ಹೊತ್ತ ಎರಡು ಕಮಾನುಗಾಡಿಗಳು ಹೊರಟಾಗ ಆಗಲೇ ಸಾಯಂಕಾಲ ನಾಲ್ಕುಗಂಟೆ. ಅವುಗಳಲ್ಲೊಂದರಲ್ಲಿ ಸೀನುವೂ ಆಶ್ರಯ ಪಡೆದಿದ್ದ. ಹಿಂದಿನ ದಿನವೇ ಒಗೆದು ಒಣಗಿಸಿದ ಎರಡು ಚಡ್ಡಿ, ಎರಡು ಷರಟುಗಳನ್ನು ರಾತ್ರಿ ಮಡಿಸಿ ತಲೆಯಡಿಯಲ್ಲಿ ಇಟ್ಟುಕೊಂಡಿದ್ದ. ಜೊತೆಗೆ ಬೇಕಾದ ಟವಲು, ಊಟದ ಕಾಲಕ್ಕೆ ಉಟ್ಟುಕೊಳ್ಳಲು ಮಾವನ ಒಂದು ಮಡಿಪಂಚೆಯನ್ನೂ ತೆಗೆದುಕೊಂಡಿದ್ದ. ಹಲ್ಲುಪುಡಿ, ಕೊಬ್ಬರಿ ಎಣ್ಣೆ ಕನ್ನಡಿ, ಬಾಚಣಿಗೆ ಇತ್ಯಾದಿಗಳನ್ನೆಲ್ಲ ಇವನು ತೆಗೆದುಕೊಂಡು ಹೋಗಬೇಕಾದ ಅವಶ್ಯಕತೆಯಿರಲಿಲ್ಲ. ಅವನ್ನೆಲ್ಲ ಜೋಯಿಸರ ಮನೆಯವರು ತಂದಿರುತ್ತಿದ್ದರು.

ಸೀನು ಜೋಯಿಸರ ಮನೆಯ ಅಜ್ಜಿಯಿದ್ದ ಗಾಡಿಯಲ್ಲಿ ಕೂತಿದ್ದ. ಅದೂ ಇದೂ ಹರಟುತ್ತಿದ್ದ. ಅಲ್ಲಿ ಹರಿಯುವ ನದಿಯ ಬಗ್ಗೆ ಸೇರುವ ದನಗಳ ಬಗ್ಗೆ, ಎಳೆಯುವ ತೇರಿನ ಬಗ್ಗೆ ಪ್ರಶ್ನೆ ಮಾಡುತ್ತಿದ್ದ. ಅಲ್ಲಿಗೆ ಟೂರಿಂಗ್ ಟಾಕೀಸುಗಳೂ ಬಂದಿರುತ್ತವಂತೆ ! ತಾನು ಸಿನಿಮಾ ನೋಡಿ ಎಷ್ಟೋ ವರ್ಷವಾಗಿತ್ತು. ಎಷ್ಟೇ ಆಸೆಯಿದ್ದರೂ ಸಿನಿಮಾಕ್ಕೆ ಬೆಂಗಳೂರಿನಲ್ಲಿ ಹೋಗುತ್ತಿದ್ದುದು ಅಥವಾ ಹೋಗಲು ಆಗುತ್ತಿದ್ದುದು, ವರ್ಷಕ್ಕೆ ಒಂದೋ ಎರಡೋ ಬಾರಿ. ಕಾಸುಕೊಡುವವರಾರು ? ಇನ್ನು ಪೆಮ್ಮನಹಳ್ಳಿಗೆ ಬಂದ ಮೇಲೆ ಮುಗಿಯಿತು. ಸುತ್ತಮುತ್ತಲೂ ಎಲ್ಲಿಯೂ ಟಾಕೀಸುಗಳಿರಲಿಲ್ಲ ; ಈಗ ಅಂತಹ ಒಂದು ಅವಕಾಶ ಅವನಿಗೆ ದೊರಕಿತ್ತು.

ಮಾವ ಇವನು ಹೊರಡುವಾಗ ಕೈಯಲ್ಲಿ ಎರಡು ರೂಪಾಯಿಗಳನ್ನಿಟ್ಟಿದ್ದರು. ''ಬೀದೀಲೆಲ್ಲ ಹೋಟಲುಗಳಿರ್ತವೆ ಕಣೋ, ಅಲ್ಲೀ ಹೋಗಿ ತಿನ್ನಬೇಡ, ಶೂದ್ರರೋ ಪಾದ್ರರೋ ಮಾಡಿರ್ತಾರೆ'' ಎಂದು ಎಚ್ಚರಿಸಿದ್ದರು ''ಎಲ್ಲಿಗೆ ಹೋಗಬೇಕಾಗಿದ್ದರೂ

ಜೋಯಿಸರ ಮನೆಯವರ ಜೊತೆಯಲ್ಲೇ ಹೋಗು. ಒಬ್ಬನೇ ಹೋದಿಗೀದೀಯ'' ಎಂದು ಸೂಚಿಸಿದ್ದರು. ''ನಾನೇನು ಇನ್ನು ಹುಡುಗನಾ ? ಬೆಂಗಳೂರಿನಲ್ಲೆಲ್ಲ ಎಲ್ಲೆಲ್ಲೋ ಒಬ್ಬನೇ ಹೋಗುತ್ತಿದ್ದೆ. ಇನ್ನು ಹೊನ್ನಿನಕುಡುಕೆ ಯಾವ ಮಹಾ'' ಎಂದುಕೊಂಡರೂ ಅದನ್ನು ಬಾಯಿ ಬಿಟ್ಟು ಹೇಳಿರಲಿಲ್ಲ. ಹಾಗೆ ಹೇಳಿದರೆ, ಜಾತ್ರೆಗೆ ಕಳಿಸಲು ಒಪ್ಪಿರುವ ಮಾವ ಹಿಂತೆಗೆದುಬಿಟ್ಟರೆ ! ''ಹ್ಞೂಂ'' ಎಂದಿದ್ದ ಅಷ್ಟೆ.

ಅವನ ಹತ್ತಿರ ಮಾವ ಕೊಟ್ಟಿದ್ದ ಎರಡು ರೂಪಾಯಿಗಳು ಮಾತ್ರವೇ ಅಲ್ಲ ಇದ್ದದ್ದು. ತನ್ನ ಜ್ಯಾಮಿಟ್ರಿ ಬಾಕ್ಸಿನಲ್ಲಿ ಸಂಗ್ರಹವಾಗಿದ್ದ ಒಂದೂವರೆ ರೂಪಾಯಿಗಳನ್ನೂ ಜೊತೆಯಲ್ಲಿ ತಂದಿದ್ದ. ಜಾತ್ರೆಯೆಂದರೆ ನೋಡುವುದಕ್ಕೋ ಕೊಂಡುಕೊಳ್ಳುವುದಕ್ಕೋ ಹೊಸ ವಸ್ತುಗಳಿರಬಹುದಲ್ಲ ಎಂದು ತನ್ನ ಸ್ವಂತ ಸಂಗ್ರಹಣೆಯ ದುಡ್ಡನ್ನೂ ತಂದಿದ್ದ. ಆದರೆ ಅವನು ತರುವಾಗ ಚಿಲ್ಲರೆಯನ್ನೆಲ್ಲ ಲಕ್ಷ್ಮೀಪತಿ ಅಂಗಡಿಗೆ ಕೊಟ್ಟು ''ಮತ್ತೆ ನಮ್ಮ ಮಾವನಿಗೆ ಬಂದ ಬೇಕಂತೆ'' ಎಂದು ಒಂದು ರೂಪಾಯಿ ನೋಟು ಹಾಗೂ ಎಂಟಾಣೆಯ ಒಂದು ನಾಣ್ಯವನ್ನು ತೆಗೆದುಕೊಂಡು ಬಂದಿದ್ದ. ತನ್ನ ಬಳಿಯಿದ್ದ ಒಟ್ಟು ಮೊತ್ತ ಎಷ್ಟೆಂದು ಆರನೆಯ ಕ್ಲಾಸಲ್ಲಿ ಓದುತ್ತಿದ್ದ ಅವನಿಗೆ ಲೆಕ್ಕವಿಡಲು ಕಷ್ಟವೇನಾಗಿರಲಿಲ್ಲ. ಅದೆಲ್ಲವನ್ನೂ ಒಂದು ಕಾಗದದಲ್ಲಿ ಮಡಿಸಿ ಚಡ್ಡಿ ಜೇಬಿನ ಒಂದು ಮೂಲೆಯಲ್ಲಿ ಇಟ್ಟು ಉದುರಿ ಹೋದೀತೆಂದು ಹೊರಗಡೆಯಿಂದ, ಎಂದರೆ ತೊಡೆಯ ಹತ್ತಿರ ಒಂದು ದಾರ ಕಟ್ಟಿದ್ದ.

ಪೆಮ್ಮನಹಳ್ಳಿಯಿಂದ ಹೊನ್ನಿನಕುಡಿಕೆಯಿದ್ದುದು ಕೇವಲ ಹದಿನೇಳು ಮೈಲಿ ದೂರದಲ್ಲಿ ಮಾತ್ರ. ಬಸ್ಸಿನ ಮಾರ್ಗದಲ್ಲಿ ಹೋಗಿದ್ದರೆ ಇನ್ನೂ ಮೂರು ಮೈಲಿ ಹೆಚ್ಚಾಗುತ್ತಿತ್ತು. ಬೇರೆ ಮಾರ್ಗದಲ್ಲಿ ಹೋದರೆ ಪಾವಗಡವನ್ನು ಕಾಣದೆಯೇ ಮೂರು ಮೈಲಿ ಉಳಿಸಿ ಜಾತ್ರೆಯ ಸ್ಥಳ ಸೇರಬಹುದಾಗಿತ್ತಾದ್ದರಿಂದ ಗಾಡಿಗಳು ಅದೇ ಮಾರ್ಗವನ್ನು ಹಿಡಿದಿದ್ದವು. ಬಿಸಿಲಲ್ಲೇಕೆ ಪ್ರಯಾಣ ಮಾಡಬೇಕೆಂದು ರಾತ್ರಿ ಪ್ರಯಾಣವನ್ನು ಆರಿಸಿಕೊಂಡಿದ್ದರು. ಬೆಳದಿಂಗಳು ಇರುತ್ತಿದ್ದುದರಿಂದಲೂ, ಜಾತ್ರೆಗೆ ಹೋಗುವ ಬೇರೆ ಬಂಡಿಗಳು ಜೊತೆಗಿರುತ್ತಿದ್ದುದರಿಂದಲೂ ಇದೇ ಹೆಚ್ಚು ಸಮಂಜಸವೆಂದು ಹೊರಟಿದ್ದರು. ರಸ್ತೆ ಸುಮಾರಾಗಿತ್ತು. ಟಾರು ರಸ್ತೆ ಕಾಣಬೇಕೆಂದರೆ ಪಾವಗಡಕ್ಕೇ ಹೋಗಬೇಕು. ಮಿಕ್ಕಲ್ಲೆಲ್ಲ ಮಣ್ಣು ಹಾದಿಯೇ, ಅದೂ ಇವರು ಹೊರಟ ದಾರಿಯೆಂದರೆ ಗಾಡಿ ಜಾಡು ಮಾತ್ರ.

ಇವರ ಬಂಡಿಗಳು ನಿಧಾನವಾಗಿ ನಾಲ್ಕು ಮೈಲಿ ಕಳೆಯುವುದರೊಳಗಾಗಿ ಹೊತ್ತು ಮುಳುಗಿತ್ತು. ಕೆಲವು ವೇಳೆ ದಾರಿಯಲ್ಲಿ ಹಳ್ಳಕೊಳ್ಳಗಳು ಸಿಕ್ಕಿ ಗಾಡಿಗಳು ಧಡಕ್ಕೆಂದು ಎತ್ತಿಹಾಕುತ್ತಿದ್ದವು. ಆ ಕಡೆ ಈ ಕಡೆ ತೂಗಿದಾಗ ತಲೆ ಗಾಡಿಯ ಗುಜ್ಜುಗಳಿಗೆ ತಾಕುತ್ತಿತ್ತು. ಆದರೆ ಮಕ್ಕಳಿಗೆ ಇವೆಲ್ಲವೂ ಮೋಜಿನವೇ ; ಗಾಡಿ ಒಂದೊಂದು ಬಾರಿ ಎತ್ತಿ ಹಾಕಿದಾಗಲೂ ಕಿಸಕ್ಕೆಂದು ನಗುತ್ತಿದ್ದರು. ಕುಲುಕಾಡಿ ಒಬ್ಬರು ಮತ್ತೊಬ್ಬರ ಮೇಲೆ

ಬೀಳುವಾಗಲೂ ಖುಷಿ. ಎಷ್ಟೋ ಸಲ ಗಾಡಿಯ ಕುಲುಕಾಟ ಸ್ವಲ್ಪವೇ ಆದರೂ, ಹೆಚ್ಚೆಂದು ನಟಿಸುತ್ತ ಪಕ್ಕದವರ ಮೇಲೆ ಧೊಪ್ಪೆಂದು ಬೀಳುತ್ತಿದ್ದದ್ದೂ ಉಂಟು.

ಆರೇಳು ಮೈಲಿ ಪ್ರಯಾಣ ಮಾಡುವ ಹೊತ್ತಿಗೆ ತಾವು ಊರಲ್ಲಿದ್ದಾಗ ಊಟ ಮಾಡುತ್ತಿದ್ದ ಹೊತ್ತಾಯಿತು. ಎತ್ತುಗಳೂ ದಣಿದಿದ್ದಾವೆಂದು ಗಾಡಿ ಹೊಡೆಯುವ ಆಳುಗಳು ಗಾಡಿಯಿಂದ ಎತ್ತುಗಳನ್ನು ಬಿಚ್ಚಿ ಅವುಗಳ ಮುಂದೆ ಹುಲ್ಲು ಹರವಿದ್ದರು ; ಗಾಡಿಯ ಚಕ್ರಗಳಿಗೆ ಕಲ್ಲುಗಳನ್ನು ಅಡ್ಡವಿಟ್ಟರು. ಎರಡೂ ಗಾಡಿಗಳ ಕೆಳಗೆ ಕಟ್ಟಿದ್ದ ಲಾಟೀನುಗಳ ಬೆಳಕಿನಲ್ಲಿ ತಂದ ಬುತ್ತಿಯನ್ನು ಎಲ್ಲರೂ ಊಟ ಮಾಡಿದರು. ಕೆಲವು ಗಾಡಿಯಲ್ಲಿ ಮಲಗಿದರೆ ಮತ್ತೆ ಕೆಲವರು ಗಾಡಿಯ ಕೆಳಗೆ ಚಕ್ರಗಳ ಮಧ್ಯೆ, ತಂದಿದ್ದ ಬಟ್ಟೆಗಳನ್ನೇ ಹಾಸಿ, ಮಲಗಿದರು. ಉಳಿದದ್ದು ಒಂಬತ್ತು-ಹತ್ತು ಮೈಲಿಗಳ ಪ್ರಯಾಣ ಮಾತ್ರ. ಆದಕ್ಕೇ ಬೇಗೇನು ಹೊರಡಬೇಕೆಂಬ ಜರೂರಿರಲಿಲ್ಲ.

ಸೀನುವಿಗೆ ಗಾಡಿಯೊಳಗೆ ಮಲಗಲೂ ಭಯ, ಕೆಳಗೆ ಮಲಗಲೂ ಭಯ. ಒಳಗೆ ಮಲಗಿದರೆ ಗಾಡಿಯ ಹಿಂಭಾಗದಲ್ಲಿ ಹೆಚ್ಚು ಭಾರವಾಗಿ ಅದೆಲ್ಲಿ ಕೆಳಕ್ಕೆ ಮಗುಚುತ್ತದೆಯೋ ಎಂಬ ಭಯವಾದರೆ, ಕೆಳಗೆ ಮಲಗಿದರೆ ಗಾಡಿಯೇನಾದರೂ ಮುಂದೆ ಹೋಗಿಬಿಟ್ಟರೆ ಚಕ್ರಗಳು ತಮ್ಮ ಮೇಲೆ ಹರಿಯಬಹುದೆಂಬ ಹೆದರಿಕೆ. ಹೀಗಾಗಿ, ಅವನಿಗೆ ಮಲಗಿದ್ದಾಗಲೂ ನೆಮ್ಮದಿಯಾಗಲಿಲ್ಲ. ಗಾಡಿಗಿಂತ ಸ್ವಲ್ಪ ದೂರದಲ್ಲಿ ಮಲಗೋಣವೆಂದರೆ ಶ್ರೀಕಂಠಯ್ಯನವರು ಬಿಡುತ್ತಿರಲಿಲ್ಲ. ಮಂಜು ಬೀಳುತ್ತದೆ, ನೆಗಡಿಯಾಗುತ್ತದೆ ಎಂದು ಹೇಳಿದ್ದರಿಂದ ಒಪ್ಪಬೇಕಾಯಿತು. ಆದರೂ ಅದಷ್ಟು ಗಾಡಿಯ ಹೊರ ಭಾಗದಲ್ಲಿ, ಎಲ್ಲರಿಗಿಂತ ಕೊನೆಯಲ್ಲಿ ಮಲಗಿದ.

ಬೆಳಗಿನ ಜಾವ ಇನ್ನೂ ದೂರವಿರುವಾಗಲೇ ಎಲ್ಲರನ್ನೂ ಎಬ್ಬಿಸಿ ಹೊರಟರು. ಚಿಕ್ಕಹುಡುಗರೆಲ್ಲ ಗಾಡಿಯಲ್ಲಿಯೇ ತೂಕಡಿಸುತ್ತಿದ್ದರು ; ದೊಡ್ಡವರು ಅಂತಹವರನ್ನು ತಮ್ಮ ತೊಡೆಗಳ ಮೇಲೆ ಮಲಗಿಸಿಕೊಂಡರು. ಹೊನ್ನಿನಕುಡಿಕೆ ತಲುಪುವ ಹೊತ್ತಿಗೆ ಹೊತ್ತು ಹುಟ್ಟುತ್ತಿತ್ತು. ಪೂರ್ವದಲ್ಲಿ ಕೆಂಪಾದ ಬೆಳಕು ಬರಲು ಪ್ರಾರಂಭವಾಯಿತು. ಹುಡುಗರೆಲ್ಲ ಅಂಥ ದೃಶ್ಯವನ್ನು ಕಂಡದ್ದು ಅಪರೂಪ. ಅಷ್ಟು ಬೇಗ ಅವರೆಲ್ಲಿ ಏಳುತ್ತಾರೆ ? ಬೆಳಕನ್ನು ಕಂಡು ಅವರು ಉದ್ಗರಿಸುತ್ತಿದ್ದರು.

ಜಾತ್ರೆಯು ನಡೆಯುತ್ತಿದ್ದ ಜಾಗಕ್ಕೆ ಬರುವ ಹೊತ್ತಿಗಾಗಲೇ ಜನರು ನದಿಯ ಕಡೆಗೆ ಹೋಗುತ್ತಿದ್ದರು. ಇವರೆಲ್ಲ ದೇವಸ್ಥಾನದ ಹತ್ತಿರ ಹೋಗಿ ಗಾಡಿಯನ್ನು ಬಿಚ್ಚಿ ಸಾಮಾನುಗಳನ್ನಿಳಿಸಿಕೊಂಡು ತಮಗೆ ಮೀಸಲಾಗಿದ್ದ ಕೋಣೆಗಳಿಗೆ ಹೋದರು. ಮುಖ ತೊಳೆದು ಎಲ್ಲ ನದಿಯ ಕಡೆಗೆ ಹೊರಟರು. ನದಿಯ ದಾರಿಯಲ್ಲಿ ನೂರಾರು ಜನರ ಸಾಲು ; ಎಲ್ಲ ನದಿಯಲ್ಲಿ ಸ್ನಾನಕ್ಕಾಗಿ ಹೋಗುತ್ತಿದ್ದವರೇ. ಸೌಮ್ಯಮುಖಿ ಈಗಂತೂ ತುಂಬ ಸೌಮ್ಯ. ನೀರು ಹರಿಯುತ್ತಿದ್ದ ಕುರುಹೇ ಇಲ್ಲ. ಮರಳನ್ನು ತುಳಿಯುತ್ತ ಹೋದರೆ, ಅಲ್ಲಿ ಗುಂಡಿಗಳಲ್ಲಿ ನೀರು ನಿಂತಿರುತ್ತಿತ್ತು ; ಅದರಲ್ಲಿಯೇ ಜನ ಮುಳುಗು ಹಾಕುತ್ತಿದ್ದರು.

ಜನರೆಲ್ಲ ಹೋದಕಡೆಯೇ ಹೋಗಿ ಹೋಗಿ ನೀರು ಮಂಡಾಗಿತ್ತು, ಆದರೂ ಭಕ್ತರೆಲ್ಲ ಅಲ್ಲಿಯೇ ಮುಳುಗುಹಾಕುತ್ತಿದ್ದರು. ಯಾವುದೋ ಒಂದು ಕೊನೆಯಲ್ಲಿ ಮಾತ್ರ ನೀರು ಹರಿಯುತ್ತಿದ್ದುದರಿಂದ ಅಲ್ಲಿ ನೀರು ಸ್ವಲ್ಪ ತಿಳಿಯಾಗಿತ್ತು.

ಇವರೆಲ್ಲ ಸ್ನಾನಮಾಡಿದುದೆಂದರೆ ನೀರಲ್ಲಿ ಮುಳುಗುಹಾಕಿದ್ದು ಮಾತ್ರ ಸೋಪು ಹಾಕಿಕೊಳ್ಳಲಾಗಲೀ, ಮೈಯುಜ್ಜಿಕೊಳ್ಳಲಾಗಲೀ ಅಲ್ಲಿ ಆಸ್ಪದವಿರಲಿಲ್ಲ. ಜಾಸ್ತಿ ಜನವಾದ್ದರಿಂದಾಗಿ ಮೇಲೆ ಮೇಲೆಯೇ ಬೀಳುತ್ತಿದ್ದರು ಆದ್ದರಿಂದ ಬೇಗ ಬೇಗ ಮುಳುಗು ಹಾಕಿ ದಡಕ್ಕೆ ಬರುತ್ತಿದ್ದರು. ಒದ್ದೆಯಾದ ಕಾಲುಗಳಲ್ಲಿ ನಡೆದು ಬರುವಾಗ ಕಾಲಿಗೆಲ್ಲ ಮರಳು ಮೆತ್ತಿಕೊಳ್ಳುತ್ತಿತ್ತು. ಸರ ಸರ ಎಂದು ಮರಳಲ್ಲಿ ಕಾಲಿಟ್ಟಾಗ ಶಬ್ದವಾಗುತ್ತಿತ್ತು. ಅಲ್ಲಿ ಕಾಣಿಸಿದ ಕಪ್ಪೆಚಿಪ್ಪು ಶಂಖುಗಳನ್ನಾಯುವುದೇ ಹುಡುಗರ ಕೆಲಸವಾಯಿತು.

ದೇವಸ್ಥಾನಕ್ಕೆ ಹೋಗಿ ಹಣ್ಣುಕಾಯಿ ಮಾಡಿಸಿದರು, ಮೊದಲನೇ ದಿನ ಮಾತ್ರ ದೇವರ ತೇರನ್ನು ಎಳೆಯುತ್ತಿದ್ದರು. ಆದರೆ ದೇವರ ರಥ ಹತ್ತು ದಿನಗಳು ದೇವಸ್ಥಾನದ ಪ್ರಾಂಗಣದಲ್ಲಿಯೇ ಇರುತ್ತಿತ್ತು. ಸೀನುವಿಗೆ ಮಿಕ್ಕ ದೇವಸ್ಥಾನದ ಒಳಗಿಗಿಂತ ಹೊರಗೇ ಹೆಚ್ಚು ಆಸಕ್ತಿ. ಹೀಗಾಗಿ ದೇವರ ಭಯದಿಂದ ಮಂಗಳಾರತಿ ತೆಗೆದುಕೊಂಡು ತೀರ್ಥ ಕುಡಿದರೂ ಹೊರಗಿನ ವಿಶಾಲ ಜಗತ್ತು ಅವನನ್ನು ಕರೆಯುತ್ತಿತ್ತು.

ಮನೆಯ ಹಾಗೆ ಇಲ್ಲೇನೂ ತಿಂಡಿಯಿಲ್ಲ, ಕಾಫಿಯಿಲ್ಲ, ದೇವಸ್ಥಾನದಲ್ಲಿ ಹಾಕುವ ಊಟ ಮಾತ್ರ. ಹೀಗಾಗಿ, ಅವನ ಹೊಟ್ಟೆಯಲ್ಲಿ ತಾಳ ಹಾಕುತ್ತಿದ್ದರೂ ಸೀನುವನ್ನು ವಿಚಾರಿಸುವವರಿಲ್ಲ. ಎಲ್ಲರೂ ದೇವಸ್ಥಾನದಿಂದ ಹೊರಟು ಕೊಠಡಿಗಳಿಗೆ ವಾಪಸಾಗುವಾಗ, ನಿಧಾನವಾಗಿ, ಅವರೆಲ್ಲರಿಗೆ ಕಾಣದಂತೆ, ಅಲ್ಲಿಂದ ಜಾಗಬಿಟ್ಟ.

ಪರಿಷೆಯಲ್ಲಿ ಜನವೋ ಜನ ; ಎಲ್ಲ ಕಡೆಗಳಲ್ಲಿಯೂ ಕಳ್ಳೆಪುರಿಗಳ ರಾಶಿ, ಬೆಂಡು-ಬತ್ತಾಸುಗಳ ಆಕರ್ಷಕ ಬಣ್ಣ, ಹೋಟಲುಗಳಿಂದ ಬರುತ್ತಿದ್ದ ಗ್ರಾಮಾಫೋನು ರಿಕಾರ್ಡುಗಳ ಕಿವಿಗಡಚಿಕ್ಕುವ ಶಬ್ದ. ಅಲ್ಲಲ್ಲಿ ಹಾವಾಡಿಗರು, ದೊಂಬರು ತೋರಿಸುತ್ತಿದ್ದ ಆಟಗಳ ಮುಂದೆ ಸುತ್ತಲೂ ನಿಂತ ಜನ. ಅಲ್ಲೆಲ್ಲ ಸೀನು ತಲೆ ಇಣುಕಿ ಹಾಕಿದ. ಸ್ವಲ್ಪ ಹೊತ್ತು ನೋಡಿ, ಬೇಜಾರಾದರೆ ಬೇರೆಡೆ ಹೋಗಿ ನಿಂತುಕೊಳ್ಳುತ್ತಿದ್ದ.

ಹಾವಾಡಿಗರ ಆಟ ಅವನಿಗೇನು ಹೊಸದಲ್ಲ. ಬೆಂಗಳೂರಿನ ಕೋಟೆಯ ಹತ್ತಿರ ಎಷ್ಟೊಂದು ಜನ ಹಾವಾಡಿಸುತ್ತಿದ್ದರು ! ಹಾವು-ಮುಂಗಸಿಯ ಹೋರಾಟ ಬೇರೆ, ಮಧ್ಯ ಮಧ್ಯ ಯಕ್ಷಿಣಿಯ ಆಟ. ಗೋಲಿಗಳ ಮೇಲೆ ಬಟ್ಟಲು ಮುಚ್ಚಿ ಮಾಯ ಮಾಡುತ್ತಿದ್ದರು. ಗೋಲಿಯ ಮೇಲೆ ಮಗುಚಿ ಹಾಕಿದ್ದ ಬಟ್ಟಲಿನೊಳಗಿಂದ ಯಾರಿಗೂ ಕಾಣದ ಹಾಗೆ, ಸುಮ್ಮನೆ ದಬಕು ಹಾಕಿದ್ದ ಬಟ್ಟಲಿನೊಳಗೆ ಗೋಲಿ ಬಂದಾಗ ಅವನಿಗೆ ಆಶ್ಚರ್ಯವೋ ಆಶ್ಚರ್ಯ ! ಒಂದು ಹಿಡಿ ಮಣ್ಣು ತೆಗೆದುಕೊಂಡು ಕ್ಷಣಾರ್ಧದಲ್ಲಿ ಅದನ್ನು ರೂಪಾಯಿ ನಾಣ್ಯವಾಗಿ ಪರಿವರ್ತಿಸಿದ್ದ ಆ ಯಕ್ಷಿಣಿಗಾರ. ಮತ್ತೆ ಕೈ ಮುಚ್ಚಿ ತೆಗೆದರೆ ರೂಪಾಯಿ ಇಲ್ಲ! ಸೀನುವಿಗೆ ತನ್ನ ಜೇಬಿನಲ್ಲಿದ್ದ ದುಡ್ಡಿನ ನೆನಪಾಯಿತು. ಈ ಹಾವಾಡಿಗನೇನಾದರೂ ತನ್ನ

ಜೇಬಿನಲ್ಲಿದ್ದ ದುಡ್ಡನ್ನು ಆಯ ಮಾಡಿಬಿಟ್ಟರೇನೆಂಬ ಹೆದರಿಕೆಯಾಯಿತು. ಗುಂಪಿನೊಳಗೆ ಜಾಗಮಾಡಿಕೊಂಡು ಮುಂದೆ ಹೋಗಿ ನಿಂತಿದ್ದವನು ನಿಧಾನವಾಗಿ ಅದರಿಂದ ಹೊರಬಂದ. ದೂರ ಹೋಗಿ ಜೇಬಿನಲ್ಲಿ ಕೈಹಾಕಿ ನೋಡಿಕೊಂಡ. ಸಧ್ಯ, ದುಡ್ಡು ಮಾಯವಾಗಿರಲಿಲ್ಲ!

ದೇವಸ್ಥಾನದಿಂದ ಹೊರಟನಂತರ ಸ್ವಲ್ಪ ಹೊತ್ತಿಗೆ ಒಂದಾಣೆ ಕಳ್ಳೆಪುರಿ ತೆಗೆದುಕೊಂಡು ತಿಂದಿದ್ದ ಸೀನುವಿಗೆ ಹಸಿವು-ಬಾಯಾರಿಕೆ ಎರಡು ಉಂಟಾದವು, ಆಟಗಳನ್ನೆಲ್ಲ ನೋಡುತ್ತ ಸ್ವಲ್ಪ ಕಾಲದ ಬಳಿಕ. ಅಲ್ಲದೆ, ಹೇಳದೆ ಕೇಳದೆ ಬಂದಿದ್ದರಿಂದ ಜೋಯಿಸರ ಮನೆಯವರು ಏನಾದರೂ ಅಂದರೆ ! ಎಷ್ಟು ಹೊತ್ತಾಗಿ ಹೋಯಿತೋ ಏನೋ. ಇಷ್ಟು ಹೊತ್ತಿಗೆ ಗುಡಿಯಲ್ಲಿ ಊಟಕ್ಕೆ ಎಲೆ ಹಾಕಿರುತ್ತಾರೋ ಏನೋ ! ತನ್ನನ್ನು ಅವರೆಲ್ಲ ಹುಡುಕಾಡುತ್ತಿದ್ದರೆ, ಊರಿಗೆ ಹೋದಮೇಲೆ ಮಾವನ ಹತ್ತಿರ ಇದನ್ನೆಲ್ಲ ಹೇಳಿಬಿಟ್ಟರೇನು ಗತಿಯೆಂಬ ಭಯವಾಯಿತು. ಗುಡಿಯ ಕಡೆ ಅವಸರವಸರದಿಂದ ಕಾಲು ಹಾಕಿದ.

ಇವನು ಗುಡಿ ಸೇರುವ ಹೊತ್ತಿಗೆ ಅಲ್ಲಿ, ಅವನು ಭಯಪಟ್ಟಿದ್ದಂತೆ. ಆಗಲೇ ಎಲೆ ಹಾಕಿದ್ದರು. ತಾವು ಇಳಿದುಕೊಂಡಿದ್ದ ಕೋಣೆಗಳ ಹತ್ತಿರ ಹೋಗಿ ನೋಡಿದಾಗ ಅವಕ್ಕೆ ಬೀಗ ಹಾಕಿದ್ದರು. ಅವರೆಲ್ಲ ಆಗಲೇ ಊಟಕ್ಕೆ ಹೋಗಿದ್ದಾರೆಂದುಕೊಂಡು ತಾನೂ ಊಟದ ಶಾಲೆಯ ಕಡೆ ನಡೆದ. ಅಲ್ಲಿ ಆಗಲೇ ಜನ ಊಟದ ಎಲೆಗಳ ಮುಂದೆ ಕೂತಿದ್ದರು, ನೂರಾರು ಮಂದಿ. ಜೋಯಿಸರ ಮನೆಯವರ ಯಾವ ಪಂಕ್ತಿಯಲ್ಲ ಕೂತಿದ್ದಾರೆಂದು ಹುಡುಕುವುದು ಹೇಗೆ ಎನ್ನಿಸಿತು. ಶ್ರೀಕಂಠಯ್ಯನವರು ತನ್ನನ್ನು ಕಂಡು "ಎಲ್ಲಿ ಹೋಗಿದ್ದೆ ?" ಎಂದು ಕೇಳಿದರೇನು ಗತಿಯೆಂಬ ಭಯವಾಯಿತು.

ಆದರೆ ಇವನ ಸಮಸ್ಯೆಗೆ ತಾನಾಗಿ ಪರಿಹಾರ ಒದಗಿಬಂತು. ಶ್ರೀಕಂಠಯ್ಯನವರ ಮಗ ತಿರುಪಿನ ಚೊಂಬು ಹಿಡಿದು ಈ ಕಡೆ ಬರುತ್ತಿದ್ದ. ಇವನನ್ನು ಕಾಣುತ್ತಲೇ, "ಅಮ್ಮ ಅಜ್ಜಿ ಎಲ್ಲ ನಿನಗೋಸ್ಕರ ಹುಡುಕುತ್ತಿದ್ದರು. ಎಲ್ಲಿ ಹೋಗಿದ್ದೆ ?" ಎಂದ. "ಸುಮ್ಮನೆ ಸುತ್ತಾಡಿ ಬಂದೆ ಕಣೋ" ಎಂದುತ್ತರಿಸಿ "ಅದಿರಲಿ ಕಣೋ, ನೀವೆಲ್ಲ ಎಲ್ಲಿ ಕೂತಿದ್ದೀರಿ ?" ಎಂದ "ದೊಡ್ಡವರೆಲ್ಲ ಅಲ್ಲಿ ಕೂತಿದ್ದಾರೆ, ನೋಡು" ಎಂದು ಕೈಚಾಚಿ ತೋರಿಸಿದ ಕಡೆ ನೋಡಿದ. ಅಲ್ಲಿ ಸಾಲಾಗಿ ಜೋಯಿಸರ ಮನೆಯವರ ಹಿರಿಯರು ಕೂತಿದ್ದರು. "ನೀವೆಲ್ಲ ಎಲ್ಲಿದ್ದೀರೋ ?" "ಇಲ್ಲೇ ಹತ್ತಿರ" ಎಂದು, "ನೀರು ತರ್ತೀನಿ, ಇಲ್ಲೇ ಇರು, ಬರ್ತೀನಿ ನಮ್ಮ ಸಾಲಲ್ಲಿ ಎಲೆ ಖಾಲಿಯಿದೆ" ಎಂದು ಹೋದ.

ಹುಡುಗರ ಜೊತೆಯಲ್ಲಿ ಕೂತು ಊಟ ಮುಗಿಸಿದ. ಇವರೆಲ್ಲ ಇನ್ನೂ ಊಟ ಮುಗಿಸಿ ಕೈತೊಳೆಯಲು ಮೇಲೇಳಲಿಕ್ಕಿಲ್ಲ, ಆಗ ಕೆಲವರು ಎಂಜಲೆಲೆಗಳ ಮೇಲೆ ಹೊರಳಾಡತೊಡಗಿದರು. ಅವರೆಲ್ಲ ಎಲೆಗಳ ಬಳಿ ಸುಳಿದುದನ್ನು ಕಂಡು ಇವನಿಗೆ ಭಯವಾಗಿತ್ತು. ಬೆಂಗಳೂರಿನಲ್ಲಿ ಎಷ್ಟೋ ಸಾರಿ ಕೆಲವರು ಭಿಕ್ಷಕರು ಎಂಜಲೆಲೆಗಳನ್ನು

ಎಳೆದುಕೊಂಡು ತಿನ್ನುತ್ತಿದ್ದುದನ್ನು ಕಂಡಿದ್ದ ಇವರು ಅಂತಹವರೇ ಇರಬಹುದೇ ಎಂಬ ಅನುಮಾನ ಮೊದಲು ಉಂಟಾಯಿತು. ಆದರೆ ಸ್ವಲ್ಪ ಹೊತ್ತಿನಲ್ಲಿ ಅವನ ಅನುಮಾನ ಅರ್ಧ ಪರಿಹಾರವಾಯಿತು. ಅವರೆಲ್ಲ ಎಂಜಲೆಲೆಗಳ ಮೇಲೆ ಹೊರಳಾಡುತ್ತಿದ್ದರು. ಇವರಿಗೇನಾದರೂ ಹುಚ್ಚುಗಿಚ್ಚು ಹಿಡಿದಿದೆಯೋ ಎನ್ನಿಸಿತು. ಸೀನುವಿನ ಗಮನ ಎತ್ತ ಕಡೆಯಿದೆಯೆಂಬುದನ್ನು ಗಮನಿಸಿದ ಶ್ರೀಕಂಠಯ್ಯನವರ ಮಗ ಹೇಳಿದ, "ಅವರೆಲ್ಲ ಹರಕೆ ಹೊತ್ತಿರ್ತಾರೆ ಕಣೋ, ಭಕ್ತರು ಊಟ ಮಾಡಿದ ಎಲೆಗಳ ಮೇಲೆ ಹೊರಳ್ತೀವಿ ಅಂತ" ಎಂದು ವಿವರಿಸಿದ.

"ಅದರಿಂದ ಏನು ಬರತ್ತೆ?"

"ಪಾಪ ಎಲ್ಲ ಹೋಗತ್ತಂತೆ ಕಣೋ"

"ಅದು ಹೇಗೋ ?"

"ನಂಗೊತ್ತಿಲ್ಲಪ್ಪ ನಮ್ಮಮ್ಮ ಹಾಗೆ ಹೇಳಿದರು" ಎಂದು ಸುಮ್ಮನಾದ ಅವನು. ಸೀನುವೂ ಅನಿವಾರ್ಯವಾಗಿ ಸುಮ್ಮನಿರಬೇಕಾಯಿತು.

ಕೈತೊಳೆದು ಕೊಠಡಿಯ ಬಳಿ ಬಂದಾಗ ಇನ್ನೂ ದೊಡ್ಡವರೆಲ್ಲ ಅಲ್ಲಿಗೆ ವಾಪಸಾಗಿರಲಿಲ್ಲ. ಸೀತಾಲಕ್ಷ್ಮಿ ಅತ್ತೆ ಮೊದಲು ಬಂದು ಬಾಗಿಲು ತೆರೆದರು. ಇವನನ್ನು ಕಂಡು "ಎಲ್ಲಿ ಹೊರಟು ಹೋಗಿದ್ಯೋ ? ನಾವೆಲ್ಲ ನಿನಗಾಗಿ ಹುಡುಕಾಡ್ತಾ ಇದ್ದರೆ ನೀನು ನಾಪತ್ತೆ" ಎಂದರು.

"ಗುಡಿಯ ಹೊರಗೇ ಇದ್ದೆನಲ್ಲ ಅತ್ತೆ" ಎದು ಏನೂ ಗೊತ್ತಿಲ್ಲದವನಂತೆ.

"ಬುರುಡೆ ಬಿಡಬೇಡ. ನಮ್ಮ ಹುಡುಗ ನಿಂಗೋಸ್ಕರ ಎಲ್ಲ ಕಡೆ ಹುಡುಕಾಡಿದ."

"ಇಲ್ಲ ಅತ್ತೆ ನಾನು ಆ ರಥದ ಹತ್ತಿರಾನೇ ನಿಂತಿದ್ದೆನಲ್ಲ"

"ನಾನು ರಥದ ಹತ್ತಿರವೇ ಬಂದಿದ್ದೆನಲ್ಲೋ. ನೀನಲ್ಲಿ ಕಾಣಿಸಲಿಲ್ಲ!" ಎಂದು ಅವರ ಮಗ ಹೇಳಿದಾಗ ಸೀನು ಸ್ವಯಂರಕ್ಷಣೆಯ ತರ್ಕ ಮಾರ್ಗ ಹಿಡಿದ.

"ನೀನು ಬಂದಾಗ ನಾನು ಈ ಕಡೇನೇ ಬರ್ತಿದ್ದೆ ಅನ್ಸತ್ತೆ"

"ಇನ್ನು ನಮಗೆ ಹೇಳದೇ ಕೇಳದೆ ಹೋದರೆ ನಿಮ್ಮ ಮಾವಂಗೆ ಹೇಳಿಬಿಡ್ತೀನಪ್ಪ. ನಾವು ಹೇಳಿದ ಹಾಗೆ ಕೇಳಿಕೊಂಡಿರ್ಬೇಕು" ಎಂದು ಇವನ ಮಾತಿಗೆ ಮುಕ್ತಾಯ ಸೂಚಿಸಿದ್ದರು. ಸೀನು ಸುಮ್ಮನಾಗಬೇಕಾಯಿತು.

ಮಾರನೇ ದಿನವೇ ಜೋಯಿಸರ ಮನೆಯ ಸೇವೆ. ತುಂಬ ವಿಧೇಯನಾಗಿ ಸೀನು ಗುಡಿಯಲ್ಲಿ ಅರ್ಚನೆ ಅಷ್ಟೋತ್ತರಗಳ ಕಾಲದಲ್ಲಿ ಅವರೆಲ್ಲರ ಜೊತೆಯಲ್ಲಿಯೇ ಇದ್ದ. ಈ ದಿನ ಬೆಳಗ್ಗೆ ನದಿಗೆ ಸ್ನಾನಕ್ಕೆ ಯಾರೂ ಹೋಗಲಿಲ್ಲ. ಬೇಗ ಗುಡಿಗೆ ಹೋಗಬೇಕಾದ್ದರಿಂದಲೂ, ನದಿಗೆ ದೂರ ನಡೆದು ಹೋಗಬೇಕಾದ್ದರಿಂದಲೂ ಅಲ್ಲಿಯೇ ಬೆಳಗಿನ

ಜಾವವೇ ಹಿರಿಯರೆಲ್ಲ ಸ್ನಾನ ಮಾಡಿದ್ದರು. ಸ್ನಾನ ಎಂದರೆ ಬಾವಿಯಿಂದ ನೀರು ಸೇದಿಕೊಂಡು ತಲೆಯ ಮೇಲೆ ಸುರಿದುಕೊಳ್ಳುವುದು. ಕೊನೆಯಲ್ಲಿ ಮಕ್ಕಳಿಗು ಅದೇ ರೀತಿ ಸ್ನಾನವಾಯಿತು.

ಶ್ರೀನಿವಾಸ ಜೋಯಿಸರು, ಶ್ರೀಕಂಠಯ್ಯ ತುಂಬ ಕೆಲಸದಲ್ಲಿದ್ದರು. ಹೆಂಗುಸರೆಲ್ಲ ದೇವಸ್ಥಾನದಲ್ಲಿಯೇ ಮುತ್ತೈದೆಯರಿಗೆ ಬಾಗಿನ ಇತ್ಯಾದಿಗಳನ್ನು ಕೊಡುತ್ತಿದ್ದರು. ಹುಡುಗರು ಕೋಣೆಯಲ್ಲಿಯೇ ಇರುತ್ತೇವೆಂದರು. ಅವರಿಗೆ ಈ ಹೆಂಗಸರ ಮಧ್ಯೆ ಬೇಸರವೆನಿಸಿತ್ತು. ಆ ಹುಡುಗರ ಜೊತೆಯಲ್ಲಿಯೇ ಸೀನುವೂ ತಮ್ಮ ಕೋಣೆಗೆ ಬಂದು ಸ್ವಲ್ಪಹೊತ್ತು ಕಳೆದ ಮೇಲೆ ಅವನು ಶ್ರೀಕಂಠಯ್ಯನವರ ಮಗನ ಹತ್ತಿರ ಎರಡು ಬೆರಳುಗಳನ್ನು ತೋರಿಸಿ ಹೋಗಿ ಬರುತ್ತೇನೆಂದ, ಅವನಿಗೆ ನಿಜವಾಗಿಯೂ ಅಂಥ ಪ್ರಸಂಗ ಬಂದಿರಲಿಲ್ಲ. ಎಷ್ಟು ಹೊತ್ತೂಂತ ಇಲ್ಲಿ ಮಾತನಾಡುತ್ತ ಕೂತು ಕೊಳ್ಳುವುದು ? ಎಲ್ಲಾದರೂ ಹೋಗುತ್ತೇನೆಂದರೆ ಸೀತಾಲಕ್ಷಮ್ಮತ್ತೆ ಏನನ್ನುತ್ತಾರೋ, ನಿನ್ನೆ ಬೇರೆ ಗದರಿಕೊಂಡಿದ್ದರು. ಈಗ ಹೇಳಿದ ಕಾರಣವಾದರೆ ಅನುಮಾನ ಬರಲಾರದು.

ಹೊರಗೆ ಬಂದು ಜಾತ್ರೆಯಲ್ಲಿ ಒಬ್ಬನೇ ತಿರುಗಿದ. ಸ್ವಲ್ಪ ಹೊತ್ತಾದ ಮೇಲೆ ಶ್ಯಾನುಭೋಗರ ಹಿರಿಯ ಮಗ ಎದುರಿಗೆ ಬಂದ. ಇವನಿಗೆ ಆಶ್ಚರ್ಯ. ಇವನ್ಯಾವಾಗ ಬಂದ ಎಂದು. ಅವತ್ತು ಬೆಳಗ್ಗೆ ತಾನೇ ಬಸ್ಸಿನಲ್ಲಿ ಬಂದನಂತೆ, ಅವನ ಜೊತೆ ಸಿಕ್ಕಿದ್ದರಿಂದ ಇವನು ಬೆಂಡು ಬತ್ತಾಸು, ಆಟಗಳಿಂದ ಬೇರೆ ಕಡೆಗೆ ಗಮನ ಹರಿಸುವಂತಾಯಿತು. "ಒಂದು ತಮಾಷೆ ತೋರಿಸ್ತೀನಿ ಬಾ" ಎಂದು ಸೀನುವನ್ನು ಕರೆದೊಯ್ದ.

ಅವರು ಬಂದದ್ದು ಯಾವುದೋ ಆಟ ನಡೆಯುತ್ತಿದ್ದ ಕಡೆಗೆ. ಆಟವೆಂದರೆ ನಿಜವಾಗಿಯೂ ಆಟವಲ್ಲ. ಒಂದು ಗುಂಡಾದ ಹಲಗೆಯಿತ್ತು. ಅದರ ಸುತ್ತಲೂ ಒಂದರಿಂದ ಇಪ್ಪತ್ತರವರೆಗೆ ಹಳೆಯ ಕ್ಯಾಲೆಂಡರಿನಿಂದ ಹರಿದ ಅಂಕಿಗಳನ್ನು ಅಂಟಿಸಿದ್ದರು. ಹಲಗೆಯ ನಡುವೆ ಒಂದು ಸಣ್ಣ ಕಬ್ಬಿಣದ ಕಂಬಿ, ಅದಕ್ಕೆ ಅಡ್ಡಡ್ಡಲಾಗಿ ಒಂದು ತಗಡಿನ ಸ್ಕೇಲಿನಂತಹ ತುಂಡನ್ನು ಸಿಕ್ಕಿಸಿದ್ದರು. ಅದರ ಒಂದು ತುದಿಗೆ ಒಂದು ಸಣ್ಣ ಬೊಂಬೆಯನ್ನು ಕಟ್ಟಿದ್ದರು. ಆ ತುಂಡನ್ನು ತಿರುಗಿಸಿದರೆ ಅದು ಮೊದಲು ಜೋರಾಗಿ ತಿರುಗಿ ಅನಂತರ ನಿಧಾನವಾಗಿ ಕೊನೆಗೆ ನಿಲ್ಲುತ್ತಿತ್ತು. ಆ ಬೊಂಬೆ ಯಾವ ನಂಬರಿನ ಮೇಲೆ ನಿಂತರೆ ಅಲ್ಲಿ ದುಡ್ಡಿಟ್ಟಿದ್ದವರಿಗೆ ಇಟ್ಟ ದುಡ್ಡಿನ ನಾಲ್ಕು ಪಟ್ಟು ದುಡ್ಡನ್ನು ಕೊಡುತ್ತೇವೆಂದು ಅದರ ಮಾಲೀಕ ಹೇಳುತ್ತಿದ್ದ. ಎಷ್ಟೋ ಜನ ಅದರ ಮುಂದೆ ಕುಳಿತು, ನಿಂತು ದುಡ್ಡನ್ನು ಅಂಕಿಗಳಿದ್ದ ಮನೆಗಳಲ್ಲಿಡುತ್ತಿದ್ದರು. ಶ್ಯಾನುಭೋಗರ ಮಗ ಆಸೆ ಹುಟ್ಟಿಸಿದ್ದ ;

"ಒಂದಾಣೆ ಇಟ್ಟರೆ ನಾಲ್ಕಾಣೆ ಕೊಡ್ತಾರೆ ; ಒಂದು ರೂಪಾಯಿಗೆ ನಾಲ್ಕು ರೂಪಾಯಿ, ನೀನೂ ಇಡೋ."

"ಬೇಡಪ್ಪ ನಂಗೆ ಭಯವಾಗುತ್ತೆ, ಮಾವನಿಗೇನಾದರೂ ಗೊತ್ತಾದರೆ ಸುಮ್ನೆ ಬಿಡಲ್ಲ, ಚಚ್ಚಿಬಿಡ್ತಾರೆ."

"ಇಲ್ಯಾರು ನೋಡ್ತಾರೋ ನಮ್ಮನ್ನ? ನೀನು ಇಡದಿದ್ದರೆ ಅಷ್ಟೋ ಹೋಯ್ತು ನಾನಂತೂ ಕಟ್ಟೇನಿ."

ಸೀನು ಸುಮ್ಮನೆ ನೋಡುತ್ತ ನಿಂತ. ಶ್ಯಾನುಭೋಗರ ಮಗ ಮೊದಲೆರಡು ಬಾರಿ ಒಂದೊಂದಾಣೆಯಿಟ್ಟ; ಏನೂ ಬರಲಿಲ್ಲ. ಆದರೆ ಮೂರನೇಯ ಬಾರಿ ನಾಲ್ಕಾಣೆ ಕಟ್ಟಿದ್ದ. ಅವನ ಅದೃಷ್ಟಕ್ಕೆ ಗೊಂಬೆ ಅವನು ಹಣವಿಟ್ಟಿದ್ದ ಅಂಕಿಯ ಮೇಲೇ ನಿಂತಿತು. ಅವನಿಗೆ ಒಂದು ರೂಪಾಯಿ ಸಿಕ್ಕಿತು. ಅವನಿಗೆ ಒಂದು ರೂಪಾಯಿ ಸಿಕ್ಕಿತು. ಈಗ ಸೀನುವಿಗೂ ಆಸೆಯಂಕುರಿಸಿತು. ತನ್ನ ಹತ್ತಿರವಿರುವ ದುಡ್ಡು ನಾಲ್ಕರಷ್ಟಾದರೆ ! ಅವನೂ ಸ್ವಲ್ಪ ಸ್ವಲ್ಪ ಹಣ ಕಟ್ಟುತ್ತ ಬಂದ. ಉಹ್ಞೂ, ಅದೃಷ್ಟ ಅವನಿಗೆ ಒಲಿಯಲಿಲ್ಲ. ಶ್ಯಾನುಭೋಗರ ಮಗನಿಗಾದರೆ ಒಂದೆರಡು ಸಾರಿ ಹೋಗುತ್ತಿತ್ತು ; ಮಧ್ಯೆ ಒಮ್ಮೊಮ್ಮೆ ಬರುತ್ತಿತ್ತು. ಸೀನುವಿಗಂತೂ ಒಂದು ಸಲವೂ ಬರಲಿಲ್ಲ. ತನ್ನ ಬಳಿಯಿದ್ದ ಮೂರೂವರೆ ರೂಪಾಯಿಗಳಲ್ಲಿ ಮೂರು ರೂಪಾಯಿ ಸೋತುಬಿಟ್ಟ. ಆಗಲೇ ಅವನಿಗೆ ಎಚ್ಚರವಾದದ್ದು. ಉಳಿದಿರುವುದು ಇನ್ನು ಎಂಟಾಣೆ ಮಾತ್ರ. ಮಾವನೇನಾದರೂ ಲೆಕ್ಕ ಕೇಳಿದರೆ ಏನು ಹೇಳುವುದು ಎಂದು ದಿಗಿಲಾಯಿತು. ಅಷ್ಟು ಹೊತ್ತಿಗೆ ಹೊತ್ತು ಬೇರೆ ಆಗಿತ್ತು. ಎದೆ ಡವಡವಗುಟ್ಟಲು ಪ್ರಾರಂಭಿಸಿತು. "ನಾನು ಹೋಗ್ತೀನಪ್ಪ" ಎಂದು ಅಲ್ಲಿಂದ ಹೊರಟು ಬಂದು ಬಿಟ್ಟ. ಶ್ಯಾನುಭೋಗರ ಮಗ "ಲೇ ತಾಳೋ ಇನ್ನೊಂದು ಸ್ವಲ್ಪ ಹೊತ್ತು ನಾನೂ ಬರ್‍ತೀನಿ" ಎಂದು ಹೇಳಿದರೂ ಕೇಳಲಿಲ್ಲ.

ಸದ್ಯ, ಕೋಣೆಗೆ ಬಂದಾಗ ಅಲ್ಲಿಗಿನ್ನೂ ಹಿರಿಯರು ಬಂದಿರಲಿಲ್ಲ. ಬದುಕಿದೆಯಾ ಬಡಜೀವವೇ ಎನಿಸಿತು. ಅವನ ಮಂಕಾದ ಮುಖ ನೋಡಿ ಶ್ರೀಕಂಠಯ್ಯ ಮಾವನ ಮಗ "ಯಾಕೋ" ಸೀನು ಒಂಥರ ಇದ್ದೀ ?" ಎಂದ "ಹೊಟ್ಟೆ ನೋವು ಕಣೋ" ಎಂದು ಅವನಿಂದ ತಪ್ಪಿಸಿಕೊಂಡ.

ಸಾಯಂಕಾಲ ಎಲ್ಲರೂ ಜಾತ್ರೆ ನೋಡಲು ಹೊರಟರು. ತಮ್ಮ ಮಕ್ಕಳ ಜೊತೆಗೆ ಸೀನುವಿಗೂ ಏನೇನೋ ಕೊಡಿಸಿದರು. ಅವನಿಗೆ ಇಷ್ಟಾದರೂ ಮನಸ್ಸು ಯಾಕೋ ಮುದುಡಿಕೊಂಡಿತ್ತು. ಅನ್ಯಾಯವಾಗಿ ಮೂರು ರೂಪಾಯಿಯನ್ನು ಹಾಳು ಮಾಡಿಕೊಂಡೆನಲ್ಲ ಎಂದು ಕುದ್ದುಕೊಂಡ. ಆದರೆ ಇದನ್ನು ಯಾರ ಹತ್ತಿರವೂ ತೋಡಿಕೊಳ್ಳುವಂತಿರಲಿಲ್ಲ.

ಒಂದೆಡೆ ಒಬ್ಬ ಹನುಮಂತನ ವೇಷಧಾರಿ ಕಾಣಿಸಿದ. ಮೈಗೆಲ್ಲ ಅವನು ನಾಟಕದ ವೇಷಧಾರಿಯಂತೆ ಬಣ್ಣ ಬಳಿದುಕೊಂಡಿದ್ದ. ಬಾಲವಿತ್ತು. ತಲೆಗೆ ಕಿರೀಟ ಧರಿಸಿದ್ದ. ಮಧ್ಯೆ ಮಧ್ಯೆ ತನ್ನ ಎದೆಯ ಹತ್ತಿರ ತೋರಿಸುತ್ತಿದ್ದ ಅಲ್ಲಿ ಶ್ರೀ ರಾಮ ಶ್ರೀರಾಮ ಎಂದು ಬರೆದಿತ್ತು. ಅಲ್ಲದೆ ಏನೋ ಮಾತು ಬೇರೆ ಆಡುತ್ತಿದ್ದ ; ತನ್ನ ಊರಲ್ಲಿ ಅವನು ಶ್ರೀರಾಮ ದೇವರ ಗುಡಿಯನ್ನು ಕಟ್ಟಿಸುತ್ತಾನಂತೆ. ಅದಕ್ಕೆ ಹತ್ತು ವರ್ಷಗಳಿಂದಲೂ ಹನುಮಂತನ ವೇಷ ಧರಿಸಿ ಕಟ್ಟಡಕ್ಕಾಗಿ ಭಿಕ್ಷೆ ಬೇಡುತ್ತಿದ್ದಾನಂತೆ. ಅವನು ಕೈಯೊಡ್ಡಿದಾಗ ಹಲವಾರು ಮಂದಿ ಕಾಸು ಕೊಡುತ್ತಿದ್ದರು. ಎಷ್ಟೋ ಜನ ಅವನನ್ನು ಹನುಮಂತನ ಅವತಾರವೆಂದು

ಮಾತಾಡಿಕೊಳ್ಳುತ್ತಿದ್ದರು. "ಅವನ ಹತ್ತಿರ ಎಷ್ಟೊಂದು ದುಡ್ಡಿರಬಹುದು ಈಗ' ಎಂದು ಸೀನುವಿಗನ್ನಿಸಿತು. ತಾನು ಕಳೆದುಕೊಂಡ ಮೂರು ರೂಪಾಯಿಗಳ ನೆನಪಾಯಿತು, ಲೊಚಗುಟ್ಟಿಕೊಂಡ.

ಅವತ್ತು ರಾತ್ರಿ ಊಟವಾದ ಮೇಲೆ ಎಲ್ಲರೂ ಸಿನಿಮಾವೊಂದನ್ನು ನೋಡಲು ಹೋದರು. ಟಿಕೇಟು ತೆಗೆದುಕೊಳ್ಳುವಾಗ ತನ್ನಿಂದ ದುಡ್ಡು ಕೇಳುತ್ತಾರೇನೋ ಎಂದುಕೊಂಡ ; ಆದರೆ ಶ್ರೀಕಂಠಯ್ಯನವರೇ ಎಲ್ಲರಿಗೂ ಟಿಕೇಟು ಕೊಂಡುಕೊಂಡರು. ಮೊದಲು ಸೀನು ಬೆಂಗಳೂರಲ್ಲಿ ಸಿನಿಮಾ ನೋಡುತ್ತಿದ್ದಾಗ ಅವನಿಗೆ ಹೆಚ್ಚಿನ ಭಾಗ ಅರ್ಥವಾಗುತ್ತಿರಲಿಲ್ಲ. ಆದರೆ ಈಗ ಕಥೆ ಪೂರ್ತಿ ಅರ್ಥವಾದಂತೆನಿಸಿತು. ರಾವಣ ಶಿವನಿಂದ ಆತ್ಮಲಿಂಗವನ್ನು ಕೇಳುವುದು, ಅದನ್ನು ಹುಡುಗನ ವೇಷದ ಗಣಪತಿ ನೆಲದಲ್ಲಿಟ್ಟು ಬಿಡುವುದು, ಅಂದಿನಿಂದ ಆ ಜಾಗಕ್ಕೆ ಭೂಕೈಲಾಸವೆಂದು ಹೆಸರಾದದ್ದು. ಇದೇ ಸಿನಿಮಾದ ಕಥೆ ; ಹೆಸರೂ "ಭೂಕೈಲಾಸ' ಎಂದೇ. ಆ ಹುಡುಗ ರಾವಣನನ್ನು ಕಾಡಿಸುವಾಗ ಮಾತ್ರ ಮಿಕ್ಕ ಹುಡುಗರೊಂದಿಗೆ ಇವನೂ ಬಿದ್ದು ಬಿದ್ದು ನಕ್ಕಿದ್ದ. ತನ್ನ ನಷ್ಟವನ್ನು ಅಲ್ಲಿ ಅವನು ಸಂಪೂರ್ಣವಾಗಿ ಮರೆತ.

ಮಾರನೆಯ ದಿನ ಸಾಯಂಕಾಲ ಮತ್ತೆ ಗಾಡಿಯಲ್ಲಿ ಊರ ಕಡೆ ಪ್ರಯಾಣ ಮಾಡಿದರು. ಅವತ್ತಿನ ರಾತ್ರಿಯೆಲ್ಲ ಪ್ರಯಾಣ ಮಾಡಿ ಮರುದಿನ ಬೆಳಗಿನ ಜಾವಕ್ಕೆ ಹೊನ್ನಕುಡಿಕೆಗೆ ಹೋದ ರೀತಿಯಲ್ಲಿಯೇ ಊರಿಗೆ ವಾಪಸ್ಸು ಬಂದರು.

ಸೀನುವಿಗೆ ಮೂರು ದಿನಗಳು ಕನಸೋ ಎಂಬಂತೆ ತೋರುತ್ತಿತ್ತು. ಜನಗಳು, ಗಲಾಟೆ, ಬಣ್ಣಬಣ್ಣದ ವಸ್ತುಗಳು, ಗುಡಿಯ ಪುಷ್ಕಳವಾದ ಊಟ- ಇವೆಲ್ಲ ಅವನ ಮನಸ್ಸಿನಲ್ಲಿ ಮಧುರವಾದ ನೆನಪುಗಳಾಗಿದ್ದವು. ಮೂರು ರೂಪಾಯಿಗಳ ನಷ್ಟ ಮಾತ್ರ ಒಂದೆಡೆ ಕೊರೆಯುತ್ತಿತ್ತು. ಆದರೆ ಮಾವನಿಗೆ ಎಂಟಾಣೆ ವಾಪಸ್ಸುಕೊಟ್ಟು ಮಿಕ್ಕ ಒಂದೂವರೆ ರೂಪಾಯಿಗಳಿಗೆ ಕೊಂಡುಕೊಂಡೆನೆಂದು, ಸೀತಾಲಕ್ಷ್ಮಮ್ಮತ್ತೆ ಕೊಡಿಸಿದ್ದ ವಸ್ತುಗಳನ್ನು ತೋರಿಸಿದ್ದ!

೧೧

ಜನವರಿ ತಿಂಗಳ ಕೊನೆಯ ಭಾಗದಲ್ಲಿ ಪೆಮ್ಮನಹಳ್ಳಿಗೆ ಪೋಸ್ಟ್ ಆಫೀಸ್ ಬಂತು. ಮಾವನೇ ಅದಕ್ಕೆ ಪತ್ರವ್ಯವಹಾರ ಮಾಡಿ, ಪೇಪರುಗಳ 'ವಾಚಕರ ವಾಣಿ'ಯಲ್ಲಿ ಬರೆದು ಒಂದೆರಡು ಬಾರಿ ಪಾವಗಡ ತುಮಕೂರುಗಳಿಗೆ ಹೋಗಿ ಬಂದಿದ್ದರು. ಅದಕ್ಕೇ ಮಾವನವರನ್ನೇ ಪೋಸ್ಟ್ ಮೇಷ್ಟ್ರಾಗಿ ನೇಮಕ ಮಾಡಿದ್ದರು. ಪೋಸ್ಟ್ ಆಫೀಸ್ ಬಂದಿತೆಂದರೆ ದಿನವೂ ಪತ್ರಗಳ ಓಡಾಟ ಚಟುವಟಿಕೆ, ಜನಗಳು ಆಗಾಗ ಬಂದು ಹೋಗುವುದು.

ಪೋಸ್ಟ್ ಆಫೀಸ್ ಮನೆಯಲ್ಲಿಯೇ ಪ್ರಾರಂಭವಾಯಿತು. ಆದರ ಪ್ರಾರಂಭೋತ್ಸವಕ್ಕೆ ಪಾವಗಡದಿಂದ ದೊಡ್ಡ ಪೋಸ್ಟ್‌ಮಾಸ್ಟರ್ ಬಂದಿದ್ದರು. ಮನೆಯ ಬಳಿಯೇ ಸಮಾರಂಭ ; ಚಿಕ್ಕದಾದರೂ, ನಡೆದುದು ಸೀನುವಿನ ಮನಸ್ಸಿನಲ್ಲಿ ಒಂದು ಬಗೆಯ ರೋಮಾಂಚಕಾರಕ ಅನುಭವಕ್ಕೆಡೆ ಮಾಡಿಕೊಟ್ಟಿತ್ತು. ಊರಿನ ಹಲವರು ಅಲ್ಲಿ ಬಂದಿದ್ದರು ; ಹಾಗೆ ತಮ್ಮ ಮನೆಗೆ ಅವರೆಲ್ಲ ಬಂದಿದ್ದದ್ದು ಇದೇ ಮೊದಲ ಬಾರಿ. ಹೆಚ್ಚೇನೂ ಭಾಷಣಗಳಿಲ್ಲದ್ದರಿಂದ ಸಮಾರಂಭ ಬೇಗ ಮುಗಿಯಿತು.

"ಅಂಚೆ ಕಚೇರಿ" ಎಂದಿದ್ದ ಸಣ್ಣದಾದ ಒಂದು ಕೆಂಪು ಬೋರ್ಡನ್ನು ಮಾವ ಹಜಾರದಲ್ಲಿ ತೂಗಿಹಾಕಿದರು. 'ಒಳಗೆ ಪ್ರವೇಶವಿಲ್ಲ' ಎಂಬುದನ್ನು ಅಲ್ಲಿದ್ದ ಕಲ್ಲುಬೆಂಚಿನ ಹತ್ತಿರ ಹಾಕಿದರು. ಒಂದು ದೊಡ್ಡ ಪೆಟ್ಟಿಗೆಯನ್ನು ಆ ಬೆಂಚಿನ ಮೇಲಿರಿಸಿದ್ದರು. ಮಾವನಿಗೆ ಇನ್ನು ಮೇಲಿಂದ ತುಂಬ ಕೆಲಸ. ರಂಗಾಪುರದಿಂದ ಪೋಸ್ಟನ್ನು ಬಸ್ಸಿನಿಂದ ತರಲು ಹನುಮಯ್ಯನನ್ನು ನೇಮಿಸಲಾಗಿತ್ತು ; ಸದ್ಯಕ್ಕೆ ಅವನೇ ಊರಿನವರಿಗೆ ಬಂದ ಕಾಗದಗಳನ್ನು ವಿಲೇವಾರಿ ಮಾಡಬೇಕಾಗಿತ್ತು.

ಬೆಳಿಗ್ಗೆ ಒಂಬತ್ತು ಗಂಟೆಯ ಹೊತ್ತಿಗೆ ಹನುಮಯ್ಯ ಪೋಸ್ಟ್ ಬ್ಯಾಗ್ ತರುತ್ತಿದ್ದ. ಅದನ್ನು ಸೀಲ್ ಮಾಡಿರುತ್ತಿದ್ದರು. ಮಾವ ಅಷ್ಟು ಹೊತ್ತಿಗೆ ಪೂಜೆ ಮುಗಿಸಿರುತ್ತಿದ್ದರು. ಕಲ್ಲುಬೆಂಚಿನ ಮೇಲೆ ಚಕ್ಕಂಬಟ್ಟು ಹಾಕಿ ಕುಳಿತುಕೊಂಡು ಓರಣವಾಗಿ ಬೇಕಾದ ಸಾಮಾನುಗಳು ಅಂದರೆ ಕಾಗದದ ಮೇಲೆ ಠಸ್ಸೆ ಕಾಗದವಿಟ್ಟುಕೊಳ್ಳುವ ಒತ್ತುರಬ್ಬರ್, ಇಂಕಿನ ಡಬ್ಬ ಇವುಗಳನ್ನೆಲ್ಲ ಜೋಡಿಸಿಟ್ಟುಕೊಳ್ಳುತ್ತಿದ್ದರು. ಪ್ರತಿದಿನ ಹನುಮಯ್ಯ ಬಂದಾಗ ಸೀನುವೂ ಬಂದು ಮಾವನ ಪಕ್ಕದಲ್ಲಿ ಸ್ವಲ್ಪ ದೂರ ಕುಳಿತು ಇವನ್ನೆಲ್ಲ ನೋಡುತ್ತಿದ್ದವನಿಗೆ, ಮಾವ ತಕ್ಷಣ ಬ್ಯಾಗನ್ನೇಕೆ ತೆಗೆಯುವುದಿಲ್ಲ ಎಂಬ ಚಡಪಡಿಕೆಯಾಗುತ್ತಿತ್ತು. ಆದರೆ ಮಾವ ಎಲ್ಲವನ್ನೂ ಸಿದ್ಧಪಡಿಸಿಕೊಂಡೇ ಬ್ಯಾಗ್‌ಗೆ ಹಾಕಿದ್ದ ಸೀಲನ್ನು ತೆಗೆಯುತ್ತಿದ್ದರು.

ಆಮೇಲೆ ಒಳಗಿನ ಕಾಗದಗಳನ್ನೆಲ್ಲ ಒಂದನ್ನೂ ಬಿಡದೆ ತೆಗೆದಿಟ್ಟುಕೊಳ್ಳುತ್ತಿದ್ದರು ; ಬ್ಯಾಗನ್ನು ಒಪ್ಪವಾಗಿ ಮಡಿಸಿ ಒಂದೆಡೆಗಿಡುತ್ತಿದ್ದರು. ಸೀನುವಿಗೆ ಈ ವಿಳಂಬ ಅರ್ಥವಾಗುತ್ತಿರಲಿಲ್ಲ, ಬೇಸರವಾಗುತ್ತಿತ್ತು. ಯಾರ್ಯಾರಿಗೆ ಕಾಗದ ಬಂದಿದೆಯೆಂಬುದನ್ನು ನೋಡಲೆಂದು ಒಂದೆರಡು ದಿನ ಸೀನು ಠಸ್ಸೆಯೊತ್ತುವ ಮೊದಲೇ ಕಾಗದಗಳನ್ನು ಮುಟ್ಟಿದ್ದ. ಮಾವ ಬೈದಿದ್ದರು "ಹಾಗೆಲ್ಲ ಮುಟ್ಟಬಾರದು ಕಣಯ್ಯ. ಇದು ಸರ್ಕಾರದ ಕೆಲಸ. ಹೆಚ್ಚು ಕಡಿಮೆಯಾದರೆ ತಲೆ ಹೋಗುವಂಥದು" ಎಂದಾಗ ಸೀನುವಿಗೆ ಸಿಟ್ಟು ಬರುತ್ತಿತ್ತು; 'ಮುಟ್ಟಿದರೇನು ಇವರ ಗಂಟು ಹೋಗುವುದು' ಎಂದುಕೊಳ್ಳುತ್ತಿದ್ದ. ಆದರೆ ವಿಧಿಯಿಲ್ಲದೆ ಕುಳಿತಿರಬೇಕಾಗುತ್ತಿತ್ತು.

ಮಾವ ಒಂದೊಂದಾಗಿ ಕಾಗದಗಳನ್ನು ತೆಗೆದು ಠಸ್ಸೆಯೊತ್ತಿ ತೆಗೆದಿಡುತ್ತಿದ್ದರು. ಎಷ್ಟೋ ಸಲ ಬಂದ ಕಾಗದಗಳ ವಿಳಾಸಗಳನ್ನು ನೋಡಿ ಹಿಂದೆ ಮುಂದೆ ಆಡಿಸಿ

ನೋಡುತ್ತಿದ್ದರು, ಕುತೂಹಲದಿಂದ. ಮನಿಯಾರ್ಡರ್ ಬಂದಿದ್ದರೆ ದುಡ್ಡು ಜೊತೆಗೆ ಬರದೇ ಇರುತ್ತಿದ್ದುದನ್ನು ಕಂಡು ಅವನಿಗೆ ಆಶ್ಚರ್ಯವಾಗಿತ್ತು ; ದುಡ್ಡು ಬಾರದಿದ್ದರೆ ಎಲ್ಲಿಂದ ತಂದುಕೊಡುವುದು ? ಈ ವಿಚಾರ ಕೇಳಿದಾಗ ಮಾವ ವಿವರಿಸಿದ್ದರು ; ಬರೀ ಮನಿಯಾರ್ಡರ್ ಫಾರಂ ಕಳಿಸಿಕೊಡ್ತಾರೆ, ಕಳಿಸಿಕೊಡೋ ಪೋಸ್ಟ್ ಆಫೀಸಲ್ಲಿ ದುಡ್ಡು ಕಟ್ಟಿರುತ್ತಾರೆ; ಆದರೆ ನಾವು ಇಲ್ಲಿ ನಮ್ಮ ಹತ್ತಿರ ಇರೋ ದುಡ್ಡನ್ನೇ ಕೊಡ್ತೀವಿ.

"ಹಾಗಾದರೆ ನಮಗೆ ದುಡ್ಡು ಕಡಿಮೆಯಾಗೋಲ್ಲವಾ ?"

"ಅದು ಹ್ಯಾಗಾಗುತ್ತಯ್ಯ ? ಇಲ್ಲಿ ಕಾಗದಗಳು, ಅಂದರೆ ಕಾರ್ಡು, ಕವರು ಮಾರಿದ್ದ ದುಡ್ಡಿರತ್ತಲ್ಲ, ಹಾಗೇನೇ ಇಲ್ಲಿಂದಲೂ ಮನಿಯಾರ್ಡರ್ ಕೆಲವರು ಕಳಿಸಿರ್ತಾರಲ್ಲ, ಆ ದುಡ್ಡಿನಲ್ಲೇ ಬಂದ ಮನಿಯಾರ್ಡರ್ ದುಡ್ಡು ಕೊಡ್ತೀವಿ. ನಮ್ಮತ್ರ ಇರೋ ದುಡ್ಡಿಗೆ ಪ್ರತಿನಿತ್ಯ ಲೆಕ್ಕ ಕಳಿಸಬೇಕಲ್ಲ, ಆವಾಗ ಹೀಗೆ ಕೊಟ್ಟಿರೋ ದುಡ್ಡನ್ನ ಕಳೆದು, ನಮ್ಮ ಹತ್ರ ಎಷ್ಟು ದುಡ್ಡಿದೆ ಅನ್ನೋ ತಪಶೀಲು ಕಳಿಸಿದರಾಯ್ತು." ಸೀನುವಿಗೆ ಇದರಿಂದ ಹೆಚ್ಚೇನೂ ಅರ್ಥವಾಗಿರಲಿಲ್ಲ. ಕೆಲವು ವೇಳೆ ಬರುತ್ತಿದ್ದ ಪಾರ್ಸೆಲ್ಲುಗಳಲ್ಲಿ ಏನಿದೆಯೆಂಬ ಕುತೂಹಲ ಅವನನ್ನು ಕಾಡಿಸುತ್ತಿತ್ತು.

ಮೊದಲ ದಿನವಾದ ಮೇಲೆ ಸೀನುವಿಗೆ ಠಸ್ಸೆಯ ವಿಚಾರ ಮನಸ್ಸಿಗೆ ಬಂದಿತ್ತು. ತಾನು ಪೋಸ್ಟಲ್ಲಿ ಬಂದ ಕವರೋ ಕಾರ್ಡೋ ನೋಡಿದ್ದಾಗ ಅಲ್ಲಿ ಯಾವ ಊರಿಂದ ಬಂದಿದೆಯೋ ಅದರದ್ದು, ಯಾವ ಊರಿಗೆ ಬಂದಿದೆಯೋ ಅದರದ್ದೂ ಹೆಸರುಗಳ ನ್ನೊತ್ತಿರುತ್ತಿದ್ದರು. ಈಗ ಇಲ್ಲಿ ಒತ್ತುವ ಸೀಲನ್ನು ಪಮ್ಮನಹಳ್ಳಿ ಎಂದು ಬರೆದಿರಬೇಕೆಂದು ಅವನಿಗನ್ನಿಸಿ ಆ ದಿನ, ಮಾವ ಸೀಲು ಹಾಕುವಾಗ ನೋಡಿದ್ದ. ಆದರೆ ಅಲ್ಲಿ 'EXPTL' ಅಂತ ಮಾತ್ರ ಇದ್ದಾಗ ನಿರಾಸೆಯಾಗಿತ್ತು.

"ಇದ್ಯಾಕೆ ಈವೂರ ಹೆಸರು ಬರೆದಿಲ್ಲ ಇಲ್ಲಿ ?"

"ಈವೂರಿಗಿನ್ನೂ ಪಕ್ಕಾ ಪೋಸ್ಟಾಫೀಸು ಕೊಟ್ಟಿಲ್ಲ ಕಣಯ್ಯ. ಸ್ವಲ್ಪ ದಿನ ಇಲ್ಲಿ ಎಷ್ಟು ಪೋಸ್ಟ್ ಬರುತ್ತವೆ, ಎಷ್ಟು ಹೋಗುತ್ತವೆ ಅಂತ ಪರೀಕ್ಷೆ ಮಾಡಿ ಪೋಸ್ಟಾಫೀಸಿಗೆ ಸಾಕಷ್ಟು ಕೆಲಸ ಇದೆ ಅಂತ ಗೊತ್ತಾದ್ರೆ ಖಾಯಂ ಮಾಡ್ತಾರೆ. ಆದಕ್ಕೇ EXPTL ಅಂದರೆ ಎಕ್ಸ್‌ಪೆರಿಮೆಂಟಲ್ ಅಂತ ಸೀಲು ಕೊಟ್ಟಿರ್ತಾರೆ" ಎಂದು ವಿವರಿಸಿದ್ದರು.

"ಆದರೆ ಬೇರೆ ಕಡೆಗಳಲ್ಲಿ ಯಾಕೆ ಹೆಸರಿರತ್ತೆ ?"

"ಎಲ್ಲ ಕಡೇನೂ ಅಷ್ಟೆ ಮೊದಲು ಇದೇ ಸೀಲು ಕೊಡೋದು. ಆಮೇಲೆ ಕಾಯಮ್ಮಾದಾಗ ಊರಿನ ಹೆಸರಿರೋ ಸೀಲುಮಾಡಿಸಿ ಕಳಿಸ್ತಾರೆ."

"ಅದು ಹ್ಯಾಗೆ ಗೊತ್ತಾಗತ್ತೆ ಅವರಿಗೆ, ಇಲ್ಲಿ ಪೋಸ್ಟಾಫೀಸಿಗೆ ಕೆಲಸ ಇದೆಯೋ ಇಲ್ಲವೋ ಅಂತ ?"

"ನಾವು ಪ್ರತಿದಿನ ಬಂದ ಕಾಗದಗಳೆಷ್ಟು, ಇಲ್ಲಿಂದ ಹೋಗೋದೆಷ್ಟೂಂತ ಲೆಕ್ಕ ಇಟ್ಟು ತಿಂಗಳಿಗೊಂದು ಸಾರಿ ಪಾವಗಡದ ಆಫೀಸಿಗೆ ಕಳಿಸಿ ಕೊಡ್ಬೇಕು."

ನಿಜ, ಮಾವ ಬಂದು ಹೋಗುವ ಕಾಗದಗಳ ಲೆಕ್ಕವನ್ನು ಒಂದು ಹಾಳೆಯಲ್ಲಿ ತಾರೀಕು ಬರೆದು ಅದರ ಮುಂದೆ ನಮೂದಿಸುತ್ತಿದ್ದರು. ಬ್ಯಾಗಲ್ಲಿ ಬಂದ ಕಾಗದಗಳೆಷ್ಟು ಮನಿಯಾರ್ಡರ್‌ಗಳೆಷ್ಟು ಪಾರ್ಸೆಲ್‌ಗಳೆಷ್ಟು ರಿಜಿಸ್ಟರ್ಡ್ ಕಾಗದಗಳೆಷ್ಟು ಎಂಬುದನ್ನು ಬೇರೆ ಬೇರೆ ಬರೆದಿಡುತ್ತಿದ್ದರು. ಹಾಗೆಯೇ ಸಾಯಂಕಾಲದ ಹೊತ್ತು ಪೋಸ್ಟನ್ನು ರಂಗಾಪುರದ ಬಸ್ಸಿಗೆ ಕೊಡಲು ಹೋಗುವ ಮೊದಲು, ಪಂಚಾಯಿತಿ ಹಾಲಿನ ಹತ್ತಿರ ಕಟ್ಟಿದ್ದ ಕೆಂಪು ಡಬ್ಬದಿಂದ ಹನುಮಯ್ಯ ಕಾಗದಗಳನ್ನು ತರುತ್ತಿದ್ದ. ಅವುಗಳ ಲೆಕ್ಕವನ್ನೂ ಇಡುತ್ತಿದ್ದರು. ಕಾಗದಗಳನ್ನು ಹಾಕಿದರೂ, ಮನಿಯಾರ್ಡರೋ ರಿಜಿಸ್ಟ್ರೋ ಮಾಡುವಾಗ ಜನ ಮಾವನ ಮನೆಗೇ ಬರಬೇಕಾಗಿತ್ತು.

ಆದರೆ ಮಾವ, ಈ ಕಾಗದಗಳ ಲೆಕ್ಕವಿಡುವಾಗ, ರಿಜಿಸ್ಟರ್ಡ್ ಹಾಗೂ ಮನಿಯಾರ್ಡರ್‌ಗಳ ಲೆಕ್ಕ ಸರಿಯಾಗಿ ಬರೆದರೂ ಬಂದು ಹೋಗುವ ಕಾಗದಗಳ ಲೆಕ್ಕ ಬರೆಯುವಾಗ ಸ್ವಲ್ಪ ಹೆಚ್ಚಾಗಿ ಬರೆಯುತ್ತಿದ್ದರು. ಅಂಥ ಸನ್ನಿವೇಶಗಳಲ್ಲಿ ಲೆಕ್ಕ ತಪ್ಪಿರಬೇಕೆಂದು ಸೀನು ಸರಿಯಾಗಿ ಹೇಳುತ್ತಿದ್ದ.

''ಗೊತ್ತು ಕಣಯ್ಯ, ಬೇಕಂತ ಜಾಸ್ತಿ ಬರೆದಿರೋದು ?''

''ಯಾಕೆ ? ಆವಾಗ ಲೆಕ್ಕ ತಪ್ಪಾಗೋಲ್ಲವಾ ?''

''ತೀರ ಕಡಿಮೆ ಕಾಗದಗಳು ಬಂದು-ಹೋಗ್ತಾಯಿವೆ ಅಂದರೆ ಪೋಸ್ಟಾಫೀಸ್‌ನ ತೆಗೆದುಬಿಡ್ತಾರೆ ಕಣಯ್ಯ. ಅದಕ್ಕೇ ಕಡಿಮೆ ಕಾಗದಗಳು ಬಂದ ದಿನ ಹೆಚ್ಚು ಬರೀತೇನೇ.''

ಕಾಗದಗಳು ಹೆಚ್ಚು ಹೋಗಬೇಕೆಂದು ಬರಬೇಕೆಂದು ಮಾವ ತಾವೇ ಕೆಲವು ಕಡೆಗಳಿಗೆ ಕಾಗದಗಳನ್ನು ಬರೆಯುತ್ತಿದ್ದರು. ಇದರಿಂದಾಗಿ ಅಪ್ಪನಿಗೆ ಅವರೊಂದೆರಡು ಸಲ ಕಾಗದ ಬರೆದಿದ್ದರೆಂದು ಕಾಣುತ್ತದೆ. ಅಲ್ಲಿಂದ ಉತ್ತರ ಬಂದಿತ್ತು. ಹಾಗೆ ಬಂದಾಗ ಮಾವ ತನ್ನ ಹಾಗೂ ಅತ್ತೆಯ ಮುಂದೆ ಅದನ್ನು ಓದುತ್ತಿದ್ದರು. ಅದರಲ್ಲಿ ಕೊನೆಯ ಭಾಗದಲ್ಲಿ ತನ್ನ ಹೆಸರನ್ನೂ ಬರೆದಿದ್ದುದನ್ನು ಕೇಳಿದಾಗ ಸೀನುವಿನ ಮನಸ್ಸಿನಲ್ಲಿ ತುಸುವಾಗಿ ಏನೋ ಚುರುಕ್ ಅಂದ ಹಾಗಾಗುತ್ತಿತ್ತು. ಒಂದೆರಡು ಬಾರಿ ಅವರು ''ನಿಮ್ಮಪ್ಪನಿಗೆ ಕಾಗದ ಬರೀತೀಯೇನಯ್ಯಾ ?'' ಎಂದು ಕೇಳುತ್ತಿದ್ದರು. ಆಗ ಸೀನುವಿಗೆ ಕಾಗದವನ್ನು ದೊಡ್ಡವರಂತೆ ತಾನೂ ಬರೆಯಬಹುದಲ್ಲ ಎನ್ನಿಸಿ ಉತ್ಸಾಹವೆನಿಸುತ್ತಿತ್ತು. ಆದರೆ ಏನೆಂದು ಬರೆಯುವುದು ? ಸಾಮಾನ್ಯವಾಗಿ ಕಾಗದಗಳನ್ನು ಬರೆಯುವವರು ನಾವೆಲ್ಲ ಕ್ಷೇಮ, ನೀವು ಹೇಗಿದ್ದೀರಿ ? ಎಂದು ಕೇಳಿರುತ್ತಿದ್ದರು. ಆದರೆ ತನಗೆ ಅಪ್ಪ-ಅಮ್ಮ ಮಿಕ್ಕವರು ಹೇಗಿದ್ದಾರೆಂದೇ ಮನಸ್ಸಿಗೆ ತೋರುತ್ತಿರಲಿಲ್ಲ. ಅವರೆಲ್ಲ ಈಗ ಗತಜನ್ಮದ ನೆನಪುಗಳೆಂಬಂತೆ ಕತ್ತಲೆಯಲ್ಲಿ ಸೇರಿಬಿಟ್ಟಿದ್ದರು. ಇದೆಲ್ಲ ಅನ್ನಿಸಿದಾಗ ಅವನ ಉತ್ಸಾಹ ಜರ್ರನೆ ಇಳಿದು ''ಇಲ್ಲ'' ಎನ್ನುತ್ತಿದ್ದ. ಮಾವ ಬಲವಂತ ಮಾಡುತ್ತಿರಲಿಲ್ಲ.

ಹನುಮಯ್ಯ ಬೆಳಗ್ಗೆ ಪೋಸ್ಟು ತಂದಾಗ, ಸಾಯಂಕಾಲ ತೆಗೆದುಕೊಂಡು ಹೋಗುವಾಗ ಪೋಸ್ಟಾಫೀಸನ್ನು ಗುಡಿಸುತ್ತಿದ್ದ. ''ಹಾಗೆಯೇ ಮನೆಯೊಳಗಡೆಯೂ

ಹಾಗಂದುಬಿಡು'' ಎಂದು ಮಾವ ಮೊದಮೊದಲು ಹೇಳುತ್ತಿದ್ದರು. ಕಾಲಕಳೆದಂತೆಲ್ಲ ಹೇಳದಯೇ ಅದು ಸಾಗುವಂತಾಯಿತು. ಪೋಸ್ಟು ಕೊಟ್ಟು ತರುವಾಗ ರಂಗಾಪುರದಿಂದ ಏನನ್ನಾದರೂ ತರಿಸಬಹುದಾಗಿತ್ತು. ಸೀನುವಿಗೆ ದಿನಾ ರಂಗಾಪುರಕ್ಕೆ ನಡೆದುಕೊಂಡು ಹೋಗಿ ಬರುವ ಹನುಮಯ್ಯನನ್ನು ಕಂಡರೆ ಎರಡು ಬಾರಿ ಅಷ್ಟೊಂದು ಹೇಗೆ ನಡೆಯುತ್ತಾನಿವನು ಎಂಬ ಸೋಜಿಗವಾಗುತ್ತಿತ್ತು. ಏಕೆಂದರೆ ಅವನು ಸಣಕಲ, ಉದ್ದಕ್ಕೇನೋ ಇದ್ದ. ಆದ್ದರಿಂದ ಇನ್ನೂ ಹೆಚ್ಚು ಸಣ್ಣಕ್ಕಿದ್ದಂತೆ ಕಾಣುತ್ತಿದ್ದ. ಇವನಗೆ ಕಾಲು ನೋಯುವುದಿಲ್ಲವೇ ಎಂದು ಅವನಿಗೆ ಆಶ್ಚರ್ಯವಾಗುತ್ತಿತ್ತು.

ಭಾನುವಾರದಂದು ಪೋಸ್ಟಾಫೀಸಿಗೆ ರಜ. ಪೋಸ್ಟು ತರುವುದೂ ಇಲ್ಲ, ತೆಗೆದುಕೊಂಡು ಹೋಗುವುದೂ ಇಲ್ಲ. ಅವತ್ತು ತನ್ನ ಸ್ಕೂಲಿಗೂ ರಜವಾದದ್ದರಿಂದ. ಸೀನುವಿಗೆ ತುಂಬ ಬೇಸರವೆನಿಸುತ್ತಿತ್ತು. ದಿನ ಬೆಳಗಾಗ ಎಷ್ಟು ಸುಲಭವಾಗಿ ಕಾಲ ಹೋಗುತ್ತಿತ್ತು!

ಒಂದು ಶನಿವಾರ ಸಾಯಂಕಾಲ ಹನುಮಯ್ಯನ ಜೊತೆಯಲ್ಲಿ ತಾನು ರಂಗಾಪುರಕ್ಕೆ ಹೋಗುವುದಾಗಿ ಮಾವನನ್ನು ಸೀನು ಕೇಳಿದ. ''ಯಾಕೆ ?'' ಎಂದರು ''ಸುಮ್ಮನೆ'' ಎಂದಿದ್ದ, ''ಸುಮ್ಮನೇ ಅಂದ್ರೆ'' ''ಪೋಸ್ಟ್ ಬರುತ್ತಲ್ಲ ಅದು ಬಸ್ಸಲ್ಲಿ ಹೇಗೆ ಬರುತ್ತೇಂತ ನೋಡಕ್ಕೆ'' ಎಂದುತ್ತರಿಸಿದ್ದ. ಹನುಮಯ್ಯ ಅಲ್ಲಿ ಹೋಗಿ ನೇರವಾಗಿ ಇಲ್ಲಿಗೆ ವಾಪಸ್ಸು ಬರುತ್ತಿದ್ದುದರಿಂದ ''ಆಗಲಿ'' ಎಂದು ಕಳಿಸಿದ್ದರು.

ಆದರೆ ಪೋಸ್ಟು ಹೊತ್ತ ಬಸ್ಸು ಧೂಳೆಬ್ಬಿಸುತ್ತ ಬಂದು ನಿಂತಾಗ ಅದರಲ್ಲಿ ಯಾವ ಬೆಡಗೂ ಕಂಡಿರಲಿಲ್ಲ. ಯಥಾ ಪ್ರಕಾರದ ಬಸ್ಸು ಅದು. ಜನರನ್ನೂ ಕೂಡಿಸಿಕೊಂಡು ಬಂದಿತ್ತು. ಪೋಸ್ಟು ಹೊರುವ ಬಸ್ಸೆಂದರೆ ಬರೀ ಪೋಸ್ಟನ್ನೇ ತರುತ್ತದೆಂದು ಅವನ ಮನವರಿಕೆಯಾಗಿತ್ತು. ಈಗ ನೋಡಿದರೆ, ಎಲ್ಲ ಬಸ್ಸುಗಳಂತೆಯೇ ! ಹನುಮಯ್ಯ ಕಂಡಕ್ಟರಿನಿಂದ ಬ್ಯಾಗ್ ತೆಗೆದುಕೊಳ್ಳುವಾಗ ಕಂಡಕ್ಟರಿನ ಸೀಟಿನ ಕೆಳಗೆ ಸೀನು ಇಣುಕಿ ನೋಡಿದ್ದ; ಅಲ್ಲಿ ಇನ್ನೂ ಅಂಥ ಅನೇಕ ಬ್ಯಾಗುಗಳಿದ್ದವು.

ವಾಪಸು ಮನೆಗೆ ಬಂದ ಮೇಲೆ ಕುತೂಹಲದಿಂದ ಮಾವನನ್ನು ಪ್ರಶ್ನಿಸಿದ್ದ. ''ಅಲ್ಲಿ ಅಷ್ಟೊಂದು ಬ್ಯಾಗುಗಳಿದ್ದುವಲ್ಲ ಯಾಕೆ ?''

''ಅವನ್ನೆಲ್ಲ ಬೇರೆ ಬೇರೆ ಊರಿಗೆ ತಲುಪಿಸಬೇಕಲ್ಲ. ನಮ್ಮೂರಿನ ಬ್ಯಾಗು ಇದ್ದ ಹಾಗೆಯೇ ಭೀಮಸಂದ್ರ, ಕ್ಯಾತಗಾನಹಳ್ಳಿ, ಇನ್ನೂ ಅನೇಕ ಕಡೆ ಪೋಸ್ಟ್ ಬ್ಯಾಗುಗಳನ್ನು ಕಳಿಸಬೇಲ್ಲ.''

''ಅದ್ಯಾಕೆ ಬಸ್ಸಿನೋರು ಈ ಬ್ಯಾಗುಗಳನ್ನು ತರ್ತಾರೆ ?''

''ಪೋಸ್ಟ್ ಡಿಪಾರ್ಟಮೆಂಟಿನೋರು ಈ ಬಸ್ಸುಗಳಿಗೆ ಬ್ಯಾಗು ತರಲು ಹೇಳಿರ್ತಾರೆ. ದಿನಾ ತಂದುಕೊಟ್ಟರೆ ಅವರಿಗೆ ದುಡ್ಡು ಕೊಡ್ತಾರೆ.''

''ಹೌದಾ ?'' ಎಂದ ಆಶ್ಚರ್ಯದಿಂದ ಕಣ್ಣರಳಿಸಿ – ಜನರು ಕೊಡುವ ಚಾರ್ಜಿನ

ಜೊತೆಗೆ, ಸೀಟಿನ ಕೆಳಗಡೆಯಿಡುವ ಬ್ಯಾಗುಗಳಿಂದಲೂ ಚಾರ್ಜು ತೆಗೆದುಕೊಳ್ಳುವ ಬಸ್ಸಿನವರಿಗೆ ಎಷ್ಟೊಂದು ದುಡ್ಡು ಬರುತ್ತದೆ ಎಂದು ಅವನಿಗನ್ನಿಸಿತ್ತು.

ಈಗ ಮಾವ ಪ್ರತಿದಿನ ಪೋಸ್ಟಿನಲ್ಲಿ "ಪ್ರಜಾವಾಣಿ" ತರಿಸಲು ಪ್ರಾರಂಭಿಸಿದ್ದರು. ಸೀನುವಿಗೂ ಪೇಪರನ್ನೋದಲು ಕೊಡುತ್ತಿದ್ದರು. ಆದರೆ ಅವನು ಪೇಪರೋದ ಬೇಕಾದರೆ ಸಾಯಂಕಾಲದ ಹೊತ್ತೇ. ಪೋಸ್ಟ್ ಬರುವ ಹೊತ್ತಿಗೆ ಊಟಕ್ಕೆ ಕೂತು ಕೊಳ್ಳುವ ಸಮಯವಾಗಿರುತ್ತಿತ್ತು. ಪೋಸ್ಟ್ ತೆಗೆದುಕೊಳ್ಳುವ ಮಾವನ ಕಾರ್ಯ ವಿಧಾನವನ್ನು ನೋಡುತ್ತ ಕುಳಿತಿದ್ದ. ಊಟಮಾಡಿ ಸ್ಕೂಲಿಗೆ ಹೋಗಬೇಕಾಗಿತ್ತು. ಆದ್ದರಿಂದ ಸ್ಕೂಲಿಂದ ಬಂದ ಮೇಲೆಯೇ ಅವನಿಗೆ ಪೇಪರ್ ನೋಡಲು ಸಮಯವಾಗುತ್ತಿತ್ತು. ಆದರೆ ಶನಿವಾರ ಗಳಂದು ಮಧ್ಯಾಹ್ನವೇ ಪೇಪರ್ ನೋಡಬಹುದಾಗಿತ್ತು ; ಅಂದು ಮಾರ್ನಿಂಗ್ ಕ್ಲಾಸ್ ತಾನೇ ? ಭಾನುವಾರದ ದಿವಸ ಮಾತ್ರ ಬೆಳಿಗ್ಗೆ ಮಾವನಿಗಿಂತ ಮುಂಚೆಯೇ ಇವನು ಓದುತ್ತಿದ್ದ

ಪೇಪರಿನ ಮೊದಲ ಪುಟದಲ್ಲಿ ಇವನಿಗೆ ಅರ್ಥವಾಗುವಂಥದೇನೂ ಇರುತ್ತಿರಲಿಲ್ಲ. ಮಧ್ಯದ ಹಾಳೆಗಳಲ್ಲಿ ಅದೂ ಇದೂ ಓದುತ್ತಿದ್ದ. ಎಷ್ಟೋ ಸಲ ಬೆಂಗಳೂರಿನ ಸುದ್ದಿಗಳನ್ನು ಕಾಣುತ್ತಿದ್ದ. 'ನಗರದಲ್ಲಿ ಇಂದು' ಎಂಬ ಕಡೆ ಕೆಲವು ವೇಳೆ ತಾನು ಕಂಡ ಬೆಂಗಳೂರಿನ ಜಾಗಗಳ ಹೆಸರಿರುತ್ತಿತ್ತು. ಅಂಥ ಸಂದರ್ಭಗಳಲ್ಲಿ ಆ ಜಾಗಗಳನ್ನು ನೆನಪು ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದ. ಆದರೆ ಅದರಲ್ಲಿ ಅಂಥ ಯಶಸ್ಸು ದೊರೆಯುತ್ತಿರಲಿಲ್ಲ. ಹಾಗೆಯೇ ತನಗೆ ಗೊತ್ತಿರುವ ಇವರುಗಳ ವಿಷಯ ವೇನಾದರೂ ಬಂದಿದೆಯೇನೋ ಎಂದು ಕುತೂಹಲದಿಂದ ಕಣ್ಣಾಡಿಸುತ್ತಿದ್ದ. ಒಮ್ಮೆ "ಪಾವಗಡ ತಾಲ್ಲೂಕಿನಲ್ಲಿ ಕುಡಿಯುವ ನೀರಿಲ್ಲದ ಪರಿಸ್ಥಿತಿ" ಎಂಬ ಶಿರೋನಾಮೆಯ ಸುದ್ದಿ ಪ್ರಕಟವಾಗಿತ್ತು. ಸೀನು ಆತುರದಿಂದ ಅದನ್ನು ಮಾವನ ಬಳಿ ತೆಗೆದುಕೊಂಡು ಹೋಗಿ "ಮಾವ ನಮ್ಮ ತಾಲ್ಲೂಕಲ್ಲಿ ಮಳೆಯಿಲ್ಲದೆ ಕುಡಿಯೋಕೆ ನೀರಿಲ್ಲವಂತೆ" ಎಂದು ಹೇಳಿದ್ದ ಮಾವ ನಕ್ಕು "ಅಲ್ಲಯ್ಯಾ ಅದನ್ನು ಪ್ರಜಾವಾಣೀಲಿ ನಾವು ಓದಿ ತಿಳುಕೋಬೇಕಾ ? ಇಲ್ಲಿ ಮಳೆಯಾಗದಿರೋದು ನಮಗೆ ಗೊತ್ತಿಲ್ಲವಾ ? ಅದು ಬೇರೆ ಕಡೆಯೋರಿಗೆ ತಿಳಿಯೋಕ್ಕೆ" ಎಂದಿದ್ದರು ಅದು ಸರಿಯೆನಿಸಿತು.

ಇನ್ನೊಮ್ಮೆ ಒಂದು ಭಾನುವಾರ ಸೀನು ಬೆಳಿಗ್ಗೆಯೇ ಪೇಪರನ್ನೋದುತ್ತಿದ್ದ. ಅವತ್ತು 'ವಾರದ ಪುರವಣಿ' ಯಿಂದಾಗಿ ಹೆಚ್ಚು ಪುಟಗಳಿರುತ್ತಿದ್ದವು ; ಅದನ್ನೆಲ್ಲ ನೋಡಲು ಹೆಚ್ಚು ಕಾಲ ಬೇಕಾಗುತ್ತಿತ್ತು. ಹಾಗೇ ಕಣ್ಣಾಡಿಸುತ್ತಿದ್ದಾಗ ಒಂದು ಕಡೆ ಅವನ ಗಮನ ಹೋಯಿತು, 'ಉಚಿತ' ಎಂದು ದೊಡ್ಡದಾಗಿ ಪ್ರಿಂಟಾಗಿತ್ತು! ಅವನಿಗೆ ಆಸೆಯಾಯಿತು,- ಅದರ ಕೆಳಗೆ ಕಣ್ಣೋಡಿಸಿದ : "ಸತ್ಯವೇದ ಪಾಠಗಳನ್ನು ಪುಕ್ಕಟೆಯಾಗಿ ಕಳಿಸುತ್ತೇವೆ. ನಿಮ್ಮ ವಿಳಾಸ ತಿಳಿಸಿ" ಎಂದಿತ್ತು. ಅದೇನನ್ನು ಕಳಿಸುತ್ತಾರೋ ಎಂಬ ಕುತೂಹಲವುಂಟಾಯಿತು, ಮಾವನಿಗೆ ಕಾಣದಂತೆ ತನ್ನ ನೋಟುಬುಕ್ಕಿನ ಕೊನೆಯ ಹಾಳೆಯಲ್ಲಿ ಅಲ್ಲಿ ಕೊಟ್ಟಿದ್ದ ವಿಳಾಸವನ್ನು ಬರೆದುಕೊಂಡ.

ಆದರೆ ಅವರಿಗೆ ಹೇಗೆ ಬರೆಯುವುದು? ಎಂದರೆ ಕಾಗದದಲ್ಲಿ ಬರೆದು ಪೋಸಿನಲ್ಲಿ ಕಳಿಸುವುದು, ಸರಿ. ಆದರೆ ಪೋಸ್ಟ್‌ಕವರನ್ನು ಮಾವನ ಬಳಿಯೇ ಕೇಳಬೇಕಲ್ಲ! ಅವರು "ಯಾರಿಗೆ ಬರೆಯುತ್ತೀಯೋ ?" ಎಂದರೆ ಏನು ಹೇಳುವುದು ಅವನಿಗೆ ಸ್ವಲ್ಪ ಹೊತ್ತು ದಿಕ್ಕು ತೋಚದಂತಾಯಿತು. ಬೇರೆ ಯಾರಾದರೂ ಪೋಸ್ಟ್ ಮಾಸ್ಟರಾಗಿದ್ದರೇ ಚೆನ್ನಾಗಿತ್ತು ಎನ್ನಿಸಿತು. ಒಮ್ಮೆ ನಿಟ್ಟುಸಿರುಬಿಟ್ಟ ಆದರೆ ಅವನ ನಿರಾಶೆ ಹೆಚ್ಚು ಕಾಲವುಳಿಯಲಿಲ್ಲ. ಅವನ ಚುರುಕುಬುದ್ಧಿಗೆ ಉಪಾಯವೊಂದು ಹೊಳೆದಿತ್ತು!

ಮಾರನೆಯ ದಿನ ಬೆಳಗ್ಗೆ ಹನುಮಯ್ಯ ಪೋಸ್ಟ್ ತೆಗೆದುಕೊಂಡು ಬಂದು, ಕಸಗುಡಿಸಿ ಹೊರಟ. ಅವನು ತಮ್ಮ ಮನೆಯನ್ನು ಬಿಡುವವರೆಗೂ ಕಾದಿದ್ದು ಅನಂತರ ಅವನನ್ನು ಹಿಂಬಾಲಿಸಿದ. ಸ್ವಲ್ಪ ದೂರ ಹೋದ ಅವನನ್ನು ಹಿಡಿದು, "ಹನುಮಯ್ಯ, ಸ್ವಲ್ಪ ನಿಲ್ಲು" ಎಂದ.

"ಬತ್ತೀನಿ ಇರಿ ಸ್ವಾಮಿ, ಇನ್ನೂ ಓಗಾಕಿಲ್ಲ. ಸ್ವಾಮಿಯೋರು ಠಸ್ಸೆ ಒತ್ತಿದ ಮೇಲೆ ಅದನ್ನೆಲ್ಲ ಊರೋರಿಗೆ ಕೊಡಬೇಕಲ್ಲ"

"ಅದಲ್ಲ ಕಣ್ ಹನುಮಯ್ಯ, ನಂಗೊಂದು ಪೋಸ್ಟ್‌ಕವರುಬೇಕಾಗಿತ್ತು"

"ಅದ್ನ ನನ್ಯಾಕೆ ಕೇಳ್ತೀರಿ, ಸ್ವಾಮಿ. ದೊಡ್ಡ ಸ್ವಾಮಿಯೋರ್ನೆ ಕೇಳಿ, ಅವರ ತಾವಲ್ಲವಾ ಕವ್ರು ಇರಾದು ?"

"ಅದು ಸರಿ ಹನುಮಯ್ಯ. ನಾನು ಕೇಳಿದರೆ ಮಾವ ಬೈತಾರೆ. ಅದಕ್ಕೇ ನೀನೇ ತಗೋ"

"ಸರಿ ಸರಿ ಸ್ವಾಮಿ, ನಾನು ಕಾಸುಕೊಟ್ಟುಕೊಂಡುಕೊಂಡು ನಿಮಗೆ ಕೊಡಬೇಕಾ ?"

"ನೀನೇನೂ ಕಾಸುಕೊಡಬೇಡ, ನಾನು ಕೊಡ್ತೀನಿ. ಬೇರೆ ಯಾರಿಗೋ ಅಂತ ಹೇಳಿ ಕವರ್ ತಗೋ, ಆಮೇಲೆ ನಂಕೊಡು" ಎಂದು ಅವನನ್ನೊಪ್ಪಿಸಿ ಕಾಸುಕೊಟ್ಟ

ಹನುಮಯ್ಯನಿಂದ ಮಾವನಿಗೆ ಕಾಣದಂತೆ ಕವರನ್ನೀಸಿಕೊಂಡ ಸೀನು ಮಧ್ಯಾಹ್ನ ಸ್ಕೂಲಲ್ಲಿ ತನಗೆ ಸತ್ಯವೇದ ಪಾಠಗಳನ್ನು ಕಳಿಸಿಕೊಡುವಂತೆ ಕಾಗದ ಬರೆದು, "ಶ್ರೀನಿವಾಸಮೂರ್ತಿ, ಪೋಸ್ಟ್ ಮಾಸ್ಟರ್, ಪೆಮ್ಮನಹಳ್ಳಿ" ಎಂಬ ವಿಳಾಸ ಬರೆದು ಕವರಲ್ಲಿ ಹಾಕಿ ಬಾಯಿನ ಸಹಾಯದಿಂದಲೇ ಅಂಟಿಸಿದ. ಸಾಯಂಕಾಲ ಸ್ಕೂಲು ಬಿಟ್ಟಾಗ ಅದನ್ನು ಪಂಚಾಯತಿ ಹಾಲ್ ಹತ್ತಿರವಿದ್ದ ಡಬ್ಬದಲ್ಲಿ ಹಾಕಿ ಬಂದ. ಮಾರನೇ ಸಾಯಂಕಾಲ ಹನುಮಯ್ಯ ಅದನ್ನು ತೆಗೆದುಕೊಂಡು ಹೋಗುತ್ತಾನೆನ್ನಿಸಿತು. ಅದು ಹೋಗುತ್ತದೆಯೋ ಇಲ್ಲವೋ ಎಂದು ಅವನಿಗೆ ಕಾತರವಿದ್ದರೂ, ಅದನ್ನು ಮಾವ ಠಸ್ಸೆಹೊಡೆದು ಕಳಿಸುವಾಗ ನೋಡಲು ಆಗುತ್ತಿರಲಿಲ್ಲ . ತನ್ನ ಸ್ಕೂಲು ಬಿಡುವ ಮುಂಚೆಯೇ ಹನುಮಯ್ಯ ರಂಗಾಪುರಕ್ಕೆ ಪೋಸ್ಟ್ ಹೊತ್ತು ಹೊರಡುತ್ತಿದ್ದ

ಒಂದೆರಡು ದಿನ ಅವನು ಚಾತಕಪಕ್ಷಿಯಂತೆ ಕಾತರದಿಂದ ಕಾದ. ಆದರೆ ಅವನಿಗೆ ಅಷ್ಟು ಬೇಗ ಉತ್ತರವೆಲ್ಲಿ ಬರುತ್ತದೆ, ಅವನಿಗೇನು ಅದು ತಿಳಿದಿಲ್ಲವೇ ? ಆದರೆ ಎಷ್ಟು

ದಿನದಲ್ಲಿ ಬರುತ್ತದೆಂದು ಅವನಿಗೆ ತಿಳಿಯದಾಯಿತು. ಮಾವನ ಹತ್ತಿರ ಪರ್ಯಾಯವಾಗಿ ವಿಚಾರಿಸಿದ.

''ಪೋಸ್ಟಿಗೆ ಹಾಕಿದ ಕಾಗದ ಊರು ತಲುಪೋದಕ್ಕೆ ಎಷ್ಟು ದಿನ ಬೇಕಾಗುತ್ತೆ, ಮಾವ?''

''ಹತ್ತಿರದ ಊರಿಗಾಗಿದ್ರೆ ಎರಡು ದಿನದಲ್ಲೇ ತಲುಪುತ್ತೆ ದೂರದ ಊರಿಗಾದ್ರೆ ಲೇಟು.''

''ಪೂನಾಕ್ಕೆ ಹೋಗಕ್ಕೆ ಎಷ್ಟು ದಿನ ಬೇಕು ?''

''ಮೂರು ದಿನವಾಗಬಹುದು''

ಹಾಗಾದರೆ ತಾನು ಹಾಕಿದ್ದ ಕಾಗದ ಕಳಿಸಿದ ಅಡ್ರೆಸ್ಸಿಗೆ ಈಗ ತಲುಪಿರಬಹುದೆನಿಸಿತು ; ಅಂದರೆ ಅಲ್ಲಿಂದ ತನಗೆ ಉತ್ತರ ಬರಲು ಇನ್ನೂ ಕೆಲವು ದಿನಗಳಾಗಬಹುದು ಎಂದುಕೊಂಡ.

ಸುಮಾರು ಹತ್ತು-ಹನ್ನೆರಡು ದಿನಗಳಾಗಿರಬಹುದು, ಅವನು ಕಾಗದ ಬರೆದು. ಒಂದು ಬೆಳಿಗ್ಗೆ ಎಂದಿನಂತೆ ಹನುಮಯ್ಯ ಪೋಸ್ಟು ತಂದಾಗ ಮಾವ ಬ್ಯಾಗ್‌ನ ಸೀಲ್ ಒಡೆದು ಒಳಗಿದ್ದ ಕಾಗದಗಳನ್ನೆಲ್ಲ ಹೊರಕ್ಕೆ ತೆಗೆದು ಠಸ್ಸೆಯೊತ್ತಲು ಪ್ರಾರಂಭಿಸಿದರು. ಒಂದೊಂದೇ ಕಾಗದಕ್ಕೂ ಸೀಲ್ ಒತ್ತುವಾಗ ಅಲ್ಲಿನ ಹೆಸರು ಕಣ್ಣಿಗೆ ಬೀಳುತ್ತದೇನೋ ಎಂದು ನೋಡುವುದು ಸೀನುವಿಗೆ ವಾಡಿಕೆ. ಅವನು ಕನ್ನಡವನ್ನು ಸುಲಭವಾಗಿ ಓದುವಂತೆ ಇಂಗ್ಲಿಷನ್ನು ಓದಲಾಗುತ್ತಿರಲಿಲ್ಲ. ಇನ್ನೂ ಹೋದ ವರ್ಷದಿಂದ ತಾನೇ ಅವನು ಇಂಗ್ಲಿಷ್ ಕಲಿಯಲು ಪ್ರಾರಂಭಿಸಿರುವುದು ? ಅಕ್ಷರಗಳು ಗೊತ್ತಾದರೂ ವೇಗವಾಗಿ ಓದಲು ಕಷ್ಟವಾಗುತ್ತದೆ.

ಮಾವ ಎಲ್ಲ ಕಾಗದಗಳಿಗೂ ಮುದ್ರೆಯೊತ್ತಿ ಅನಂತರ ಅವುಗಳನ್ನು ವಿಂಗಡಿಸಲು ಪ್ರಾರಂಭಿಸಿದರು. ಹಾಗೆ ಮಾಡುವಾಗ 'ಶ್ರೀನಿವಾಸಮೂರ್ತಿ, C/o ಪೋಸ್ಟ್‌ಮಾಸ್ಟರ್' ಎಂದಿದ್ದ ವಿಳಾಸವನ್ನೋದಿಕೊಂಡರು. ತಟ್ಟನೆ ಗೊತ್ತಾಗಲಿಲ್ಲ; ಅನಂತರ ಹೊಳೆಯಿತು, ಅದು ಸೀನುವಿನೆಂದು ''ನಿಂಗೇನೋ ಬಂದಿದೆಯಲ್ಲಯ್ಯ'' ಎಂದು ಅವನೆಡೆ ನೂಕಿದಾಗ, ಸೀನುವಿಗೆ ಎದೆ ಡವಡವಗುಟ್ಟತೊಡಗಿತು ಕಾತರದಿಂದ. ದೊಡ್ಡ ಕವರಿನಲ್ಲಿ ಸುಮಾರು ಭಾರವಾಗಿ ಏನೋ ಇತ್ತು, ಇದನ್ನು ಕೈಗೆತ್ತಿಕೊಂಡು ದೂರ ಹೋಗಿ ಕುಳಿತು ಒಳಗಿದ್ದುದನ್ನು ತೆಗೆದು ನೋಡಿದ, ಒಂದು ಸಣ್ಣ ಪುಸ್ತಕ, ನಾಲ್ಕಾರು ಅಚ್ಚಾದ ಹಾಳೆಗಳು. ಆ ಹಾಳೆಗಳಲ್ಲಿ ಕೆಲವು ಪ್ರಶ್ನೆಗಳು. ''ಈ ಪ್ರಶ್ನೆಗಳಿಗೆ ಪುಸ್ತಕ ಓದಿ ಉತ್ತರ ಬರೆದು ಕಳಿಸಿ, ಮುಂದಿನ ಪ್ರಶ್ನೆಗಳನ್ನು ಕಳಿಸುತ್ತೇವೆ'' ಎಂದು ಬರೆದಿದ್ದರು.

ಜೀವನದಲ್ಲಿ ಮೊದಲ ಬಾರಿಗೆ ತನ್ನ ಹೆಸರಿಗೆ ಪೋಸ್ಟೊಂದು ಬಂದಿತ್ತು, ಹೆಮ್ಮೆಯೆನಿಸಿತು. ಇದ್ದಕ್ಕಿದ್ದಂತೆಯೇ ತಾನು ತುಂಬ ದೊಡ್ಡವನಾಗಿ ಬೆಳೆದಂತೆ

ಭಾಸವಾಯಿತು. ಪುಸ್ತಕವನ್ನೂ ಕವರನ್ನೂ ಅಭಿಮಾನದಿಂದ ಹಿಂದೆ ಮುಂದೆ ತಿರುಗಿಸಿ ನೋಡಿದ. ಅಷ್ಟರಲ್ಲಿ ಮಾವ ತಮ್ಮ ಕೆಲಸ ಮುಗಿಸಿದ್ದರು.

''ಏನಯ್ಯ ಅದು ಬಂದಿರೋದು, ಇಲ್ಲಿ ತಾ'' ಎಂದು ಕರೆದಾಗ ಸೀನು ಅನುಮಾನದಿಂದಲೇ ಅವರತ್ತ ಹೋಗಿ ಅವರ ಕೈಗೆ ಬಂದವೆಲ್ಲವನ್ನೂ ಕೊಟ್ಟ. ಮಾವ ಅದನ್ನೆಲ್ಲ ನೋಡಿದರು ; ನೋಡನೋಡುತ್ತ ಅವರ ಮುಖ ಗಂಭೀರವಾಯಿತು. ಕೊನೆಗೆ, ''ಇದನ್ಯಾರು ತರಿಸೂ ಅಂತ ಹೇಳಿದ್ರಯ್ಯ ನಿಂಗೇ ?'' ಎಂದು ಕೇಳಿದರು.

''ಮತ್ತೆ ಮತ್ತೆ ಅವತ್ತು ಪೇಪರ್ನಲ್ಲಿ ಬಂದಿತ್ತು, ನಾನೇ ಬರೆದೆ'' ಎಂದು ಮಾವನ ಮುಖದಿಂದಲೇ ಅವರ ಭಾವವನ್ನರಿತ ಸೀನು ನಿಧಾನವಾಗಿ ಉತ್ತರಿಸಿದ.

''ಇದರಲ್ಲಿ ಏನಿದೆ ಗೊತ್ತಾ?''

''ಹ್ಞೂ''

''ಮತ್ತೇಕೆ ತರಿಸಿದೆ ?''

''ಸುಮ್ನೆ''

''ನಿನ್ನ ತಲೆ ; ಇದು ಕ್ರಿಶ್ಚಿಯನ್ನರದು'' ಎಂದರು. ಆದರೇನಂತೆ ಎನ್ನಿಸಿತು ಸೀನುವಿಗೆ ; ಮಾವ ಯಾಕೆ ಹಾಗೆ ಹೇಳಿದರು ಎಂದರ್ಥವಾಗಲಿಲ್ಲ.

''ನಿಮ್ಮಂಥ ಹುಡುಗರ ತಲೆಕೆಡಿಸಿ ಬಲೇಲಿ ಹಾಕ್ಕೋಬೇಕೂಂತ ಅವರು ಈ ಆಟವೆಲ್ಲ ಆಡ್ತಾರೆ. ಎಳಸುಗಳು ನೀವು, ಅದನ್ನೆಲ್ಲ ಕೇಳ್ತೀರಾ.'' ಸೀನು ಸುಮ್ಮನಿದ್ದ, ಅವರ ಮಾತಿನ ಧಾಟಿಯನ್ನು ಅರ್ಥಮಾಡಿಕೊಳ್ಳಲು ಅವನು ಈಗಲೂ ಅಸಮರ್ಥನಾಗಿದ್ದ

''ಕ್ರಿಶ್ಚಿಯನ್ನರೋನಾಗ್ತಿಯೇನಯ್ಯ ?''

''ಉಹ್ಞೂ''

''ಮತ್ತಿವೆಲ್ಲ ಯಾಕೆ ತರಿಸ್ತೀಯಾ ? ನಿಮ್ಮತ್ತೆ ಹತ್ತಿರ ಗೀತೆಯ ಶ್ಲೋಕಗಳನ್ನು ಹೇಳಿಸ್ಕೊಂಡು ಕಲಿ'' ಎಂದು ಆ ಪುಸ್ತಕ ಹಾಳೆಗಳು ಇವನ್ನೆಲ್ಲ ಹರಿದು ಬಿಸುಟರು. ಅವನಿಗೆ ಅಳು ಬರುವ ಹಾಗಾಯಿತು. ತಾನಿನ್ನೂ ಪುಸ್ತಕವನ್ನು ಪೂರ್ತಿ ಓದಿಯೇ ಇಲ್ಲ, ಆಗಲೇ ಅದನ್ನೆಲ್ಲ ಚಿಂದಿ ಚಿಂದಿ ಮಾಡಿದ್ದನ್ನು ಕಂಡು ಅವನಿಗೆ ಕೋಪ ಬಂದಿತು. ''ಬೋಳೀಮಗ, ನಾನು ಮಾಡಿದ್ದಕ್ಕೆಲ್ಲ ಕಲ್ಲು ಹಾಕ್ತಾನೆ'' ಎಂದು ಮನಸ್ಸಿನಲೇ ಕ್ರೋಧಕಾರಿದ. ತಾನಿನ್ನು ತೀರ ಎಳೆಯವನೆಂದೂ ಬುದ್ಧಿಯಿಲ್ಲದವನೆಂದು ಭಾವಿಸುವ ಈ ಮಾವ ತನಗೆ ಅವಮಾನ ಮಾಡುತ್ತಿದ್ದಾನೆಂದೂ ಸೀನುವಿಗನ್ನಿಸಿತು. ಅಲ್ಲಿಂದೆದ್ದು ಬಂದುಬಿಟ್ಟ

ದಿನದಿನಕ್ಕೆ ಪೋಸ್ಟಾಫೀಸಿನ ವಹಿವಾಟುಗಳು ಹೆಚ್ಚಾಗತೊಡಗಿತು. ಬರುವ ಕಾಗದ ಪತ್ರಗಳು ಜಾಸ್ತಿಯಾದವು. ಇಲ್ಲಿ ಪೋಸ್ಟಾಫೀಸು ಆರಂಭವಾದ ವಿಷಯ ತಿಳಿಯದೇ ಕೆಲವರು ಇನ್ನೂ ''ರಂಗಾಪುರ ಪೋಸ್ಟು'' ಎಂದೇ ಬರೆದಿರುತ್ತಿದ್ದರು

ಅಡ್ರೆಸ್ಸಿನಲ್ಲಿ. ಆದರೂ ಪಾವಗಡದ ಆಫೀಸಿನಲ್ಲಿ ಅವುಗಳನ್ನು ರಂಗಾಪುರಕ್ಕೆ ಕಳಿಸದೇ, ಪೆಮ್ಮನಹಳ್ಳಿಯ ಬ್ಯಾಗಿನಲ್ಲಿಯೇ ಕಳಿಸುವ ವ್ಯವಸ್ಥೆ ಮಾಡಿದ್ದರು. ಕವರು, ಸ್ಟಾಂಪು, ಕಾರ್ಡುಗಳನ್ನು ಕೊಂಡುಕೊಳ್ಳುವವರೂ ಈಗ ಹೆಚ್ಚಿದ್ದರಿಂದ ದುಡ್ಡುಕಾಸು ಕೂಡ ಹೆಚ್ಚು ಪೋಸ್ಟಾಫೀಸಿನಲ್ಲಿರುತ್ತಿತ್ತು. ತುಂಬ ಹೆಚ್ಚು ಹಣವನ್ನು ತಮ್ಮ ಬಳಿ ಇಟ್ಟುಕೊಳ್ಳುವ ಅಧಿಕಾರ ಇಲ್ಲಿನ ಪೋಸ್ಟ್ ಮೇಷ್ಟರಿಗಿರಲಿಲ್ಲ; ಆದ್ದರಿಂದ ಅದನ್ನೆಲ್ಲ ಪಾವಗಡಕ್ಕೇ ಕಳಿಸುತ್ತಿದ್ದರು.

ಒಂದು ದಿನ ಪೋಸ್ಟಿನ ಕೆಲಸ ಮಾಡುತ್ತಿದ್ದ ಮಾವನನ್ನು ಅತ್ತೆ ಅಡಿಗೆ ಮನೆಯಿಂದ ಕರೆದರು. ಅವರ ಧ್ವನಿಯಲ್ಲಿ ಆತಂಕವಿತ್ತು. ಅದನ್ನು ಗಮನಿಸಿದ ಮಾವ ಇದ್ದುದನ್ನು ಇದ್ದ ಹಾಗೆಯೇ ಬಿಟ್ಟು ಎದ್ದು ಅಡಿಗೆಯ ಮನೆಯತ್ತ ನಡೆದರು. ಹನುಮಯ್ಯ ಕಸವುಡುಗುತ್ತಿದ್ದ ; ಅವನೆತ್ತಲೋ ಗಮನ ಹರಿಸಿದ್ದರಿಂದ ಈ ಕಡೆ ನೋಡುತ್ತಿರಲಿಲ್ಲ. ಮಾವ ಒಂದು ಡಬ್ಬಿಯಲಿ ಇಟ್ಟಿದ್ದ ನೋಟುಗಳು ಪೆಟ್ಟಿಗೆಯಲ್ಲಿ ಕಾಣಿಸಿದವು. ಸೀನುವಿನ ಮನಸ್ಸಿನಲ್ಲಿ ತಾನು ಜಾತ್ರೆಯಲ್ಲಿ ಕಳೆದುಕೊಂಡು ಮೂರು ರೂಪಾಯಿಗಳ ನೆನಪಾಯಿತು. ಆ ನಷ್ಟವನ್ನು ಇಲ್ಲಿ ತುಂಬಿಕೊಳ್ಳಬಹುದೆಂದು ಅನ್ನಿಸಿತು. ಆದರೆ ಯಾರಾದರೂ ಕಂಡರೇನು ಎಂಬ ಭಯವಾಗಿ ಎದೆಯ ಬಡಿತ ತೀವ್ರವಾಯಿತು. ಆಸೆ ಮಾತ್ರ ಹೆಚ್ಚು ಅಲ್ಲದೆ ತಡಮಾಡಲು ಅವಕಾಶವಿಲ್ಲ, ಮಾವ ಬಂದುಬಿಡುತ್ತಾರೆ. ಅವರೆಲ್ಲಿ ದುಡ್ಡನ್ನು ಎಣಿಸುತ್ತಾರೆ ಎಂದುಕೊಂಡು ಒಂದು ಐದು ರೂಪಾಯಿಯ ನೋಟನ್ನು ತೆಗೆದುಕೊಂಡು ಜೇಬಿಗಿಳಿಬಿಟ್ಟು ಮಳ್ಳಿಯಾಗಿ ಅಡುಗೆ ಮನೆಯ ಕಡೆಗೆ ತಾನೂ ಓಡಿದ.

ಅತ್ತೆಗೆ ಚೇಳು ಕಚ್ಚಿತ್ತು. ಮಾವ ನಿಂಬೆಯ ಹಣ್ಣಿನ ರಸವನ್ನು ಕಚ್ಚಿದ ಕಡೆಗೆ ಹಿಂಡಿ ಅಡಿಗೆ ಸೋಡವನ್ನು ಹಾಕುತ್ತಿದ್ದರು. ಛಳಕು ಎಂದು ಒದ್ದಾಡುತ್ತಿದ್ದ ಅತ್ತೆಗೆ ನೋವು ನಿಧಾನವಾಗಿ ಕಡಿಮೆಯಾಯತು. ತನ್ನನ್ನು ಅಲ್ಲಿ ಗಮನಿಸಿದ ಮಾವ, ಪೋಸ್ಟಿನ ಸಲಕರಣೆಗಳೆಲ್ಲ ಅಲ್ಲೇ ಹೊರಗಿವೆಯೆಂಬುದನ್ನು ಜ್ಞಾಪಿಸಿಕೊಂಡು, ''ನೀನ್ಯಾಕಯ್ಯ ಬಂದೆ ? ಅಲ್ಲಿ ಯಾರೂ ಇಲ್ಲ, ಹೋಗು, ಅಲ್ಲೇ ಕೂತಿರು'' ಎಂದರು. ''ಹ್ಞೂ'' ಎನ್ನುತ್ತ ಸೀನು ಮರಳಿ ಬಂದ.

ಎದೆ ಪುಕ ಪುಕ ಎನ್ನುತ್ತಿತ್ತು. ಮಾವ ಮತ್ತೆ ಹಣವನ್ನು ಎಣಿಸಿದರೇನು ಎನ್ನಿಸಿತು. ಮತ್ತೆ ತೆಗೆದುಕೊಂಡಿದ್ದ ನೋಟನ್ನು ಅಲ್ಲಿಯೇ ಹಾಕಿಡಬೇಕು ಎಂದುಕೊಂಡ. ಆಸೆ ಮಧ್ಯೆ ಬಂತು. ಆದರೆ ಅದನ್ನು ಹಿಂಬಾಲಿಸಿದ ಭಯ ಅಲ್ಲೇ ಹಾಕಿಬಿಡು ಎಂದಿತು. ''ಹಾಳಾಗಿ ಹೋಗಲಿ'' ಎಂದು ಅಲ್ಲೇ ದುಡ್ಡನ್ನು ಹಾಕಿಬಿಡೋಣವೆಂದು ಜೇಬಲ್ಲಿ ಕೈಹಾಕಿಕೊಳ್ಳುವಾಗ ಮಾವ ಅಲ್ಲಿಗೆ ಬಂದು ತಮ್ಮ ಕೆಲಸವನ್ನು ಮುಂದುವರಿಸಿದರ. ಬೇಗ ಬೇಗ ತಮ್ಮ ಕೆಲಸ ಮುಗಿಸಿದರು.

ಆ ದಿನ ಏನೂ ಆಗಲಿಲ್ಲ. ಹೆದರಿದ್ದ ಸೀನುವಿಗೆ ಧೈರ್ಯವಾಯಿತು. ಗೆದ್ದೆ ಎಂದುಕೊಂಡ ನೆಮ್ಮದಿಯಿಂದಿದ್ದ. ತನ್ನ ನಷ್ಟ ಅನಾಯಾಸವಾಗಿ ಭರ್ತಿಯಾದದ್ದಕ್ಕೆ ಅವನಿಗೆ ಸಂತಸವಾಯಿತು.

ಆದರೆ ಆ ಶನಿವಾರ ಸಾಯಂಕಾಲ ಪೋಸ್ಟ್‌ ತೆಗೆದುಕೊಂಡು ಹೋಗಲು ಹನುಮಯ್ಯ ಬಂದಾಗ, ಲೆಕ್ಕದ ಪ್ರಕಾರ ತಾವಿಟ್ಟುಕೊಳ್ಳಬೇಕಾದುದಕ್ಕಿಂತ ಹೆಚ್ಚಿನ ಹಣ ಇರುವುದರಿಂದ, ಅದನ್ನು ಪಾವಗಡಕ್ಕೆ ಕಳಿಸಬೇಕೆಂದು ದುಡ್ಡು ಎಣಿಸಲು ತೊಡಗಿದರು. ಐದು ರೂಪಾಯ ಕಡಿಮೆಯಿತ್ತು. ಲೆಕ್ಕ ತಪ್ಪಿರಬಹುದೆಂದು ಮತ್ತೆ ಮತ್ತೆ ಎಣಿಸಿದರು. ಆದರೆ ಕಡಿಮೆಯೇ ಬರುತ್ತಿತ್ತು. ಹನುಮಯ್ಯನನ್ನು ಕರೆದರು.

''ಐದು ರೂಪಾಯಿ ಕಡಿಮೆ ಬರ್ತಿದೆಯಲ್ಲೋ ಹನಮ. ನೀನೇನಾದ್ರೂ ಕಂಡ್ಯಾ ?'' ಎಂದರು.

''ಇಲ್ಲವಲ್ಲ ಸ್ವಾಮಿ, ಇನ್ನೊಂದು ದಪ ಎಣಿಸಿ''

''ಹತ್ತು ಸಲ ಎಣಿಸಿದ್ದಾಯ್ತಯ್ಯ. ಆಫೀಸಿನ ದುಡ್ಡು ಇಲ್ಲಿಲ್ಲದೆ ಬೇರೆ ಕಡೆ ಇಡೋದೇ ಇಲ್ಲ. ನೋಡಿದ್ರೆ ಹೇಳು ; ಸರ್ಕಾರದ ಹಣ ಕದ್ದುಗಿದ್ದರೆ ಪೋಲೀಸ್ನೋರು ಎಳಕೊಂಡು ಹೋಗ್ತಾರೆ.''

''ದೇವ್ರಾಣೆ, ನನ್ನ ಮಕ್ಕಳಾಣೆ, ನಾನು ಕಾಣ್ಲಿಲ್ಲ ಸ್ವಾಮಿ'' ಎಂದು ಅವನು ಭೀತನಾಗಿ ಹೇಳಿದ.

''ಸುಳ್ಳು ಹೇಳಬೇಡೋ ಹನುಮ. ಕಸಗಿನ ಗುಡಿಸೋವಾಗೇನಾದರೂ ಬಿದ್ದಿದನ್ನು ಕಂಡರೆ ಹೇಳಿಬಿಡು''

''ಇನ್ನಂಗೆ ಎಲ್ಲಿ ಸ್ವಾಮಿ. ನಾನು ದೇವ್ರಾಣೆ ಕಾಣೆ, ನನ್ನ ಮ್ಯಾಲೆ ನಂಬಿಕೆ ಕಳ್ಕಬ್ಯಾಡಿ. ಬೇಕಾದ್ರೆ ಸಂಬಳದ ದಿನ ಐದುರೂಪಾಯಿ ಇಡುಕಂಬಿಡಿ ; ಅದ್ರೆ ನಾನಂತೂ ಕಾಣೇ ಕಾಣೆ.''

ಮಾವನಿಗೆ ಏನನ್ನಿಸಿತೋ ಸೀನುವನ್ನು ಕರೆದು ವಿಚಾರಿಸಿದರು. ತಾನು ಕಂಡೇ ಇಲ್ಲವೆಂದು, ಹತ್ತುಸಲ ಕೇಳಿದರೂ ಇಲ್ಲವೆಂದೇ ಅವನು ಉತ್ತರಿಸಿದ. ಆದರೆ ಅವನ ಧ್ವನಿಯಲ್ಲಿ ನಡುಕವಿತ್ತು. ಮುಖ ಕಪ್ಪುಗಟ್ಟಿತ್ತು. ಮಾವ ಸರಸರನೆ ಬೆಂಚಿನಿಂದ ಇಳಿದು ಸೀನುವಿನ ಪುಸ್ತಕಗಳಿದ್ದ ಗೂಡಿನ ಕಡೆ ಹೋದರು. ಅಲ್ಲಿದ್ದ ಪುಸ್ತಕಗಳನ್ನೆಲ್ಲ ಕೆಳಕ್ಕಿಳಿಸಿದರು. ಒಂದೊಂದನ್ನೆ ಎತ್ತಿಕೊಂಡು ಹಾಳೆಗಳನ್ನು ತಿರುವಿಹಾಕಿದರು. ಎಲ್ಲೂ ಏನೂ ಕಾಣಿಸಲಿಲ್ಲ. ಕೊನೆಗೆ ಜಾಮಿಟ್ರಿ ಬಾಕ್ಸ್ ಕಣ್ಣಿಗೆ ಬಿತ್ತು. ಅದನ್ನು ತೆಗೆದು ನೋಡಿದರೆ ಐದುರೂಪಾಯಿಯ ನೋಟೊಂದು ಅಲ್ಲಿ ಮಲಗಿತ್ತು!

ಮಾವ ರೌದ್ರಾಕಾರದಿಂದ ಸೀನುವಿನ ಮುಖದ ಮುಂದೆ ಬಾಕ್ಸನ್ನು ಹಿಡಿದು ''ಇದೇನಿದು ?'' ಎಂದು ತಿರುಚಿದರು.

''ನಂಗೆ ಗೊತ್ತಿಲ್ಲ''

''ನೀನು ತಗೊಂಡು ಇದರಲ್ಲಿ ಇಡಲಿಲ್ಲವೇನೋ ?''

''ಇಲ್ಲ'' ಎಂದು ಆಗಲೂ.

"ಮತ್ತೆ ಈ ನೋಟು ಇಲ್ಲಿ ಹ್ಯಾಗೆ ಬಂತು ?"

"ನಂಗೊತ್ತಿಲ್ಲ"

"ನಿಂಗೊತ್ತಿಲ್ಲವಾ, ಬೇಕೂಫ ಸೂಳೇ ಮಗನೆ ? ಕಳ್ಳತನ ಮಾಡ್ತೀಯಾ ? ಪೋಲೀಸ್ನೋರಿಗೆ ಹಿಡುಕೊಟ್ಟು ಬಿಡ್ತೀನಿ, ನಿಜ ಹೇಳು" ಎಂದು ಗುಡುಗಿದರು.

ಪೊಲೀಸು ಎಂದಾಗ ಸೀನುವಿಗೆ ವಿಪರೀತ ಭಯವಾಯಿತು. ಮೊದಲಿನಿಂದ ಅವನಿಗೆ ಯೂನಿಫಾರಂನ ಪೇದೆಗಳನ್ನು ಕಂಡರೆ ದಿಗಿಲು, ಅವರ ಕೈಯಲ್ಲಿ ಸದಾ ಇರುತ್ತಿದ್ದ ದೊಣ್ಣೆ ಅವನ ಕಣ್ಮುಂದೆ ಬಂತು. ಸುಮ್ಮನೆ ನಿಂತ.

"ಹೇಳ್ತೀಯೋ ಇಲ್ಲವೋ ಭಡವಾ" ಎಂದು ಕೆನ್ನೆಗೆ ಜೋರಾಗಿ ಎರಡು ಬಿಟ್ಟರು. ಕೆನ್ನೆಗಳು ಮುಖದಿಂದ ಕಳಚಿ ಬಿದ್ದವೇನೋ ಎನ್ನಿಸಿತವನಿಗೆ.

"ಹೇಳ್ತೀನಿ"

"ಬೊಗಳು, ಯಾವಾಗ ತಗಂಡೆ ?"

"ಅವತ್ತು ಅತ್ತೆಗೆ ಚೇಳು ಕಚ್ಚಿದಾಗ" ಎಂದು ಬಿಕ್ಕುತ್ತ

"ಅಯ್ಯೋ ಅಯೋಗ್ಯ, ನೋಡಿಕೊಂಡಿರೋ ಅಂತ ಕಳ್ಸಿದ್ರೆ ನೀನೇ ಕದ್ಯಾ ?" ಎಂದು ಇನ್ನೊಂದು ಹಾಕಿದರು,

ಗಲಾಟೆ ಕೇಳಿ ಒಳಗಿನಿಂದ ಬಂದ ಅತ್ತೆ ಮಾವನ ರೌದ್ರಾಕಾರದಿಂದ ಅಪ್ರತಿಭರಾದರು. ಅಪರಾಧಿಯಂತೆ ತಲೆಕೆಳಗೆ ಹಾಕಿ ಅಳುತ್ತ ನಿಂತಿದ್ದ ಸೀನುವಿನ ಬಳಿ ಬಂದರು, ಅವನನ್ನು ಎದೆಗೆ ಅನಿಸಿಕೊಂಡು "ಏನು ಮಾಡಿದ್ಯಪ್ಪಾ?" ಅಂದರು.

"ಏನು ಮಾಡಿದ್ನಾ? ಕೇಳು ಅವನು ಮಾಡಿದ ಸಾಹಸಾನ ? ಪೋಸ್ಟ್ ಆಫೀಸಿನ ದುಡ್ನು ಕದ್ದಿದ್ದಾನೆ" ಎಂದರು ಮಾವ.

"ಹೌದೇನಪ್ಪ ಸೀನು, ನಿಜವೇನೋ ?" ಎಂದು ಅತ್ತೆ ಸೀನುವಿನ ಮುಖವನ್ನು ತನ್ನೆಡೆಗೆ ಎಳೆದುಕೊಳ್ಳುತ್ತ, ಅವನು ಅತ್ತೆಯನ್ನು ಎದುರಿಸಲಾರದವನಾಗಿದ್ದ.

"ಅವನೇನು ಹೇಳ್ತಾನೆ, ಇಲ್ಲ ಅಂತಲೇ ವಾದಿಸ್ತಾನೆ. ಜಾಮಿಟ್ರಿ ಬಾಕ್ಸಲ್ಲಿ ನೋಡಿದರೆ ಅಲ್ಲಿದೆ ! ಈ ವಯಸ್ಸಿಗೇ ಕಳ್ಳತನ ಪ್ರಾರಂಭಮಾಡಿದ್ದಾನೆ. ಅವನಿಗೇನು ಕಡಿಮೆಯಾಗಿದೆಯಂತೆ ಇಲ್ಲಿ?" ಎಂದು ಮಾವ ಮತ್ತೆ ಕೈಯೆತ್ತಿದ್ದರು.

"ಹೋಗಲಿ, ಸುಮ್ನೆ ಇರಿ. ಕಂಡೋರ ಮನೆ ಮಕ್ಕಳ್ನ ಕರಕೊಂಡು ಬಂದು ಹೊಡೆದ್ರೆ ಹೇಗೆ?" ಎಂದರು ಅತ್ತೆ.

"ಸಾಕಪ್ಪಾ ಸಾಕು, ಈ ಕಂಡೋರ ಮನೆಯ ಮಕ್ಕಳ ಸಹವಾಸ."

"ಹೋಗ್ಲಿ ಬಿಡಿ, ಆಯ್ತಲ್ಲ"

"ಇನ್ನೂ ಮುಂದೇನ್ಮಾಡ್ತಾನೋ, ಈಗ್ಲೇ ಎಲ್ಲಾಯ್ತು ಇವನ್ನ ಬೆಂಗಳೂರಿಗೆ ಸಾಗಿಹಾಕಿಬಿಡಬೇಕು ಬೇಗ" ಎಂದರು ಮಾವ ಕೋಪದಿಂದ.

''ನಿಂಗೆ ಇಲ್ಲಿರೋಕೆ ಇಷ್ಟವಿಲ್ಲವೇನೋ ?'' ಎಂದು ಅತ್ತೆ ಮತ್ತೆ ಅವನ ಮುಖವನ್ನು ತಮ್ಮ ಮುಖದೆಡೆಗೆ ತಿರುಗಿಸಿಕೊಂಡು ಕೇಳಿದರು.

''ಇದೆ'' ಎಂದ ಸೀನು ಮೆಲ್ಲಗೆ.

''ಇಲ್ಲಿರೋ ಹಾಗಿದ್ರೆ ಇವೆಲ್ಲ ದುರ್ವಿದ್ಯ ಕಲೀದೇ ಬಿದ್ದಿರಬೇಕು. ಇಲ್ಲದಿದ್ದರೆ ನಾಳೇನೇ ತೊಲಗಿ ಹೋಗು'' ಎಂದರು ಮಾವ. ಸೀನು ಸುಮ್ಮನಿದ್ದ.

''ಕೇಳಿಸ್ತೇನೋ ?'' ಎಂದರು ಮತ್ತೆ.

''ಹೂಂ'' ಅಂದ ಮೆಲ್ಲಗೆ.

''ಇನ್ನೊಂದ್ಸಲ ಹೀಗೆ ಮಾಡು. ಕೈ ಕತ್ತರಿಸಿಬಿಡ್ತೀನಿ.''

೧೨

ಸೀನುವಿಗೆ ತುಂಬ ಭಯವಾಗಿತ್ತು ಅವತ್ತು ಅವರತ್ತೆ ಮಾವನೇನೋ ಯಾವುದೇ ವ್ಯತ್ಯಾಸವಿಲ್ಲದಂತೆ ಇದ್ದರು, ಆದರೆ ಈ ಹುಡುಗ ಹಾಗಿರಲು ಸಾಧ್ಯವೇ ? ತುಂಬ ಹೆದರಿದ್ದ. ಹಿತ್ತಿಲು ಕಡೆ ಹೋಗುವುದಕ್ಕೆ ಅವನಿಗೆ ಭಯವಾಗಿತ್ತು ಅತ್ತೆ ಹೇಳಿದಾಗಿನಿಂದ. ಅಷ್ಟು ಮಾತ್ರವಲ್ಲ ಇಲ್ಲೆಲ್ಲಾದರು, ಅದು ಸುಳಿಯುತ್ತದೇನೋ, ಕಾಣಿಸುವುದೇನೋ ಎಂದು ಮೈಯೆಲ್ಲ ಕಣ್ಣಾಗಿದ್ದ.

ಹಿತ್ತಲಲ್ಲಿ ಬಚ್ಚಲುಮನೆಯ ನೀರು ಹೋಗುವ ಕಡೆ ಬಂಡೆಯ ಕೆಳಗೆ ಹಾವಿತ್ತಂತೆ. ತಾನು ಮನೆಗೆ ಬಂದಾಗಲೇ ಅತ್ತೆ ಕರೆದಿದ್ದರು. ''ಹಿತ್ತಿಲಕಡೆ ಮಾತ್ರ ಹೋಗಬೇಡಪ್ಪ'' ಎಂದು ಎಚ್ಚರಿಸಿದ್ದರು.

''ಯಾಕತ್ತೆ?''

''ಅಲ್ಲಿ ನಾಗಪ್ಪ ಇದೆ ಕಣೋ. ಏನಾದರೂ ಮಾಡಿಗೀಡೀಯಾ ಗೊತ್ತಿಲ್ಲದೆ.''

ನಾಗಪ್ಪ ಎಂದಾಗ ಒಂದರೆಕ್ಷಣ ಅವನಿಗೆ ಅರ್ಥವಾಗಿರದಿದ್ದರೂ ಆಮೇಲೆ ಹಾಗಂದರೆ ಹಾವು ಎಂದು ಅರ್ಥಮಾಡಿಕೊಂಡಿದ್ದ. ಅದು ತಿಳಿದ ತಕ್ಷಣ ಭಯ ಅವನನ್ನು ಆವರಿಸಿತ್ತು. ಹಾವು ಕಚ್ಚಿದರೆ ಬೇಗ ಸಾಯುತ್ತಾರೆ ಎಂದು ಹೇಳುವುದನ್ನು ಕೇಳಿದ್ದ, ಆಗ ವಿಷ ತೆಗೆಯಲು ಕೋಳಿಯನ್ನು ಹಿಡಿದು ತಂದು ಅದರ ಹಿಂಭಾಗವನ್ನು ಗಾಯಕ್ಕೆ ತಗಲಿಸಿದರೆ ಅದು ಅಲ್ಲಿಂದಲೇ ರಕ್ತದ ಜೊತೆಗೆ ವಿಷ ಹೀರುತ್ತದಂತೆ. ಹಾವು ಕಚ್ಚಿದರೆ ಚಾಕುವಿನಿಂದಲೋ ಬ್ಲೇಡಿನಿಂದಲೋ ಗಾಯ ಮಾಡಿ, ಆ ಭಾಗದಿಂದ ರಕ್ತವನ್ನು ಬಾಯಲ್ಲಿ ಹೀರಿ ಉಗುಳಬೇಕು. ಹಾಗೆ ಮಾಡಿದರೆ ವಿಷ ಹೊರ ಬರುತ್ತದೆ ಎಂದು ಅವನ ಆರೋಗ್ಯದ ಪುಸ್ತಕದಲ್ಲಿ ಬರೆದಿದ್ದದ್ದು ನೆನಪಾಯಿತು. ಬ್ಲೇಡಿನಿಂದ ಗಾಯ ಮಾಡಿಕೊಳ್ಳುವುದರ ಕಲ್ಪನೆ ಹಾಗೂ ಅದರಿಂದಾಗುವ ನೋವು ಅವನನ್ನು ಹಿಂಡಿತು. ಭಯ ತಲೆಯಿಂದ ಕಾಲಿನವರೆಗೆ ಆವರಿಸಿತು.

"ಅದನ್ಯಾಕೆ ಕೊಂದುಬಿಡಬಾರದು ?" ಎಂದು ಅತ್ತೆಗೆ ಹೇಳಿದ.

"ಬಿಡ್ತು ಅನ್ನು, ನಾಗಪ್ಪನನ್ನು ಕೊಲ್ಲಿಸತಾರೇನು ?" ಎಂದಿದ್ದರು ಸ್ವಲ್ಪ ಮುಖ ಗಂಟಿಕ್ಕಿಕೊಂಡು.

ಅತ್ತೆ ಹೇಳಿದುದು ಅವನಿಗೆ ಸರಿಯಾಗಿ ಅರ್ಥವಾಗಿರಲಿಲ್ಲ. ಹಾವನ್ನು ಯಾಕೆ ಕೊಲ್ಲಿಸಬಾರದು ? ಅದು ನಮ್ಮನ್ನು ಕಚ್ಚಿ ಸಾಯಿಸಿದರೆ ಪರವಾಯಿಲ್ಲವಾ ? ಎಂಬ ಜಿಜ್ಞಾಸೆಯುಂಟಾಯಿತು. ಅಲ್ಲದೆ ಬೆಂಗಳೂರಲ್ಲಿ ಒಂದು ಬಾರಿ ತಮ್ಮ ಬೀದಿಯ ಮೋರಿಯಲ್ಲಿ ಹಾವು ಬಂದಿದ್ದಾಗ ದೊಡ್ಡವರೆಲ್ಲ ಸೇರಿ ಅದನ್ನು ಕೊಂದು ಹಾಕಿದ್ದರು. ಆಮೇಲೆ ಸತ್ತ ಹಾವಿನ ಬಾಯಲ್ಲಿ ಮೂರು ಕಾಸಿನ ಒಂದು ನಾಣ್ಯವನ್ನಿಟ್ಟು ಬೀದಿಯ ಕೊನೆಯಲ್ಲಿ ಕಾಗದ ಸೌದೆ ಪುರಲೆಗಳಿಂದ ಅದನ್ನು ಸುಟ್ಟುಹಾಕಿದ್ದರು. ಆದರೆ ಅತ್ತೆ ಅದನ್ನು ಕೊಲ್ಲಬಾರದು ಅಂತ ಹೇಳ್ತಾರಲ್ಲ. ಬೇಕಾದರೆ ಇದರ ಬಾಯಲ್ಲಿ ಒಂದಾಣೆಯಿಟ್ಟು ಸುಡಬಹುದಲ್ಲ.

"ಅದೆಲ್ಲಿಂದ ಬಂದಿದೆ ಅತ್ತೆ?"

"ನಮ್ಮನೆ ಹಿತ್ತಿಲು ಗೋಡೆ ಆಚೆ ಕಡೆ ಹುತ್ತವಿದೆಯಲ್ಲ, ಅಲ್ಲಿಂದ"

ಹೌದು. ಸೀನುವೂ ಹಿಂಭಾಗದ ಬೀದಿಗೆ ಹೋಗಿದ್ದಾಗ ಅಲ್ಲಿ ಹುತ್ತವನ್ನು ಕಂಡಿದ್ದ. ಆದರೆ ಅದರಲ್ಲಿದ್ದ ಹಾವಿನ ಕಲ್ಪನೆ ಅವನಿಗೆಂದೂ ಬಂದಿರಲಿಲ್ಲ. ಈಗ ಆ ಹುತ್ತ ಅಪಾಯದ ಜಾಗವೆಂದು ಅರಿವಾಯಿತು.

"ಹುತ್ತವನ್ನ ಒಡೆಸಿಬಿಟ್ಟರೆ ಅಲ್ಲಿಗೆ ಹಾವೇ ಬರೊಲ್ಲವಲ್ಲ ಅತ್ತೆ" ಎಂದಿದ್ದ.

"ನೀನು ಸುಮ್ನಿರಪ್ಪ ಏನೇನೋ ಮಾತಾಡ್ಬೇಡ. ಅದೇನೂ ಮಾಡಲ್ಲ. ನಾವೆಲ್ಲ ಎಷ್ಟೋ ವರ್ಷದಿಂದ ಇಲ್ಲವಾ ಇಲ್ಲಿ?"

"ತುಂಬ ವರ್ಷದಿಂದ ಹುತ್ತ ಇದೆಯ ಅತ್ತೆ ಅಲ್ಲಿ?"

"ನಾನು ಈ ಊರಿಗೆ ಮದುವೆಯಾಗಿ ಬಂದಾಗಲಿಂದ ನೋಡ್ತಿದ್ದೀನಿ ಅದನ್ನ"

"ನಿನಗೆ ಭಯವಾಗೊಲ್ಲವಾ ಅತ್ತೆ?"

"ಎಂಥಾ ಭಯವೋ ! ಅಲ್ಲಿ ಕಪ್ಪೆ ಗಿಪ್ಪೆ ಇರತ್ತೆ ಅಂತ ತಿನ್ನಕ್ಕೆ ಬರುತ್ತೆ ಅಷ್ಟೆ. ನಮ್ಮ ಪಾಡಿಗೆ ನಾವು ಏನೂ ಮಾಡದೆ ಸುಮ್ಮನಿದ್ರೆ ಆಯ್ತು, ಹೊರಟು ಹೋಗತ್ತೆ ಅದರಷ್ಟಿಗದು."

ಈ ಅತ್ತೆಗೆಷ್ಟು ಧೈರ್ಯ ಎಂದು ಅವರ ಬಗ್ಗೆ ಅಭಿಮಾನವೆನಿಸಿತು. ಮಾವನಿಗೆ ಇನ್ನೂ ಜಾಸ್ತಿ ಭಯವಿಲ್ಲ ಹಾಗಾದರೆ ಅನ್ನಿಸಿತು. ತಾನೂ ಗಂಡಸಾಗಿಯೂ ಅತ್ತೆಯಷ್ಟೂ ಧೈರ್ಯವಿಲ್ಲದಿದ್ದರೆ ಹೇಗೆ ಎನಿಸಿತು.

ಹಗಲೆಲ್ಲ ಹಾಗೂ ಹೀಗೂ ಸಾಗಿತು. ಅದರಲ್ಲಿ ಅರ್ಧಭಾಗವನ್ನು ಜೋಯಿಸರ ಮನೆಯಲ್ಲಿಯೇ ಅವನು ಕಳೆಯುವುದು. ಮಿಕ್ಕಾದಾಗ ಹೇಗೋ ಸಾವರಿಸಿಕೊಂಡಿದ್ದ

ಆದರೆ ಸಾಯಂಕಾಲವಾದ ಮೇಲೆ ಅವನಿಗೆ ಕತ್ತಲೆಯೊಡನೆ ಭಯವೂ ಏರುತ್ತ ಹೋಯಿತು. ರಾತ್ರಿ ಊಟವಾದ ಮೇಲೆ ಅತ್ತೆಯೊಡನೆ,

"ಅತ್ತೆ ಆ ಹಾವು ಇನ್ನೂ ಅಲ್ಲೇ ಇರುತ್ತಾ?"

"ಇರಬಹುದಪ್ಪ, ಯಾರು ಕಂಡರು ? ಇದ್ದರೂ ತನ್ನ ಪಾಡಿಗೆ ತಾನಿರುತ್ತೆ."

"ಮಲಕ್ಕೊಂಡಾಗ ಇಲ್ಲಿಗೆ ಬಂದುಬಿಟ್ಟರೆ ?" ಎಂದ. ಅವನ ಧ್ವನಿಯಲ್ಲಿ ನಡುಕ ಕಾಣಿಸಿಕೊಂಡಿತ್ತು.

"ಇಲ್ಲಿ ಯಾಕೆ ಬರುತ್ತೋ ?"

"ನಾವು ನಿದ್ದೆ ಮಾಡ್ತಿದ್ದಾಗ ಗೊತ್ತಿಲ್ಲದೆ ಬಂದರೆ ?" ಅವತ್ತೊಂದು ದಿನ, ಹಿಂದಿನ ಬೇಸಿಗೆಯಲ್ಲಿ ಜೋಯಿಸರ ಮನೆಯಲ್ಲಿ ಹೊರಗೆ ಎಲ್ಲರ ಜೊತೆ ಮಲಗಿದ್ದ. ಅವರೆಲ್ಲ ಬೇಗ ಎದ್ದಿದ್ದರು. ತಾನೆದ್ದಾಗ ಬೆಳಕು ಚೆನ್ನಾಗಿ ಬಂದಿತ್ತು. ತನ್ನ ಕಾಲ ಹತ್ತಿರ ಹಾಸಿಗೆಯ ತುದಿಯಲ್ಲಿ ನಾಯಿ ಮುದುರಿ ಮಲಗಿತ್ತು. ಏಳುವಾಗ ಗೊತ್ತಿಲ್ಲದೆ ಕಾಲು ಜಾಡಿಸಿದಾಗ ನಾಯಿ ಕುಂಯ್ ಕುಂಯ್ ಎಂದಿತ್ತು. ಹಾಗೇನಾದರೂ ಹಾವು ತಾನು ಮಲಗಿರುವಾಗ ಬಂದು ಮಲಗಿಕೊಂಡುಬಿಟ್ಟರೆ ! ದೇಹದಾದ್ಯಂತ ವಿದ್ಯುತ್ಸಂಚಾರವಾಯಿತು.

"ಹಾಗಾದರೆ ಹಾವು ಮನೇಗೆ ಬರಲ್ಲವಾ ?" ಎಂದು ಮತ್ತೆ ಕೇಳಿದ್ದ. ಅವನಿಗೆ ಭಯವೆಂಬುದು ಅತ್ತೆಗೂ ಗೊತ್ತಾಯಿತು. ಅವನೇಕೆ ಭಯಪಡಬೇಕು ಎಂದು ಅವರು "ನೀನು ಜೋಯಿಸರ ಮನೆಗೆ ಹೋಗಿ ಮಲಕ್ಕೋ ಬೇಕಾದರೆ" ಎಂಬ ಸೂಚನೆ ಯಿತ್ತರು. ಈ ಸೂಚನೆ ಸೀನುವಿಗೂ ಬೇಕಾಗಿತ್ತು. ತಕ್ಷಣ ಒಪ್ಪಿದ.

ಅತ್ತೆಯೆಂದಂತೆ ತನ್ನ ಹಾಸಿಗೆಯನ್ನೆತ್ತಿಕೊಂಡು ಓಡಿದ. ಲಕ್ಷ್ಮಮ್ಮಜ್ಜಿಗೆ ವಿಚಾರ ತಿಳಿಸಿದ. ಅವರು ತಮ್ಮ ಜಾಗದಲ್ಲಿ ಸೀನುವಿಗೂ ಹಾಸಿಗೆ ಹಾಸಿದರು. ಯಥಾ ಪ್ರಕಾರ ತಾನು, ಪಕ್ಕದಲ್ಲಿ ಅಜ್ಜಿ ಆಚೆ ಬದಿಗೆ ಶ್ರೀಕಂಠಯ್ಯ ಮಾವನ ಮಗಳು ಪದ್ಮ ಮಲಗಿಕೊಂಡರು. ಬೆಳಿಗ್ಗೆ ಏಳುವಾಗ ಕಣ್ಣು ಮುಚ್ಚಿಕೊಂಡೇ ಕೈಯನ್ನು ಅತ್ತಿತ್ತ ಚಾಚಿ ಹೊರಳಾಡಿದ ಅವನ ಕೈಗೆ ಏನೋ ತಗುಲಿತು. ಗಾಬರಿಯಿಂದ ಕಣ್ಣುಬಿಟ್ಟು ನೋಡಿದ ; ಹಿಂದಿನ ರಾತ್ರಿಯ ಹಾವಿನ ವಿಷಯ ನೆನಪಿಗೆ ಬಂತು. ಅಜ್ಜಿ ಆಗಲೇ ಎದ್ದು ಹೋಗಿದ್ದರು. ಆಚೆ ಮಲಗಿದ್ದ ಪದ್ಮಳ ಕೈಗೆ ತನ್ನ ಕೈ ತಾಕಿತ್ತು ; ಅವಳಿನ್ನೂ ನಿದ್ದೆಯಲ್ಲಿದ್ದಳು !

ಮಾರನೆಯ ಎರಡು ದಿನಗಳೂ ಹಾಗೆಯೇ ಜೋಯಿಸರ ಮನೆಯಲ್ಲಿ ಮಲಗಿದ. ಮೂರನೆಯ ರಾತ್ರಿ ತಾವೆಲ್ಲ ಊಟಕ್ಕೆ ಕೂತಿದ್ದಾಗ ಯಾರೋ "ಸ್ವಾಮಿ" ಎಂದು ಕೂಗಿದರು. "ಯಾರು ?" ಎಂದರು ಮಾವ. "ಯಾರೋ ನಿಮ್ಮನ್ನ ಉಡಿಕ್ಕ ಬಂದವ್ರೆ" ಎಂದ ಬಂದವನು. ಮಾವ ಊಟ ಮಾಡುತ್ತಿದ್ದುದರಿಂದ ಏಳುವಂತಿರಲಿಲ್ಲ. ಅತ್ತೆ ಲಾಟೀನು ಹಿಡಿದು ಹೊರಗೆ ಹೊರಟರು. "ನಿಮ್ಮನ್ನೆ ಕೇಳ್ಕಂಡು ಉಡುಕಾಡ್ತಿದ್ರು. ಕರ್ಕಬಂದೆ" ಎಂದು ಯಾವನೋ ಹೇಳಿ ಹೋದ ಹಾಗಾಯಿತು. ಅತ್ತೆ ಯಾರನ್ನೋ

ಕರೆದುಕೊಂಡು ಒಳಗೆ ಬಂದು "ಇಲ್ನೋಡಿ, ಯಾರು ಬಂದಿದ್ದಾರೆ ?" ಎಂದರು. ಮಾವ ಕುಳಿತಲ್ಲಿಂದಲೇ ಪಡಸಾಲೆಯತ್ತ ಬಗ್ಗಿ ನೋಡಿದರು. ಸೀನುವಿಗೂ ಬಂದವರು ಯಾರೆಂದು ಕಾಣುತ್ತಿತ್ತು, ಸುಮಾರು ಮೂವತ್ತು ವರ್ಷಗಳ ತರುಣನೊಬ್ಬ ಒಂದು ಪಂಚೆ, ಷರಟು ಹಾಕಿಕೊಂಡು ಬಂದಿದ್ದರು.

"ಓಹೋಹೋ, ಏನಯ್ಯ ರಾಮಣ್ಣ ಬಾ, ಬಾ, ಒಳ್ಳೆ ಹೊತ್ತಿಗೆ ಬಂದೆ. ಕಾಲು ತೊಳಕೋ" ಎಂದರು.

ಬಂದವರು ಅದರಂತೆಯೇ ಕಾಲು ತೊಳೆದು ಬಂದದು. ಆದರೆ "ನನ್ನದಿನ್ನೂ ಸಂಧ್ಯಾವಂದನೆ ಆಗಿಲ್ಲ ಮಾವ ನಿಮ್ಮದಾಗಲಿ" ಎಂದರು. ಅತ್ತೆ ಅವರ ಸಂಧ್ಯಾವಂದನೆಗೆ ಅಣಿ ಮಾಡಿದರು. ಇವರು ಊಟ ಮಾಡಿ ಮುಗಿಸುವ ಹೊತ್ತಿಗೆ ಅವರು ತಮ್ಮ ಕಾರ್ಯವನ್ನು ಪೂರೈಸಿದ್ದರು. ಮಾವ ಕೈತೊಳೆದು ಬಂದರು. ಅವರು ಊಟ ಮಾಡುವಾಗ ಮಾವ ಮಾತನಾಡಿಸುತ್ತ ಗೋಡೆಗೊರಗಿ ಕೂತರು. ಸೀನುವೂ ಮಾವನ ಪಕ್ಕದಲ್ಲಿ ಕೂತ.

"ಹೇಳದೇ ಕೇಳದೆ ಬಂದೆಯಲ್ಲ. ರಾಮಣ್ಣ ?"

"ಗೊತ್ತಿದೆಯಲ್ಲ ನಾನ್ಯಾಕೆ ಬಂದಿದ್ದೀನಿ ಅಂತ."

"ಅದೇ ನಿನ್ನ ತಂಗಿ ಲಗ್ನದ ವಿಚಾರ...."

"ಹ್ಞೂ, ಆಗಲೇ ಕಾಗದ ಬರೆದಿದ್ದನಲ್ಲ ಅಪ್ಪ ನಿಮಗೆ. ಇನ್ನೊಂದೆರಡು ತಿಂಗಳು ಕಳೀಲಿ ಆಮೇಲೆ ಲಗ್ನ ಅಂದುಕೊಂಡಿದ್ದಿವಿ. ಆದರೆ ಗಂಡಿನ ಕಡ್ಯೋರು ಈ ತಿಂಗಳಲ್ಲೇ ಮುಗಿಸಿಬಿಡಿ, ಮಳೆಗಾಲ ಶುರುವಾಗುತ್ತೆ ; ಆಮೇಲೆ ಅವರ ಮನೆಯ ಅಜ್ಜಿ ಕಾಶೀಯಾತ್ರೆಗೆ ಹೊರಡುತ್ತೆ ಅಂತ ಅಂದರು. ಆದರೆ ಲಗ್ನಬೇಕಲ್ಲ, ಇನ್ನೆಂಟು ದಿನಕ್ಕೆ ಇಟ್ಕೊಂಡಿದ್ದೀವಿ. ಅದಕ್ಕೆ ಅಪ್ಪ ನಿಮ್ಮನ್ನ ಹೋಗಿ ಕರಕೊಂಡ ಬಂದ್ಬಿಡು, ಬರೀ ಕಾಗದ ಹಾಕಿದರೆ ಬರ್ತ್ತಾರೋ ಇಲ್ಲವೋ ಎಂದರು ಆದಕ್ಕೆ ಬಂದೆ." ಎಂದು ವಿವರಿಸಿದರು.

"ಇಷ್ಟು ತರಾತುರೀಲಿ ಬಂದರೆ ಹೇಗಯ್ಯ ಹೊರಡೋದು ?"

"ಇವೆಲ್ಲ ಹೇಳ್ತೀರಿ ಅಂತ್ಲೆ ನಾನು ಬಂದಿರೋದು."

"ಇರಲಿ ಅವೆಲ್ಲ, ಊರಲ್ಲೆಲ್ಲ ಹೇಗಿದ್ದಾರೆ ?"

"ಊರಲ್ಲಿ ಎಲ್ಲರೂ ಚೆನ್ನಾಗಿದ್ದಾರೆ. ಅಪ್ಪ-ಅಮ್ಮ ನಿಮ್ಮನ್ನು ತುಂಬಕೇಳಿದ್ರು ಅವರು ಬರ್ದೆ ನೀನು ಬರಲೇ ಬೇಡ ಅಂದ್ರು."

"ಚೆನ್ನಾಗಿದೆಯಯ್ಯ ಇವರಿಬ್ಬರನ್ನು ಕರಕೊಂಡು ಹೋಗು."

"ಅವೆಲ್ಲ ಆಗಲ್ಲ ಮಾವ. ನಿಮ್ಮನ್ನೂ ಕರಕೊಂಡು ಬರ್ತೀನಿ ಅಂತ್ಲೆ ಹೇಳಿ ಬಂದಿದ್ದೀನಿ." ಎಂದು ಹೇಳಿ ಸೀನುವಿನ ಕಡೆ ನೋಡುತ್ತ "ಈ ಹುಡುಗ ಯಾರು ?" ಎಂದು ಕೇಳಿದರು.

“ನಿಮ್ಮತ್ತೆ ತಮ್ಮನ ಮಗ ಬೆಂಗ್ಳೂರಿನೋನು. ನಮ್ಮನೇಲೇ ಓದಿಕೊಂಡಿದ್ದಾನೆ.”

“ಏನಯ್ಯ ನಿನ್ನ ಹೆಸರು ?”

“ಶ್ರೀನಿವಾಸಮೂರ್ತಿ”

“ಭೇಷ್. ಎಷ್ಟನೇ ಕ್ಲಾಸು ?”

“ಏಳನೇದು ?”

“ನಮ್ಮೂರಿಗೆ ಬರ್ತೀಯೇನಯ್ಯಾ ?” ಎಂದು ಕೇಳಿದಾಗ ಸೀನು ನಗುತ್ತ ನಾಚಿ ತಲೆ ತಗ್ಗಿಸಿದ.

“ಬರ್ದಿದ್ದರೆ ಬಿಡ್ತೀಯೇನಪ್ಪ ನೀನು” ಎಂದರು ಅತ್ತೆ.

ಮಲಗಿಕೊಳ್ಳುವಾಗ ಇವತ್ತು ಇವರೂ ಇದ್ದಾರಲ್ಲ ಎಂದು, ಮತ್ತು ಆವೇಳೆಗೆ ಮೂರು ದಿನಗಳಾಗಿದ್ದು ಭಯ ಮಾಸಿದ್ದರಿಂದಾಗಿ ಅಲ್ಲೇ ಮಲಗಲು ಉದ್ಯುಕ್ತನಾದ. ಎಲೆ ಅಡಿಕೆ ಹಾಕಿಕೊಳ್ಳುವಾಗ ಮಾವ ಕೇಳಿದರು,

“ಮನೆ ಹುಡುಕೋದು ಕಷ್ಟವಾಯ್ತಾ? ನೀನೇನು ನಮ್ಮೂರಿಗೆ ಬಂದೇ ಇಲ್ಲ.”

“ಯಾಕೆ ಮಾವ ಹಿಂದೊಂದು ಸಲ ಬಂದಿದ್ದೆನಲ್ಲ, ಆದರೆ ತುಂಬ ದಿನಗಳಾಯ್ತು ಗುರುತೆಲ್ಲ ತಪ್ಪಿ ಹೋಗಿದೆ.”

“ತುಂಬ ಸುತ್ತಾಡಿಬಿಟ್ಯಾ ?”

“ಒಂದು ತಮಾಷೆಯಾಯಿತು. ಪಾವಗಡದಿಂದ ಬಸ್ಸಿಳಿದೆ. ಅದ್ಯಾವ ಊರು ?”

“ರಂಗಾಪುರ”

“ಹ್ಞಾ, ರಂಗಾಪುರ. ಅಲ್ಲಿಗೆ ಬಸ್ಸು ಬರೋ ಹೊತ್ತಿಗೇ ಐದು ಗಂಟೆಯಾಗಿತ್ತು ನಿಮ್ಮೂರಿನ ದಾರಿ ಕೇಳಿಕೊಂಡು ಬಂದೆ. ಇಲ್ಲಿಗೆ ಬರೋವಾಗ್ಗೆ ಆಗಲೇ ಹೊತ್ತು ಮುಳುಗಿ ಕತ್ತಲಾಗ್ತಾ ಇತ್ತು, ಗೊತ್ತಿಲ್ಲದೇ ಬರ್ತಿದ್ದೆ ನಾನು ಹಾಗೆ ಬಂದದ್ದು ಮಾದಿಗರ ಹಟ್ಟೀನಂತೆ. ಯಾವನೋ ಹಾರುವಯ್ಯ ನಮ್ಮಟ್ಟೀಗೆ ಬಂದವ್ನೆ ಅಂತ ಕೆಲವರು ನನ್ನ ಅಟ್ಟಿಸ್ಕಂಡು ಬಂದು ದಬಾಯಿಸಿದ್ರು. ನಾನು ಬ್ರಾಹ್ಮಣ ಅಲ್ಲ ಅಂದೆ. ಮತ್ಯಾರು ಅಂದರು ನಾನು ಶಿವಾಚಾರದೋನು ಅಂದೆ. ಅವರು ನಂಬಲಿಲ್ಲ, ನಿಜವಾ ಅಂದರು. ನಾನು ಶಿವನಾಣೆ ನಾನ್ಯಾಕೆ ಸುಳ್ಳೇಳಲಿ ಎಂದ ಮೇಲೆ ಸುಮ್ಮನೆ ಬಿಟ್ಟರು” ಎಂದು ತಮ್ಮ ಅನುಭವವನ್ನು ಹೇಳಿದರು.

“ಏನೂ ಮಾಡ್ಲಿಲ್ಲ, ತಾನೇ ?”

“ಛೇ, ಛೇ, ಮುಟ್ಟಿ ಕೂಡ ಮುಟ್ಲಿಲ್ಲ”

“ಅಂತೂ ಒಳ್ಳೆ ಉಪಾಯ ಮಾಡಿದೆ, ಅನ್ನು” ಎಂದರು ಮಾವ ಮೆಚ್ಚಿಕೆಯ ಧ್ವನಿಯಲ್ಲಿ,

"ಇನ್ನೇನು ಮಾಡಲಿ ಮಾವ ? ನನಗೆ ಅದು ಮಾದಿಗರಟ್ಟೇಂತ ತಿಳೀಲಿಲ್ಲ, ಅದಕ್ಕೇ ಶಿವನಾಣೇನೂ ಇಟ್ಟುಬಿಟ್ಟೆ, ಅವರಿಗೆ ನಂಬಿಕೆ ಬರ್‍ಲೀಂತ."

"ಹೋಗಲಿ, ಬಿಡು. ನೀನೇನು ಸುಮ್ಮಸುಮ್ಮನೆ ಇಡಲಿಲ್ಲವಲ್ಲ. ಆಪದ್ಧರ್ಮ ಅಂತ ಶಾಸ್ತ್ರದಲ್ಲೇ ಹೇಳಿದೆ, ಕಷ್ಟಬಂದಾಗ ಪಾರಾಗೋದಕ್ಕೆ ಒಂದು ಸುಳ್ಳು ಹೇಳಿದ್ರೇನೂ ದೋಷವಿಲ್ಲ" ಎಂದು ಮಾವ ಸಮಾಧಾನ ಮಾಡಿದರು.

ಸೀನುವಿನ ಮನಸ್ಸು ಆಲೋಚನೆಯಲ್ಲಿ ತೊಡಗಿತು. ಅವತ್ತು ಭರಮಪ್ಪ ಮೇಷ್ಟರು ಜುಂಜನ ಕೈಲಿ ತಮಗೆ ಹೊಡೆಸಿದ್ದರಿಂದ ಮಾವ ಕೋಪಮಾಡಿಕೊಂಡು ಮೇಷ್ಟ್ರನ್ನ ಬೈದಿದ್ದರು, ಆದರೆ ಇವತ್ತು ಇವರನ್ನ ಮಾದಿಗರೇ ಹೊಡೆಯೋಕೆ ಬಂದಿದ್ದರಂತೆ. ಅವರೂ ಬ್ರಾಹ್ಮಣರ್‍ನ ಮುಟ್ಟಿಸ್ಕೊಳ್ಳಲ್ಲವೇನೊ ಹಾಗಾದರೆ. ನಾನು ಮಾದಿಗನ್ನ ಮುಟ್ಟಿದ್ರೆ ನೀರು ಹಾಕಿಕೊಳ್ಳೋ ಹಾಗೆ ಅವರೂ ನಮ್ಮನ್ನ ಮುಟ್ಟಿದ್ರೆ ನೀರು ಹಾಕ್ಕೋತಾರೇನೋ. ಜುಂಜ ಅವತ್ತು ಹಾಗಾದರೆ ಮನೇಗೆ ಹೋಗಿ ಬಟ್ಟೆ ಬದಲಾಯಿಸಿದನೇನೋ. ಆದರೆ ಅವರಪ್ಪ ಬಂದು ಮಾವನ ಹಾಗೆ ಮೇಷ್ಟ್ರನ್ನ ಬೈದಂತೆ ಕಾಣಲಿಲ್ಲ, ಜುಂಜ ಮನೇಲಿ ತಾನು ಬ್ರಾಹ್ಮಣರನ್ನು ಮುಟ್ಟಿಕೊಂಡ ವಿಷಯ ಹೇಳಿದನೋ ಇಲ್ಲವೊ ಎನ್ನಿಸಿತು.

ಅಂತೂ ರಾಮಣ್ಣ ಬಂದವನು ನಾಡಿದ್ದು ಎಲ್ಲರೂ ಹೊರಡಬೇಕೆಂದು ಮಾವನನ್ನು ಒಪ್ಪಿಸಿದ್ದ. ಮಾರನೇ ದಿನ ಅತ್ತೆ ಕೋಡುಬಳೆ, ರವೆವುಂಡೆ ಮಾಡಲು ಕುಳಿತುಕೊಂಡರು. ಸೀನುವಿಗೆ ಬಟ್ಟೆಗಳನ್ನು ಬಗೆದಿಟ್ಟುಕೊಳ್ಳಲು ಸೂಚಿಸಿದ್ದರು. ಎರಡು ದಿನ ಸ್ಕೂಲು ತಪ್ಪಿದ್ದರ ಜೊತೆಗೆ, ಮದುವೆ ಮನೆಯ ಊಟೋಪಚಾರಗಳ ನೆನಪು ಬಂದು ಸ್ವಲ್ಪ ಕಾಲ ಹಾಯಾಗಿರಬಹುದೆಂದುಕೊಂಡ. ಊರಿಗೆ ಬಂದ ಮೇಲೆ ಅತ್ತೆ- ಮಾವನ ಜೊತೆಯಲ್ಲಿ ಎಲ್ಲಿಗೂ ಹೋಗಿರಲಿಲ್ಲ, ಅವನಿಗೆ ಸಂಭ್ರಮವಾಯಿತು. ಮಾವ ಶ್ರೀನಿವಾಸರಾವ್ ಮೇಷ್ಟ್ರಿಗೆ ಹೇಳಿಕಳಿಸಿ ಪೋಸ್ಟ್‌ನ ಕೆಲಸ ಒಂದೆರಡು ದಿನ ನೋಡಿಕೊಳ್ಳಲು ಹೇಳಿದರು. ಹನುಮಯ್ಯನನ್ನು ರಾತ್ರಿಯ ಹೊತ್ತು ಕಾವಲಾಗಿ ಮನೆಯ ಹತ್ತಿರ ಮಲಗಿಕೊಳ್ಳುವಂತೆ ಸೂಚಿಸಿದರು.

ರಂಗಾಪುರದವರೆಗೂ ಗಾಡಿ ಕಟ್ಟಿಸಿದ್ದರು. ಅಲ್ಲಿಂದ ಪಾವಗಡಕ್ಕೆ ಬಸ್ಸಿನಲ್ಲಿ ಹೋಗಿ, ಮತ್ತೆ ಇನ್ನೊಂದು ಬಸ್ಸು ಹಿಡಿದು ತಿಪಟೂರಿಗೆ ಹೋಗಬೇಕಾಗಿತ್ತು. ಅವರು ತಿಪಟೂರಿಗೆ ಮುಂಚೆಯೇ ಸಿಕ್ಕುತ್ತಿದ್ದ ನಾಗೇನಹಳ್ಳಿಯಲ್ಲಿ ಇಳಿಯಬೇಕಾಗಿತ್ತು, ಅದೇ ರಾಮಣ್ಣನ ಊರು. ರಾಮಣ್ಣ ಮಾವನಿಗೆ ಸರಿಯಾಗಿ ಏನಾಗಬೇಕೋ ತಿಳಿದಿರಲಿಲ್ಲ, ಮಾವನ ತಂದೆ ತಂದೆಯ ತಂಗಿಯ ಮೊಮ್ಮಗನಂತೆ. ಅವರೂ ಊರಲ್ಲಿ ದೊಡ್ಡ ಕುಳ, ಅವರ ತಂದೆ ಶ್ಯಾನುಭೋಗರು. ಇವರಲ್ಲದೆ ಇನ್ನಿಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಈಗ ಮದುವೆಯಾಗುವ ಹುಡುಗಿಯೇ ದೊಡ್ಡವಳು, ಆದರೆ ರಾಮಣ್ಣನಿಗಿಂತ ಚಿಕ್ಕವಳು. ಅವಳಾದ ಮೇಲೆ ಒಂದು ಗಂಡು ಒಂದು ಹೆಣ್ಣು, ಮತ್ತೊಂದು ಗಂಡು.

ಈತನೂ ವ್ಯಾಸಾಯ ಮಾಡಿಕೊಳ್ಳುತ್ತ ಊರಿನಲ್ಲಿಯೇ ಇದ್ದವನು. ಮದುವೆಯ ಹುಡುಗಿಯನ್ನು ಬಿಟ್ಟು ಮಿಕ್ಕ ಮೂವರೂ ಓದುತ್ತಿದ್ದರು. ದೊಡ್ಡ ಹುಡುಗ ತಿಪಟೂರಿನಲ್ಲಿ ಹೈಸ್ಕೂಲಲ್ಲಿ ಓದುತ್ತಿದ್ದರೆ, ಹುಡುಗಿ ನಾಗವೇಣಿ ಎಂಟನೇ ಕ್ಲಾಸಂತೆ, ಕೊನೆಯವನು ಆರನೇ ಕ್ಲಾಸು.

ಬಸ್ಸಲ್ಲಿ ಹೋಗುವಾಗ ಸೀನು ರಾಮಣ್ಣನ ಬಳಿಯೇ ಕುಳಿತಿದ್ದ. ಇಷ್ಟು ಹೊತ್ತಿಗೆ ಅವರಲ್ಲಿ ಸ್ವಲ್ಪ ಸಲುಗೆ ಬೆಳೆದಿತ್ತು. ಬಂದ ದಿನ ಮತ್ತು ಮಾರನೆ ದಿನ ನಾಚಿಕೆಯಿಂದ ಮುದುಡಿಕೊಂಡಿದ್ದರೂ ಮುಂದಿನ ದಿನ ಅವರೇ ತುಂಬ ಮಾತಾಡಿಸಿದ್ದರಿಂದ ಇವನೂ ಅನಿವಾರ್ಯವಾಗಿ ಮಾತನಾಡಬೇಕಾಯಿತು. ಅಲ್ಲದೆ ಅವರೊಡನೆ ಅಡ್ಡಾಡಿ ಬರಲು ಮಾವ ತನ್ನನ್ನು ಕಳಿಸುತ್ತಿದ್ದರು. ಹಾಗೆ ಹೋಗುವಾಗ ರಾಮಣ್ಣ ಬೇಕಾದಷ್ಟು ಪ್ರಶ್ನೆಗಳನ್ನು ಕೇಳುತ್ತಿದ್ದರು.

''ನಿಂಗೆ ಬೆಂಗಳೂರು ಇಷ್ಟವೋ, ಪೆಮ್ಮನಹಳ್ಳಿ ಇಷ್ಟವೋ ?''

''ಆವಾಗ ಬೆಂಗಳೂರು, ಈಗ ಈವೂರು''

''ಯಾಕೆ ?''

''ಆವಾಗ ನಾನು ಇಲ್ಲಿದ್ದೆ, ಈಗ ಇಲ್ಲಿದ್ದೀನಲ್ಲ'' ಎಂದು ಉತ್ತರಿಸಿದ್ದ.

''ನಿಮ್ಮೂರು ಯಾವೂದೂಂದ್ರೆ ಏನಂತೀಯ ಈಗ ?''

''ಪೆಮ್ಮನಹಳ್ಳಿ''

''ಆಮೇಲೆ ಮುಂದೆ ಓದಕ್ಕೆ ಬೆಂಗಳೂರಿಗೇ ಹೋಗ್ಬೇಕಾಗತ್ತಲ್ಲಪ್ಪ ಆಗೇನ್ಮಾಡ್ತೀಯಾ ?''

''ಅವಾಗ ಬೆಂಗಳೂರು ಅಂತೀನಿ.''

''ಅಂದ್ರೆ, ನೀನು ಎಲ್ಲಿರ್‍ತೀಯೋ ಅದೇ ನಿಮ್ಮೂರ್‍ರೇನು ?''

''ಹ್ಞೂಂ'' ಎಂದಿದ್ದ.

''ಭೇಷ್ ಕಣಯ್ಯ. ಹಾಗಾದ್ರೆ ಕಷ್ಟವಿಲ್ಲ. ನಮ್ಮೂರಲ್ಲಿದ್ದು ಬಿಡು. ನಿಮ್ಮೂರು ಯಾವುದು ಅಂದ್ರೆ ನಾಗೇನಳ್ಳಿ ಅನ್ನು''

''ಊ್ಞಂ'' ಎಂದು ರಾಗವೆಳೆದ.

''ಯಾಕಯ್ಯ ?''

''ಮಾವ ಬೈತಾರೆ''

''ಮಾವಂಗೆ ನಾನೇಳ್ತೀನಿ ಕಣಯ್ಯ. ನಮ್ಮೂರಲ್ಲೂ ಮಿಡ್ಲ್‌ಸ್ಕೂಲಿದೆ. ನಿಮ್ಮ ಸ್ಕೂಲಿಗಿಂತ ದೊಡ್ಡದು ಗೊತ್ತಾ? ಸ್ವಂತ ಕಟ್ಟಡ ಇದೆ.''

''ನಮ್ ಸ್ಕೂಲಿಗೂ ಇದೆ' ಎಂದು ಹೆಮ್ಮೆಯಿಂದ ಹೇಳಿಕೊಂಡ. ಆದರೆ ಅದರಲ್ಲಿ ಮಳೆ ಬಂದಾಗ ನೀರು ನಿಲ್ಲುತ್ತಿದ್ದ ವಿಷಯ ಜ್ಞಾಪಕ್ಕೆ ಬಂದರೂ ಹೇಳುವಂತಿರಲಿಲ್ಲವಲ್ಲ!

"ನಮ್ಮೂರು ಸ್ಕೂಲಿಂದು ದೊಡ್ಡ ಕಟ್ಟಡ ಕಣಯ್ಯ. ಎಲೆಕ್ಟ್ರಿಸಿಟಿ ಇದೆ ನಮ್ಮೂರಲ್ಲಿ. ಈವೂರಲ್ಲೇನೂ ಇಲ್ಲ, ಎಲ್ಲೋ ಚಿಕ್ಕಹಳ್ಳಿ."

"ಅದ್ರೇನಾಯ್ತು ಇಲ್ಲೂ ಚೆನ್ನಾಗಿದೆ. ಎಲೆಕ್ಟ್ರಿಸಿಟಿ ಇಲ್ದೆ ಇದ್ರೆ ಓದಕ್ಕೆ ಆಗಲ್ಲವೇನು ?"

"ನಮ್ಮೂರಲ್ಲಿ ಬರೀ ತೆಂಗಿನ ಕಾಯಿಗಳೇ ಕಣಯ್ಯ. ತಿಪಟೂರು ಅಂದ್ರೆ ತೆಂಗಿನ ಕಾಯಿಗೆ ಹೆಸರುವಾಸಿ. ನೀನು ತಿಳ್ಕೊಂಡಿಲ್ಲವಾ ?"

ಹೌದು, ಸೀನುವಿನ "ನಮ್ಮ ಸಮಾಜ" ಪುಸ್ತಕದಲ್ಲಿ ತಿಪಟೂರಿನ ಹೆಸರಿತ್ತು. ಅದು ಕೊಬ್ಬರಿಗೆ ಹೆಸರುವಾಸಿಯೆಂದೂ ಬರೆದಿದ್ದು 'ಅಲ್ಲಿ ಸಿಕ್ಕುವ ಗಂಗಪಾಣಿ ಎಳನೀರು ಕುಡಿಯಲು ಬಲುರುಚಿ' ಎಂದೂ ಪುಸ್ತಕದಲ್ಲಿತ್ತು.

"ಆದರೆ, ನಿಮ್ದು ತಿಪಟೂರಲ್ಲವಲ್ಲ ?"

"ತಿಪಟೂರಲ್ಲದಿದ್ದರೇನು, ಅದೇ ತಾಲ್ಲೂಕು. ತಿಪಟೂರು ನಮ್ಮೂರಿಂದ ಎಂಟೇ ಮೈಲಿ."

ಅವನಿಗೆ ಸ್ವಲ್ಪ ಅಸೂಯೆಯಾಯಿತು. 'ನಮ್ಮ ಸಮಾಜ' ಪುಸ್ತಕದಲ್ಲಿ ತಿಪಟೂರಿನ ಹೆಸರು ಹೇಳಿ, ಪಾವಗಡದ ಹೆಸರನ್ನೇ ಹೇಳಿರಲಿಲ್ಲ. ಪುಸ್ತಕ ಬರೆದವರು ಕೆಟ್ಟವರು ಎನಿಸಿತ್ತು.

"ಪಾವಗಡದಲ್ಲಿ ಇದ್ದಹಾಗೆ ತಿಪಟೂರಲ್ಲಿ ಕೋಟೆ ಇದ್ಯಾ ?" ಎಂದಿದ್ದ ಕಣ್ಣಲ್ಲಿ ಮಿಂಚನ್ನಿಟ್ಟುಕೊಂಡು.

"ಬೆಟ್ಟ ಕೋಟೆ ಯಾರಿಗೆ ಬೇಕಯ್ಯಾ. ಹೊಟ್ಟೆಗೆ ತಿನ್ನೋ ಪದಾರ್ಥ ತಾನೇ ಮುಖ್ಯ. ಇಲ್ಲಿ ಸರಿಯಾಗಿ ಮಳೆಯೇ ಬರಲ್ಲ ಒಂದ್ಸಾರಿ ಪೇಪರ್ನಲ್ಲೇ ಬಂದಿತ್ತಲ್ಲ ಪಾವಗಡದಲ್ಲಿ ಮಳೆ ಬರಲಿಲ್ಲಾಂತ ?"

ಅವತ್ತು ಮಾವನಿಗೆ ಓದಿದ್ದ ವಿಷಯವನ್ನು ಪೇಪರ್ನಲ್ಲಿ ಇವರೂ ಓದಿದ್ದಾರೆ ಹಾಗಾದರೆ ? ತಮ್ಮ ತಾಲೂಕು ಮಳೆ ಬೀಳದ ಬೆಂಗಾಡು ಪ್ರದೇಶವೆಂದು ಎಲ್ಲರಿಗೂ ತಿಳಿಯುವ ಹಾಗೆ ಪ್ರಿಂಟು ಮಾಡಿದ್ದ ಪೇಪರನವರೂ ಕೂಡ ಕೆಟ್ಟವರು ಎಂದವನು ತೀರ್ಮಾನಿಸಿದ್ದ.

ಪಾವಗಡದಲ್ಲಿ ಬಸ್ಸಿನಿಂದಿಳಿದು ಬಸ್‌ಸ್ಟಾಂಡಲ್ಲಿ ಕಾದರು. ತಿಪಟೂರಿನ ಬಸ್ಸು ಬರಲು ಇನ್ನೂ ವೇಳೆಯಿತ್ತು.

"ಏನಾದ್ರೂ ತಗೋತೀರಾ ?" ಎಂದು ಮತ್ತೆ ಮಾವಂದಿರನ್ನು ರಾಮಣ್ಣ ಕೇಳಿದರು.

"ಏನೂ ಬೇಡಪ್ಪ ರಾಮಣ್ಣ. ಸಾಯಂಕಾಲದ ಹೊತ್ತಿಗೆ ಊರು ಸೇರ್ತೀವಲ್ಲ ಅಲ್ಲದೆ, ಎಲ್ಲೂ ಏನೂ ತೊಗೋಳಲ್ಲ ನಾವು" ಎಂದಿದ್ದರು ಮಾವು.

"ಹಾಗಾದರೆ ಒಂದೆರಡು ಬಾಳೆಹಣ್ಣು ತಗೊಳ್ಳಿ" ಎಂದು ಪಕ್ಕದಲ್ಲಿದ್ದ ಅಂಗಡಿ ಯಿಂದ ನಾಲ್ಕು ಬಾಳೆಯ ಹಣ್ಣು ತಂದು ಒಬ್ಬೊಬ್ಬರಿಗೊಂದೊಂದು ಕೊಟ್ಟರು.

"ಸೀನು ಬೇಕಾದರೆ ಏನಾದ್ರೂ ತಗೊಳ್ಳಿ, ಸೀನೂನು ಕರಕೊಂಡು ಹೋಗು"

"ಒಂದು ತೊಟ್ಟು ಕಾಫಿ ಕುಡಿಸ್ಕೊಂಡು ಬರ್ತೀನಿ, ಹುಡುಗನಿಗೆ" ಎಂದು ರಾಮಣ್ಣ ಸೀನುವಿನೊಡನೆ, ಗಟ್ಟಿಯಾಗಿ ಕಿರುಚುತ್ತಿದ್ದ ರೇಡಿಯೋವಿನಿಂದ ತನ್ನ ಅಸ್ತಿತ್ವವನ್ನು ಜಾಹೀರುಮಾಡುತ್ತಿದ್ದ ಹೋಟೆಲೊಂದಕ್ಕೆ ಹೊರಟರು.

ತಮ್ಮ ತಾಲ್ಲೂಕಿಗಿಂತ ತಿಪಟೂರೆ ಮೇಲೆಂದು ವಾದಿಸಿದಾಗ ರಾಮಣ್ಣನ ಮೇಲೆ ಉಂಟಾಗಿದ್ದ ಅಸಮಾಧಾನ ಅವರು ಪಕೋಡ ಕಾಫಿ ಕೊಡಿಸಿದಾಗ ಹೊರಟು ಹೋಯಿತು. ಇವರೂ ಒಳ್ಳೆಯವರು ಎಂದುಕೊಂಡ. ಇವರ ಊರೂ ಚೆನ್ನಾಗಿರಬೇಕು ಎನ್ನಿಸಿತು. ಹೊಟೇಲಿನಿಂದ ಹೊರಬಂದರು.

ಸ್ವಲ್ಪ ಹೊತ್ತಿನಲ್ಲಿಯೇ ತಿಪಟೂರಿಗೆ ಹೋಗುವ 'ವಿಶ್ವನಾಥ ಬಸ್ ಸರ್ವೀಸ್' ಧೂಳೆಬ್ಬಿಸುತ್ತ ಬಂದಿತ್ತು. ರಾಮಣ್ಣ ತುಂಬ ಚಟುವಟಿಕೆಯಿಂದ ಮಿಡಲ್ ಸೀಟುಗಳಲ್ಲಿ ನಾಲ್ಕನ್ನು ಕಿಟಕಿಯ ಪಕ್ಕದಲ್ಲಿ ಎದುರು ಬದುರಾಗಿ ಹಿಡಿದರು. ಇವರನ್ನೆಲ್ಲ ಹತ್ತಿಸಿ ತಾವು ಕೆಳಕ್ಕಿಳಿದು ಏಜಂಟನ ಹತ್ತಿರ ಟಿಕೇಟು ಮಾಡಿಸಿಕೊಂಡು ಬಂದರು. ಇಲ್ಲಿಯೂ ಸೀನು ರಾಮಣ್ಣನ ಜೊತೆಯಲ್ಲಿಯೇ ಕುಳಿತಿದ್ದ. ಕಿಟಕಿಯ ಪಕ್ಕವಿದ್ದುದರಿಂದ ಹಾಯಾಗಿ ಗಾಳಿ ಬೀಸುತ್ತಿತ್ತು. ಜೊತೆಗೆ ದಾರಿಯಲ್ಲಿ ಎಲ್ಲವನ್ನೂ ನೋಡಲು ಸ್ಪಷ್ಟವಾಗಿ ಕಾಣುತ್ತಿತ್ತು.

ಸೀನು ಈಗ ರಾಮಣ್ಣನನ್ನು ದಾರಿಯುದ್ದಕ್ಕೂ ಪ್ರಶ್ನೆ ಕೇಳುತ್ತ ಬಂದ. ಕಂಡ ಹೊಲಗಳಲ್ಲಿ ಬೆಳೆದಿದ್ದ ಗಿಡಗಳನ್ನ ಪೈರುಗಳನ್ನು ತರಿಸುತ್ತ ತನಗೆ ಗೊತ್ತಿಲ್ಲದವುಗಳನ್ನು ಯಾವುದೆಂದು ಕೇಳಿ ತಿಳಿದುಕೊಳ್ಳುತ್ತಿದ್ದ. ಅವರೂರಿನಲ್ಲಿಯೂ ನಾಟಕವಾಡುತ್ತಾರಾ, ತೊಗಲುಬೊಂಬೆಯ ಆಟದವರು ಬರುತ್ತಾರಾ ಎಂದು ಕೇಳಿದ. ನಿಮ್ಮ ಮನೇಲಿ ಎಷ್ಟು ಜನರಿದ್ದಾರೆ ಎಂದು ವಿಚಾರಿಸಿದ. ಪೆಮ್ಮನ ಹಳ್ಳಿಯ ತಮ್ಮ ಮನೆಗಿಂತ ಅವರದು ದೊಡ್ಡದ ಎಂದು ಕೇಳಿದ. ನಿಮ್ಮೂರಲ್ಲಿ ಎಲೆಕ್ಟ್ರಿಸಿಟಿ ಇದ್ದರೆ, ನಿಮ್ಮ ಮನೆಯಲ್ಲಿ ರೇಡಿಯೋ ಇದೆಯೇ ಎಂದ. ಇದೆಯೆಂದು ತಿಳಿದಾಗ ಉತ್ಸಾಹ ಮೂಡಿತು. ಊರಿಗೆ ಹೋದ ಮೇಲೆ ಅವನು ರೇಡಿಯೋ ಹಾಕಬಹುದೇ ಎಂದು ಈಗಲೇ ಅನುಮತಿ ಪಡೆದ.

ಹೊತ್ತು ಮುಳುಗಿತು. ಆಕಾಶದಲ್ಲೆಲ್ಲ ಬಣ್ಣಬಣ್ಣದ ಬೆಳಕು ಚೆಲ್ಲಿತ್ತು. ಎಲ್ಲರ ಮುಖದ ಮೇಲೂ ಓಕುಳಿಯೆರಚಿದಂತೆ ಬಣ್ಣ ತುಂಬಿತ್ತು. ಗುಡ್ಡಗಳ ಹಿಂದೆ ಬೆಳಕು ಹೆಚ್ಚಾಗಿದ್ದು ಗುಡ್ಡಗಳನ್ನು ಆಕಾಶದಲ್ಲಿ ಕೊರೆದಂತೆ ಕಾಣುತ್ತಿತ್ತು. ಹಳ್ಳಿಗಳನ್ನು ದಾಟುವಾಗ ಮನೆಗೆ ಮರಳುತ್ತಿದ್ದ ದನಗಳ ಮಂದೆ ಕಾಣುತ್ತಿತ್ತು. ಹಳ್ಳಿಗಳನ್ನು ದಾಟುವಾಗ ಮನೆಗೆ ಮರಳುತ್ತಿದ್ದ ದನಗಳು ಕಾಣಸಿದುವು. ಬಸ್ಸು ಅಲ್ಲಲ್ಲ ನಿಂತಾಗ ಹುಡುಗರು ಸುತ್ತನಿಂತು ಪ್ರಯಾಣಿಕರನ್ನು ಕುತೂಹಲದಿಂದ ನೋಡುತ್ತಿದ್ದರು.

ಬರಬರುತ್ತ ಕತ್ತಲಾವರಿಸಿತು, ಗಾಳಿ ಕಿಟಕಿಯಿಂದ ತಣ್ಣನೆ ಬೀಸತೊಡಗಿತು. ದಾರಿಯ ಇಕ್ಕೆಲದಲ್ಲಿ ಝುರೋ ಎಂದು ಸದ್ದು ಕೇಳಿಸತೊಡಗಿತು. ಶೀತದ ಗಾಳಿಯೆಂದು

ರಾಮಣ್ಣ ಕಿಟಕಿಗೆ ಮುದುರಿದ್ದ ಪರದೆ ಇಳಿಬಿಟ್ಟರು ಗಾಳಿ ಬರುವುದು ನಿಂತಿತು, ಒಳಗೆ ಹಾಕಿದ್ದ ಬಸ್ಸಿನ ದೀಪ ಹೆಚ್ಚು ಹೆಚ್ಚು ಪ್ರಕಾಶಮಾನವಾಗತೊಡಗಿತು.

ಬಸ್ಸು ನಾಗೇನಹಳ್ಳಿಯನ್ನು ತಲುಪಿದಾಗ ರಾತ್ರಿ ಏಳೂವರೆಗಂಟೆ. ಬಸ್ ಸ್ಟ್ಯಾಂಡಿಗೆ ರಾಮಣ್ಣನ ತಂದೆ ಬಂದಿದ್ದರು, ತಮ್ಮಂದಿರೂ ಇದ್ದರು. ರಾಮಣ್ಣನೇ ಬಸ್ಸಿನಿಂದ ಸಾಮಾನನ್ನೆಲ್ಲ ಇಳಿಸಿಕೊಂಡರು. ಬಂದಿದ್ದ ಹುಡುಗರೆಲ್ಲ ಕೈಲಿ ಒಂದೊಂದು ಸಾಮಾನು ಹಿಡಿದು ಮನೆಯೆಡೆಗೆ ಹೊರಟರು.

ರಾಮಣ್ಣನ ಮನೆ ತಮ್ಮ ಮನೆಗಿಂತ ದೊಡ್ಡದು. ವಿದ್ಯುಚ್ಛಕ್ತಿಯ ಬೆಳಕು ಎಲ್ಲಾ ಕಡೆ ಹರಡಿತ್ತು, ಎಲ್ಲ ಹೊಸತು : ಜಾಗ, ಹುಡುಗರು ದೊಡ್ಡವರು. ಮನೆಗೆ ಬಂದು ಸುಧಾರಿಸಿಕೊಳ್ಳುವಾಗ ಮಾವ ಅತ್ತೆ ಅವರ ಮನೆಯ ದೊಡ್ಡವರ ಜೊತೆಯಲ್ಲಿ ಮಾತನಾಡುತ್ತ ಕುಳಿತರು. ''ಅಂತೂ ಬಂದಿರಲ್ಲ ದೊಡ್ಡ ಮನಸ್ಸು ಮಾಡಿ. ರಾಮಣ್ಣ ಎಲ್ಲ ಹೇಳಿರ್‍ಬೇಕು. ಅನಿರೀಕ್ಷಿತವಾಗಿ ಎಲ್ಲ ಆಗಬೇಕಾಯ್ತು.'' ರಾಮಣ್ಣನವರ ತಂದೆ ಮಾವನಿಗೆ ಹೇಳಿದರು. ''ತೊಂದರೆ ಏನು ? ಆ ಪೋಸ್ಟಾಫೀಸೊಂದಿದೆಯಲ್ಲ , ಹೊಸದಾಗಿ ನಮ್ಮೂರಿಗೆ ಬಂದಿರೋದು, ನಾನೇ ನೋಡ್ಕೋತಿದ್ದೀನಿ. ಅದರ ವ್ಯವಸ್ಥೆದಷ್ಟೇ ಸ್ವಲ್ಪ ಕಷ್ಟ ಆದರೆ ಇದೂ ಮುಖ್ಯವಲ್ಲವೇ, ಶುಭಸ್ಯ ಶೀಘ್ರಂ. ಒಳ್ಳೆ ಕೆಲಸ ಮಾಡಿದಿರಿ.''

ಸುಮ್ಮನೆ ಕೂತಿದ್ದ ಸೀನುವನ್ನು ರಾಮಣ್ಣ ಕಂಡು ''ಏನಯ್ಯಾ ಬಸ್ಸಲ್ಲಿ ಅಷ್ಟೊಂದು ಮಾತಾಡ್ದೆ, ಇಲ್ಲಿ ಮೂಕನಾಗಿಬಿಟ್ಟೆ'' ಎಂದಾಗ ಸೀನು ನಾಚಿ ನಕ್ಕ. ರಾಮಣ್ಣ ತಮ್ಮ ತಮ್ಮಂದಿರನ್ನೂ ತಂಗಿಯರನ್ನೂ ಪರಿಚಯ ಮಾಡಿಸಿದರು. ''ಇನ್ನು ಇಲ್ಲಿರೋವರೆಗೂ ಇವರ ಜೊತೇಲಿ ಕುಸ್ತಿ ಮಾಡ್ತಿರು'' ಎಂದರು. ಆ ಹುಡುಗರೂ ಅಪರಿಚಿತನನ್ನು ಮಾತಿಲ್ಲದೆ ನೋಡಿದರು.

ಎರಡು ದಿನಗಳ ಕಾಲ ಮದುವೆಯ ಗದ್ದಲ ಮುಗಿದ ಮೇಲೆ ಮನೆ ಬಿಕೋ ಎನ್ನತೊಡಗಿತು. ''ಅಪರೂಪಕ್ಕೆ ಬಂದಿದ್ದೀರಿ ಇನ್ನೊಂದು ನಾಲ್ಕು ದಿವಸ ಇರಿ'' ಎಂದು ಬಲವಂತ ಮಾಡಿದರು. ''ಅಯ್ಯೋ ಅಷ್ಟು ದಿನ ಇರೋಕೆ ಸಾಧ್ಯವೇ ? ಊರಲ್ಲಿ ಏನಾಗಿದೆಯೋ ಏನೋ. ಆ ಪೋಸ್ಟಾಫೀಸಿನ ಜವಾಬ್ದಾರಿಯಿಲ್ಲದಿದ್ದರೆ ಎಷ್ಟು ದಿನ ಬೇಕಾದರೂ ಇರಬಹುದಾಗಿತ್ತು'' ಎಂದು ಮಾವ ಹೇಳಿದರು. ಕೊನೆಗೆ ಕೊಸರಾಡಿದ ಮೇಲೆ ಮಾರನೆಯ ದಿನವಿದ್ದು ಅದರ ಮಾರನೆಯ ದಿನ ಹೊರಡುವುದೆಂದು ತೀರ್ಮಾನಿಸಿದರು.

ಗದ್ದಲ ತೀರ ಹೆಚ್ಚು ಕಾಲ ಸರಿಹೋಗದಿದ್ದರೂ ಸೀನುವಿಗೆ ಈಗ ಅಲ್ಲಿನ ಹುಡುಗರೆಲ್ಲ ಗೆಳೆಯರಾಗಿದ್ದರು. ತಮ್ಮೂರಿನ ವಿಷಯವನ್ನೆಲ್ಲ ಅವರಿಗೆ ಹೇಳಿದ್ದ, ಅವರ ಊರಿನ ಮೇಷ್ಟರುಗಳ ವಿಚಾರ ಕೇಳಿದ್ದ. ಯಾರು ಹೆಚ್ಚು ಹೊಡೀತಾರೆಂದು ತಿಳಿದಿದ್ದ ತಮ್ಮೂರಿನ ಕೆಂಚಪ್ಪ ಮೇಷ್ಟರು ಕೃಷ್ಣನ ಪಾರ್ಟು ಹಾಕಿದ್ದನ್ನು ಬಾಯ್ತುಂಬ ಹೊಗಳಿದ ; ಹೀಗಾಗಿ ಅವರಲ್ಲಿ ಮೈತ್ರಿ ಬೆಳೆದಿತ್ತು, ಜೊತೆಗೆ ಅಲ್ಲಿನ ಇಬ್ಬರು ಹುಡುಗರು, ಹುಡುಗಿ

ನಾಗವೇಣಿಯೊಂದಿಗೆ ಈ ಹೊತ್ತಿಗೆ ಹತ್ತಾರು ಬಾರಿ ಚೌಕಾಭಾರ ಆಡಿದ್ದ, ಒಂದೆರಡು ಬಾರಿ ಜಗಳವೂ ಆಡಿದ್ದ. ಹೀಗಾಗಿ ಇದನ್ನೆಲ್ಲ ಬಿಟ್ಟು ಹೋಗಬೇಕೆನ್ನಿಸಿದಾಗ ಅವನಿಗೆ ಸ್ವಲ್ಪ ಮಂಕೆನಿಸಿತ್ತು.

ಹೊರಡುವ ಹಿಂದಿನ ದಿನ ಬೆಳಿಗ್ಗೆ ಅವರೆಲ್ಲ, ಎಂದರೆ ಇಬ್ಬರು ಹುಡುಗರು, ಪಕ್ಕದ ಮನೆಯ ಬ್ರಾಹ್ಮಣ ಹುಡುಗರಿಬ್ಬರೂ ತಾನು ಆಟವಾಡುತ್ತಿದ್ದರು. ಡಿಂಗ್ ಡಾಂಗ್ ಆಟ, ಒಬ್ಬ ಕಣ್ಣುಮುಚ್ಚಿಕೊಂಡು ಗೋಡೆಗೆ ಮುಖಮಾಡಿ ನಿಂತು ನೂರರವರೆಗೆ ಎಣಿಸುವುದು, ಮಿಕ್ಕವರು ಆಗ ಎಲ್ಲಾದರೂ ಬಚ್ಚಿಟ್ಟುಕೊಳ್ಳುವುದು, ಅವರನ್ನು ಹುಡುಕಿ ತರುವುದು. ಒಮ್ಮೆ ಸೀನು ಸಿಕ್ಕಿ ಹಾಕಿಕೊಂಡು ಬಿಟ್ಟ. ಈಗ ನೂರರವರೆಗೆ ಎಣಿಸುವುದು ಅವನ ಸರದಿಯಾಯಿತು.

ಸರಿ ಗೋಡೆಗೆ ಮುಖ ಮಾಡಿ ಕಣ್ಮುಚ್ಚಿಕೊಂಡು ಸರಸರನೆ ಒಂದರಿಂದ ನೂರರವರೆಗೆ ಎಣಿಸಿ ತಿರುಗಿ ನೋಡಿದ. ಹುಡುಗರೆಲ್ಲ ಬಚ್ಚಿಟ್ಟುಕೊಳ್ಳಲು ಹೋಗಿದ್ದರು. ಅವರನ್ನು ಹುಡುಕುತ್ತ ಇವನೂ ಹೊರಟ. ಮನೆಯ ಹೊರಗಡೆಯೆಲ್ಲ ಹುಡುಕಿದ ; ಯಾರೂ ಸಿಕ್ಕಲಿಲ್ಲ, ಒಳಗಡೆ ಬಚ್ಚಿಟ್ಟುಕೊಂಡಿರಬಹುದೆಂದು ಓಡಿ ಬಂದ. ಎಲ್ಲೂ ಕಾಣಲಿಲ್ಲ, ನಡುಮನೆಗೆ ಬಂದ, ಅಲ್ಲಿ ಯಾರೂ ಇಲ್ಲದಿದ್ದರೂ ಪಕ್ಕದ ಕೋಣೆಯಿಂದ ಏನೋ ಸದ್ದಾಯಿತು. ಅವರೆಲ್ಲ ಇಲ್ಲಿಯೇ ಇರಬಹುದೆಂದು ಕೊಂಡು ಸದ್ದಾಗದಂತೆ ನಿಧಾನವಾಗಿ ಮೆಟ್ಟಂಗಾಲಿಡುತ್ತ ರೂಮಿನ ಬಳಿ ಬಂದ. ಬಾಗಿಲಿಗೆ ಕಿವಿಯೊಡ್ಡಿ ಕೇಳಿದ. ಮತ್ತೆ ಸದ್ದಾಗುತ್ತಿತ್ತು, ಇಲ್ಲಿಯೇ ಇದ್ದಾರೆಂದು ಅವನಿಗೆ ಖಾತರಿಯಾಯಿತು. ಸರಕ್ಕನೆ ಬಾಗಿಲು ನೂಕಿದ, ಒಳಗಿನ ದೃಶ್ಯವನ್ನು ಕಂಡು ಅಪ್ರತಿಭನಾದ !

ನಾಗವೇಣಿ ಆಗ ತಾನೇ ಸ್ನಾನ ಮುಗಿಸಿಕೊಂಡು ಅಲ್ಲಿಗೆ ಬಂದಿದ್ದಳು. ಬಚ್ಚಲ ಮನೆಯಿಂದ ಬರುವಾಗ ಸುಮ್ಮನೆ ತಗುಲಿಸಿಕೊಂಡ ಲಂಗದೊಂದಿಗೆ ಮೇಲೆ ಗಳುವಿನಲ್ಲಿ ಒಣಗಿಹಾಕಿದ ಲಂಗವನ್ನು ಎಟುಕಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ಹತ್ತಿರವೆಲ್ಲೂ ಕೋಲು ಇಲ್ಲದ್ದರಿಂದ ತಾನೇ ಮೇಲೆ ಎಗರಿದ್ದಳು. ಹಾಗೆ ಹಾರಿದಾಗ ಸುಮ್ಮನೆ ಅವಳು ಸಿಕ್ಕಿಸಿಕೊಂಡ ಹಳೆಯ ಲಂಗ ಕೆಳಕ್ಕೆ ಬಿದ್ದು ಪೂರ್ತಿ ಬತ್ತಲಾಗಿದ್ದಳು. ಹಾಗೆ ಎಗರುವುದಕ್ಕೂ ಸೀನು ಕೋಣೆಯ ಬಾಗಿಲನ್ನು ತೆಗೆಯುವುದಕ್ಕೂ ಸರಿಹೋಯಿತು.

ಇದ್ದಕ್ಕಿದ್ದ ಹಾಗೆ ಇವನನ್ನು ಕಂಡ ನಾಗವೇಣಿಗೆ ತನ್ನ ಅವಸ್ಥೆಯಲ್ಲಿ ತುಂಬ ನಾಚಿಕೆಯಾಯಿತು. ಕೆಳಗೆ ಬಿದ್ದಿದ್ದ ಹಳೆಯ ಲಂಗವನ್ನೇ ಸರಸರ ಮೈಮೇಲೆ ಎಳೆದು ಕೊಂಡಳು. ಸೀನು ಪೂರ್ತಿ ಬತ್ತಲಾಗಿದ್ದ ಹುಡುಗಿಯನ್ನು ಕಂಡದ್ದು ಅದೇ ಮೊದಲು, ನಾಗವೇಣಿಯನ್ನು ಹಾಗೆ ಕಂಡಾಗ ತಟಕ್ಕನೆ ಅವನಿಗೆ ಶ್ರೀಕಂಠಯ್ಯ ಮಾವನ ಮಗಳು ಪದ್ಮಳ ನೆನಪಾಯಿತು. ಜೊತೆಗೆ ಅವನ ಮನಸ್ಸನ್ನು ನಾಚಿಕೆ ಭಯಗಳು ಆವರಿಸಿದವು. ಸರಕ್ಕನೆ ಬಾಗಿಲು ಹಾಕಿಕೊಂಡು ಹೊರಬಂದ. ನಾಗವೇಣಿ ಚಿತ್ರ ಮಾತ್ರ ಕಣ್ಣಲ್ಲಿ ಇಳಿದುಹೋಯಿತು !

೧೩

ಲಕ್ಷ್ಮೀಪತಿಶೆಟ್ಟರು ಅರಳೀಮರಕ್ಕೂ ಬೇವಿನಮರಕ್ಕೂ ಅವತ್ತೊಂದು ದಿನ ಮದುವೆ ಮಾಡಿಸಿದರು. ಹನುಮಂತರಾಯನ ಗುಡಿಯ ಹಿಂದೆ ದೇವಯ್ಯನ ಪಾಳ್ಯಕ್ಕೆ ಹೋಗುವ ದಾರಿಯಲ್ಲಿಯೇ ಅರಳಿಕಟ್ಟೆ ಇರುವುದು. ಇಬ್ಬರು ತಬ್ಬಿಕೊಳ್ಳಬೇಕಾದಷ್ಟು ದೊಡ್ಡದಾದ ಕಾಂಡ ಅದರದ್ದು ಅಷ್ಟು ಸೊಂಪಾದ ಮರ. ಎಲ್ಲ ಕಡೆಗೂ ಕೊಂಬೆಗಳನ್ನು ಚಾಚಿತ್ತು. ಇಡೀ ಮರ ಪೂರ್ತಿ ಚಿಗುರಿ ಬಿಟ್ಟರೆ ಕೆಂಪಾಗಿ ಹೊಳೆಯುತ್ತಿತ್ತು. ಬಲಿತ ಎಲೆಗಳಿಂದ ಕೂಡಿದ ಮರ ಯಾವಾಗಲೂ ಸರ ಸರ ಶಬ್ದ ಮಾಡುತ್ತಲೇ ಇತ್ತು. ಅದರ ಪಕ್ಕದಲ್ಲಿಯೇ, ಅದೇ ಕಟ್ಟೆಯಲ್ಲಿಯೇ ಒಂದು ಬೇವಿನ ಮರ ಬೇರೆ. ಅದು ಸುಮಾರು ಎತ್ತರ ಬೆಳೆದಿತ್ತು. ಲಕ್ಷ್ಮೀಪತಿ ಶೆಟ್ಟರು ಇವೆರಡಕ್ಕೇ ಮದುವೆ ಮಾಡಿಸುತ್ತಿದ್ದುದು.

ಸೀನುವಿಗೆ ಈ ವಿಚಾರ ಕೇಳಿದಾಗ ಹೇಳಿದವರೆಲ್ಲೋ ತಮಾಷೆ ಮಾಡು ತ್ತಿದ್ದಾರೆನ್ನಿಸಿತು. ಮರಕ್ಕೆಲ್ಲಾದರೂ ಮದುವೆ ಮಾಡುತ್ತಾರೆಯೇ ? ಅವಕ್ಕೇನು ಮಾತನಾಡಲು ಬರುತ್ತದೆಯೇ ? ಎಲ್ಲ ಬುರುಡೆ ಎನ್ನಿಸಿತ್ತು. ಬೆಂಗಳೂರಿನಲ್ಲಿ ಅವನೆಂದೂ ಇಂತಹ ಮದುವೆಯನ್ನು ನೋಡಿರಲೇ ಇಲ್ಲ. ಆದರೆ ಈ ಸುದ್ದಿಯನ್ನು ಹೇಳಿದ ಹುಡುಗ "ಬರೋ ಭಾನುವಾರ ನೀನೇ ನೋಡು ಬೇಕಾದರೆ. ಮದುವೆ ಮಾಡ್ತಾರೋ ಇಲ್ಲವೋ" ಎಂದಿದ್ದ

"ಮರಗಳಿಗೆ ಮದುವೆ ಮಾಡಿದರೆ ಏನಾಗುತ್ತೋ ?" ಎಂದಿದ್ದ ಸೀನು.

"ಎಲ್ಲ ಮರಕ್ಕೂ ಮದುವೆ ಮಾಡಲ್ಲವೋ, ಬರೀ ಅರಳೀಮರಕ್ಕೂ ಬೇವಿನ ಮರಕ್ಕೂ ಮಾತ್ರ ಮದುವೆ ಮಾಡುವುದು."

"ಅದೇ ಕಾಗೇಗೂ ನರೀಗೂ ಮದುವೆ ಅಂತಾರಲ್ಲ ಹಾಗೇನೇನಾ ?" ಎಂದಿದ್ದ.

ಮಳೆ-ಬಿಸಿಲು ಎರಡು ಇದ್ದಾಗ ಕಾಗೇಗೂ-ನರೀಗೂ ಮದುವೆ ಎಂದು ಎಲ್ಲರೂ ಹೇಳುತ್ತಿದ್ದುದನ್ನು ಅವನು ಕೇಳಿದ್ದ. ಆದರೆ ಆಗ ಯಾರೂ ಅವಕ್ಕೆ ಮದುವೆ ಮಾಡಿಸಿರಲಿಲ್ಲ. ಬರಬರುತ್ತ ಈ ಮಾತು ಸುಳ್ಳು ಎಂಬುದನ್ನು ಕಂಡುಕೊಂಡಿದ್ದ. ಹಾಗೆಯೇ ಅರಳಿಮರ - ಬೇವಿನ ಮರಗಳ ಮದುವೆಯೂ ಇರಬೇಕೆಂದು ಭಾವಿಸಿದ್ದ. ಆದರೆ ಅರಳೀಕಟ್ಟೆಯ ಮೇಲೆ ಬೇವಿನ ಮರವೂ ಇರುತ್ತಿದ್ದುದನ್ನು ಅವನು ಅನೇಕ ಸಾರಿ ಕಂಡಿದ್ದ; ಬೆಂಗಳೂರಿನಲ್ಲಿಯೂ ಹೀಗಿದ್ದವು. ಅವೆರಡಕ್ಕೆ ಏನೋ ಸಂಬಂಧವಿರಬೇಕೆಂದು ಮಾತ್ರ ಅವನಿಗೀಗ ಅನ್ನಿಸತೊಡಗಿತು.

ಆದರೆ ಭಾನುವಾರ ಅರಳೀಕಟ್ಟೆಯ ಮುಂದೆ ಮೇಳದ ಶಬ್ದ ಕೇಳಿಸಿದಾಗ ತಾನು ಕೇಳಿದ್ದ ಸುದ್ದಿ ನಿಜವೆನ್ನಿಸಿತ್ತು. ಆತುರದಿಂದ ಅಲ್ಲಿ ಹೋದ. ಲಕ್ಷ್ಮೀಪತಿ ಶೆಟ್ಟರೂ ವರಲಕ್ಷ್ಮಮ್ಮನೂ ಹಸೆಯ ಮೇಲೆ ಕೂತಿದ್ದರು. ಕಟ್ಟೆಯ ಮೇಲೆಯೇ! ಅವರಿಬ್ಬರೇ ಅಂತೆ ಧಾರೆ ಎರೆದು ಕೊಡುವುದು. ಜೋಯಿಸರು ಮದುವೆಯಲ್ಲಿ ಹೇಳಿದಂತಹ ಮಂತ್ರಗಳನ್ನೇ ಉಚ್ಚರಿಸುತ್ತಿದ್ದರು. ಸೀನುವಿಗೆ ಮೋಜು ಎನ್ನಿಸಿತು. ಅವೆರಡಕ್ಕೆ ಅಂತು ಮದುವೆಯಾಯಿತು.

ಕುತೂಹಲದಿಂದ ಈ ವಿಚಾರವನ್ನು ಮಾವನ ಹತ್ತಿರ ಕೇಳಿದ. ಅವರು ಅದರ ಮಹತ್ವವನ್ನು ವಿವರಿಸಿದ್ದರು.

ಅರಳೀಮರದಲ್ಲಿ ತ್ರಿಮೂರ್ತಿಗಳು, ಅಂದರೆ ಬ್ರಹ್ಮ ವಿಷ್ಣು ಮಹೇಶ್ವರರೆಲ್ಲ ಇರುತ್ತಾರೆ. ಶಿವನಿಗೆ ಆಕಾರವೇ ಇಲ್ಲ, ಅವನನ್ನು ಪೂಜೆಮಾಡುವುದು ಆಕಾರವಿಲ್ಲದ ಲಿಂಗದ ರೂಪದಲ್ಲಿ. ಬೇವಿನ ಮರವು ದುರ್ಗೆ ಅಂದರೆ ಪಾರ್ವತಿಯ ಸಾಕಾರ. ಈಶ್ವರ ಹಾಗೂ ದುರ್ಗೆಯರ ಅನನ್ಯತೆಯನ್ನು ಅರಳೀಮರ ಮತ್ತು ಬೇವಿನ ಮರದ ಮದುವೆಯ ಮೂಲಕ ತೋರಿಸುತ್ತಾರೆ. ಬೇವಿನಮರಕ್ಕೆ ಮದುವೆಯಾಗದ ಒಂಟಿ ಅರಳೀಮರವನ್ನು ಪೂಜೆ ಮಾಡಬಾರದು. ಯಾಕೆಂದರೆ ಶಕ್ತಿ ಅಥವಾ ಪಾರ್ವತಿ ಅಥವಾ ದುರ್ಗೆಯಿಲ್ಲದೆ ಶಿವನಿರಲಾರ.

ಕೆಲವರು ಕುರಿ-ಮೇಕೆಗಳಿಗೆ ಹಾಕಲೆಂದು ಅರಳಿಯ ಎಲೆಗಳನ್ನು ಕೀಳುತ್ತಿದ್ದರು ; ಮಾವ ಇದನ್ನು ನೋಡಿದರೆ ಅದನ್ನು ನಿಲ್ಲಿಸುತ್ತಿದ್ದರು. ಕತ್ತರಿಸುತ್ತಿದ್ದವರನ್ನು ಬೈಯುತ್ತಿದ್ದರು. ಒಮ್ಮೆ ಒಬ್ಬ ಕುರಿಕಾಯುವವನು ಮರದ ಮೇಲೆ ಹತ್ತಿ ಕುಡುಗೋಲಿನಿಂದ ಮರದ ಚಿಕ್ಕ ಚಿಕ್ಕ ರೆಂಬೆಗಳನ್ನು, ಎಲೆಗಳಿಂದ ತುಂಬಿದವುಗಳನ್ನು ಕತ್ತರಿಸುತ್ತಿದ್ದ. ಈ ವಿಚಾರ ಮಾವನಿಗೆ ತಿಳಿಸಬೇಕೆಂದು ಸೀನುವಿಗೆ ಅನ್ನಿಸಿ ಮನೆಗೆ ಓಡಿದ.

ಮಾವ ಜೋರಾಗಿ ಅರಳಿಕಟ್ಟೆಯ ಮರದ ಹತ್ತಿರ ಬಂದರು. "ಯಾವ್ಹೋನಯ್ಯ ಅವನು, ಅರಳಿ ಮರ ಕಡೀತಾ ಇರೋನು ?"

"ಯಾಕೆ ಸ್ವಾಮಿ, ನಾನು ಕುರುಬರ ಬಸವ"

"ಲೋ ನಿಂಗೇನು ಬುದ್ದಿ ಇಲ್ಲವೇನೋ ಅರಳೀ ಮರ ಕಡೀತಿದ್ದೀಯಲ್ಲ ?"

"ಮರಾನೆಲ್ಲಿ ಕಡಿದೆ ಸ್ವಾಮಿ, ಒಂದಷ್ಟು ಸೊಪ್ಪು ತರಕಂತಾ ಇದ್ದೀನಿ ಕುರಿಗಳಿಗೆ, ಓಟೆ"

"ಒಂದು ಎಲೇನೂ ಕಡೀಬಾರದು ಗೊತ್ತಾ?" ಎಂದರು ಮಾವ ಜಬರಿನಿಂದ.

"ತಿರುಗ ಚಿಗುರ್ಕೋತದೆ ಬಿಡಿ ಸ್ವಾಮಿ"

"ಲೋ ಮುಟ್ಠಾಳ, ಅರಳೀ ಮರ ದೇವರು, ಕಡೀಬಾರದು ನಿನ್ನ ವಂಶ ನಿರ್ವಂಶವಾಗುತ್ತದೆ ಕೆಳಗಿಳಿ"

"ಇರಿ ಸ್ವಾಮಿ. ಎರಡೇ ಎರಡು ರೆಂಬೆ ಕಿತ್ತು ಇಳೀತೀನಿ."

"ಲೋ, ನಿನಗೆಷ್ಟೋ ಪೊಗರು. ಒಳ್ಳೇ ಮಾತಿನಲ್ಲಿ ಹೇಳಿದ್ರೆ ಇನ್ನೂ ಕೀಳ್ತೀನಿ ಅಂತಿದ್ದೀಯಲ್ಲ, ಇಳಿಯೋ ಬೋಳೀಮಗನೆ"

"ಏನ್ ಸ್ವಾಮಿ, ನಿಮ್ಮಪ್ಪಂದಾ ಮರ, ಒಂದೋಟು ಎಲೆ ತರ್ಕಂಡರೆ ನಿಮ್ದೇನು ಓಯ್ತು?"

"ಅಯೋಗ್ಯ ನನ್ನಮಗನೆ. ಅರಳೀಮರ ಇಡೀ ಊರಿಂದು, ಅದನ್ನು ನಿರ್ನಾಮ ಮಾಡಿದರೆ ಊರು ಹಾಳಾಗಿ ಹೋಗಿಬಿಡುತ್ತೆ."

"ಉಲ್ಲಾ ಆಗತ್ತೆ ಸುಮ್ಕಿರಿ ಸ್ವಾಮಿ"

"ಬೇಕೂಫ ನನ್ನ ಮಗನೆ, ಇಳೀತೀಯೋ ಇಲ್ಲವೋ ?"

"ಏ, ನಿಮ್ದೇನು ಸ್ವಾಮಿ ತಕರಾರು ? ನಾನೇನು ನಿಮ್ಮ ಒಲಕ್ಕೆ ಬಂದಿದ್ದೀನಾ ?" ಎಂದು ಅವನು ಇನ್ನೂ ಹಾಗೆಯೇ ರೆಂಬೆಗಳನ್ನು ಕತ್ತರಿಸಿದ.

ಮಾವನಿಗೆ ಪ್ರಾಯ ಶಕ್ತಿಯಿದ್ದಿದ್ದರೆ ಮರದ ಮೇಲೆಯೇ ಹತ್ತಿ ಅವನನ್ನು ದರದರ ಎಳೆದು ಬಿಡುತ್ತಿದ್ದರೇನೋ! ಆದರೂ ಅವರ ಕೋಪಕ್ಕೆ ಕಡಿಮೆಯಿರಲಿಲ್ಲ. ಅವನು ಕೆಳಗೆ ಕತ್ತರಿಸಿ ಎಸೆದಿದ್ದ ಅರಳಿಯ ರೆಂಬೆಗಳನ್ನೆಲ್ಲ ಒಟ್ಟುಗೂಡಿಸಿ ಪಕ್ಕದಲ್ಲಿದ್ದ ಬಾವಿ ಗೆಸೆದರು. ಇದನ್ನೆಲ್ಲ ನೋಡುತ್ತಿದ್ದ ಬಸವ ಮೇಲಿನಿಂದ ಕೆಳಗಿಳಿದು ಬಂದು ಕೋಪದಿಂದ.

"ಏ ಸ್ವಾಮಿ ಏನ್ಮಾಡ್ತಿದ್ದೀಯಾ ?" ಎಂದ.

"ಹೇಳಿದ್ರೆ ಗೊತ್ತಾಗೋಲ್ವೇನೋ ಸೂಳೇಮಗನೇ ?"

"ನಿಮ್ಮಪ್ಪನಾ ಆಸ್ತೀನಾ ಇದು ? ಬೇಕಾಯ್ತು ಕಿತ್ಕಂಡೆ. ನೀನ್ಯಾವೋನಯ್ಯ ಕೇಳಕ್ಕೆ ?" ಅವನೀಗ ಏಕವಚನ ಪ್ರಯೋಗಿಸಿದ.

"ನನ್ನೇ ನೀನ್ಯಾವೋನು ಅಂತೀಯೇನಲೇ ಕುರಬ ನನಮಗನೆ. ಅರಳೀಮರ ಕೀಳಬೇಡವೋ ಅಂದರೆ ಕೊಬ್ಬು ಮಾಡ್ತೀಯಾ ಭಡವಾ."

"ಏ ಆರುವಯ್ಯ ಏನೇನೋ ಅನ್ನಬ್ಯಾಡಾ, ನೆಟ್ಟಗಾಗಾಕಿಲ್ಲ"

"ಮುಚ್ಚಿಕೊಂಡು ಹೋಗಲೋ ಬೇವಾರ್ಸಿ ನನ್‌ಮಗನೆ, ಜೋರು ಮಾಡ್ತಾನೆ."

ಅಷ್ಟು ಹೊತ್ತಿಗೆ ಈ ರಾದ್ಧಾಂತ ಕೇಳಿ ಹನುಮಂತನ ಗುಡಿಯ ಪಕ್ಕದಲ್ಲಿನ ಭಾವಿಯಿಂದ ನೀರು ಸೇದಲು ಬಂದವರು, ಪಕ್ಕದ ಹೊಲದಲ್ಲಿ ಕೆಲಸ ಮಾಡುತ್ತಿದ್ದವರು, ದಾರಿಹೋಕರು, ಹತ್ತಿರದಲ್ಲಿದ್ದ ಮನೆಯವರು - ಎಲ್ಲ ಬಂದರು. ಗುಂಪು ದೊಡ್ಡದಾಯಿತು. ಶ್ರೀನಿವಾಸ ಜೋಯಿಸರೂ ತಂಬಿಗೆ ತಗೊಂಡು ಹೋಗಿ ವಾಪಸು ಬರುತ್ತಿದ್ದವರು ಅಲ್ಲಿಗೆ ಬಂದರು. ಸೀನುವಿಗೆ ತಾನು ಯಾಕಾದರೂ ಈ ವಿಷಯವನ್ನು ಮಾವನಿಗೆ ಹೇಳಿದೆನೋ ಎಂದು ಅನ್ನಿಸಿತು. ಈ ಜಗಳ ಏನೇನಾಗುವುದೋ ಎಂಬ ಹೆದರಿಕೆ ಹುಟ್ಟಿತು. ಬಿಟ್ಟಗಣ್ಣಿನಿಂದ ಅವರನ್ನು ನೋಡುತ್ತ ನಿಂತ.

ಜೋಯಿಸರು ಬಂದು ಮಾವನ ಬಳಿ "ಏನು ವಿಚಾರ ಕಾಶೀಪತಯ್ಯ?" ಎಂದರು.

"ನೋಡಿ ಸ್ವಾಮಿ, ಅರಳೀಮರ ಕಡೀಬೇಡವೋ ಅಂದರೆ ನಿಮ್ಮಪ್ಪಂದಾ ಮರ ಅಂತ ಜೋರು ಮಾಡ್ತಾನೆ."

"ಅಲ್ಲವೋ ಕುರುಬ ಸೂಳೇಮಗನೆ, ಹೇಳೋದು ಗೊತ್ತಾಗಲ್ಲವೇನೋ ?"

"ಕಿತ್ತರೆ ಏನಾಯ್ತದೆ ಸ್ವಾಮಿ ?"

"ತಿರುಗಾ ಅದೆ ಮಾತಾಡ್ತೀಯೇನೊ ಮಾದರ್‌ಚೋದ್, ಕುಡುಗೋಲು ತಗೊಂಡು ಹೊರಡೋ ಇನ್ನು" ಎಂದರು ಜೋಯಿಸರು.

"ಏನ್ ಸ್ವಾಮಿ, ನೀವೂ ಅಂಗೇನೇ..."

"ಒದ್ದು ಬಿಡ್ತೀನಿ ನೋಡು. ಯಾಕೊ ಅರಳೀಮರ ಬೆಳೆಸೋದು, ಶೆಟ್ಟರು ಲಗ್ನ ಮಾಡಿಸಿದ್ದು? ನೀನು ಕಡೀಲಿ ಅಂತಾನಾ ?"

"ನಾಲ್ಕು ಎಲೆ ಕಿತ್ತರೆ ಏನಾಯ್ತದೆ ಸ್ವಾಮಿ ?"

"ಹಲ್ಕ ನನ್ನ ಮಗನೆ ತಿರುಗ ಅಂಗೇ ಹೇಳ್ತೀಯೇನಲೇ. ಪಂಚಾಯ್ತಿ ಸೇರಿಸಿ ದಂಡ ಹಾಕಿಸ್ತೀನಿ, ಸೂಳೇಮಗನೆ."

ಪಂಚಾಯ್ತಿ ವಿಚಾರ ಬಂದಾಗ, ಸುತ್ತಲಿದ್ದ ಗುಂಪು ಕಂಡಾಗ ಬಸವನಿಗೆ ಸ್ವಲ್ಪ ಅಳುಕಿತು, ಅವನು ಕುಡುಗೋಲನ್ನೆತ್ತಿಕೊಂಡ.

"ಸ್ವಾಮಿಯೋರ ಕಾಲಿಗೆ ಬಿದ್ದು ತಪ್ಪಾಯ್ತು ಅನ್ನು"

"ನಾನೇನು ಮಾಡಿದೆ, ಸ್ವಾಮಿ ?"

"ಹೇಳಿದಷ್ಟು ಕೇಳೋ, ಬೇವಾರ್ಸಿ ಇಲ್ಲದಿದ್ದರೆ ಒದೆತ ಬಿದ್ದಾವು."

ಬಸವ ಕಾಲಿಗೆ ಬಿದ್ದ ಹಾಗೆ ಬಗ್ಗಿ "ತಪ್ಪಾತು ಸ್ವಾಮಿ" ಎಂದು ಹೊರಟ ತಲೆ ಕೆಳಗೆ ಹಾಕಿಕೊಂಡು.

"ಈ ನನ್ನ ಮಕ್ಕಳಿಗೆ ತಿಳಕೊಳ್ಳೋ ಯೋಗ್ಯತೆ ಇರಲ್ಲ, ಹೇಳಿದರೆ ಅರ್ಥ ಮಾಡಿಕೊಳ್ಳೋ ಚೈತನ್ಯವೂ ಇಲ್ಲ, ತಲೆಯೆಲ್ಲ ಮಾತಾಡ್ತಾರೆ" ಎಂದು ಗೊಣಗಿದರು ಜೋಯಿಸರು.

ಮಾವ-ಜೋಯಿಸರು ಹೊರಟ ಮೇಲೆ ಗುಂಪು ಕರಗಿತು. ಮಾವ ಇನ್ನೂ ಗುಮ್ ಅಂತಲೇ ಇದ್ದರು. ಅವರಿಗೆ ಅರಳೀಮರ ಕಡಿದಿದ್ದ ಅಪರಾಧದ ಜೊತೆಗೆ ತನ್ನನ್ನು ಏಕವಚನದಲ್ಲಿ ಕರೆದಿದ್ದ ಬಸವನ ಬಗ್ಗೆ ರೋಷ ಬಂದಿತ್ತು. ಅವತ್ತು ಸಾಯಂಕಾಲ ಮೂಡಲಗಿರಿಗೌಡರಿಗೆ ಈ ವಿಚಾರ ತಿಳಿಸಿದಾಗ, ಪಂಚಾಯ್ತಿ ಹಾಲ್‌ನ ಜಗುಲಿ ಮೇಲೆ ಕೂತಿದ್ದ ಗೌಡರು ಕುರುಬ ಬಸವನಿಗೆ ಹೇಳಿ ಕಳಿಸಿದರು, ಅವನು ಬಂದಾಗ

"ಏನೋ ಹಲ್ಕ ಬೋಳೀಮಗನೇ, ಬೆಳಿಗ್ಗೆ ಏನ್ಮಾಡ್ದೆ?" ಅವನು ಸುಮ್ಮನೆ ನಿಂತ.

"ಬೊಗಳೋ ?" ತಿರುಗ ಕಿರುಚಿದರು. ಬಸವ ತಲೆ ಮೇಲಕ್ಕೆತ್ತಿದ್ದ, ಪಕ್ಕದಲ್ಲಿದ್ದ ಮಾವನ ಕಡೆ ನೋಡಿದ.

"ಅರಳೀಮರ ಕಡಿಯೋದೂ ಅಲ್ದೆ ಬ್ಯಾಡಾ ಅಂದ ಅಯ್ನೋರನ್ನ ಬೈತೀಯಾ ?" ಮತ್ತೆ ಬಸವ ಮೌನ.

"ಕೊಬ್ಬುಸೂಳೇಮಗಂದು" ಎಂದು ರಪ್ ಎಂದು ಅವನ ಕೆನ್ನೆಗೊಂದು ಬಾರಿಸಿದರು.

''ಬೆಳಿಗ್ಗೆನೇ ತಪ್ಪಾತು ಅಂದ್ನಲ್ಲ ಗೌಡ್ರೆ'' ಎಂದ ಈಗ ಮೆದುವಾಗಿ.

''ತಪ್ಪಾತು ಅಂದುಬಿಟ್ರೆ ಮರ್ರೋಯ್ತದೋ ? ಇಂಗೆ ಎಲ್ಲು ಲಾತಾ ಬಿದ್ದರೆ ಗ್ನಪ್ತಿ ಇಟ್ಕಂಡಿರ್ತೀಯಾ. ಇನ್ನೊಂದು ದಪ ಇಂಗ್ಮಾಡಿದ್ರೆ ಕಳ್ಳು ಕಿತ್ತಾಕ್ತೀನಿ'' ಎಂದು ಕಿರುಚಿದರು. ಬಸವ ಮಾತಿಲ್ಲದೆ ಹೊರಟು ಬಂದ.

ಇದಾದ ಕೆಲವು ದಿನಗಳ ನಂತರ ಮಾವ ಸುಪ್ರಸನ್ನರಾಗಿದ್ದಾಗ ಸೀನು ಈ ವಿಚಾರವನ್ನೆತ್ತಿದ್ದ.

''ಅರಳಿ ಮರಾನಾ ಯಾಕೆ ಕಡೀಬಾರ್ದು ಮಾವ''

''ಅದು ಸನಾತನ ವೃಕ್ಷ ಕಣಯ್ಯ. ನಮ್ಮ ಧರ್ಮ ಇದ್ದ ಹಾಗೆ. ಅದನ ಕಡಿದರೆ ಧರ್ಮ ಹಾಳಾಗಿಬಿಡುತ್ತೆ. ಅದರಲ್ಲಿ ದೇವತೆಗಳು ವಾಸಮಾಡ್ತಾರೆ.''

ಅತ್ತೆ ಎಷ್ಟೋಸಲ ಅರಳೀಮರ ಕಂಡು ''ಮೂಲತೋ ಬ್ರಹ್ಮರೂಪಾಯ ಮಧ್ಯತೋ ವಿಷ್ಣೂರೂಪಿಣೇ ಅಗ್ರತಃ ಶಿವರೂಪಾಯ ವೃಕ್ಷರಾಜಾಯತೇ ನಮಃ'' ಎಂದು ನಮಸ್ಕರಿಸಿದ್ದನ್ನು ಸೀನು ಕಂಡಿದ್ದ. ಅದನ್ನೇ ಕೇಳಿದ್ದ.

''ಅತ್ತೆ ಅದಕ್ಕೆ ನಮಸ್ಕಾರ ಮಾಡೋದು ಅದಕ್ಕೇನಾ ?''

''ಹೌದಯ್ಯ, ಅರಳೀಮರದ ಬುಡದಲ್ಲಿ ಬ್ರಹ್ಮನಿರ್ತಾನೆ, ಮಧ್ಯದಲ್ಲಿ ವಿಷ್ಣು ವಿರ್ತಾನೆ, ತುದಿಯಲ್ಲಿ ಶಿವನಿರ್ತಾನೆ. ಅಂದರೆ ತ್ರಿಮೂರ್ತಿಗಳೆಲ್ಲ ಅಲ್ಲೇ ಇದ್ದಹಾಗಾಯ್ತು. ಬ್ರಹ್ಮ ಸೃಷ್ಟಿ ಮಾಡೋನು, ವಿಷ್ಣು ರಕ್ಷಣೆ ಮಾಡೋನು, ಶಿವ ಲಯ ಮಾಡೋನು. ಅದಕ್ಕೇ ಎಲ್ಲಿ ಕತ್ತರಿಸಿದರೂ, ಹೊಡೆದರೂ ದೇವರಿಗೆ ಹೊಡೆದ ಹಾಗೆ.''

''ಹಾಗಾದರೆ ಕಾಗೆ-ಗುಬ್ಬಚ್ಚಿಗಳೆಲ್ಲ ಅದರಲ್ಲಿ ಕೂತುಕೊಂಡು ಏನೇನೋ ಮಾಡ್ತಿರುತ್ತವೆಯಲ್ಲ ?'' ಎಂದು ಪ್ರಶ್ನಿಸಿದ್ದ ಸೀನು. ಅರಳೀ ಕಟ್ಟೆಯಲ್ಲೆಲ್ಲ ಹಕ್ಕಿಗಳ ಪಿಚಿಕೆಯಿಂದಾಗಿ ಬೆಳ್ಳಗಿನ ಚುಕ್ಕಿಗಳು ಹರಡಿಕೊಂಡಿದ್ದದ್ದು ಅವನಿಗೆ ಜ್ಞಾಪಕ ವಾಯಿತು. ದೊಡ್ಡದಾದ ಆ ಮರದಲ್ಲಿ ಸಾವಿರಾರು ಪಕ್ಷಿಗಳು ವಾಸಮಾಡುತ್ತಿದ್ದುದರ ಫಲವೇ ಅದು.

''ಪಕ್ಷಿಗಳಿಗೆ ಬುದ್ಧಿಯಿರಲ್ಲ, ಹಾಗೆ ಮಾಡ್ತವೆ. ಅಲ್ಲದೆ ಪಕ್ಷಿಗಳೆಲ್ಲ ಮರದಲ್ಲೇ ತಾನೇ ಗೂಡು ಕಟ್ಟಿಕೊಂಡಿರೋದು. ಅವಕ್ಕೆ ಯೋಚನೆ ಮಾಡೋ ಶಕ್ತಿಯಿರಲ್ಲ. ಬುದ್ಧಿ ಇರೋ ಮನುಷ್ಯನ್ನ ಅದಕ್ಕೇ ಉತ್ತಮ ಅಂತ ಹೇಳೋದು'' ಅಲ್ಲಿಗೆ ಪ್ರಶ್ನಾವಳಿಯನ್ನು ಸೀನು ನಿಲ್ಲಿಸಿದ್ದ.

ಈ ಅರಳೀಕಟ್ಟೆಗೆ ಸ್ವಲ್ಪ ಮುಂದೆ ಹೋದರೆ ಅಲ್ಲಿಯೇ ಹುಣಸೇ ಮರದ ಬುಡದಲ್ಲಿ ಒಂದು ಕರಿಯಮ್ಮನ ಗುಡಿಯಿರುವುದು. ಗುಡಿ ಅಂದರೆ ತಾನು ಬೆಂಗಳೂರಲ್ಲಿ ಕಂಡ ದೇವಸ್ಥಾನಗಳಂತಾಗಲೀ, ಅಥವಾ ಹೋಗಲಿ, ಹನುಮಂತರಾಯನ ಗುಡಿಯ ಹಾಗಾಗಲೀ ಅದಿರಲಿಲ್ಲ. ಮೂರು ಕಡೆಗೆ ಕಲ್ಲು ಚಪ್ಪಡಿಗಳನ್ನು ನೆಟ್ಟು ಮೇಲೆ ಒಂದೆರಡು ಚಪ್ಪಡಿಗಳನ್ನು ಹಾಸಿದ್ದ ಮಂಟಪ, ಅಷ್ಟೆ

ಕರಿಯಮ್ಮ ಊರದೇವತೆ. ಅದಕ್ಕೆ ವರ್ಷಕ್ಕೊಂದು ಸಲ ಜಾತ್ರೆ ನಡೀತಿತ್ತು. ಜಾತ್ರೆ ಅಂದರೆ ಹೊನ್ನಿನ ಕುಡುಕೆ ಜಾತ್ರೆ ಥರ ಜನ-ದನಗಳು ಸೇರ್‍ತಿರಲಿಲ್ಲ. ಊರಿನ ಜನ ಮಾತ್ರ ಬರ್‍ತಿದ್ದರು. ಅವರಲ್ಲೂ ಬ್ರಾಂಬರು, ಶೆಟ್ಟರು, ಲಿಂಗಾಯಿತರು ಬರುತ್ತಿರಲಿಲ್ಲ. ಒಕ್ಕಲಿಗರು, ನಾಯಕರು, ಹೊಲೇರು ಮಾದಿಗರದ್ದು ಅದರಲ್ಲಿ ಹೆಚ್ಚಿನ ಪಾತ್ರ. ಊರಿನ ರೈತರ ಹೆಣ್ಣು ಮಕ್ಕಳು ಹೊಸ ಶಾಲೆ ಉಟ್ಕೊಂಡು ಹೂವು ಮುಡಿಕೊಂಡು ತಂಬಟ್ಟಿನ ಆರತಿ ತರ್‍ತಿದ್ದರು ಕರಿಯಮ್ಮನಿಗೆ. ಆರತಿಯೆಂದರೆ ಬೆಳ್ಳನೆ ಬೆಳಗಿದ ಗಂಗಾಳದಲ್ಲಿ ತಂಬಿಟ್ಟು ಇಟ್ಟು ಅದಕ್ಕೆ ಹೂವು ಸಿಕ್ಕಿಸಿರುತ್ತಿದ್ದರು. ಹಾಗೆ ತರುವಾಗ ಅವರು ಗುಂಪು ಗುಂಪಾಗಿ ಹಾಡು ಹೇಳುತ್ತಿದ್ದರು. ಒಂದು ಗುಂಪಿನವರು ಒಂದು ಚರಣ ಹೇಳಿದರೆ, ಇನ್ನೊಂದು ಗುಂಪು ಅದನ್ನು ಮುಂದುವರೆಸುತ್ತಿತ್ತು.

ಉದ್ದಕ್ಕೂ ಹೀಗೆ ಹೇಳಿಕೊಂಡು ಅವರು ಕರಿಯಮ್ಮನ ಗುಡಿಯ ತಾವ ಬರುತ್ತಿದ್ದರು.

ಕರಿಯಮ್ಮನಿಗೆ ಕೋಣ ಬಿಟ್ಟಿರುತ್ತಿದ್ದರು. ಸೀನು ಅದು ಊರೆಲ್ಲ ತಿರುಗುತ್ತಿದ್ದುದನ್ನು ಕಂಡಿದ್ದ. ಮೊದಮೊದಲು ಕರಿಯಮ್ಮನ ಕೋಣ ಯಾವುದೆಂದು ಅವನಿಗೆ ಗುರುತು ಹಿಡಿಯಲಾಗುತ್ತಿರಲಿಲ್ಲ. ಆದರೆ ಬರಬರುತ್ತ ಅದರ ಪರಿಚಯ ಚೆನ್ನಾಗಿ ಆಗಿತ್ತು. ಕೊರಳಲ್ಲಿ ಒಂದು ಚಿಪ್ಪು ಕಟ್ಟಿದ್ದರು ಅದಕ್ಕೆ. ಅದು ಯಾರಿಗೂ ಸೇರಿದ್ದಲ್ಲವಂತೆ, ಕರಿಯಮ್ಮನಿಗೆ ಹರಕೆ ಬಿಟ್ಟಿದ್ದಂತೆ. ಅದಕ್ಕೇ ಅದನ್ನು ಯಾರ ಮನೆಯಲ್ಲೂ ಕಟ್ಟಿಹಾಕುತ್ತಿರಲಿಲ್ಲ. ಎಲ್ಲ ಕಡೆಯೂ ಚೆನ್ನಾಗಿ ಮೇದು ಕೊಬ್ಬಿತ್ತು. ಅವರಿವರ ಹೊಲಗಳಿಗೆ ನುಗ್ಗಿ ಪೈರು ಹಾಳುಮಾಡಿ ಹೊಡೆಸಿಕೊಂಡು ಬಂದದ್ದೂ ಉಂಟು. ಆ ಕೋಣಕ್ಕೆ ಕೋಪ ಬೇರೆ ಜಾಸ್ತಿ. ಸಿಕ್ಕಿದ್ದು ತಿಂದು, ಕಂಡಲ್ಲಿ ಮಲಗಿದ್ದ ಅದಕ್ಕೆ ಉದ್ದವಾದ ಎರಡು ಕೊಂಬುಗಳು. ಎಮ್ಮೆಗಳು ಸಾಮಾನ್ಯವಾಗಿ ತಿವಿಯಲು ಬರುತ್ತಿದ್ದುದನ್ನು ಸೀನು ಕಂಡಿರಲಿಲ್ಲ. ಆದರೆ ಈ ಕೋಣ ಅಟ್ಟಿಸಿಕೊಂಡು ಬರುತ್ತಿತ್ತು. ಅದಕ್ಕೆ ಕೋಪ ಹೆಚ್ಚಿಸುವ ಹಾಗೆ ಹುಡುಗರು ಅದರ ಮೇಲೆಲ್ಲ ಎಷ್ಟೋ ಸಲ ಕಲ್ಲೆಸೆಯುತ್ತಿದ್ದರು, ಹಿಂದಿನಿಂದ ಬಂದು ಕೋಲಿನಿಂದ ಹೊಡೆಯುತ್ತಿದ್ದರು, ಆಗ ಅದು ರಭಸದಿಂದ ಮುನ್ನುಗ್ಗುತ್ತಿತ್ತು. ಮುಂದಿದ್ದ ಹುಡುಗರು ಗದ್ದಲವೆಬ್ಬಿಸುತ್ತ ಭಯದಿಂದ ಓಡುತ್ತಿದ್ದರು. ಅದಕ್ಕೇ ಧಾಂಡಿಗರನ್ನು ಕಂಡಾಗ "ಒಳ್ಳೆ ಕರಿಯಮ್ಮನ ಕ್ವಾಣ ಇದ್ದಂಗಿದಾನೆ" ಎನ್ನುಂಬುದು ಸಾಮಾನ್ಯವಾಗಿತ್ತು.

ಕೋಣದ ಮುಸುಡಿ ಯಾವಾಗಲೂ ರೌದ್ರಾಕಾರವೆನಿಸುತ್ತಿತ್ತು; ಅಟ್ಟಿಸಿಕೊಂಡು ಬೇರೆ ಬರುತ್ತಿತ್ತು. ಆ ಕೋಣವನ್ನು ಕರಿಯಮ್ಮನ ಜಾತ್ರೆಯ ದಿನ ಕಡೆಯುತ್ತಾರೆಂದು ಅವನಿಗೆ ತಿಳಿದಾಗ ಮಾತ್ರ ಅದರ ಬಗ್ಗೆಯೂ ಒಂದು ಬಗೆಯ ಆತ್ಮೀಯತೆ ಸೀನುವಿನಲ್ಲಿ ಉದಿಸಿತ್ತು. ಪಾಪ, ಅದನ್ನು ಕತ್ತರಿಸುವಾಗ ನೋವಾಗುವುದಿಲ್ಲವೇ ? ಇದನ್ನ ತನ್ನ ಸ್ನೇಹಿತನೊಬ್ಬನಲ್ಲಿ ಕೇಳಿದ್ದ.

"ದೇವರ ಕ್ವಾಣ ಅಲ್ಲವಾ ಅದು ? ಅದಕ್ಕೇ ನೋವಾಗಾಕಿಲ್ಲ."

"ಮುಳ್ಳು ಚುಚ್ಚಿದರೇ ಎಷ್ಟೊಂದು ನೋವಾಗತ್ತೆ, ಕತ್ತನ್ನು ಕತ್ತರಿಸಿದರೆ ಯಾಕೆ ನೋವಾಗಲ್ಲ?" ಎಂದು ಸೀನು ಮುಗ್ಧನಾಗಿ ಪ್ರಶ್ನಿಸಿದ.

"ಕರಿಯಮ್ಮಾಂದ್ರೆ ಸಾಮಾನ್ಯಾನೇನಲೇ, ದೇವರಲ್ವಾ ? ಅದಕ್ಕೇ ತನಗೆ ಬಲಿಯಾಗೋ ಕ್ವಾಣಕ್ಕೆ ನೋವು ಮಾಡ್ತಾಳಾ ?" ಎಂದು ಆ ಮಿತ್ರ ವಿವರಿಸಿದ್ದರೂ ಸೀನುವಿಗದು ಸಮಾಧಾನ ತಂದಿರಲಿಲ್ಲ.

ಜಾತ್ರೆಯ ದಿನ ಜನರೆಲ್ಲ ಸಂಭ್ರಮದಿಂದಿರುತ್ತಿದ್ದರು, ಕರಿಯಮ್ಮನ ಆ ಗುಡಿಯ ಬಳಿ ಇನ್ನೆಂದೂ ಯಾರೂ ಉದ್ದೇಶಪೂರ್ವಕವಾಗಿ ಬರುತ್ತಿರಲಿಲ್ಲ. ಆ ಮಂಟಪದಲ್ಲಿ ಏನಿತ್ತೆಂದು ನೋಡಲು ಸೀನು ಒಂದೆರಡು ಬಾರಿ ಅದರಲ್ಲಿ ಇಣುಕಿ ಹಾಕಿದ್ದ. ಅದರಲ್ಲಿ ಒಂದು ಕಲ್ಲನ್ನು ನೆಟ್ಟಿದ್ದರು ಅಷ್ಟೇ. ಅದಕ್ಕೇ ಕುಂಕುಮ ಅರಿಸಿನ ಮೆತ್ತಿರುತ್ತಿದ್ದರು. ಎಣ್ಣೆ ಹಾಕಿ ಹಾಕಿ ಕಲ್ಲು ಕಪ್ಪಾಗಿತ್ತು. ಆ ಜಿಡ್ಡುಗಟ್ಟಿದ ಕಲ್ಲಿಗೆ ಕುಂಕುಮ, ಅರಿಸಿನಗಳು ಚೆನ್ನಾಗಿ ಮೆತ್ತಿಕೊಂಡಿರುತ್ತಿತ್ತು. ಈ ದೇವರಿಗೆ ಆಕಾರವೇ ಇಲ್ಲವೆನಿಸಿತ್ತು. ಯಾಕೆಂದರೆ ಈಶ್ವರನೆಂದರೆ ಸೀನುವಿನ ಮನಸ್ಸಿನಲ್ಲಿ ಕೊರಳಲ್ಲಿ ಹಾವಿದ್ದ, ತಲೆಯಿಂದ ನೀರು ಸುರಿಯುತ್ತಿದ್ದ ರೂಪದ ನೆನಪು ಬರುತ್ತಿತ್ತು. ಅಥವಾ ಈಶ್ವರನ ಗುಡಿಯಲ್ಲಿದ್ದ ಲಿಂಗದ ಹಾಗೆ. ವಿಷ್ಣುವೆಂದರೆ ನಾಲ್ಕು ಕೈಗಳಿದ್ದ, ಒಂದೊಂದು ಕೈಲೂ ಶಂಖ ಚಕ್ರಗದೆ ಪದ್ಮಗಳಿದ್ದ ಆಕಾರದ ನೆನಪು ಬರುತ್ತಿತ್ತು. ಆದರೆ ಕರಿಯಮ್ಮನೆಂದರೆ ಅಂತಹ ಯಾವ ಆಕೃತಿಯ ನೆನಪೂ ಆಗುತ್ತಿರಲಿಲ್ಲ. ಮಂಟಪದಲ್ಲಿದ್ದ ಆ ಗುಂಡುಕಲ್ಲಿಗೂ ಯಾವುದೇ ಆಕಾರವಿಲ್ಲವೆನ್ನಿಸಿತ್ತು.

ಅಂತಹ ಕಡೆಯಲ್ಲಿ ಜಾತ್ರೆಯ ದಿನ ಜನರ ದೊಡ್ಡ ಗುಂಪು ಸೇರುತ್ತಿತ್ತು. ಕೋಣವನ್ನು ಕಡಿಯುವರೆಂಬ ಸುದ್ದಿಯಿಂದಾಗಿ ಇವನಿಗೆ ತುಂಬ ಭಯ ಮನಸ್ಸನ್ನೆಲ್ಲ ಆವರಿಸಿತ್ತು. ಆದಾದರಿಂದಲೇ ಅಲ್ಲಿಗೆ ಹೋಗಲು ಅಳುಕು. ಜೊತೆಗೆ ಅಲ್ಲಿ ಮಾದಿಗರೂ ಬಂದಿರುತ್ತಾರಂತೆ. ಅವರನ್ನು ಮುಟ್ಟಿಸಿಕೊಂಡು ಬೇರೆ ಬಂದರೆ ತಿರುಗ ಮಾವನ ಪ್ರಶ್ನೆಗಳಿಗೆ ಉತ್ತರ ಕೊಡಬೇಕು. ಅಲ್ಲದೆ ಬೇರೆ ಬ್ರಾಹ್ಮಣರ ಹುಡುಗರಾರೂ ಅಲ್ಲಿ ಸುಳಿಯುತ್ತಿರಲಿಲ್ಲ. ಇವೆಲ್ಲಕ್ಕಿಂತ ಹೆಚ್ಚಾಗಿ ಆ ಗುಂಪಿನ ಮಧ್ಯದಿಂದ ಜೋರಾಗಿ ತಮಟೆ-ಉರುಮೆಗಳ ಸದ್ದು ! ಉರುಮೆಯಂತು ಉರ್‍ನ್ಣ ಉರ್‍ನ್ಣ ಎನ್ನುತ್ತ ಎದೆಯನ್ನು ಮೀಟುವ ಶಬ್ದವನ್ನುಂಟು ಮಾಡುತ್ತಿತ್ತು.

ಭಯವಿದ್ದರೂ ಸೀನುವಿನ ಮನಸ್ಸಿನಲ್ಲಿ ಒಂದು ಬಗೆಯ ಕುತೂಹಲ ಬೇರೆ. ನಿಜವಾಗಿಯೂ ಕೋಣವನ್ನು ಕಡಿಯುತ್ತಾರೋ, ಅಥವಾ ಸುಳ್ಳು ಹೇಳುತ್ತಾರೋ ಎಂದವನಿಗೆ ಅನುಮಾನ. ದನವೋ ಕರುವೋ ಸತ್ತರೆ ಮಾದಿಗರಿಗೆ ಹೇಳಿ ಕಳಿಸುತ್ತಿದ್ದನ್ನು ಸೀನು ಕಂಡಿದ್ದ. ಅವರು ಅದರ ಮಾಂಸವನ್ನು ತಿನ್ನುತ್ತಾರಂತೆ, ಚರ್ಮದಿಂದ ಚಪ್ಪಲಿ ಬಾನಿ ಬಾರುಕೋಲುಗಳನ್ನು ಮಾಡುತ್ತಾರಂತೆ ಎಂದೂ ಕೇಳಿದ್ದ. ಹಾಗೆಯೇ ಅವರು ಕೋಣವನ್ನೂ ತಿನ್ನುತ್ತಾರೇನೋ. ಆದರೆ ಇಲ್ಲಿ ಬದುಕಿದ್ದ ಕೋಣವನ್ನು ಕತ್ತರಿಸುತ್ತಾರೆ ಬೇರೆ ! ಏನೇನೋ ಯೋಚನೆ.

ಕೋಣವನ್ನು ಹೇಗೆ ಕಡಿಯುತ್ತಾರೆಂದು ನೋಡಲು ಆಸೆ. ಆದರೆ ಕೊರಳು ಎಷ್ಟು ದಪ್ಪ ! ಒಂದೇ ಏಟಿಗೆ ಕತ್ತರಿಸಬೇಕಂತೆ, ಇಲ್ಲದಿದ್ದರೆ ಪಾಪ ಬರುತ್ತಂತೆ. ಹಾಗೆ ಕತ್ತರಿಸುವವನು ಕರಿಯಮ್ಮನ ಪೂಜಾರಿಯಂತೆ. ಅವನು ದೇವತೆಯನ್ನು ಪೂಜೆ ಮಾಡಿದಾಗ ಆ ತಾಯಿ ಮೈಮೇಲೆ ಬರುತ್ತಾಳಂತೆ, ಅವನ ಮೈಯಲ್ಲಿ ಯಾರಿಗೂ ಇಲ್ಲದ ಶಕ್ತಿ ಬರುತ್ತದಂತೆ. ಅದಕ್ಕೇ ದೊಡ್ಡ ಮಚ್ಚು ಹಿಡಿದು ಜೋರಾಗಿ ಬೀಸಿದರೆ ಕೋಣನಕೊರಳು ಲಟಕ್ಕನೆ ಕತ್ತರಿಸಿ ಬೀಳುತ್ತದಂತೆ. ವಿವಿಧ ಮೂಲಗಳಿಂದ ಈ ಮಾಹಿತಿ ಅವನಿಗೆ ದೊರಕಿತ್ತು, ಇದನ್ನೆಲ್ಲ ಕಾಣುವ ಆತುರ.

ಹೆಚ್ಚು ಜನಗಳ ಕಣ್ಣಿಗೆ ಬೀಳದಂತೆ ಅವನು ನುಸುಳಿಕೊಂಡು ಬೇರೆಯ ದಾರಿಯಿಂದ ಕರಿಯಮ್ಮನ ಗುಡುಯ ತಾವ ಹೋದ. ಅಲ್ಲೋ ಜನಗಳ ಭಾರಿ ಗುಂಪು. ಆ ಗುಂಪಿನಲ್ಲಿ ಸೇರಲು ಅವನಿಗೆ ಭಯ ; ಅಲ್ಲಿ ಹೊಲೇರು ಮಾದಿಗರು ಇರುತ್ತಾರೇನೋ ; ಮುಟ್ಟಿಕೊಂಡು ಬಿಟ್ಟರೆ ! ಅದಕ್ಕೇ ದೂರದಲ್ಲಿ ಒಂದು ಸಣ್ಣ ಮರವನ್ನು ಕಷ್ಟಪಟ್ಟು ಹತ್ತಿ ಕೂತ ; ಅಲ್ಲಿಂದ, ಜನ ಸುತ್ತ ನಿಂತಿದ್ದರೂ ಕರಿಯಮ್ಮನ ಗುಡಿಯ ಅಂಗಳದಲ್ಲಿ ನಡೆಯುತ್ತಿದ್ದುದೆಲ್ಲ ಚೆನ್ನಾಗಿ ಕಾಣುತ್ತಿತ್ತು, ಅವನ ಮನಸ್ಸಿನಲ್ಲಿ ಅಳುಕು, ಭಯ, ಕಾತರ, ಕುತೂಹಲಗಳು ಮನೆಮಾಡಿಕೊಂಡಿದ್ದವು.

ಕರಿಯಮ್ಮನ ಪೂಜಾರಿ ಕೆಂಪು ವಸ್ತ್ರವನ್ನು ಉಟ್ಟುಕೊಂಡಿದ್ದ, ಎದೆಯ ಮೇಲೆ ಬಟ್ಟೆಯಿರಲಿಲ್ಲ, ಕೊರಳಲ್ಲಿ ಹೂವಿನ ಮಾಲೆಗಳಿದ್ದವು. ತಲೆಬಿರಿಹುಯ್ದುಕೊಂಡಿದ್ದ, ಕೈಯಲ್ಲಿ ಬೇವಿನ ಸೊಪ್ಪು ಹಿಡಿದಿದ್ದ, ಉರುಮೆಯ ಮೈನವಿರೇಳಿಸುವ ಸದ್ದಿಗೆ ಅನುಗುಣವಾಗಿ ಅವನು ಹಾಂ ಹೂಂ ಎನ್ನುತ್ತ ಕುಣಿಯುತ್ತಿದ್ದ. ಸುತ್ತಲಿನ ಜನ ಭಯ ಭಕ್ತಿಯಿಂದ ಅವನನ್ನೇ ದಿಟ್ಟಿಸುತ್ತಿದ್ದರು.

ಬಲಿಯನ್ನು ಕೊಡುವ ಸಮಯ ಬಂತು. ಸಾಣೆ ಹಿಡಿದು ಚೂಪಾಗಿ ಹೊಳೆಯುತ್ತಿದ್ದ ಉದ್ದದ ಮಚ್ಚು ಅವನ ಕೈಯಲ್ಲಿತ್ತು, ಕೋಣಕ್ಕಿಂತ ಮೊದಲು ಬೇರೆ ಬೇರೆ ಪ್ರಾಣಿಗಳ ಬಲಿ ಕೊಡಬೇಕಾಗಿತ್ತು, ಕೋಳಿ, ಕುರಿ, ಮೇಕೆ ಇವುಗಳು. ಅವನು ಎಡಗೈಯಲ್ಲಿ ಕೋಳಿಯನ್ನು ಹಿಡಿದು ಅದಕ್ಕೆ ಬಲಗೈಯಿಂದ ಏನೇನೋ ಚಿಮುಕಿಸಿದ. ಅನಂತರ ಇತ್ರೆನ್ನುತ್ತಿದ್ದರೂ ಆದರ ಕೊರಳಿಗೆ ಏಟು ಹೊಡೆದಾಗ ರುಂಡ-ಮುಂಡ ಬೇರೆಯಾಯಿತು. ಮೈ ಪರಚುತ್ತಿದ್ದರೂ ಲೆಕ್ಕಿಸದೆ ಮದದಿಂದ ಸರಸರ ಇಳಿದು ಯಾರಿಗೂ ಕಾಣದಹಾಗೆ ಬಂದ. ಅವನಿಗರಿವಿಲ್ಲದಂತೆ ಅವನ ನಡಿಗೆ ಓಟದ ಕೋಣವನ್ನು ಸಮೀಪಿಸಿತ್ತು. ಸೀನುವಿನ ಮೈಯಲ್ಲಿ ಕಾವುಂಟಾಯಿತು, ಎದೆ ಡವಡವವೆನ್ನಲು ಶುರುವಾಯಿತು. ಬಿಟ್ಟಗಣ್ಣಿಂದ ನೋಡುತ್ತಿದ್ದ.

ಅನಂತರ ಕುರಿಯೊಂದನ್ನು ಇಬ್ಬರು ಹಿಡಿದುಕೊಂಡರು. ಅದನ್ನು ಬಲವಂತವಾಗಿ ಗೂಟಕ್ಕೆ ಕಟ್ಟಿದರು. ಇದನ್ನೆಲ್ಲ ನೋಡುತ್ತಿದ್ದ ಅದಕ್ಕೆ ವಾತಾವರಣದ ಅಂತರಾರ್ಥ ತಿಳಿಯಿತೇನೋ ಎಂಬಂತೆ ಕೊಸರಾಡಿತು. ಆದರೆ ಅದಕ್ಕಿಂತ ಜನ

ಬಲಿಷ್ಠವಾಗಿದ್ದರು. ಪೂಜಾರಿ ಎರಡೂ ಕೈಗಳಿಂದ ಮಚ್ಚನ್ನು ಹಿಡಿದು ಮೇಲೆತ್ತಿ ಅದರ ಕೊರಳಿಗೆ ಸರಿಯಾಗಿ ಹೊಡೆದ. ಅದರ ಕತ್ತು ಕತ್ತರಿಸಿದಾಗ ರುಂಡ ಮುಂಡ ಬೇರೆಯಾದವು. ರಕ್ತ ಚೆಲ್ಲಿತು. ತಣಪಣ ಅಂತ ಆ ಭಾಗಗಳೂ ಎಗರಾಡತೊಡಗಿದವು. ಸೀನುವಿನ ಮೈಯಲ್ಲಿನ ರಕ್ತ ಸಂಚಾರ ಇನ್ನೂ ತೀವ್ರವಾಯಿತು. ಬಾಯಿನ ದ್ರವ ಆರಿಹೋಯಿತು. ಬೇರೆಯವರೆಲ್ಲ ಏನೂ ಆಗದ ಹಾಗೆ ಇದ್ದರೂ ಇವನು ಮಾತ್ರ ಅಲ್ಲಿರದಾದ. ಸರಸರ, ಮೈ ತರಚುತ್ತಿದ್ದರೂ ಲೆಕ್ಕಿಸದೆ, ಮರದಿಂದ ಇಳಿದು ಯಾರಿಗೂ ಕಾಣದೆ ಬಂದ. ಅವನಿಗರಿವಿಲ್ಲದಂತೆ ಅವನ ನಡಿಗೆ ಓಟದ ವೇಗವನ್ನು ಸಮೀಪಿಸಿತ್ತು.

ಒದ್ದಾಡುತ್ತಿದ್ದ ಕೋಳಿ-ಕುರಿಗಳ ದೇಹದ ಭಾಗಗಳು ಮನಸ್ಸಿನಲ್ಲಿ ಮೆತ್ತಿಕೊಂಡಿದ್ದವು. ಹೀಗೆ ಕತ್ತರಿಸಿದ ಪ್ರಾಣಿಗಳನ್ನೆಲ್ಲ ತಮ್ಮ ತಮ್ಮಲ್ಲೇ ಅವರು ಹಂಚಿಕೊಂಡು ಅಡಿಗೆ ಮಾಡುತ್ತಾರಂತೆ. ಪ್ರಸಾದದಲ್ಲಿ ಶ್ಯಾನುಭೋಗರಿಗೂ ಊರ ಪುರೋಹಿತರಿಗೂ ಪಾಲುಂಟಂತೆ ; ಆದರೆ ಅವರು ಬ್ರಾಹ್ಮಣರಾದ್ದರಿಂದ ಮಾಂಸ ತಿನ್ನುವುದಿಲ್ಲ. ಹೀಗಾಗಿ ಅವರ ಪಾಲನ್ನು ಮೊದಲು ತೆಗೆದಿಟ್ಟು ನಂತರ ಕುರಿ-ಕೋಳಿಗಳ ಮಾಂಸವನ್ನು ಗೌಡರ ಮನೆಗೇ ಕೊಡುತ್ತಾರಂತೆ. ಕೋಣನ ಮಾಂಸವನ್ನು ಒಕ್ಕಲಿಗರೂ ತಿನ್ನುವುದಿಲ್ಲ. ಹೊಲೇರು-ಮಾದಿಗರು ಮಾತ್ರ ಅದನ್ನು ತಿನ್ನುತ್ತಾರಂತೆ. ಕುರಿ ಕೋಳಿಗಳನ್ನು ಕಡಿದಿದ್ದುದನ್ನು ಕಂಡ ಸೀನುವಿಗೆ ಕೋಣವನ್ನು ಕಡಿಯುವುದನ್ನು ನೋಡಬೇಕೆಂಬ ಬಯಕೆ ಉಳಿಯಲಿಲ್ಲ.

ಮನೆಗೆ ಬಂದು ಯಥಾಪ್ರಕಾರದ ತನ್ನ ಕೆಲಸಗಳಲ್ಲಿ ಅವನು ನಿರತನಾದರೂ ಕಣ್ಣು ಕಂಡುದನ್ನು ಮನಸ್ಸು ಮರೆಯಲಾಗಲಿಲ್ಲ. ಪದೇ ಪದೇ ಎಗರಾಡುತ್ತಿದ್ದ ಕುರಿ-ಕೋಳಿಗಳ ದೇಹಭಾಗಗಳು ಕಣ್ಮುಂದೆ ನಿಲ್ಲುತ್ತಿದ್ದವು. ಕೋಣವನ್ನು ಕತ್ತರಿಸಿದ್ದರೆ ಅದರ ರುಂಡ-ಮುಂಡಗಳೂ ಹಾಗೇ ಒದ್ದಾಡುತ್ತಿದ್ದವೇನೋ ಎಂದುಕೊಂಡ. ಅಂತಹ ಚಿತ್ರ ಮನಸ್ಸಿಗೆ ಬಂದಾಗಲೆಲ್ಲ ದೇಹ ಬಿಸಿಯಾಗುತ್ತಿತ್ತು. ಎದೆ ಹೊಡೆದುಕೊಳ್ಳುತ್ತಿತ್ತು.

ಮನಸ್ಸು ಸ್ವಲ್ಪ ಸ್ಥಿಮಿತಕ್ಕೆ ಬಂದ ಮೇಲೆ ಅತ್ತೆಯನ್ನು ಆ ವಿಚಾರ ಕೇಳಿದ್ದ "ಯಾಕತ್ತೆ ಪ್ರಾಣಿಗಳನ್ನು ಬಲಿಕೊಡೋದು ?"

"ಈಗ್ಯಾಕಪ್ಪ ಆ ವಿಚಾರ ?"

"ಇವತ್ತು ಕರಿಯಮ್ಮನ ಜಾತ್ರೇನಂತೆ. ಪ್ರಾಣಿಗಳನ್ನ ಬಲಿಕೊಡ್ತಾರಂತೆ" ತಾನು ಬಲಿಯನ್ನು ಕಣ್ಣಾರೆ ಕಂಡಿದ್ದರೂ ನಿಜ ಹೇಳಿದರೆ ಅತ್ತೆಯೂ ಬೈಯುತ್ತಾರೆಂದು ಗೊತ್ತಿದ್ದುದರಿಂದ ಅಂತೆ ಎಂದು ಕೇಳಿದ್ದ.

"ಕರಿಯಮ್ಮ ರೌದ್ರ ದೇವತೆ. ಅವಳಿಗೆ ಬಲಿಯಾಗಬೇಕಂತೆ. ಇಲ್ಲದಿದ್ದರೆ ಅವಳಿಗೆ ಶಾಂತಿಯಿಲ್ಲವಂತೆ."

"ಕೊಡದಿದ್ದರೇನಾಗುತ್ತೆ?"

"ಊರಲ್ಲಿ ಕುರಿ ಕೋಳಿ ಯಾವುದನ್ನು ಉಳಿಸಲ್ಲವಂತೆ. ಮನುಷ್ಯರಿಗೂ ರೋಗವನ್ನು ಮಾಡ್ತಾಳಂತೆ"

"ಹಾಗಾದ್ರೆ ಬೆಂಗಳೂರಲ್ಲಿ ಬಲೀ ಕೊಡೊಲ್ಲವಲ್ಲ, ಅಲ್ಲಿ ಯಾಕೆ ರೋಗ ಬಂದಿಲ್ಲ."

"ಹೋಗೋ ನಿನ್ನ ಪ್ರಶ್ನೆಗಳು ಇದ್ದೇ ಇರುತ್ವೆ, ನನಗವೆಲ್ಲ ಗೊತ್ತಿಲ್ಲ."

ಈ ವಿವರಣೆ ಸೀನುವಿಗೆ ಸಮಾಧಾನ ತಾರದಿದ್ದರೂ, ಗೊತ್ತಿಲ್ಲ ಅಂದ ಅತ್ತೆಯನ್ನು ಹೆಚ್ಚು ಕೆದಕಿ ಪ್ರಯೋಜನವಿಲ್ಲವೆಂದು ಸುಮ್ಮನಾದ. ಆದರೂ ಅವನ ಮನಸ್ಸಿನಲ್ಲಿ ಬಹು ದಿನಗಳ ಕಾಲ ಒಂದು ದೊಡ್ಡ ಸಂದೇಹ ಕಾಡುತ್ತಿತ್ತು; ಅರಳಿ ಮರದ ಎಲೆ ಕತ್ತರಿಸಿದ್ದನ್ನು ಉಗ್ರವಾಗಿ ತಡೆಯುತ್ತಿದ್ದ ಮಾವ ಅವತ್ತು ಎಷ್ಟು ಜೋರಾಗಿ ಕುರುಬ ಬಸವನ ಜೊತೆ ಜಗಳವಾಡಿದ್ದರು ! ಅದನ್ನು ಸಮರ್ಥಿಸಿದ್ದ ಜೋಯಿಸರ ಬಸವನನ್ನು ಹೊಡದಿದ್ದ ಗೌಡರು ಜನ, ಕುರಿ-ಕೋಳಿಗಳ ಕತ್ತನ್ನೇ ಕತ್ತರಿಸುತ್ತಿದ್ದರೂ ಸುಮ್ಮನಿರುತ್ತಾರಲ್ಲ ಯಾಕೆ ಎಂದು ಅರ್ಥವಾಗಿರಲಿಲ್ಲ. ಆದರೆ ಈ ಪ್ರಶ್ನೆಯನ್ನು ಮಾವನಿಗೆ ಹಾಕುವಷ್ಟು ಧೈರ್ಯ ಅವನಿಗೆ ಬರಲಿಲ್ಲ.

೧೪

ಸೀನು ಏಳನೇದು ಪಾಸಾಗಿ ಎಂಟನೇ ಕ್ಲಾಸಿಗೆ ಬಂದ. ಅಷ್ಟು ಹೊತ್ತಿಗೆ ಪೆಮ್ಮನಹಳ್ಳಿಯ ಮೂಲಕ ಬಸ್ಸು ಓಡಾಡುವುದು ಶುರುವಾಗಿತ್ತು. ಮರುಳಪ್ಪನವರ ಬದಲು ಹೊಸಬರು ಹೆಡ್ಮಾಸ್ತು ಬಂದ ಮೇಲೆ ಸ್ಕೂಲಲ್ಲಿ ಕೆಲವು ಮಾರ್ಪಾಟುಗಳಾಗಿದ್ದವು. ಏಳು-ಎಂಟನೆಯ ಕ್ಲಾಸಿನ ಹುಡುಗರಿಗೆ ಹಲಗೆಗಳ ಬದಲು ಕುಳಿತುಕೊಳ್ಳಲು ಬೆಂಚುಗಳು ಬಂದಿದ್ದವು. ಪ್ರತಿನಿತ್ಯ ಪ್ರಾರ್ಥನೆ ಆದ ಮೇಲೆ ಪೇಪರನ್ನೋದಿಸುತ್ತಿದ್ದರು ಹುಡುಗರಿಂದ. ಒಂದೊಂದು ಕ್ಲಾಸಿನವರೂ ಒಂದೊಂದು ಸಾಲಾಗಿ ನಿಲ್ಲುವುದು. ಮೂವರು ಹುಡುಗಿಯರು ಪ್ರಾರ್ಥನೆ ಹೇಳಿಕೊಡುವುದು, ಅದನ್ನು ಹುಡುಗರು ಹೇಳುವುದು. ಪ್ರಾರ್ಥನೆಯಾದ ಮೇಲೆ ಒಬ್ಬೊಬ್ಬರಿಂದ ಒಂದೊಂದು ದಿನ ಪೇಪರಿನ ಮೊದಲನೆಯ ಪೇಜಿನಲ್ಲಿದ್ದ ಮುಖ್ಯ ಸುದ್ದಿಗಳನ್ನೊದಿಸುವುದು. ಆಮೇಲೆ ಸಾಲಾಗಿ ಒಂದೊಂದೇ ಕ್ಲಾಸಿನವರು ಹೋಗಿ ತಮ್ಮ ತಮ್ಮ ಕ್ಲಾಸುಗಳಲ್ಲಿ ಕುಳಿತುಕೊಳ್ಳಬೇಕು.

ದಿನ ಕಳೆಯುತ್ತ ಪೇಪರಿನ ಸುದ್ದಿಯೋದುವ ರೀತಿ ವ್ಯತ್ಯಾಸವಾಯಿತು. ಏಳನೆಯ ಎಂಟನೆಯ ಕ್ಲಾಸಿನವರಲ್ಲಿ ಒಂದೊಂದು ದಿನ ಒಬ್ಬೊಬ್ಬರು ಕ್ಲಾಸಿನಲ್ಲಿ ಬೋರ್ಡಿನ ಮೇಲೆ ಮುಖ್ಯವಾದ ಸುದ್ದಿಗಳನ್ನು ಬರೆಯಬೇಕೆಂದು ನಿಯಮಿಸಿದ್ದರು.

ಕ್ಲಾಸಲ್ಲಿ ಇನ್ನೊಂದು ಮುಖ್ಯವಾದ ಮಾರ್ಪಾಟನ್ನು ತಂದರು. ಜುಂಜನನ್ನು ಇನ್ನು ದೂರ ಕುಳ್ಳಿರಿಸುತ್ತಿರಲಿಲ್ಲ. ಅವನೂ ಎಲ್ಲರ ಹಾಗೆಯೇ ಬೆಂಚಿನ ಮೇಲೆ ಕೂತುಕೊಳ್ಳುತ್ತಿದ್ದ. ಆದರೆ ಅವನೆಂದೂ ಸೀನುವಿನ ಬಳಿಯಾಗಲೀ, ಇತರ ಬ್ರಾಹ್ಮಣರ

ಪಕ್ಕದಲ್ಲಿಯಾಗಲೀ ಕುಳಿತುಕೊಳ್ಳಲಿಲ್ಲ. ಬೆಂಚಿನ ಆ ಕಡೆ ತುದಿಯಲ್ಲಿ ಕುಳಿತುಕೊಳ್ಳುತ್ತಿದ್ದ.

ಅವರ ಕ್ಲಾಸಿನಲ್ಲಿಯೂ ಹಾಗೆಯೇ ಹೊಸತನ. ಹುಡುಗರೆಲ್ಲರಿಂದಲೂ ಬೋರ್ಡಿನ ಮೇಲೆ ಬರೆಸುತ್ತಿದ್ದರು. ತಾವು ಮಾಡಿದ ಪಾಠದ ಬಗ್ಗೆ ಬರೀ ಪ್ರಶ್ನೆ ಕೇಳಿ ಕುಳಿತಲ್ಲಿಂದಲೇ ಹುಡುಗರು ಉತ್ತರ ಹೇಳುವ ಹಾಗಿರಲಿಲ್ಲ. ಬೋರ್ಡಿನ ಹತ್ತಿರ ಬಂದು ವಿವರಿಸಬೇಕಾಗಿತ್ತು. ಭೂಗೋಳ ಪಾಠ ಮಾಡುವಾಗಲಂತೂ ಅವರು ಬೋರ್ಡಿನ ಮೇಲೆ ಮ್ಯಾಪುಗಳನ್ನು ಚಕಚಕಾಂತ ಸುಂದರವಾಗಿ ಬರೆಯುತ್ತಿದ್ದರು. ಅವರ ಕ್ಲಾಸೊಂದರ ತಮಾಷೆಗೆ ಅವಕಾಶ ಕಡಿಮೆಯಾದರೂ ಅವರು ಹೇಳಿದ್ದೆಲ್ಲ ಅರ್ಥವಾಗುತ್ತಿತ್ತು.

ಒಂದು ದಿನ ಅವರು, ಸಾಯಂಕಾಲ ಕ್ಲಾಸುಗಳಾದ ಮೇಲೆ ಸೀನುವನ್ನು ನೋಡಿ, "ನೀನು ಕಾಶೀಪತಯ್ಯನವರ ಸೋದರಳಿಯನೇನಯ್ಯ ?" ಎಂದಿದ್ದರು. ಇವನು "ಹ್ಞು ಸಾರ್" ಎಂದಿದ್ದ. ತಮ್ಮ ಮಾವ ಇವರಿಗೆ ಗೊತ್ತೆಂದು ಸೀನುವಿಗೆ ಅಭಿಮಾನವೆನ್ನಿಸಿತು. ತಮ್ಮ ಮನೆಗೆಂದೂ ಬರದೇ ಇದ್ದ ಇವರಿಗೆ ಮಾವನ ವಿಚಾರ ಹೇಗೆ ಗೊತ್ತಾಯಿತು ಎಂದು ಆಶ್ಚರ್ಯವೂ ಆಯಿತು.

ಹೆಡ್ಮಾಸ್ಟರ ಹೆಸರು ಸೋಮಶೇಖರ ಶೆಟ್ಟಿ ಅಂತಿದ್ದರೂ ಅವರು ಲಕ್ಷ್ಮೀಪತಿ ಶೆಟ್ಟರ ಹಾಗೆ ಶೆಟ್ಟರಲ್ಲವಂತೆ. ಅವರ ತಂದೆ ತುಮಕೂರಿನಲ್ಲಿ ದೊಡ್ಡ ಮಂಡಿಯಿಟ್ಟಿದ್ದಾರಂತೆ. ಅವರಿಗೆ ಕೆಲಸದಿಂದ ಬರುವ ಸಂಬಳಕ್ಕಿಂತಲು ಹೆಚ್ಚಾಗಿ ಅಂಗಡಿಯಿಂದ ವರಮಾನ ಬರುತ್ತಿತ್ತಂತೆ.

"ಶೆಟ್ಟಿ ಅಂತ ಹೆಸರಿಟ್ಕೊಂಡ್ರೂ ಶೆಟ್ರಲ್ಲಂತೆ ಕಣೋ ಲಿಂಗಾಯಿತರಂತೆ ?" ಎಂದು ಸೀನು ಒಬ್ಬನನ್ನು ಆಶ್ಚರ್ಯದಿಂದ ಕೇಳಿದ್ದ.

"ಲಿಂಗಾಯಿತ್ರು ಶಾಸ್ತ್ರೀ ಅಂತಾನೂ ಎಸರಿಟ್ಕೋತಾರೆ ಕಣೋ."

"ಹೌದಾ ?" ಎಂಬ ಅಚ್ಚರಿಯ ಉದ್ಗಾರ ಸೀನುವಿನ ಬಾಯಿಂದ ಹೊರಟಿತ್ತು.

ಹೀಗೆ ಲಿಂಗಾಯಿತರಾಗಿದ್ದರೂ ಅವರು ಊರಿನ ಲಿಂಗಾಯಿತರ ಹಾಗಿರದೆ, ಎಲ್ಲರ ಮನೆಯಲ್ಲಿಯೂ ತಿನ್ನುತ್ತಿದ್ದರಂತೆ. ಮೂಡಲಗಿರಿಗೌಡರ ಮನೆಯಲ್ಲಿ ಅವರು ಉಪ್ಪಿಟ್ಟು ತಿಂದದ್ದನ್ನು ನಾರಾಯಣನೇ ನೋಡಿದ್ದನಂತೆ. ಅವರ ಮನೆಗೆ ಹೋದರೂ ಹಾಗೇನಂತೆ. ಬೇರೆ ಜಾತಿಯವರು ಬಂದರೂ ತಮ್ಮ ಮನೆಯೊಳಗೆಲ್ಲ ಬಿಟ್ಟುಕೊಳ್ಳುತ್ತಿದ್ದರಂತೆ. ಅಡಿಗೆ ಮನೆಗೂ ಕೂಡ ಹೋಗಬಹುದಂತೆ ! ಇದರಿಂದ ಬೇರೆ ಲಿಂಗಾಯಿತರಿಗೆ ಇವರನ್ನು ಕಂಡರ ಆಗುತ್ತಿರಲಿಲ್ಲವಂತೆ.

ಮಾವನೂ ಈ ವಿಚಾರ ಕೆಲವೊಮ್ಮೆ ಅತ್ತೆಯ ಹತ್ತಿರ ಮಾತಾಡುತ್ತಿದ್ದರು. "ಹೊಸದಾಗಿ ಬಂದಿದ್ದಾನಲ್ಲ ಹೆಡ್ಮಾಸ್ಟ್ರು, ಅವನ್ದು ತುಂಬ ಧಿಮಾಕು" ಎಂದಿದ್ದರು ಒಂದು ದಿನ ಊಟ ಮಾಡುವಾಗ.

"ಯಾಕೆ ಏನಾಯ್ತು ?"

''ಇವತ್ತು ಸಾಯಂಕಾಲ ಮೂಡಲಗಿರಿಗೌಡನ ಹತ್ತಿರ ಮಾತಾಡ್ತಾ ಪಂಚಾಯಿತಿ ಹಾಲ್ ಹತ್ತಿರ ಕೂತಿದ್ದೆ. ಅವನೂ ಬಂದ. ಗೌಡ 'ಇವರೇ ನಮ್ ಸ್ಕೂಲಿನ ಒಸ ಎಡ್ಮಾಸ್ಟ್ರು' ಅಂತ ಹೇಳಿದ. ನಮಸ್ಕಾರ ಅಂದು 'ತಮ್ಮ ಹೆಸರು ?' ಅಂತ ಕೇಳಿದ. ಹೆಸರು ಹೇಳ್ದೆ. ತಕ್ಷಣ 'ಓ ನೀವೇನಾ !' ಅಂದ. 'ಯಾಕೆ ? ನನ್ನ ಹೆಸರು ಕೇಳಿದ್ರ ಮೊದಲೇನೇ ?' ಅಂದಾಗ 'ನಿಮ್ಮೂರ್ರಲ್ಲಿದ್ರಲ್ಲ ಭರಮಪ್ಪ ಅವರು ಹೇಳಿದ್ರು'' ಅಂದ.''

ಸೀನುವಿಗೆ ತಟ್ಟನೆ ಹೊಳೆಯಿತು. ಅವತ್ತು ''ನೀನು ಕಾಶೀಪತಯ್ಯನವರ ಸೋದರಳಿಯನಾ ?'' ಅಂತ ಕೇಳಿದಾಗ ತನಗೆ ಆಶ್ಚರ್ಯವಾಗಿತ್ತು. ಹಾಗಿದ್ರೆ ಭರಮಪ್ಪ ಮೇಷ್ಟ್ರು ಇವರಿಗೆ ಎಲ್ಲ ವಿಚಾರನೂ ಹೇಳಿರ್ಬೇಕು, ಮಾವ ಅವರ ಜೊತೆ ಜಗಳವಾಡಿದ್ದು ಎಲ್ಲ ಎನ್ನಿಸಿತು. ಮಾವ ಏನಂತಾರೋ ಎಂದು ಕಾದು ಕುಳಿತ.

''ಹಾಗಾದ್ರೆ ಆ ಭರಮಪ್ಪ ಎಲ್ಲ ವಿಚಾರಾನೂ ಹೇಳಿರ್ಬೇಕು ಈತಂಗೆ''

''ಹಾಗೆ ಅಂತ ಅನ್ನಿಸ್ತತೆ.''

''ಇವನೂ ಏನೋ ಜಾತಿಗೀತಿ ಎಲ್ಲ ಭೇದ ಮಾಡಲ್ಲವಂತೆ.''

''ಅವನ ತಲೆ. ಅವನ ಮನೇಲಿ ಏನು ಬೇಕಾದರೂ ಮಾಡಿಕೊಳ್ಳಿ. ನಮ್ಮ ಮಕ್ಕಳ ಸುದ್ದೀಗೆ ಬರದಿದ್ರೆ ಸಾಕು'' ಎಂದಿದ್ದರು.

ಮಾರ್ಚಿ ಪೂರ್ತಿ ತರಗತಿಗಳನು ನಡೆಸಿದರು. ಪರೀಕ್ಷೆಗಳಾದ ಮೇಲೂ ಒಂದು ವಾರ ಕ್ಲಾಸುಗಳು. ಸುಮ್ಮನೆ ಹೋಗುವುದು, ಬರುವುದು ! ಆಮೇಲೆ ಮತ್ತೆ ಹತ್ತು ದಿನಗಳ ನಂತರವೇ ರಿಸಲ್ಟ್ ಹಾಕುತ್ತಾರಂತೆ. ಮಿಕ್ಕ ತರಗತಿಗಳದು ಹೇಗಾದರೂ, ಎಂಟನೆಯ ತರಗತಿಯದು ಮಾತ್ರ ತಡ. ಅದೂ ಬೋರ್ಡ್ ಮೇಲೆ ರಿಸಲ್ಟನ್ನು ಅಂಟಿಸಿಡುತ್ತಾರಂತೆ. ಹತ್ತು ದಿನಗಳ ಕಾಲ ಹುಡುಗರಿಗೆಲ್ಲ ಹಪಹಪ, ಫಲಿತಾಂಶಕ್ಕಾಗಿ ಕಾತರದ ನಿರೀಕ್ಷೆ.

ಬಿಡುವಿನ ಈ ಹತ್ತು ದಿನಗಳಲ್ಲಿ ಪೆಮ್ಮನಹಳ್ಳಿಯಲ್ಲೇ ಇರುವ ಹುಡುಗರು ಆಗಾಗ ಭೇಟಿಯಾಗಬಹುದು ; ಆದರೆ ಬೇರೆ ಊರುಗಳಿಂದ ಬರುತ್ತಿದ್ದ ಹುಡುಗರನ್ನು ಕಾಣುವುದು ಸಾಧ್ಯವಿಲ್ಲ. ಜೋಯಿಸರ ಮನೆಯಲ್ಲಿದ್ದ ಹುಡುಗರು ಫಲಿತಾಂಶ ನೋಡಿಕೊಂಡು ಊರಿಗೆ ಹೋಗಲು ಕಾಯುತ್ತಿದ್ದಾರೆ. ಆದ್ದರಿಂದ ಸೀನುವಿಗೆ ಹೇಗೂ ಪರವಾಗಿಲ್ಲ; ಕಾಲ ಕಳೆಯುವ ಸಮಸ್ಯೆ ಅಷ್ಟಾಗಿಲ್ಲ.

ರಿಸಲ್ಟ್‌ನ ದಿನ ತರಾತುರಿಯಿಂದ ಸೀನು ಮಿಕ್ಕ ಹುಡುಗರ ಜೊತೆಗೆ ಸ್ಕೂಲಿಗೆ ಹೊರಟ, ಆದರೆ ಅಲ್ಲಿ ಇನ್ನೂ ಏನೂ ಹಾಕಿರಲಿಲ್ಲಲ್ಲ, ಬೋರ್ಡಿನ ಮೇಲೆ. ಇವರು ಬಂದಿರುವುದೇ ಬಹುಬೇಗ ; ಇವರ ಆತುರಕ್ಕೆ ಮೇಷ್ಟರುಗಳು ಬರುತ್ತಾರೆಯೇ ? ಈ ಹುಡುಗರೆಲ್ಲ ಮರದ ಕೆಳಗೆ ಕೂತು ಹರಟೆ ಹೊಡೆಯುತ್ತಿದ್ದರೂ, ತಮ್ಮ ರಿಸಲ್ಟ್ ಇನ್ನು ಸ್ವಲ್ಪ ಹೊತ್ತಿನಲ್ಲಿ ಗೊತ್ತಾಗುವುದಾದರೂ ಮೇಷ್ಟರುಗಳು ಏನು ಹೇಳುತ್ತಾರೆಯೋ ಎಂಬ ದಿಗಿಲು ಬೇರೆ.

ಬಂದಗೀ ಸಾಬಿ ಬೋರ್ಡೊಂದನ್ನು ತಂದು ಸ್ಕೂಲಿನ ಹಜಾರದಲ್ಲಿ ಕಂಬವೊರಗಿಸಿ ನಿಲ್ಲಿಸಿದ. ಹುಡುಗರಿಗೆ ಸೂಚನೆ ದೊರೆಯಿತು, ಓಡಿಹೋದರು. ಹೆಡ್ಮೇಸ್ಟ್ರೇ ರಿಸಲ್ಟ್ ಬರೆದಿದ್ದರು. ಅವರು ಯಾವತ್ತೂ ಮಾಡುವ ಹಾಗೆಯೇ ಒಬ್ಬೊಬ್ಬ ಹುಡುಗನ ಹೆಸರನ್ನೂ ಒಂದೊಂದು ಬಣ್ಣದಲ್ಲಿ ಬರೆದಿದ್ದರು. ಎಲ್ಲರದಕ್ಕಿಂತ ಮೊದಲಲ್ಲಿ ಇದ್ದ ಹೆಸರೇ ಶ್ರೀನಿವಾಸ ಮೂರ್ತಿ ! ಒಬ್ಬೊಬ್ಬರದನ್ನೂ ಅವರು ತೆಗೆದುಕೊಂಡ ಅಂಕಗಳಿಗೆ ಅನುಕ್ರಮವಾಗಿ ಬರೆದು ರಿಸಲ್ಟ್ ಬರೆದಿದ್ದರು, ಪಾಸೋ ಫೇಲೋ ಎಂದು. ಒಟ್ಟು ಹನ್ನೆರಡು ಜನ ಪಾಸಾಗಿದ್ದರು. ಇವನೊಬ್ಬನೇ ಫಸ್ಟ್ ಕ್ಲಾಸ್ ! ಇನ್ನೊಬ್ಬ ಮಾತ್ರ ಸೆಕೆಂಡ್ ಕ್ಲಾಸ್, ಮಿಕ್ಕ ಪಾಸಾದವರು ಬರೀ ಪಾಸು.

ಸೀನುವಿಗೆ ಸಂತೋಷವಾಯಿತು. ಅವನು ಆರುನೂರು ಅಂಕಗಳಿಗೆ ನಾನ್ನೂರ ಮೂವತ್ತೆಂಟು ತೆಗೆದಿದ್ದ ! ಮಿಕ್ಕವರದೆಲ್ಲ ಕಡಿಮೆ. ಈ ಹುಡುಗರನ್ನು ಒಳಗಿನಿಂದಲೇ ನೋಡಿದ ಮೇಷ್ಟ್ರುಗಳು ಬಂದಗೀ ಸಾಬಿಯ ಕೈಲಿ ಹೇಳಿ ಕಳಿಸಿದರು. ಹುಡುಗರೆಲ್ಲ ಒಳಗೆ ಹೋಗಿ "ನಮಸ್ಕಾರ ಸಾರ್" ಎಂದರು. ಅವರನ್ನೆಲ್ಲ ಬೆಂಚಿನ ಮೇಲೆ ಕೂಡಿಸಿ ಮೇಷ್ಟ್ರು ಒಬ್ಬೊಬ್ಬರನ್ನೂ ವಿಚಾರಿಸಿದರು.

"ಅಂತೂ ದಿಣ್ಣೆ ಮಟಕ್ಕೆ ಓಯ್ತೀಯಾ ?" ಎಂದುಗೌಡರ ಸಂಬಂಧಿಯಾದ ಹುಡುಗನನ್ನು ಕೆಂಚಪ್ಪ ಮೇಷ್ಟ್ರು ಕೇಳಿದರು. ಅವನೇ ಪಾವಗಡದಲ್ಲಿ ಓದುತ್ತೇನೆಂದು ಸೀನುವಿಗೆ ಹೇಳಿದ್ದವನು. ಅವನು "ಊ್ನಸಾ" ಎಂದು ನಾಚಿ ತಲೆ ತಗಿಸಿದ್ದ.

"ಏನಪ್ಪ ಸೀನು, ಅಂತೂ ಫಸ್ಟ್ ತಗೊಂಬಿಟ್ಟೆ ನನಗೆ ಖರ್ಚಾಗೋ ಹಾಗೆ ಮಾಡಿದೆ" ಎಂದರು ಹೆಡ್ಮಾಸ್ಟ್ರು.

"ಯಾಕೆ, ಸಾರ್ ?" ಇವರಿಗೇಕೆ ತನ್ನಿಂದ ಖರ್ಚು ? ಒಗಟಿನಂತೆ ತೋರಿತು.

'ಫಸ್ಟ್‌ಕ್ಲಾಸ್ ತಗೊಂಡ್ರೆ ಬಹುಮಾನ ಕೊಡ್ತೀನೀಂತ ಹೇಳಿದ್ದೆನಲ್ಲಯ್ಯ. ಈಗ ನಿಂಗೆ ಕೊಡಬೇಕಲ್ಲ?"

"ಏನೂ ಬ್ಯಾಡಾ ಸಾರ್"

"ಯಾಕೆ ? ನಂಗೆ ಖರ್ಚಾಗತ್ತೇಂತಾನಾ ?" ಸೀನು ಮಾತನಾಡಲಿಲ್ಲ, ಅವರೇ ಹೇಳಿದರು. "ಸ್ವಲ್ಪ ಖರ್ಚು ಮಾಡಿದ್ರೇನಯ್ಯಾ ? ನೀನು ಫಸ್ಟ್ ಕ್ಲಾಸ್ ತೊಗೊಂಡೆಯಲ್ಲ ಸಂತೋಷ. ಸಾಯಂಕಾಲ ಮನೆಹತ್ರ ಬಾ" ಎಂದರು.

"ಏನಪ್ಪಾ, ಬೆಂಗಳೂರಿಗೆ ಯಾವಾಗ ?" ಎಂದು ಶ್ರೀನಿವಾಸರಾವ್ ಮೇಷ್ಟರು.

"ಬೆಂಗಳೂರಿಗೇನಾ, ಅಥವಾ ಪಾವಗಡಕ್ಕೋ ?" ಎಂದರು ಸತ್ಯನಾರಾಯಣ ಮೇಷ್ಟರು.

"ಗೊತ್ತಿಲ್ಲ ಸಾರಂ"

"ಅದೇನಯ್ಯ ನಿಂಗೇ ಗೊತ್ತಿಲ್ವ ? ನಿಂಗೆ ಯಾವುದಿಷ್ಟ?"

"ಬೆಂಗಳೂರೇ, ಅಲ್ಲೇನೋ ?"

"ಮಾವ ಹೇಗೆ ಹೇಳಿದರೆ ಹಾಗೆ, ಸಾರ್"

"ಓದಬೇಡಾಂದ್ರೆ, ಇಲ್ಲೇ ಇದ್ಬಿಡ್ತೀಯಾ ?"

"ಕಾಶೀಪತಿ ರಾಯರು ಯಾಕೆ ಓದು ಬೇಡಾಂತಾರೆ ? ಇವನೇನು ಮನೇಲಿದ್ದು ದನ ಕಾಯ್ಬೇಕಾ ?"

"ಓದ್ತೀನಿ ಸಾರ್, ಎಲ್ಲೀಂತ ಗೊತ್ತಿಲ್ಲ"

"ಬೆಂಗಳೂರಿಗೇ ಹೋಗು. ದೊಡ್ಡೂರೂ, ಚೆನ್ನಾಗಿರುತ್ತೆ ಇಲ್ಲಿ ಸಣ್ಣ ಊರಲ್ಲಿರೋ ಸಣ್ಣ ಬುದ್ಧಿ ಬರಲ್ಲ" ಎಂದಿದ್ದರು ಹೆಡ್ಮಾಸ್ಟ್ರು. ಆದರೆ ಇದರರ್ಥ ಸೀನುವಿಗಾಗಿರಲಿಲ್ಲ, ಆದ್ದರಿಂದ ಸುಮ್ಮನಿದ್ದ

"ಫಸ್ಟ್ ಕ್ಲಾಸ್ ತೊಗೊಂಡದ್ದಕ್ಕೆ ಏನೂ ಕೊಡಿಸಲ್ವಾ ?"

"ಮಾವನ್ನ ಕೇಳ್ತೀನಿ ಸಾರ್"

ನೆಗೆದುಕೊಂಡೇ ಸೀನು ಮನೆಗೆ ಬಂದ. ಕಾಲು ಒಂದು ಕಡೆ ನಿಲ್ಲುತ್ತಲೇ ಇರಲಿಲ್ಲ ಅವನಿಗೆ. ಅವನು ಬಂದ ರೀತಿಯನ್ನು ಕಂಡು ಅತ್ತೆ - ಮಾವ ಗಾಬರಿಗೊಂಡರು. ಇವನ ರಿಸಲ್ಟಿನ ವಿಷಯ ಇವನಿಗಿದ್ದ ಹಾಗೆ ಅವರಿಗೆ ಮನಸ್ಸಿನಲ್ಲಿ ಸದಾ ತುಂಬಿರಲು ಸಾಧ್ಯವೇ !

"ಯಾಕೋ ಏನಾಯ್ತೋ ?" ಎಂದರು ಅತ್ತೆ

"ಮತ್ತೆ ನಾನ್ ಫಸ್ಟ್‌ಕ್ಲಾಸ್" ಎಂದ ಆತುರ ಹೆಮ್ಮೆಗಳಿಂದ.

"ಹೂಂ, ನೀವು ಹೇಳಿದ್ರಿ, ಫಸ್ ಕ್ಲಾಸು ಕೊಡೊಲ್ಲ ಅಂತ. ಈಗ ನೋಡಿದ್ರಾ ಮಾರ್ಕ್ಸ್‌ನೂ ಹಾಕಿಬಿಟ್ಟಿದ್ದಾರೆ."

"ನಿಂಗೆಷ್ಟು ಹಾಗಾದ್ರೆ ?"

"ಆರುನೂರಕ್ಕೆ ನಾನ್ನೂರ ಮೂವತ್ತೆಂಟು"

"ಪರವಾಗಿಲ್ವಲ್ಲೋ, ಭೇಷ್ !" ಎಂದು ಮಾವ. ಸಂತಸ ಇಮ್ಮಡಿಸಿತು.

"ದೇವರಿಗೆ ನಮಸ್ಕಾರ ಮಾಡು ಹೋಗು" ಎಂದರು ಅತ್ತೆ ಅದರಂತೆಯೇ ಸೀನು ದೇವರ ಮನೆಗೆ ಓಡಿದ. ಅವಸರವಸರವಾಗಿ ನಮಸ್ಕಾರ ಮಾಡಿ ಬಂದ.

"ನೋಡಿದ್ಯಾ ಅತ್ತೆ ನಾನೊಬ್ನೇ ಫಸ್ಟ್ ಕ್ಲಾಸ್" ಎಂದ ಹೆಮ್ಮೆಯಿಂದ

"ಹೂನಪ್ಪ ನೀನು ತುಂಬಾ ಜಾಣ, ನಮ್ಮ ಹಾಗಲ್ಲ" ಎಂದರು ಅತ್ತೆ ಅಭಿಮಾನ-ಹಾಸ್ಯ ತುಂಬಿದ ಧ್ವನಿಯಲ್ಲಿ.

ಒಂದು ಕ್ಷಣ ನಿಲ್ಲದೆ ಜೋಯಿಸರ ಮನೆ ಇತರ ಕಡೆಗಳಲ್ಲ ಹೋಗಿ ತನ್ನ ಫಸ್ಟ್‌ಕ್ಲಾಸಿನ ವಿಷಯವನ್ನು ತಿಳಿಸಿ ಬಂದ. ಯಾರಿಗೆ ಹೇಳಿದರೂ "ಬೆಂಗಳೂರಿಗೆ ಹೋಗ್ತೀಯಾ ಅನ್ನು" ಎಂದೇ ಕೇಳುತ್ತಿದ್ದರು. ಇವರಿಗೇ ಮಾವನೋ ಅತ್ತೆಯೋ ತನ್ನನ್ನು ಬೆಂಗಳೂರಿಗೆ ಕಳಿಸುವ ವಿಷಯವನ್ನು ಹೇಳಿಬಿಟ್ಟಿದ್ದಾರೇನೋ ಎನ್ನಿಸಿತು.

ಊಟಕ್ಕೆ ಮಧ್ಯಾಹ್ನ ಬಂದಾಗ ಮಾವ ಹೇಳಿದ್ದರು : ''ಸಾಯಂಕಾಲ ನಿಮ್ಮ ಮೇಷ್ಟರುಗಳನ್ನೆಲ್ಲ ಮನೆಗೆ ಬರಕ್ಕೆ ಹೇಳು. ಅವರಿಂದ ತಾನೇ ನೀನು ಫಸ್ಟ್‌ಕ್ಲಾಸಲ್ಲಿ ಪಾಸಾದ್ದು ?'' ಹೆಡ್ಮಾಸ್ಟು ಹೇಳಿದ ಹಾಗೆ ಮಾವ ಅವರಿಗೆಲ್ಲ ಸಿಹಿ ಕೊಡಲು ತಾವೇ ಹೇಳಿದ್ದರು, ತಾನು ಹೇಳುವುದಕ್ಕಿಂತ ಮುಂಚೆಯೇ. ಸಾಯಂಕಾಲ ಬಾ ಅಂತ ಹೆಡ್ಮೇಸ್ಟ್ರು ಬೇರೆ ಹೇಳಿದ್ದರಲ್ಲ, ಒಳ್ಳೇದಾಯಿತು ಎಂದುಕೊಂಡ.

ಮೊದಲು ಹೆಡ್ಮೇಸ್ಟ್ರು ಮನೆಗೇ ಅವನು ಹೋದದ್ದು. ಅವರನ್ನು ಸಂಜೆ ಆಹ್ವಾನಿಸಿದ. ''ಆಗಲಿ'' ಎಂದು. ಇವನಿಗಾಗಿ ತಂದಿದ್ದ ಪ್ಯಾಕೆಟ್ಟೊಂದನ್ನು ತಮ್ಮ ಮಾತಿನಂತೆ ಬಹುಮಾನವಾಗಿ ಕೊಟ್ಟರು. ಇವನಿಗೆ ಅದರೊಳಗೆ ಏನಿದೆಯೆಂದು ನೋಡಲು ಆತುರ. ಆದರೆ ಮೇಷ್ಟರ ಮುಂದೆ ಹೇಗೆ ತೆಗೆಯುವುದು ?

''ಬೆಂಗಳೂರಲ್ಲಿ ನಿಮ್ಮ ಮನೆ ಎಲ್ಲಿದೆ ?''

''ಚಾಮರಾಜಪೇಟೆ ಮೂರನೇ ಬೀದಿ ಸಾರ್''

''ಬೆಂಗಳೂರಿಗೆ ಬಂದಾಗ ನಿಮ್ಮ ಮನೇಗೆ ಬರ್ಲ್ಲಾ?''

''ಬನ್ನಿ ಸಾರ್''

''ಯಾರೋ ಗೊತ್ತಿಲ್ಲ ಅಂತ ಹೇಳಿಬಿಡಲ್ಲ ತಾನೇ ?''

''ಇಲ್ಲ ಸಾರ್'' ಎಂದ. ಅವರಿಂದ ಬೀಳ್ಕೊಂಡು ಹೊರಟ. ಬೇರೆಯ ಮೇಷ್ಟ್ರುಗಳನ್ನು ಅವನು ಆಹ್ವಾನಿಸಬೇಕಾಗಿತ್ತು, ಆದರೆ ಪ್ಯಾಕೆಟ್ಟಿನಲ್ಲಿರುವುದೇನು ಎಂದು ತಿಳಿಯುವ ತವಕ ; ಮಾವ-ಅತ್ತೆಯರಿಗೆ ತೋರಿಸುವ ಆತುರ. ಆದ್ದರಿಂದ ಅಲ್ಲಿಂದ ನೇರವಾಗಿ ಮನೆಗೆ ಬಂದ.

''ನೋಡಿದ್ರಾ ಮಾವ, ಇಲ್ಲಿ ?'' ಎಂದು ಪ್ಯಾಕೆಟ್ ಎತ್ತಿ ಹಿಡಿದು ತೋರಿಸಿದ.

''ಹೆಡ್ಮೇಸ್ಟ್ರು ಹೇಳಿದ್ರಲ್ಲ ಪ್ರೈಸು, ಅದು''

''ಎಲ್ಲಿ, ತಗೊಂಬಾ ನೋಡಾಣ.''

ಸೀನು ಅದನ್ನೆತ್ತಿಕೊಂಡು ಮಾವನ ಹತ್ತಿರ ಹೋದ. ಅವರು ಅದರ ಮೇಲೆ ಸುತ್ತಿದ್ದ ಕಾಗದವನ್ನು ಬಿಚ್ಚಿದರು. ಒಳಗೆ ನಾಲ್ಕಾರು ಪುಸ್ತಕಗಳು ; ವಿಜ್ಞಾನಕ್ಕೆ, ಸಮಾಜಕ್ಕೆ, ಕನ್ನಡ, ಇಂಗ್ಲಿಷಿನ ಸಣ್ಣ ಸಣ್ಣ ಪುಸ್ತಕಗಳು. ಮೇಲೆ ಒಂದು ಹಾಳೆಯಲ್ಲಿ ''ಶ್ರೀನಿವಾಸ ಮೂರ್ತಿಗೆ, ಒಳ್ಳೆಯದನ್ನು ಹಾರೈಸಿ'' ಎಂದು ಬರೆದು ರುಜು ಮಾಡಿದ್ದರು, ಹೆಡ್ಮಾಸ್ಟ್ರು.

''ಪರವಾಗಿಲ್ಲ ಕಣಯ್ಯ, ನಿಮ್ಮ ಹೆಡ್ಮೇಸ್ಟ್ರು'' ಎಂದರು ಮಾವ ಮೆಚ್ಚಿಕೆಯಿಂದ.

''ಬೇರೆ ಮೇಷ್ಟ್ರುಗಳನ್ನೂ ಕರೆದು ಬಂದೆ ತಾನೇ ?''

''ಇಲ್ಲ, ಈಗ ಹೋಗ್ತೀನಿ'' ಎಂದುಹೊರಟ.

ಸಾಯಂಕಾಲ ಐದು ಗಂಟೆಯ ಹೊತ್ತಿಗೆ ಮೇಷ್ಟ್ರುಗಳೆಲ್ಲ ಮನೆಗೆ ಬಂದರು. ಅತ್ತೆ

ರವೆವುಂಡೆ ಉಪ್ಪಿಟ್ಟು ಕಾಫಿಗಳನ್ನು ಅವರಿಗೆಲ್ಲ ಹಂಚಿದರು. ಮಾವ ಅವರ ಜೊತೆ ಮಾತಾಡುತ್ತ ಕುಳಿತಿದ್ದರು. ಅಷ್ಟೊಂದು ಜನ ಮೇಷ್ಟರುಗಳ ಮುಂದೆ ಕುಳಿತಿರಲಾಗದೆ ನಾಚಿಕೆಯಿಂದ ಸೀನು ಅಲ್ಲಿ ಇಲ್ಲಿ ಸುಳಿದಾಡುತ್ತಿದ್ದ.

''ಅಂತೂ ನೀವೆಲ್ಲ ಸೇರಿ ನಮ್ಮ ಹುಡುಗನ್ನ ಒಂದು ದಡ ಮುಟ್ಟಿಸಿದ್ರಿ'' ಎಂದರು ಮಾವ ಅವರನ್ನುದ್ದೇಶಿಸಿ.

''ನಾವೇನು ಮಾಡೋದು ಇದೆ, ಸ್ವಾಮಿ. ಅವನು ಬುದ್ಧಿವಂತ. ಒಳ್ಳೆ ವಿದ್ಯಾರ್ಥಿ'' ಎಂದರು ಹೆಡ್ಮೇಸ್ಟ್ರು.

''ಆದರೂ ನಿಮ್ಮ ತಯಾರಿ ಇಲ್ಲದಿದ್ದರೆ ಅವನು ಕಲಿಯಕ್ಕೆ ಸಾಧ್ಯವಾ ?''

ಮಿಕ್ಕವರೆಲ್ಲ ಸುಮ್ಮನಿದ್ದರು.

''ಏನು ಅವನ್ನ ಬೆಂಗಳೂರಿಗೇ ಕಳಿಸ್ತೀರಾ ?'' ಕೆಂಚಪ್ಪನವರೆಂದರು.

''ಹ್ಞೂ, ಅಷ್ಟೆ ತಾನೆ. ಪಾವಗಡದಲ್ಲಿ ಅವನೊಬ್ಬನೇ ಇದ್ದು ಓದೋದು ಕಷ್ಟ ಅಲ್ಲದೆ ನಮಗೂ ವಯಸ್ಸಾಯ್ತು. ಅವನ ಯೋಗಕ್ಷೇಮ ನೋಡ್ಕೊಳ್ಳೋ ಜವಾಬ್ದಾರಿ ನಮಗೆ ತುಂಬ ಹೆಚ್ಚು''

''ಅದು ನಿಜಾನ್ನಿ ಆದರೆ ಇಲ್ಲೇ ಬೆಳ್ದೋನು, ನಿಮಗೆ ಹೊಂದಿಕೊಂಡಿದ್ದಾನೆ.''

''ಹೊಂದೇನೋ ಹೊಂದಿಕೊಂಡಿದ್ದಾನೆ. ಆದರೆ ತಂದೆ ತಾಯಿಗಳಿಂದ ಎಷ್ಟು ದಿನಾಂತ ಹುಡುಗನನ್ನು ದೂರ ಮಾಡಿರೋದು. ಆಯ್ತು ನಮ್ಮೂರು ಸ್ಕೂಲಿನ ಅಭಿಮಾನದಿಂದ ಕರ್ಕೊಂಬಂದೆ. ನಮ್ಮ ಕರ್ತವ್ಯ ನಾವು ಮಾಡಿದ್ದೀವಿ, ಇನ್ನು ಅವರ ಪಾಡು.''

ಹಾಗಾದರೆ ಬೆಂಗಳೂರಿಗೆ ತನ್ನನ್ನು ಕಳಿಸಲು ಅತ್ತೆ-ಮಾವ ನಿರ್ಧಾರ ಮಾಡಿದ್ದಾರೆಂದು ಸೀನುವಿಗನ್ನಿಸಿತು. ತನಗೆ ಹೇಳಲೇ ಇಲ್ಲ ಎಂದುಕೊಂಡ. ಬೆಂಗಳೂರಿನ ಯೋಚನೆ ಮತ್ತೊಮ್ಮೆ ಮೂಡಲು ಇದು ಪ್ರೇರಕವಾಯಿತು. ಆದರೆ ಇವನ ಗುಂಗು ಕಡಿತಗೊಂಡದ್ದು ಮಾವ ತನ್ನನ್ನು ಕರೆದಾಗ. ಸೀನು ಅಲ್ಲಿಗೆ ಹೋದ.

ಮಾವ ಏನನ್ನೋ ಒಂದು ಹಾಳೆಯಲ್ಲಿ ಬರೆದಿದ್ದರು, ಇವನ ಕೈಗೆ ಕೊಟ್ಟು ''ಇದನ್ನು ಓದು'' ಎಂದರು. ಅವನು ಪಕ್ಕದಲ್ಲಿ ಕುಳಿತೇ ಓದಲು ತೊಡಗಿದ.

''ನಿಂತುಕೊಂಡು ಓದಯ್ಯ'' ಎಂದರು.

ಸೀನು ನಿಂತು ಓದಲುತೊಡಗಿದ. ''ನನಗೆ ವಿದ್ಯೆ ಬುದ್ಧಿ ಕಲಿಸಿದ ಗುರುಗಳೇ'' ಎಂದು ಪ್ರಾರಂಭವಾಗಿದ್ದ ಆ ಬರಹದಲ್ಲಿ ಪ್ರೀತಿ ವಿಶ್ವಾಸಗಳಿಂದ ವಿದ್ಯೆ ಹೇಳಿಕೊಟ್ಟ ಗುರುಗಳನ್ನು ವಂದಿಸಲಾಗಿತ್ತು. ಗುರುಗಳು ದೇವರಿಗೆ ಸಮಾನರು. ಮಣ್ಣನ್ನು ಚೆನ್ನವಾಗಿಸುವವರು, ತನ್ನನ್ನು ಈ ಮಟ್ಟಕ್ಕೆ ತಂದು ಏನು ಅರಿಯದಿದ್ದ ಬಾಲಕನಲ್ಲಿ ಸ್ವಲ್ಪ ವಿದ್ಯೆಯನ್ನು ತುಂಬಿ ಮುಂದೆ ಇನ್ನೂ ಹೆಚ್ಚಿನದನ್ನು ಕಲಿಯುವ ಅವಕಾಶ

ಮಾಡಿಕೊಟ್ಟಿರುವ ನಿಮಗೆಲ್ಲ ನಮಸ್ಕಾರಗಳು ; ನಿಮ್ಮ ಆಶೀರ್ವಾದ ಬಾಲಕನಾದ ತನ್ನ ಮೇಲೆ ಸದಾ ಇರಬೇಕು ; ಮಿಡಲ್ ಸ್ಕೂಲಿನಲ್ಲಿ ತನ್ನ ವಿದ್ಯೆಗೆ ಭದ್ರಬುನಾದಿ ಹಾಕಿದ ನಿಮ್ಮ ಸಹಾಯ ತುಂಬ ಬೆಲೆ ಬಾಳುವಂಥದ್ದು; ಮುಂದೆ ತಾನೇನು ಕಲಿತರೂ ಅದರ ಶ್ರೇಯಸ್ಸು ನಿಮ್ಮದು ಎಂದು ಬರೆಯಲಾಗಿತ್ತು. ಹೆಚ್ಚಿನ ಮಾತುಗಳೆಲ್ಲ ಸೀನುವಿಗೆ ಅರ್ಥವಾಗದಿದ್ದರೂ ಮುಖ್ಯ ವಿಷಯ ಏನೆಂದು ತಿಳಿಯಿತು. ಓದಿ ಮುಗಿಸಿದ ಮೇಲೆ ಮೇಷ್ಟರುಗಳಿಗೆಲ್ಲ ನಮಸ್ಕಾರ ಮಾಡುವ ಹಾಗೆ ಸೀನುವಿಗೆ ಹೇಳಿದರು ; ಅವನು ಹಾಗೆ ಮಾಡಿದ.

ಮುಂದೆ ಸೀನು ಬೆಂಗಳೂರಿಗೆ ಹೋಗುವ ವಿಷಯ ತೀರ್ಮಾನವಾದಂತಾ ಯಿತು. ಮಾವ ಅವನನ್ನು ಈ ಬಗ್ಗೆ ಅಭಿಪ್ರಾಯವನ್ನು ಕೇಳಿರಲಿಲ್ಲ ; ಅವರೇ ತೀರ್ಮಾನಿಸಿದ್ದರು. ಇನ್ನೂ ಹದಿನೈದು ದಿನಗಳು ಇಲ್ಲಿದ್ದು ಅನಂತರ ಬೆಂಗಳೂರಿಗೆ ಹೊರಡಬೇಕೆಂದು ಯೋಚಿಸಿದ್ದರು ಮಾವ. ಹೈಸ್ಕೂಲಿಗೆ ಅರ್ಜಿಗಳನ್ನು ಹಾಕಿ ಸೀಟು ಸಿಕ್ಕ ನಂತರ ಸೇರಿಕೊಳ್ಳಬೇಕಲ್ಲ, ಆದ್ದರಿಂದ ರಜೆಯಿನ್ನೂ ಇರುವಂತೆಯೇ ಬೆಂಗಳೂರಿಗೆ ಹೋಗುವುದು ಸರಿಯೆಂದು ನಿರ್ಣಯಿಸಿದ್ದರು.

ಈ ರಜೆಯ ದಿನಗಳಲ್ಲಿ ಸೀನುವಿಗೆ ಮನಸ್ಸು ಸಿಹಿ-ಕಹಿ ಕಲ್ಪನೆಗಳನ್ನುಂಟು ಮಾಡಿತ್ತು. ಜೋಯಿಸರ ಮನೆಯಲ್ಲಿ ಒಂದು ದಿನ ಮಾತಾಡುವಾಗ "ನೀನೇನಪ್ಪಾ ಇನ್ನು ಮೇಲೆ ಬೆಂಗಳೂರಿಗೆ ಹೋಗಿ ಬಿಡ್ತೀಯ. ನಮ್ಮನ್ನೆಲ್ಲ ಮರೆತು ಬಿಡ್ತೀಯ" ಎಂದರು ಸೀತಾಲಕ್ಷ್ಮಮ್ಮತ್ತೆ.

"ಏನಿಲ್ಲ"

"ಹ್ಞೂ, ನೀನು ದೊಡ್ಡ ಪಟ್ಟಣದೋನು. ನಾವೆಲ್ಲ ಹಳ್ಳಿಯೋರು. ನಾವೆಲ್ಲಾದರೂ ಸಿಕ್ಕಿದರೆ ಈ ಹಳ್ಳೀ ಗುಗ್ಗುಗಳನ್ನೇನು ಮಾತಾಡಿಸೋದು ಅಂತ ಮುಖ ತಿರುಗಿಸಿಕೋತೀಯೇನೋ" ಅಂದರು ಅವರ ಮನೆ ಅಜ್ಜಿ.

"ಬಹಳ ಓದಿಬಿಡ್ತೀಯಪ್ಪ ಬೆಂಗಳೂರಿಗೆ ಹೋಗಿ ; ಅವಿದ್ಯಾವಂತರು ಅಂತ ನಮ್ಮನ್ನ ಕಂಡರೆ ಮಾತಾಡಿಸದೆ ಇರಬೇಡ" ಎಂದಿದ್ದರು ಮತ್ತೊಬ್ಬರು.

ಇವನಿಗೆ ಕಣ್ಣಲ್ಲಿ ನೀರು ಬಂದ ಹಾಗಿತ್ತು. ತಾನಿವರನ್ನು ಮರೆತು ಬಿಡುತ್ತೇನೆಂದು ಇವರೆಲ್ಲ ನಿಜವಾಗಿಯೂ ಭಾವಿಸಿದ್ದಾರೋ ಏನೋ ಎಂದುಕೊಂಡ. ಇವರನ್ನೆಲ್ಲ ಬಿಟ್ಟು ಹೋಗಬೇಕಲ್ಲ ಅಂದುಕೊಂಡ. ಬೆಂಗಳೂರಿನಲ್ಲಿ ಇಲ್ಲಿದ್ದ ಹಾಗೆ ಜೋಯಿಸರ ಮನೆಯಷ್ಟು ಹತ್ತಿರವಾಗಿದ್ದ ಮನೆ ಯಾವುದು ಎಂದು ಆಲೋಚಿಸಿದ. ಆದರೆ ತಾನು ಹೀಗೆ ದಿನ ಪೂರ್ತಿ ಯಾರ ಮನೆಯಲ್ಲೂ ಕಾಲ ಕಳೆಯುತ್ತಿದ್ದ ನೆನಪು ಬರಲಿಲ್ಲ. ಇಲ್ಲಿನ ಹಾಗೆ ಮುತ್ತುಗದೆಲೆ ತರೋದು, ಈಜು ಹೊಡೆಯೋದು ಬೆಂಗಳೂರಲ್ಲಿ ಸಾಧ್ಯವಿಲ್ಲ ಎನ್ನಿಸಿತು. ಕಾರ್ಪೊರೇಷನ್ ಆಫೀಸ್ ಹತ್ತಿರ ಸ್ವಿಮ್ಮಿಂಗ್ ಪೂಲಿದೆ ಅಂತ ಆಗ ಅವನಿಗೆ ಗೊತ್ತಿತ್ತು. ಆದರೆ ಅದು ಹೇಗಿದೆ ಅಂತ ಅವನು ಕಂಡವನಲ್ಲ. ಅಲ್ಲಿದ್ದಾಗ ಈಜು

ಬರುತ್ತಿರಲಿಲ್ಲ, ಒಳಗೆ ಹೋಗಲು ದುಡ್ಡು ಬೇರೆ ಕೊಡಬೇಕಾಗಿತ್ತು. ದುಡ್ಡು ಕೊಟ್ಟು ಈಜಲು ಸಾಧ್ಯವೇ ಎನ್ನಿಸಿತ್ತು.

ಒಮ್ಮೆ ಲಕ್ಷ್ಮೀಪತಿಶೆಟ್ಟರು ಮನೆಯ ಹತ್ತಿರವಿದ್ದಾಗ ಅವರು ಕರೆದಿದ್ದರು.

''ಏನು ಸೀನಣ್ಣ ಅಂತೂ ಹೊಡೆದುಬಿಟ್ಟೆ?'' ಎಂದರು.

''ಏನು ಹೊಡೆದೆ ?''

''ಫಸ್ಟ್‌ಕ್ಲಾಸ್ ಹೊಡೆದುಬಿಟ್ಟೆಲ್ಲಪ್ಪಾ, ನಮಗೇನೂ ಕೊಡಲೇ ಇಲ್ಲ.''

''ಮಾವನ್ನ ಕೇಳಿ, ಕೊಡ್ತಾರೆ.''

''ಅಲ್ಲಪ್ಪ ಫಸ್ಟ್‌ಕ್ಲಾಸ್ ಹೊಡ್ದೋನು ನೀನು ; ತಿಂಡಿಕೇಳೋದು ನಿಮ್ಮ ಮಾವನ್ನಾ? ಚೆನ್ನಾಗಿದೆ.''

''ನನಗೆ ಕೊಡೋದು ಅವ್ರೇ ತಾನೆ ?'' ಎಂದಿದ್ದ ಸೀನು.

''ಅದ್ಸರಿ, ಬೆಂಗಳೂರಿಗೆ ಹೊರಟು ಹೋಗ್ತೀಯ ಅನ್ನು''

''ಹ್ಞೂ, ಮಾವ ಹಾಗೆ ಹೇಳಿದ್ರು.''

''ಬೆಂಗಳೂರಿಗೆ ಯಾಕೆ ಹೋಗ್ತೀಯ ? ಅಲ್ಲೇನಿದೆ ?''

''ಯಾಕೆ ?''

''ಮತ್ತಿನ್ನೇನು ? ನಿಮ್ಮ ಮಾವನ ಮನೇಲಿದ್ದಾಗೆ ವಾಡೆ ತುಂಬ ರಾಗಿ ಭತ್ತ ಇದ್ಯಾ? ಮಡಿಕೆಗಳಲ್ಲಿ ಕಳ್ಳೇಕಾಯಿ ತುಂಬಿಟ್ಟಿದ್ದಾರಲ್ಲ, ಅದು ಇದೆಯಾ ? ಇಷ್ಟು ದೊಡ್ಡ ಮನೆ ಇದ್ಯಾ ?'' ಸೀನುವಿಗೆ ಇದೆಲ್ಲ ನಿಜ ಅನ್ನಿಸಿತು. ತಾನು ಕಂಡು ನೆನಪಿಟ್ಟುಕೊಂಡಿರುವಷ್ಟು ಮಟ್ಟಿಗೆ ತಮ್ಮದು ತುಂಬ ಚಿಕ್ಕ ಮನೆ. ಒಂದು ಹಾಲು, ಅಡಿಗೆ ಮನೆ ಬಚ್ಚಲಮನೆ. ಜನ ಜಾಸ್ತಿ ಬೇರೆ ಎನ್ನಿಸಿತು.

''ಅದೇನು ಅಸಹ್ಯ. ಬೆಂಗಳೂರಲ್ಲಿ ಮನೆಗಳ ಪಕ್ಕದಲ್ಲೇ ಕಕ್ಕಸಗಳಂತೆ. ವಾಸ್ನೆ ಬರಲ್ವಾ ? ಏನು ಹೋಗ್ತೀಯೋಪ್ಪ ಬೆಂಗಳೂರಿಗೆ !''

''ಮಾವ ಹಾಗೆ ಹೇಳಿದಾರಲ್ಲ ?''

''ಇಲ್ಲೇ ಇರ್ತೀನಿ ಅಂತ ಹೇಳು'' ಎಂದಿದ್ದರು ಅರ್ಧ ಹಾಸ್ಯದಿಂದ. ಆದರೆ ಸೀನುವಿಗೆ ಹಾಸ್ಯಕ್ಕಿಂತ ವಾಸ್ತವಾಂಶವೇ ಅಲ್ಲಿ ಹೆಚ್ಚು ಕಾಣಿಸಿತ್ತು. ಆದರೆ ಮಾವನಿಗೆ ಹೇಗೆ ಹೇಳೋದು, ತಾನು ಬೆಂಗಳೂರಿಗೆ ಹೋಗಲ್ಲ ಅಂತ ?

ಮಾವ ತಂದೆಗೆ ಕಾಗದ ಬರೆದಿದ್ದರು ; ಅಲ್ಲಿಂದ ಉತ್ತರ ಬಂದಿತ್ತು. ತಾವೀಗ ಮನೆ ಬದಲಾಯಿಸಿದ್ದೇವೆ. ಚಾಮರಾಜಪೇಟೆಯಿಂದ ಮಾವಳ್ಳಿಗೆ ಎಂದು. ಎಷ್ಟು ಹೊತ್ತಿಗೆ ಸೀನುವನ್ನು ಕಳಿಸಿದರೆ ಅಷ್ಟು ಹೊತ್ತಿಗೆ ಬಸ್ಸಿನ ಬಳಿ ಬಂದು ಅವನನ್ನ ಮನೆಗೆ ಕರೆದುಕೊಂಡು ಹೋಗುತ್ತೇವೆಂದು ಬರೆದಿದ್ದರು. ಊರಿಗೆ ಹೊರಡುವ ದಿನ ನಿರ್ಧಾರವಾಯಿತು. ಬೆಳಿಗ್ಗೆ

ಪಾವಗಡಕ್ಕೆ ಹೋದರೆ ಅಲ್ಲಿ ನೇರವಾಗಿ ಹೋಗುವ ಗೌರ್ನಮೆಂಟ್ ಬಸ್ಸು ಸಿಕ್ಕುತ್ತೆ. ಸಾಯಂಕಾಲದ ಹೊತ್ತಿಗೆ ಬೆಂಗಳೂರಿಗೆ ತಲುಪುತ್ತದೆ. ಬಸ್‌ಸ್ಟಾಂಡಿಂದ ತಂದೆ ಮನೆಗೆ ಕರೆದೊಯ್ಯುತ್ತಾರಂತೆ.

ತಾವು ಬರಲು ಕೈಲಾಗುವುದಿಲ್ಲವೆಂದು ಮಾವ ಹನುಮಯ್ಯನನ್ನು ಪಾವಗಡದ ತನಕ ಸೀನುವನ್ನು ಬಿಟ್ಟುಬರಲು ನಿಯಮಿಸುತ್ತಾರೆ. ಈಗ ಇಲ್ಲಿಂದ ಹೇಗೂ ಬಸ್ಸಿದೆ ಪಾವಗಡದಲ್ಲಿ ಗೌರ್ನಮೆಂಟ್ ಬಸ್ಸಿಗೆ ಚೀಲ ಹಾಕಿ ಕೂರಿಸಿ ಬಂದುಬಿಟ್ಟರೆ ಸಾಕು, ಅಲ್ಲಿಂದ ನೇರವಾಗಿ ಬೆಂಗಳೂರು, ಅಲ್ಲಿ ಬಸ್‌ಸ್ಟಾಂಡಿಗೆ ತಂದೆ ಬರುವುದರಿಂದ ಯೋಚನೆಯಿಲ್ಲ. ಹನುಮಯ್ಯನಿಗೆ ಬೇಗ ಬರಲು ಮಾವ ಹೇಳುತ್ತಾರೆ.

ಹೊರಡುವ ದಿನ ಬೆಳಿಗ್ಗೆ ಎಂಟು ಗಂಟೆಗೇ ಅತ್ತೆ ಅಡಿಗೆ ಮಾಡುತ್ತಾರೆ. ದೇವರಿಗೆ ತುಪ್ಪದ ದೀಪ ಹೊತ್ತಿಸುತ್ತಾರೆ, ಇವನಿಗೆ ಬಡಿಸುತ್ತಾರೆ. ಸೀನುವಿಗೆ ಮನಸ್ಸೆಲ್ಲೋ ದೇಹವೆಲ್ಲೋ ಎನ್ನುವಂತಾಗುತ್ತದೆ. ತೀರ ಬೆಳಿಗ್ಗೆ ಬೇರೆ. ಏನೂ ಸೇರುವುದಿಲ್ಲ. ಸೀನು ಬಲವಂತದಿಂದ ಊಟವನ್ನು ಮಾಡುತ್ತಾನೆ. ಅವನ ಮನಸ್ಸಿನಲ್ಲಿ ಏನಾಗುತ್ತಿದೆಯೋ, ಅವನ ಕಣ್ಣಂಚಿನಿಂದ ಒಂದುಹನಿ ನೀರು ಕೈಲಿ ಹಿಡಿದಿದ್ದ ತುತ್ತಿಗೆ ಬೀಳುತ್ತದೆ. ಪ್ರಯಾಸಪೂರ್ವಕವಾಗಿ ತುತ್ತನ್ನು ಬಾಯಲ್ಲಿಟ್ಟುಕೊಳ್ಳುತ್ತಾನೆ.

ಮಾವ ಇವನ ಜೇಬಲ್ಲಿ ಹದಿನೈದು ರೂಪಾಯಿಗಳನ್ನಿಡುತ್ತಾರೆ. ತಮ್ಮ ಸೊಂಟಕ್ಕೆ ಅನಿಸಿಕೊಳ್ಳುತ್ತಾರೆ. ಮಾವ ತನ್ನನ್ನೆಂದೂ ಹೀಗೆ ಅಪ್ಪಿಕೊಂಡವರಲ್ಲ. ಅವರ ಕೈ ಇವನ ಬೆನ್ನನ್ನು ನೇವರಿಸುತ್ತದೆ. ಇದು ಇದ್ದು ಬಿಡಲಿ ಎನ್ನಿಸುತ್ತದೆ, ಸೀನುವಿಗೆ ಮಾವ ತನ್ನನ್ನು ಹೊಡೆದಿದ್ದರು. ಆದರೆ ಅವರಷ್ಟು ಪ್ರೀತಿಪಾತ್ರ ವ್ಯಕ್ತಿ ಈಗ ಇಲ್ಲವೇ ಇಲ್ಲ ಎನ್ನಿಸುತ್ತದೆ. ಆದರೆ ತನ್ನನ್ನೇಕೆ ಕಳಿಸುತ್ತಿದ್ದಾರೆ. ತಾನು ದೊಡ್ಡವನಾಗಿ ಚೆನಾಗಿ ಓದಲೆಂದು ತಾನೇ ?

ಅತ್ತೆಯಂತೂ ಹೊರಡುವ ಸಮಯದಲ್ಲಿ ಅಪ್ಪಿಕೊಳ್ಳುತ್ತಾರೆ, ತಲೆ ಕೆನ್ನೆ ನೇವರಿಸುತ್ತಾರೆ. ಇವನ ಕಣ್ಣುಗಳಲ್ಲಿ ಧಾರಾಕಾರವಾಗಿ ನೀರು ಸುರಿಯುತ್ತದೆ. ಅವರಂತೂ ಮಾತೇ ಆಡಲಾರರು. "ಸೀನು" ಎಂದು ಏನೋ ಹೇಳಲು ಹೊರಟರೂ ಬಾಯಲ್ಲಿ ಶಬ್ದಗಳೇ ಹೊರಡಲಾರವು. "ಬೇಸಿಗೆ ರಜದಲ್ಲಿ ಪ್ರತಿವರ್ಷ ಬಾಪ್ಪಾ" ಎಂದು ತುಂಬ ಪ್ರಯತ್ನಪಟ್ಟು ಹೇಳುತ್ತಾರೆ. "ಹ್ಞೂಂ" ಎನ್ನುವುದಕ್ಕೂ ಸಾಧ್ಯವಾಗದಂತೆ ಗಂಟಲಲ್ಲಿ ಏನೋ ತುಂಬಿಕೊಂಡು ಅಡ್ಡವಾಗಿರುವ ಅನುಭವ ಸೀನುವಿಗೆ.

"ಬಾರಯ್ಯಾ. ಬಸ್ಸಿಗೆ ಹೊತ್ತಾಗತ್ತೆ ಹೊರಡು" ಎನ್ನುತ್ತಾರೆ ಮಾವ.

ಸೀನು ಅತ್ತೆ - ಮಾವನಿಗೆ ನಮಸ್ಕಾರ ಮಾಡಿ ಹೊರಡುತ್ತಾನೆ. ಹನುಮಯ್ಯ ಗಂಟನ್ನು ಹೊತ್ತುಕೊಳ್ಳುತ್ತಾನೆ. ಅತ್ತೆ ಮನೆಯ ಬಾಗಿಲಲ್ಲಿ ನಿಂತು ಇವರು ಹೋಗುವುದನ್ನೇ ನೋಡುತ್ತ ನಿಲ್ಲುತ್ತಾರೆ. ದಾರಿಯಲ್ಲಿ ಜೋಯಿಸರ ಮನೆಯವರೂ ಹೋಗುವ ಸೀನುವನ್ನು ಕಾಣುತ್ತಾರೆ. ಅವರ ಮನೆಯ ಅಜ್ಜಿ ಒಂದು ರೂಪಾಯಿಯ

ನೋಟು ಜೇಬಿಗೆ ತುರುಕುತ್ತಾರೆ. ಅವರೆಲ್ಲರಿಗೆ ಬರುತ್ತೇನೆಂದು ಕಣ್ಣಲ್ಲೇ ಸೀನು ಹೇಳಿ ಮುಂದುವರಿಯುತ್ತಾನೆ.

ಧೂಳೆಬ್ಬಿಸಿಕೊಂಡು ಬಂದು ನಿಂತ ಬಸ್ಸಿನ ಮೇಲೆ ಹನುಮಯ್ಯ ಸಾಮಾನು ಹಾಕುತ್ತಾನೆ. ಸೀನು ಬಸ್ಸನ್ನೇರಿ ಕುಳಿತುಕೊಂಡು ಕಿಟಕಿಯ ಹತ್ತಿರ ಬಂದು "ಮಾವ" ಎನ್ನುತ್ತಾನೆ.

"ಒಳ್ಳೇದಪ್ಪಾ, ರಜಕ್ಕೆ ಬಾ" ಎಂದು ಮಾವ ಹೇಳಿದಾಗ ಅವನಿಗೆ ಕಣ್ಣಲ್ಲಿ ನೀರು ತುಂಬುತ್ತದೆ. ಬಸ್ಸು ಹೊರಡುತ್ತದೆ. ಸ್ವಲ್ಪ ಹೊತ್ತಿಗೆಲ್ಲ ಪೆಮ್ಮನಹಳ್ಳಿ ಇವನ ಕಣ್ಣಿಂದ ದೂರವಾಗುತ್ತದೆ.

೧೫

ಒಂದೇ ಸಮನೆ ಬಸ್ಸು ಹೋಗುತ್ತಿರುವುದನ್ನು ನೋಡಿದರೆ ಅದೇನು ನಿಲ್ಲುವುದೇ ಇಲ್ಲವೇನೋ ಎನ್ನಿಸುತ್ತಿತ್ತು ಸೀನುವಿಗೆ. ಬಸ್ಸಿನ ವೇಗ ಶಬ್ದಗಳಿಗೆ ಅವನ ಕಣ್ಣು ಮೆತ್ತಿಕೊಳ್ಳುತ್ತಿತ್ತು.ಮುಚ್ಚಿದ ಕಣ್ಣುಗಳೊಳಗೆ ಏನೇನೋ ಕಾಣುತ್ತಿದ್ದವು. ತಾನು ಪೆಮ್ಮನಹಳ್ಳಿಯನ್ನು ಬಿಟ್ಟೇ ಬಿಟ್ಟೆ ಎಂಬ ಆಲೋಚನೆ ಬಂದಾಗ ಅವನಿಗೆ ಭಯವಾಗುತ್ತದೆ. ಅತ್ತೆ-ಮಾವರನ್ನು ಬಿಟ್ಟು ಹೇಗಪ್ಪ ಇರೋದು ಅನ್ನಿಸುತ್ತದೆ. ಕಣ್ಣಿಗೆ ಜೋಂಪು ಹತ್ತಿದಂತಾಗಿ ಅವನ ತಲೆ ಪಕ್ಕದವರ ಭುಜದತ್ತ ವಾಲುತ್ತದೆ. "ಸರಿಯಾಗಿ ಕೂತ್ಕೊಪ್ಪ" ಎಂದು ಅವರು ಎಚ್ಚರಿಸಿದಾಗ ಇವನು ಸರಿಯಾಗಿ ಕುಳಿತುಕೊಳ್ಳುತ್ತಾನೆ. ಬಸ್ಸು ಮುಂದೆ ಸಾಗುವಾಗ ಕಿಟಕಿಯೊಳಗಿಂದ ತೂರಿ ಬಂದ ಗಾಳಿ ಇವನ ತಲೆಗೂದಲನ್ನು ಹಿಂದೆ ಬಾವುಟದಂತೆ ಹಾರುವಂತೆ ಮಾಡುತ್ತದೆ.

ಬಸ್ಸು ಎಲ್ಲೆಲ್ಲೋ ನಿಲ್ಲುತ್ತದೆ. ಜನ ಹತ್ತುತ್ತಾರೆ, ಜನ ಇಳಿಯುತ್ತಾರೆ; ತಾನು ಮಾತ್ರ ಬಸ್ಸು ಹೊರಡುವಲ್ಲಿ ಹತ್ತಿ ಅದು ನಿಲ್ಲುವ ಕಡೆಯೇ ಇಳಿಯುವವನು. ಕೂತು ಕಾಲು ಜೋಮು ಹಿಡಿಯುತ್ತದೆ, ಸೊಂಟ ನೋಯುವಂತಾಗುತ್ತದೆ. ಹೊಟ್ಟೆ ಹಸಿಯುವಂತಾಗಿ ಅತ್ತೆ ಕೈ ಚೀಲದಲ್ಲಿ ಮೇಲೆಯೇ ಸಿಕ್ಕುವಂತೆ ಇಟ್ಟಿದ್ದ ಪೊಟ್ಟಣದಿಂದ ತಿಂಡಿ ತೆಗೆದು ತಿನ್ನುತ್ತಾನೆ, ಕೆಳಗಿಳಿದು ಬಸ್‌ಸ್ಟ್ಯಾಂಡಿನಲ್ಲಿನ ನಲ್ಲಿಯಲ್ಲಿ ನೀರು ಕುಡಿದು ಬರುತ್ತಾನೆ. ಅವನ ಪಕ್ಕದಲ್ಲಿ ಕೂತವರು ಇಳಿದು ಬೇರೊಬ್ಬರು ಬರುತ್ತಾರೆ. ಇವನು ಮಾತ್ರ ಇದ್ದಲ್ಲಿಯೇ.

ಬಸ್ಸು ತುಮಕೂರಿಗೆ ಹತ್ತಿರವಾಗುತ್ತಿದೆಯೆಂದು ಸುತ್ತಮುತ್ತಲಿನವರು ಮಾತಾಡಿಕೊಳ್ಳುತ್ತಾರೆ. ಅಲ್ಲಿ ಇಳಿಯುವವರು ತರಾತುರಿಯಿಂದ ತಮ್ಮ ತಮ್ಮ ಸಾಮಾನುಗಳ ಕಡೆ ಕಣ್ಣು ಹಾಯಿಸುತ್ತಾರೆ, ಒಟ್ಟುಗೂಡಿಸಿಕೊಳ್ಳುತ್ತಾರೆ. ಇವರ ಹಿಂದಿನ ಸೀಟಿನವರು ಇವನ ಸೀಟಿನ ಕೆಳಗಡೆಯಿಟ್ಟಿದ್ದ ಸಾಮಾನನ್ನೆತ್ತಿಕೊಳ್ಳಲು ಬಾಗಿ ಇವನು ಕಾಲಿಟ್ಟಿದ್ದು ಕಂಡು "ಸ್ವಲ್ಪ ಕಾಲೆಳೆದುಕೊಳ್ಳಪ್ಪ" ಎನ್ನುತ್ತಾರೆ. ಸೀನು ಬಾಗಿ ನೋಡುತ್ತಾನೆ. ಅಲ್ಲಿ ಐದು ರೂಪಾಯಿಯ ನ್ನೋಟು ಕಾಣಿಸುತ್ತದೆ. ಅದನ್ನು ಎತ್ತಿಕೊಂಡು ಮುಷ್ಟಿಯಲ್ಲಿ ಹಿಡಿದುಕೊಂಡು ಕೈಯನ್ನು ಚಡ್ಡಿಯ ಜೇಬಿಗೆ ನಿಧಾನವಾಗಿ ಇಳಿಯಬಿಡುತ್ತಾನೆ.

ಬಸ್ಸು ತುಮಕೂರಿಂದ ಹೊರಡುತ್ತದೆ. ಆಗಲೇ ಮಧ್ಯಾಹ್ನ ಮೂರು ಮೂರೂವರೆಯ ಸಮಯ. ಬಸ್ಸು ನಿಂತಾಗ ಸೆಕೆಯನ್ನಿಸುತ್ತಿದ್ದು ಓಡುವಾಗ ಹಾಯೆನಿಸುತ್ತದೆ. ಸೀನುವಿಗೆ ಏನೋ ಒಂದು ಥರವೆನ್ನಿಸುತ್ತದೆ. ಅವತ್ತು ಶ್ಯಾನುಭೋಗರ ದೊಡ್ಡ ಮಗ ತನ್ನ ಸೊಂಟಕ್ಕೆ ಪಂಚೆ ಕಟ್ಟಿ ಈಜು ಕಲಿಸಲು ಬಾವಿಗೆ ನೂಕಿದ್ದನಲ್ಲ, ತಾನು ಆಗ ಹೇಗೆ ಒದ್ದಾಡಿದ್ದೆ ಎಂಬುದು ನೆನಪಿಗೆ ಬರುತ್ತದೆ. ಬೆಂಗಳೂರಲ್ಲಿ ಈಜಲು ಜಾಗವೆಲ್ಲಿದೆ ? ಸ್ವಿಮ್ಮಿಂಗ್ ಪೂಲ್ ವಿಚಾರ ಅವನಿಗೆ ಗೊತ್ತಿದೆ. ಆದರೆ ಅದೆಲ್ಲಿದೆಯೋ ? ಹಾಗಾದರೆ ಬೆಂಗಳೂರಲ್ಲಿ ಈಜಲು ಸಾಧ್ಯವಿಲ್ಲವೇ ಎನಿಸಿ ಬೇಸರವಾಗುತ್ತದೆ.

ಬಸ್ಸು ಯಾವುದೋ ಊರಲ್ಲಿ ನಿಂತಾಗ ಕಿಟಕಿಯ ಹತ್ತಿರ ಬಾಳೇಹಣ್ಣು ಮಾರುವವನು ಬಂದು ಎಲ್ಲರ ಮುಖದ ಹತ್ತಿರ ಹಿಡಿದು 'ಕೊಳ್ಳಿ' ಎನ್ನುತ್ತಾನೆ. ಇವನ ಪಕ್ಕದಲ್ಲಿ ಕೂತಿದ್ದವರು ನಾಲ್ಕು ಬಾಳೆಹಣ್ಣು ಕೊಂಡು ತಮ್ಮ ಕೈಚೀಲದಲ್ಲಿ ಸೇರಿಸಿ ದುಡ್ಡು ಕೊಡಲು ತಮ್ಮ ಜುಬ್ಬದ ಜೇಬಿಗೆ ಹಾಕಿ ಹಣ ತೆಗೆಯುತ್ತಾರೆ. ಅಲ್ಲಿ ಇಲ್ಲಿ ಬಾಗಿ ನೋಡುತ್ತಾರೆ, ಕೊನೆಗೆ ಬಸ್ಸು ಹೊರಡುವುದರಲ್ಲಿದೆಯೆಂಬ ಸೂಚನೆ ಬಂದಾಗ ಬಾಳೆಹಣ್ಣಿನವನು ಆತುರಪಡಿಸಿದಾಗ ತಮ್ಮ ಅಂಗೈಯಲ್ಲಿದ್ದ ಚಿಲ್ಲರೆಯನ್ನೇ ಬೇಗ ಬೇಗ ಎಣಿಸಿ ಅವನಿಗೆ ಕೊಡುತ್ತಾರೆ, ಬಸ್ಸು ಹೊರಡುತ್ತದೆ.

ಬಸ್ಸು ಓಡುತ್ತಿರುವಾಗಲೂ ಒಂದೆರಡು ಸಲ ಅವರು ಬಾಗಿ ಸೀಟಿನ ಕೆಳಗೆ ಸುತ್ತಮುತ್ತ ನೋಡುತ್ತಾರೆ. ಕೊನೆಗೆ "ಏನಪ್ಪ ಮರಿ, ಐದು ರೂಪಾಯಿ ನೋಟು ಎಲ್ಲೋ ಇಲ್ಲೇ ಬಿದ್ದು ಬಿಟ್ಟಿದೇಂತ ಕಾಣುತ್ತೆ ನೀನು ನೋಡಿದ್ಯಾ ?" ಎನ್ನುತ್ತಾರೆ, ಸೀನುವಿನ ಕಡೆ ತಿರುಗಿ. ಅವರು ಹುಡುಕುತ್ತಿದ್ದದ್ದು ಏನು ಎಂಬುದೀಗ ಇವನಿಗೆ ತಿಳಿದು ಎದೆ ಡವಡವಗುಟ್ಟಲು ಪ್ರಾರಂಭವಾಗುತ್ತದೆ. "ಊಹ್ಞೂ" ಎನ್ನುತ್ತಾನೆ. ಅವರು ಇನ್ನೂ ತಮ್ಮ ಹುಡುಕಾಟವನ್ನು ಮುಂದುವರೆಸುತ್ತಾರೆ.

ಸೀನು ಚಡ್ಡಿ ಜೇಬನ್ನು ಮೇಲಿಂದ ಮುಟ್ಟಿಕೊಳ್ಳುತ್ತಾನೆ. ತಾನು ಮುಷ್ಟಿಯಲ್ಲಿ ಉಂಡೆಯಂತೆ ಮಾಡಿ ಇಟ್ಟುಕೊಂಡಿದ್ದ ನೋಟು ಜೇಬಲ್ಲಿ ಒಂದು ಗುಬುಟನ್ನು ಮಾಡಿ, ಇವನು ಮೇಲಿಂದ ಸವರಿದಾಗ ಕೈಗೆ ತಾಗುತ್ತದೆ. ಅಲ್ಲಿ ಮಾವ ಕೊಟ್ಟ ದುಡ್ಡೂ ಇದ್ದದ್ದು ನೆನಪಿಗೆ ಬರುತ್ತದೆ. ಮಾವನ ನೆನಪು ಬಂದಾಗ, ಹೊರಡುವಾಗ ಅವರು ತನ್ನನ್ನು ಅಪ್ಪಿಕೊಂಡು ತಲೆ ನೇವರಿಸಿದ್ದು ನೆನಪಿಗೆ ಬರುತ್ತದೆ. ತಕ್ಷಣ ಅತ್ತೆ ಮನಸ್ಸನ್ನಾವರಿಸುತ್ತಾರೆ. ಅತ್ತೆ ಮಾಡಿ ಕೊಟ್ಟಿದ್ದ ತಿಂಡಿಯ ಪೊಟ್ಟಣದತ್ತ ಕೈ ಓಡಿ ಅದರಿಂದ ಒಂದು ಕೋಡು ಬಳೆಯನ್ನು ತೆಗೆಯುತ್ತಾನೆ. ಅದನ್ನು ಮುರಿದು ತಿನ್ನುವಾಗ ಗಂಟಲಲ್ಲಿ ಸಿಕ್ಕಿಹಾಕಿ ಕೊಂಡಂತಾಗಿ ಕೆಮ್ಮುತ್ತಾನೆ, ಕಣ್ಣು ಮೂಗುಗಳಿಗೆ ಘಾಟು ಹತ್ತಿದಂತಾಗಿ ನೀರು ತುಂಬುತ್ತದೆ.

"ಏನು ಸ್ವಾಮಿ ಹುಡುಕುತ್ತಿದ್ದೀರಾ ?" ಎಂಬ ಶಬ್ದ ಕೇಳಿ ಸೀನು ಆ ಕಡೆ ನೋಡುತ್ತಾನೆ. ತನ್ನ ಪಕ್ಕದ ಸೀಟಿನವರ ಹುಡುಕಾಟ ನೋಡಿ ಇನ್ನೊಬ್ಬರು ಪ್ರಯಾಣಿಕರು ಕೇಳಿದ ಪ್ರಶ್ನೆ ಅದು.

"ಐದು ರೂಪಾಯಿ ನೋಟೊಂದು ಎಲ್ಲೋ ಬಿದ್ದಿದೆಯಲ್ಲ."

"ಸರಿಯಾಗಿ ಜೇಬನ್ನೇ ನೋಡ್ಕಳ್ಳಿ. ಎಲ್ಲಿ ಹೋಗುತ್ತೆ."

ಅವರು ಮತ್ತೊಮ್ಮೆ ಜೇಬುಗಳಲ್ಲಿ ತಡಕುತ್ತಾರೆ. ಒಳಗಿದ್ದ ಹಣವನ್ನೆಲ್ಲ ಹೊರ ತೆಗೆದು ಪರಿಶೀಲಿಸುತ್ತಾರೆ ; ಐದು ರೂಪಾಯಿ ನೋಟು ಕಾಣಿಸುವುದಿಲ್ಲ.

"ಎಲ್ಲೊ ಬಿದ್ದು ಬಿಟ್ಟಿದೇಂತ ಕಾಣುತ್ತೆ"

"ಬಸ್ಸಲ್ಲೇ ಬಿದ್ದಿದ್ದೆ ಸ್ವಾಮಿ, ಕಂಡಕ್ಟರು ಚಿಲ್ರೆ ಕೊಟ್ಟಾಗ ಜೇಬಲ್ಲಿ ಹಾಕ್ಕಂಡೇ ಬಸ್ಸು ಹತ್ತಿದ್ದು"

"ಅಂಗಾದ್ರೆ ನೀವು ಜೇಬಿಗೆ ಹಾಕ್ಕೊಳ್ಳೋವಾಗ ಕೆಳಗೆ ಬಿದ್ದೈತೆ, ನೋಡ್ಕಂಡವನು ಯಾವನೋ ಒಡ್ದು ಬಿಟ್ಟವನೆ"

"ಕಳ್ಳ ಸೂಳೇ ಮಗ" ಎಂದು ಸೀಟಿನವರು ಗೊಣಗಿಕೊಂಡಾಗ ಸೀನುವಿಗೆ ತುಂಬ ಭಯವಾಗುತ್ತದೆ, ತನ್ನನ್ನೇ ಕುರಿತು ಅವರು ಹೇಳಿದರೇನೋ, ಅವರಿಗೆ ಹಾಗಾದ್ರೆ ಗೊತ್ತಾಗಿದೆಯಾ ? ಎದೆಯ ಬಡಿತ ತೀವ್ರವಾಗುತ್ತದೆ.

ಅವನ ಮನಸ್ಸಿಗೆ ಅವತ್ತು ಪೋಸ್ಟಾಫೀಸಿಂದ ಐದು ರೂಪಾಯಿ ತಗೊಂಡಿದ್ದ ಪ್ರಸಂಗ ಜ್ಞಾಪಕ್ಕೆ ಬರುತ್ತದೆ. "ಕಳ್ಳತನ ಮಾಡ್ತೀಯೇನೋ, ಪೋಲಿಸ್ನೋರಿಗೆ ಹಿಡಕೊಡ್ತೀನಿ ನೋಡು" ಎಂದು ಮಾವ ಹೇಳಿದ್ದು ಕಿವಿಯಲ್ಲಿ ರಿಮುಗುಟ್ಟುತ್ತದೆ. ತಾನು ತೊಗೊಂಡಿಲ್ಲ ಅಂತ ಹೇಳಿದಾಗ ಮಾವ ನಂಬದೆ ತನ್ನ ಜಾಮಿಟ್ರಿ ಬಾಕ್ಸಲ್ಲಿ ಹುಡುಕಿ ಬಿಟ್ಟರಲ್ಲ! ಇವರೂ ಹಾಗೆ ನನ್ನ ಜೇಬಲ್ಲಿ ಹುಡುಕಿ ಬಿಟ್ಟರೆ! ಆದರೆ ತಾನೇನೂ ಕದ್ದಿಲ್ಲವಲ್ಲ ಅದೇ ಸಿಕ್ಕಿದ್ದು ತಾನೇ!

"ನಿನಗೇನಾದರೂ ಸಿಕ್ಕಿದ್ದರೆ ಕೊಟ್ಟಿಡಪ್ಪ" ಎಂದು ಪಕ್ಕದ ಸೀಟಿನವರು ಕೇಳಿದಾಗ ಸೀನು "ಉಹ್ಞೂ" ಎನ್ನಲು ಹೊರಡುತ್ತಾನೆ ; ಗಂಟಲಲ್ಲಿ ಏನೋ ಸಿಕ್ಕಿಹಾಕಿಕೊಂಡು ಹಾಗಾಗುತ್ತದೆ. ಕಿಟಕಿ ಹೊರಗೆ ನೋಡುತ್ತ ಕೂತುಕೊಂಡರೂ ಸೀನುವಿಗೆ ಭಯವಾಗುತ್ತಿರುತ್ತದೆ. ಅವತ್ತು ಮಾವ ಏಟು ಕೊಟ್ಟಿದ್ದು ನೆನಪಾಗಿ, ಇವರಿಗೆ ತಾನು ತೆಗೆದುಕೊಂಡ ವಿಷಯ ಗೊತ್ತಾಗಿ ಏಟುಕೊಟ್ಟರೆ ಎನ್ನಿಸುತ್ತದೆ, ಅವತ್ತು ಅತ್ತೆ ತನ್ನನ್ನು ಬಿಡಿಸಿದರು, ಇವತ್ತಿಲ್ಲಿ ಅತ್ತೆಯಿಲ್ಲವಲ್ಲ, ತನ್ನನ್ನು ಯಾರೂ ಬಿಡಿಸಿಕೊಳ್ಳಲಾರರೇನೋ. ಅವನ ಭಯ ಜಾಸ್ತಿಯಾದಂತೆನಿಸುತ್ತದೆ. ಇವರೂ ಬೆಂಗಳೂರಿನೋರೇನೋ. ಅಲ್ಲಿ ತನ್ನನ್ನು ಕರಕೊಂಡು ಹೋಗಕ್ಕೆ ನಮ್ಮಪ್ಪ ಬರ್ತಾರಂತೆ. ಅವರಿಗೇನಾದರೂ ಈವಯ್ಯ ತಾನು ದುಡ್ಡು ತಗೊಂಡಿದ್ದು ಹೇಳಿದರೆ ಏನು ಮಾಡುತ್ತಾರೋ. ಪೋಲೀಸ್ನೋರಿಗೇ ಕೊಟ್ಟು ಬಿಟ್ಟರೇ! ವಾಪಸು ಕೊಟ್ಟು ಬಿಟ್ಟರೇ? ಆದರೆ ತಾನು ತಗೊಂಡಿಲ್ಲ ಅಂತ ಹೇಳಿದೆನಲ್ಲ, ಈಗ ಕೊಟ್ಟರೂ ನಾನೇ ತಗಂಡಿದ್ದು ಅಂತ ಅವರಿಗೆ ಗೊತ್ತಾಗಿಬಿಡುತ್ತಲ್ಲ, ಏನು ಮಾಡೋದು ?

ಸೀನು ಸ್ವಲ್ಪ ಹೊತ್ತು ಚಡಪಡಿಸುತ್ತಾ ಕೊನೆಗೆ ಏನೋ ತೀರ್ಮಾನಕ್ಕೆ ಬಂದವನಂತೆ ಚಡ್ಡಿ ಜೇಬಿಗೆ ಕೈ ಹಾಕಿ ಮುಷ್ಟಿಯಲ್ಲಿ ತಾನಿಟ್ಟಿದ್ದ ನೋಟಿನ ಉಂಡೆಯನ್ನು ಹಿಡಿದು ಹೊರತೆಗೆಯುತ್ತಾನೆ. ತನ್ನ ತೊಡೆಗೂ ಬಸ್ಸಿನ ಬದಿಗೂ ಮಧ್ಯೆ ಮುಷ್ಟಿ ಹಿಡಿದು ಸ್ವಲ್ಪ ಬಿಚ್ಚಿ ನೋಡುತ್ತಾನೆ, ಅದೇ ಐದರ ನೋಟು. ತಾನು ಬೇರೆ ನೋಟನ್ನು, ಮಾವ ಕೊಟ್ಟಿದ್ದ ಹತ್ತು ರೂಪಾಯಿ ನೋಟೊಂದನ್ನೇನಾದರೂ ತೆಗೆದುಕೊಂಡುಕೊಂಡು ಬಿಟ್ಟಿದ್ದರೆ ಎಂಬ ಭಯ ಹೋಗುತ್ತದೆ. ಅವನು ಬಾಗುತ್ತಾನೆ, ಸೀಟಿನ ಕೆಳಗಡೆ ಯಾರಿಗೂ ಕಾಣದಂತೆ ಆ ಐದರ ನೋಟನ್ನು ಇಟ್ಟು ಮತ್ತೆ ಸರಿಯಾಗಿ ಕೂತುಕೊಳ್ಳುತ್ತಾನೆ. ಆದರೆ ಈ ಹೊತ್ತಿಗೆ ಪಕ್ಕದ ಸೀಟಿನವರು ತಮ್ಮ ಹುಡುಕಾಟವನ್ನು ನಿಲ್ಲಿಸಿರುತ್ತಾರೆ. ಅವರು ಹುಡುಕದೇನೇ ಇದ್ದರೆ ? ಆ ನೋಟನ್ನು ಬೇರೆ ಯಾರಾದರೂ ತೆಗೆದು ಕೊಂಡುಬಿಟ್ಟರೇ? ಅವನಿಗೆ ಅಸಮಾಧಾನವಾಗುತ್ತದೆ. ಸ್ವಲ್ಪ ಹೊತ್ತಿನ ನಂತರ ಮತ್ತೆ ಯಾತಕ್ಕೂ ಬಗ್ಗಿದವನಂತೆ ಕೆಳಗೆ ಬಗ್ಗುತ್ತಾನೆ. ಆ ನೋಟನ್ನು ತೆಗೆದುಕೊಂಡು ಮೇಲೆದ್ದು ಬಿಡಿಸುತ್ತಾ.

''ಇದೇನಾ ನೀವು ಕಳಕೊಂಡಿದ್ದ ಐದು ರೂಪಾಯಿ?'' ಎಂದು ಪಕ್ಕದ ಸೀಟಿನವರಿಗೆ ತೋರಿಸಿದಾಗ ಅವರ ಮುಖ ಅರಳುತ್ತದೆ.

''ಇದು ಹೆಂಗಪ್ಪ ಸಿಗ್ತು ನೀನು ತಗೊಂಡಿದ್ಯಾ ?'' ಎಂದು ಅವರು ಕೇಳಿದಾಗ ಸೀನುವಿನ ಎದೆ ಡವಗುಟ್ಟುತ್ತದೆ. ಕೊಟ್ಟರೂ ಈ ಮಾತು ಹೇಳ್ತಾರಲ್ಲ ಎಂದು ಕೋಪವೂ ಬರುತ್ತದೆ.

''ಕೆಳಗೆ ನೋಡಿದಾಗ ಕಾಣಿಸ್ತು'' ಎನ್ನುತ್ತಾನೆ, ಮೊಟಕಾಗಿ, ಅವರು ನೋಟನ್ನು ಸರಿಯಾಗಿ ಬಿಡಿಸಿ ಜೇಬಲ್ಲಿಟ್ಟುಕೊಂಡು ಇವನು ಬೆನ್ನನ್ನು ನೇವರಿಸಿ ''ಭೇಷ್, ಒಳ್ಳೇ ಹುಡುಗ'' ಎನ್ನುತ್ತಾರೆ. ಯಾಕೋ ಸೀನುವಿಗೆ ಅಳು ಬಂದ ಹಾಗಾಗುತ್ತದೆ. ಮಾವ ಅವತ್ತು ಹಾಗಂದಿರಲಿಲ್ಲವಲ್ಲ ಎನಿಸಿ ದುಃಖ ಹೆಚ್ಚಾಗುತ್ತದೆ.

ಅವನು ಸೀಟಿಗೊರಗಿ ಕಣ್ಮುಚ್ಚಿ ಕೂತುಕೊಳ್ಳುತ್ತಾನೆ. ಪಕ್ಕದಲ್ಲಿದ್ದವರು ''ಬೆಂಗಳೂರಲ್ಲಿ ಎಲ್ಲಿಳೀಬೇಕಪ್ಪ ನೀನು ?'' ಎಂದು ಕೇಳಿದಾಗಲೇ ಸೀನುವಿಗೆ ಎಚ್ಚರ, ಕಣ್ಣು ಬಿಡುತ್ತಾನೆ. ಆಗಲೇ ಯಾವುದೋ ಊರು ಬಂದಿದೆ. ಕಣ್ಣುಜ್ಜಿಕೊಳ್ಳುತ್ತಾನೆ. ''ಯಾವೂರು ?'' ಎಂದು ಪಕ್ಕದಲ್ಲಿದ್ದವರನ್ನು ಕೇಳಿದಾಗ ''ಬೆಂಗಳೂರು ಎನ್ನುತ್ತಾರೆ.'' ''ಆ್ಞ'' ಎಂದು ಗಾಬರಿ ಸೂಚಿಸಿದಾಗ ಅವರು ''ಇದು ಮಲ್ಲೇಶ್ವರ ಸ್ಟಾಪು. ನೀನೆಲ್ಲಿಳೀಬೇಕು ?'' ಎನ್ನುತ್ತಾರೆ.

''ಗೌರ್ಮೆಂಟ್ ಬಸ್‌ಸ್ಟಾಂಡು''

''ಹಂಗಾದ್ರೆ ಕೂತ್ಕೋ. ಇನ್ನೂ ಮುಂದೆ''

ಆಗಲೇ ಬೆಂಗಳೂರು ಬಂದು ಬಿಡ್ತಾ ? ಬಸ್ಸು ಮುಂದೆ ಸಾಗಿದಾಗ ಎಲ್ಲೆಲ್ಲೂ ಊರೇ ಕಾಣಿಸುತ್ತದೆ. ಪೆಮ್ಮನಹಳ್ಳಿಯಲ್ಲಿ ಆ ಕಡೆಯಿಂದ ಈ ಕಡೆ ಎಷ್ಟು ಬೇಗ ಹೋಗಿಬಿಡಬಹುದಾಗಿತ್ತು. ಇಲ್ಲಿ ಒಂದು ಬಸ್‌ಸ್ಟಾಪಿಂದ ಇನ್ನೊಂದಕ್ಕೇ ಎಷ್ಟು ದೂರ

ಎನ್ನಿಸುತ್ತದೆ. ತಾನು ಇಲ್ಲಿ ಇಳಿದರೆ, ಅಪ್ಪ ಬರದಿದ್ದರೆ ? ಅವರಿಗೆ ಮಾವ ಬರೆದ ಕಾಗದ ಸೇರದೇ ಇದ್ದರೆ ಏನು ಮಾಡೋದು ? ಎಷ್ಟೋ ಸಲ ಕಾಗದಗಳು ಅಡ್ರೆಸ್ ಸರಿಯಾಗಿದ್ದರೂ ತಲುಪಲ್ಲವಂತೆ, ಈಗಲೂ ಹಾಗೇ ಆಗಿದ್ದರೆ ? ಇವತ್ತು ತಾನು ಬರೋದು ಅಪ್ಪಂಗೆ ಗೊತ್ತಾಗದಿದ್ದರೆ, ಏನು ಮಾಡೋದು ? ಹಾಗೇ ಪೆಮ್ಮನಹಳ್ಳೀಗೆ ವಾಪಸ್ಸು ಹೋಗಿಬಿಟ್ಟರೆ. ಆದರೆ ಈ ಬಸ್ಸು ರಾತ್ರಿ ಇಲ್ಲೇ ಇರುತ್ತಂತೆ, ನಾಳೇನಂತೆ ಪಾವಗಡಕ್ಕೆ ಹೋಗೋದು. ಹಾಗಾದರೆ ಏನು ಮಾಡೋದು ? ಮತ್ತೆ ಅವನನ್ನು ಗಾಬರಿ ಆವರಿಸುತ್ತದೆ.

ಆದರೆ ಹಾಗೇನೂ ಆಗುವುದಿಲ್ಲ. ಬಸ್‌ಸ್ಟಾಂಡ್ ಬಂದಾಗ ಜನರು ಬಸ್ಸಿನಲ್ಲೇ ಎದ್ದು ನಿಲ್ಲುತ್ತಾರೆ, ತಮ್ಮ ಸಾಮಾನುಗಳನ್ನು ತೆಗೆದುಕೊಳ್ಳುತ್ತಾರೆ. ತಾನೂ ತನ್ನ ಕೈ ಚೀಲವನ್ನು ತೆಗೆದುಕೊಳ್ಳುತ್ತಿರುವಾಗ "ಸೀನು" ಎಂದು ಕರೆದದ್ದು ಕೇಳಿಸಿ ಕಿಟಕಿಯ ಹೊರಗೆ ಕಣ್ಣೋಡಿಸುತ್ತಾನೆ. "ಇಲ್ಲಿ" ಎಂದು ಕರೆದವರ ಕೈಯೊಡ್ಡಿದಾಗ ತನಗೆ ಬ್ಯಾಗು ಕೊಡಲು ಕ್ಷಣ ಅನುಮಾನ. ಆದರೆ ಅವರನ್ನು ಕಂಡದ್ದು ನೆನಪಿರುವಂತೆ ತೋರಿದಾಗ ಬ್ಯಾಗ್ ಕೊಟ್ಟು ಹೊರಡಲು ತಯಾರಾಗುತ್ತಾನೆ "ಮೇಲೇನಿದೆ?" ಎಂದಾಗ, "ಸಿಮೆಂಟ್ ಬ್ಯಾಗು" ಎನ್ನುತ್ತಾನೆ.

ಸೀನು ಬಸ್ಸಿನಿಂದ ಕೆಳಗಿಳಿಯುವ ಹೊತ್ತಿಗೆ ಸಿಮೆಂಟ್ ಬ್ಯಾಗನ್ನು ಕೆಳಗಿಳಿಸಿಕೊಂಡು ಕಾಯುತ್ತಿರುತ್ತಾರೆ. ಆರೆ ಅಪ್ಪನೆಂಬುದರಲ್ಲಿ ಸಂಶಯವುಳಿದಿರುವುದಿಲ್ಲ. ಆ ಕಡೆ ಈ ಕಡೆ ನೋಡುತ್ತಾನೆ. ಬರೀ ಜನ, ಗದ್ದಲ. "ಬಾ ಹೋಗಾಣ" ಎನ್ನುತ್ತಾರೆ ಅಪ್ಪ; ಇವನು ಮೂಕನಾಗಿ ಅವರ ಹಿಂದೆ ಹೊರಡುತ್ತಾನೆ.

ಹೊರಗೆ ಜಟಕಾ ಗಾಡಿಗೆ ಕಾಯುವುದರಲ್ಲೇ ಸ್ವಲ್ಪ ಹೊತ್ತಾಗುತ್ತದೆ. ಆಗಲೇ ಕತ್ತಲಾಗಲು ಪ್ರಾರಂಭವಾಗಿರುತ್ತದೆ. "ಈ ಹೊತ್ನಲ್ಲಿ ಹಾಳು ಏನೂ ಸಿಕ್ಕಲ್ಲ" ಅಪ್ಪ ಗೊಣಗಿಕೊಳ್ಳುತ್ತಾರೆ. ಏನು ಉತ್ತರ ಕೊಡಬೇಕೆಂದು ಸೀನುವಿಗೆ ತೋಚದು. ಸ್ವಲ್ಪ ಹೊತ್ತು, ತನ್ನನ್ನು ಅದೂ ಇದೂ ಕೇಳುತ್ತಾರೆ. "ಅತ್ತೆ ಮಾವ ಚೆನ್ನಾಗಿದ್ದಾರಾ ?" "ಇವತ್ತು ಬೆಳಿಗ್ಗೆ ಹೊರಟಾ ?" ಇತ್ಯಾದಿ ಪ್ರಶ್ನೆಗಳಿಗೆ ಸೀನು ಹ್ಞೂ ಉಹ್ಞೂಗಳ ಉತ್ತರ ಕೊಡುತ್ತಾನೆ.

ಕೊನೆಗೆ ಜಟಕಾ ಸಿಕ್ಕಿ ಕುಳಿತುಕೊಂಡಾಗ ಇಂಥದ್ದೆಲ್ಲ ತನಗೆ ವಿಚಿತ್ರವಾಗಿ ಕಾಣಿಸುತ್ತದೆ ಎನಿಸುತ್ತದೆ, ಪೆಮ್ಮನಹಳ್ಳಿಯಲ್ಲಿ ತಾನು ಇಷ್ಟು ಹೊತ್ತಿಗೆ ಜೋಯಿಸರ ಮನೇಲಿರುತ್ತಿದ್ದುದರ ನೆನಪಾಗಿ ಸುತ್ತಲೂ ತುಂಬ ಕತ್ತಲೆಯಿದೆಯೇನೋ ಅನ್ನಿಸುತ್ತದೆ. ಈ ಶಬ್ದದಲ್ಲಿ ತನಗೇನೂ ಕೇಳಿಸುವುದಿಲ್ಲವೆನಿಸುತ್ತದೆ. "ಏನು ಯೋಚನೆ ಮಾಡ್ತಿದ್ದೀ ?" ಎಂದು ಅಪ್ಪ ತಿವಿದು ಕೇಳಿದಾಗ "ಏನಿಲ್ಲ" ಎನ್ನುತ್ತಾನೆ. "ಇನ್ನೊಂದು ಸ್ವಲ್ಪ ದೂರ ಮನೆ" "ಹ್ಞೂ" ಜಟಕಾ ಸಾಗುತ್ತದೆ.

ವಠಾರದ ಹೊರಗೆ ಜಟಕಾ ನಿಂತಾಗ ಹತ್ತಾರು ಹುಡುಗರು ಅದನ್ನು ಮುತ್ತುತ್ತಾರೆ. ಬ್ಯಾಗುಗಳನ್ನಿಳಿಸಿಕೊಂಡು ಅಪ್ಪ ದುಡ್ಡುಕೊಟ್ಟು ಸಿಮೆಂಟ್ ಚೀಲ ತಾವು ಹೊತ್ತು "ಅದನ್ನ ತಗೊ" ಎಂದು ಹ್ಯಾಂಡ್‌ಬ್ಯಾಗ್ ಕಡೆ ತೋರಿಸಿದಾಗ ಸೀನು ಅದನ್ನು

ಹಿಡಿದುಕೊಳ್ಳುತ್ತಾನೆ. ಅಪ್ಪನ ಹಿಂದೆ ಹೊರಡುತ್ತಾನೆ. ಈ ವಠಾರವನ್ನು ತಾನೆಂದೂ ಕಂಡಿಲ್ಲ; ಹೊಸ ಮನೆಯಂತೆ ಎಂದು ಮಾವ ಹೇಳಿದ್ದದ್ದು ನೆನಪಾಗುತ್ತದೆ. ಮಾವ ಏನು ಮಾಡುತ್ತಿರಬಹುದು. ಅತ್ತೆ ಏನು ಮಾಡುತ್ತಿರಬಹುದು ? ''ಸೀನು ಹೊತ್ತಾಯಿತು, ಮನೇಗೆ ಬಾಪ್ಪ' ಅಂತ ಅತ್ತೆ ಜೋಯಿಸರ ಮನೆಯಲ್ಲಿರುತ್ತಿದ್ದ ತನ್ನನ್ನ ಕರೆಯುತ್ತಿದ್ದಂತೆ ಅನ್ನಿಸುತ್ತದೆ.

ತಮ್ಮನ್ನು ಹಿಂಬಾಲಿಸಿ ಬಂದ ಹುಡುಗರಲ್ಲಿ ಒಂದಿಬ್ಬರು ಮನೆಯೊಳಕ್ಕೂ ಬಂದದ್ದರಿಂದ ಅವರೂ ತಮ್ಮ ಮನೆಯವರೇ ಇರಬೇಕೆಂದು ಸೀನುವಿಗನ್ನಿಸುತ್ತದೆ. ಒಳಗೆ ಹೋಗುತ್ತಲೇ ಅಮ್ಮ (ಅಪ್ಪು ಗೊತ್ತಾಗ್ತಲ್ಲವೇ) ''ಬಾಪ್ಪ' ಎನ್ನುತ್ತಾರೆ, ''ಕೂತ್ಕೋ'' ಎನ್ನುತ್ತಾರೆ. ಚಾಪೆಯ ಮೇಲೆ ಮೂಲೆಯಲ್ಲಿ ಕೂತು ಕಣ್ಣು ಹಾಯಿಸಿದಾಗ ಎಲ್ಲ ತನ್ನನ್ನೇ ನೋಡುತ್ತಿದ್ದಾರೆಂಬ ಅರಿವಿನಿಂದ ನಾಚಿಕೆ, ಭಯವಾಗುತ್ತದೆ. ಹಾಕಿರುವ ಎಲೆಕ್ಟ್ರಿಕ್ ಲೈಟ್ ಕಣ್ಣು ಕುಕ್ಕುತ್ತದೆಯೆನ್ನಿಸಿ, ಮಾವನ ಮನೆಯ ಲಾಟೀನೇ ಸರಿಯೇನೋ ಅನ್ನಿಸುತ್ತದೆ ; ಆಯಾಸಗೊಂಡವನಂತೆ ಕಣ್ಣು ಮುಚ್ಚಿಕೊಳ್ಳಬೇಕೆನಿಸುತ್ತದೆ.

೧೬

ತಾನು ಸೇರಿರುವ ಸ್ಕೂಲು ದೊಡ್ಡದೆನಿಸಿದರೂ ಎಲ್ಲೆಲ್ಲೂ ಅಪರಿಚಿತ ಮುಖಗಳೇ ಕಾಣಿಸುತ್ತವೆ. ಮೇಷ್ಟರುಗಳು ಸ್ಕೂಲಲ್ಲಿ ಎಷ್ಟು ಜನರಿದ್ದಾರೋ ಸ್ಕೂಲು ಶುರುವಾಗಿ ಹತ್ತು ದಿನಗಳಾದರೂ ಲೆಕ್ಕವೇ ಸಿಕ್ಕಿರಲಿಲ್ಲ. ಪೆಮ್ಮನಹಳ್ಳಿಯ ಸ್ಕೂಲು ಅಂದರೆ ತುಂಬ ಆತ್ಮೀಯ ಎನ್ನಿಸುತ್ತದೆ.

ಮೊನ್ನೆ ಸೀನು ಊಟ ಮುಗಿಸಿ ಬ್ಯಾಗ್ ತಗುಲಿಹಾಕಿಕೊಂಡು ಸ್ಕೂಲಿಗೆ ಹೊರಟಿದ್ದ. ದೂರವಿದ್ದುದರಿಂದ ಸ್ವಲ್ಪ ಮುಂಚೆಯೇ ಮನೆ ಬಿಡಬೇಕು. ಅಲ್ಲದೆ ಸೀನು ಬೇಕಂತಲೇ ಇನ್ನೂ ಮುಂಚೆಯೇ ಮನೆ ಬಿಡುತ್ತಿದ್ದ. ಹೊರಗಿನ ಶಬ್ದ, ಜನಸಂದಣಿ ಅವನಲ್ಲಿ ಬೆರಗನ್ನುಂಟುಮಾಡಿದ್ದಂತೆಯೇ ತಾನು ಕರಗಿ ಹೋಗುತ್ತೇನೇನೋ ಎಂಬ ಭಯವನ್ನುಂಟುಮಾಡಿದ್ದರೂ ಅವನಿಗೆ ಮನೆಗಿಂತ ಬೀದಿಗಳೇ ಹೆಚ್ಚು ಹಾಯೆನಿಸಿ ದ್ದವು. ಪೆಮ್ಮನಹಳ್ಳಿಯಲ್ಲಿದ್ದಾಗ ಬೆಂಗಳೂರು ಅಂದರೆ ಹಾಗೆ ಹೀಗೆ ಅಂತೆಲ್ಲ ಅದರ ಬಗ್ಗೆ ಹೆಮ್ಮೆಯಿಂದ ಮಾತಾಡುತ್ತಿದ್ದ ; ಆದರೆ ಈಗ ಇದಕ್ಕಿಂತ ಪೆಮ್ಮನಹಳ್ಳಿಯೇ ಚೆನ್ನ ಎನ್ನಿಸುತ್ತಿತ್ತು.

ಅವತ್ತು ಸ್ಕೂಲಿಗೆ ಹೊರಟು ಸ್ವಲ್ಪ ದೂರ ಬಂದಿರುತ್ತಾನೆ. ಮೋಡವಾಗಿದ್ದು ಸಣ್ಣಗೆ ಹನಿಯಲು ತೊಡಗಿರುತ್ತದೆ. ಸೀನುವಿಗೆ ಮಳೆಯಲ್ಲಿ ನೆನೆಯುವುದೆಂದರೆ ಸಂತೋಷ. ಪೆಮ್ಮನಹಳ್ಳಿಯಲ್ಲಿ ಮಳೆ ಬರುವುದು ಎಂದರೆ ಹಬ್ಬ ಇದ್ದ ಹಾಗೆ. ಮಕ್ಕಳೆಲ್ಲ ಮಳೆಯಲ್ಲಿ, ದೊಡ್ಡವರ ಕಣ್ಣು ತಪ್ಪಿಸಿ, ಅವರ ಬೈಗುಳವನ್ನು ಸಹಿಸಿಯೂ, ನೆನೆದಾಗ ಆನಂದವೆನಿಸುತ್ತಿತ್ತು. ಸ್ವಲ್ಪ ಜೋರಾಗಿ ಮಳೆ ಬಂದು ಹಳ್ಳ ಹರಿಯುವುದನ್ನು

ನೋಡುವುದಕ್ಕೆ ಸ್ನೇಹಿತರೆಲ್ಲ ಹೋಗುತ್ತಿದ್ದರಲ್ಲ! ಹಳ್ಳದ ಎರಡೂ ಕಡೆಗಳಲ್ಲಿ ದಟ್ಟವಾಗಿ ಬೆಳೆದಿರುತ್ತಿದ್ದ ಹೊಂಗೆಯ ಮರಗಳ ಎಲೆಗಳೆಲ್ಲ ಎಷ್ಟು ಹಸುರಾಗಿ ಕಾಣಿಸುತ್ತವೆ, ಆಗ! ಪ್ರತಿಯೊಂದು ಎಲೆಯನ್ನೂ ಚೆನ್ನಾಗಿ ತೊಳೆದಿರುವಂತೆ ಹೊಳೆಯುತ್ತಿತ್ತು. ಸಣ್ಣದಾಗಿ ಹರಿಯುತ್ತಿದ್ದ ಹಳ್ಳದಲ್ಲಿ ಕಾಲಿಟ್ಟು ಅಂಗಾಲನ್ನು ಕೆರೆದುಕೊಂಡು ಮರಳು ಸರಿಯುತ್ತಿದ್ದುದು ಅಂದರೆ ಅದೆಷ್ಟು ಚೆನ್ನ! ಸ್ನೇಹಿತರೆಲ್ಲ ಒಬ್ಬರೊಬ್ಬರ ಮೇಲೆ ನೀರು ಉಗ್ಗುತ್ತಿದ್ದುದು!

ಮಳೆ ಜೋರಾದಂತೆನಿಸಿದಾಗ ಸೀನು ಓಡಿ ದಾರಿಯಲ್ಲಿದ್ದ ಅಂಗಡಿಯ ಮುಂದೆ ನಿಂತುಕೊಳ್ಳಲು ಹೋಗುತ್ತಾನೆ. ಅಲ್ಲಿ ಇನ್ನೂ ಒಂದಿಬ್ಬರು ನಿಂತಿರುತ್ತಾರೆ. ಅವರಲ್ಲೊಬ್ಬರು ಕಾಕಿ ಬಟ್ಟೆ ಹಾಕಿಕೊಂಡು ಬೆಳ್ಳಗಿನ ಮೀಸೆ ಬಿಟ್ಟಿರುವವರನ್ನು ಕಂಡಾಗ ಅವರನ್ನು ತಾನೆಲ್ಲೋ ನೋಡಿದ್ದೀನಲ್ಲ ಎನಿಸುತ್ತದೆ ಸೀನುವಿಗೆ. ಎಲ್ಲಿ ಎಲ್ಲಿ ಎಂದು ಜ್ಞಾಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಒಂದೈದು ನಿಮಿಷವಾದ ಮೇಲೆ ಅವನಿಗೆ ನೆನಪು ಬರುತ್ತದೆ, ತಾನು ಅವತ್ತು ಪಾವಗಡದಿಂದ ಗೌರ್ಮೆಂಟ್ ಬಸ್ಸಲ್ಲಿ ಬಂದನಲ್ಲ, ಅದರ ಡ್ರೈವರ್ ಅವರು! ನಮ್ಮ ಬಸ್ಸನ್ನು ನಡೆಸಿದ್ದರು ಅವರು. ಸೀನುವಿಗೆ ಆಪ್ತರೊಬ್ಬರನ್ನು ನೋಡಿದಂತೆನಿಸುತ್ತದೆ. ಅವರು ಸ್ವಲ್ಪ ದೂರದಲ್ಲಿ ನಿಂತಿದ್ದರೂ, ಹತ್ತಿರ ಹೋಗಿ "ನಮಸ್ಕಾರ, ಸಾರ್" ಎನ್ನುತ್ತಾನೆ.

ಆತನಿಗೆ ಆಶ್ಚರ್ಯ! ಈ ಹುಡುಗ ಯಾರು, ತನಕ ನಮಸ್ಕಾರ ಮಾಡುತ್ತಿದ್ದಾನೆ ಎಂದು ಗಲಿಬಿಲಿಗೊಳಗಾಗುತ್ತಾನೆ. "ನೀವು ಪಾವಗಡ ಬಸ್ ಡ್ರೈವರ್ ಅಲ್ಲವಾ ಸಾರ್?" ಎನ್ನುತ್ತಾನೆ ಸೀನು.

"ಹ್ಞೂ"

"ಅವತ್ತು ನಾನು ನಿಮ್ಮ ಬಸ್ಸಲ್ಲೇ ಬಂದೆ"

"ಹೌದಾ?"

ಆ ವ್ಯಕ್ತಿ ತಾನು ಉತ್ಸಾಹದಿಂದಿದ್ದಷ್ಟು ಉತ್ಸಾಹ ತೋರಿಸುತ್ತಿಲ್ಲವೆಂದು ಸೀನುವಿಗೆ ನಿರಾಶೆಯಾದರೂ ಅವರು ಪಾವಗಡಕ್ಕೆ ಹೋಗುವ ಬಸ್ ಡ್ರೈವ್ ಮಾಡುವವರು ಎಂಬ ಹೆಮ್ಮೆ ಕಡಿಮೆಯಾಗುವುದಿಲ್ಲ.

"ನಿಮ್ಮೂರು ಪಾವಗಡಾನಾ?" ಕೇಳುತ್ತಾನೆ, ಡ್ರೈವರ್.

"ಈಗ ಇಲ್ಲೇ ಓದ್ತಾ ಇರಾದು"

"ಓ!"

"ನೀವು ದಿನಾನೂ ಪಾವಗಡಕ್ಕೆ ಹೋಗ್ತೀರಾ?"

"ಹ್ಞೂ"

"ಇವತ್ತು ಹೋಗಲ್ಲವಾ?"

''ಈಗ ಓಗ್ತಾ ಇದ್ದೀನಿ, ಬತ್ತೀಯಾ ಕರಕ್ಂಡೋಗ್ತೀನಿ'' ಡ್ರೈವರ್‌ನಿಗೂ ತನ್ನನ್ನು ಆತ್ಮೀಯತೆಯಿಂದ ಮಾತಾಡಿಸುತ್ತಿದ್ದ ಈ ಹುಡುಗನ ಬಗ್ಗೆ ಆಸಕ್ತಿಯುಂಟಾಯಿತೇನೋ!

''ಎಷ್ಟು ಹೊತ್ತಿಗೆ ಹೋಗುತ್ತೆ ಬಸ್ಸು?''

''ಪ್ರತಿದಿನ ಬೆಳಿಗ್ಗೆ ಇಲ್ಲಿಂದ ಹನ್ನೊಂದು ಗಂಟೆಗೆ ಪಾವಗಡಕ್ಕೆ ಬಸ್ಸು ಹೋಗುತ್ತೆ ಅಲ್ಲಿಂದ ಅಷ್ಟು ಹೊತ್ತಿಗೆ ಬೆಂಗಳೂರಿಗೆ ಇನ್ನೊಂದು ಹೊರಡತ್ತೆ.''

ಎಷ್ಟು ಒಳ್ಳೆಯವರು ಈ ಡ್ರೈವರ್ ಎನಿಸುತ್ತದೆ. ಮಳೆ ನಿಂತಿರುತ್ತದೆ. ''ಹೋಗ್ತೀನಿ ಸಾರ್'' ಎಂದು ಸೀನು ಸ್ಕೂಲಿನ ಕಡೆ ಹೆಜ್ಜೆ ಹಾಕುತ್ತಾನೆ. ಪ್ರತಿನಿತ್ಯ ಹನ್ನೊಂದು ಗಂಟಗೆ ಬಸ್ ಇಲ್ಲಿಂದ ಪಾವಗಡಕ್ಕೆ ಹೋಗುತ್ತದಂತೆ, ತನಗೆ ಸ್ಕೂಲು ಅಷ್ಟು ಹೊತ್ತಿಗೇ. ತಾನು ದಿನ ಸ್ಕೂಲಿಗೆ ಹೋಗುವಾಗ ಡ್ರೈವರ್ ಪಾವಗಡಕ್ಕೆ ಹೋಗುತ್ತಾನೆ! ಗೌರ್ಮೆಂಟ್ ಬಸ್ ಸ್ಟಾಂಡ್‌ಗೆ ಹೋದರೆ ಅಲ್ಲಿಂದ ಪಾವಗಡಕ್ಕೆ ಹೋಗಬೌದಲ್ಲವಾ ಎನ್ನಿಸಿ ಎದೆ ಡವಗುಟ್ಟಲು ತೊಡಗುತ್ತದೆ. ಮಾವ ಅವತ್ತು ತಾನಿಲ್ಲಿಗೆ ಬರುವಾಗ ಕೊಟ್ಟಿದ್ದ ಹದಿನೈದು ರೂಪಾಯಿಗಳಲ್ಲಿ ಇನ್ನೂ ಎಂಟು ರೂಪಾಯಿ ಹಾಗೇ ಇದೆ, ಎಂಬ ನೆನಪು ಬರುತ್ತದೆ ಐದು ರೂಪಾಯಿನ ಒಂದು ನೋಟು, ಒಂದು ರೂಪಾಯಿನ ಎರಡು ನೋಟು, ಎಂಟಾಣೆಯ ಎರಡು ನಾಣ್ಯಗಳು ಜಾಮಿಟ್ರಿ ಬಾಕ್ಸಲ್ಲಿ ಹಾಯಾಗಿದೆ! ಜಾಮಿಟ್ರಿ ಬಾಕ್ಸ್ ಎಂದಾಗ ಮಾವ ಅವತ್ತು ಪೋಸ್ಟಾಫೀಸಿನ ದುಡ್ಡು ಹುಡುಕಿದ್ದು, ಬಸ್ಸಲ್ಲಿ ರೂಪಾಯಿ ಸಿಕ್ಕಿದ್ದು ವಾಪಸು ಕೊಟ್ಟಿದ್ದು ಎಲ್ಲ ನೆನಪಾಗುತ್ತದೆ. ಆದರೆ ಈಗಿರೋ ದುಡ್ಡು ಅಂಥದೇನಲ್ಲ, ತನ್ನದೇ ಅನ್ನಿಸಿ ನಿರಾಳವಾಗುತ್ತಾನೆ. ಆದರೆ ತನ್ನ ಹತ್ತಿರ ಅಷ್ಟು ದುಡ್ಡಿರೋದು ಯಾರಿಗೂ ಗೊತ್ತಿಲ್ಲ!

ಸ್ಕೂಲಿಗೆ ಬರೋ ಹೊತ್ತಿಗೆ ಆಗಲೇ ಪ್ರೇಯರ್ ಮುಗಿದು ಹುಡುಗರೆಲ್ಲ ಸಾಲಾಗಿ ತಮ್ಮ ತಮ್ಮ ಕ್ಲಾಸುಗಳಿಗೆ ಹೋಗುತ್ತಿರುತ್ತಾರೆ. ಪ್ರತಿ ಕ್ಲಾಸಿನ ಹುಡುಗರೂ ಒಟ್ಟೊಟ್ಟಾಗಿಯೇ ಸಾಲುಗಳಲ್ಲಿ ನಿಂತುಕೊಳ್ಳಬೇಕು, ಪ್ರಾರ್ಥನೆ ಮುಗಿದ ಮೇಲೆ ಬರುವವರು ಸಾಲುಗಳನ್ನು ಸೇರಕೂಡದು, ಅವರಲ್ಲ ದೂರ ನಿಂತು ಪ್ರಾರ್ಥನೆ ಮುಗಿಸಿದ ಮೇಲೆ ಡ್ರಿಲ್ ಮೇಷ್ಟರು ನಡೆಸುವ ವಿಚಾರಣೆ ಎದುರಿಸಿ, ಸರಿಯಾಗಿ ಸಮಜಾಯಿಷಿ ಕೊಟ್ಟು ಕ್ಲಾಸಿಗೆ ಹೋಗಬೇಕು. ಸೀನು ಹೆದರಿಕೆಯಿಂದ ಲೇಟಾದ ಹುಡುಗರ ಜೊತೆ ನಿಲ್ಲುತ್ತಾನೆ.

ಸಾಲುಗಳಲ್ಲಿದ್ದ ಹುಡುಗರೆಲ್ಲ ಕ್ಲಾಸುಗಳಿಗೆ ಹೋದ ಮೇಲೆ ಡ್ರಿಲ್ ಮೇಷ್ಟರು ಈ ಹುಡುಗರನ್ನು ವಿಚಾರಿಸುತ್ತಾರೆ, ಅಥವಾ ಅವರ ಕೈಯಲ್ಲಿದ್ದ ದೊಣ್ಣೆ ಈ ಕೆಲಸ ಮಾಡುತ್ತದೆ! ಹುಡುಗರು ಏನೇನೋ ಸಬೂಬು ಹೇಳುತ್ತಾರೆ, ಆದರೆ ಡ್ರಿಲ್ ಮೇಷ್ಟರು ಸಂತುಷ್ಟರಾಗದೆ ಅವರನ್ನು ಅಂಗೈ ಚಾಚುವಂತೆ ಹೇಳಿ ಒಂದು ಬಿಟ್ಟು ಮುಂದೆ ಕಳಿಸುತ್ತಾರೆ. ತನಗಿಂತ ಮುಂಚೆ ಆಚಾರಣೆಗೊಳಗಾದ ಹುಡುಗರು ಏಟು ತಿಂದು ನೋವಿನಿಂದ ಮಾಡುತ್ತಿದ್ದ ಮುಖದ ಭಂಗಿಯನ್ನು ಕಂಡು ಸೀನುವಿನ ಹೃದಯ ಬಾಯಿಗೆ

ಬರುವಂತಾಗುತ್ತದೆ. ಸ್ವಲ್ಪವೂ ಯೋಚನೆಗೆ ಅವಕಾಶವಿಲ್ಲದಂತೆ ತನ್ನ ಸರದಿ ಬರುತ್ತದೆ.

"ಬಾರಣ್ಣ ಬಾ" ಎಂದು ಡ್ರಿಲ್ ಮೇಷ್ಟರು ಅಭಿನಯಪೂರ್ವಕವಾಗಿ ಸ್ವಾಗತಿಸಿದಾಗ ಆ ವ್ಯಂಗ್ಯ ಅರ್ಥವಾಗಿ ಸೀನು ತಲೆ ತಗ್ಗಿಸುತ್ತಾನೆ. ಅವನ ದೊಗಲೆ ಚಡ್ಡಿ ಷರಟು ನೋಡುತ್ತಾರೆ, ಷರಟಿನ ತೋಳು ಹಿಡಿದು ಎಳೆದು ಅಷ್ಟು ದೊಗಲೆಯೆಂದು ಪರಿಶೀಲಿಸಿ

"ಯಾರದೋ ಈ ಷರ್ಟು ?"

"ನಮ್ಮಣ್ಣಂದು" ಎಂದು ಸೀನು ಮೆಲುಧ್ವನಿಯಲ್ಲಿ ಉತ್ತರಿಸುವಾಗ ಯಾವುದೂ ತನ್ನದಲ್ಲ ಎನಿಸಿ, ಮುಂದಿದ್ದ ಮೇಷ್ಟರ ಕಾಲುಗಳನ್ನೆ ನೋಡುತ್ತ ಹೆದರುತ್ತಾನೆ.

"ಯಾವೂರಲೇ ನಿಂದು ?" ಎಂದು ಕೇಳಿದಾಗ ಅನ್ಯ ಮನಸ್ಕನಾಗಿದ್ದ ಸೀನು ಬೆಚ್ಚುತ್ತಾನೆ.

"ಯಾವೂರ್ನೋನು ನೀನು ?" ಅವರು ಕೇಳಿದ ಪ್ರಶ್ನೆ ವ್ಯಂಗ್ಯದಿಂದ ಕೂಡಿದ್ದೆಂದು ಸೀನುವಿಗೆ ತಿಳಿಯುವುದಿಲ್ಲ, ತನ್ನ ಊರು ಯಾವುದು ಎಬ ಗಲಿಬಿಲಿಯುಂಟಾಗುತ್ತದೆ, ಒಂದು ಕ್ಷಣ, ತನ್ನ ಊರನ್ನು ಬೆಂಗಳೂರು ಎಂದು ಹೇಳಲು ಅವನಿಗೇಕೋ ಮನಸ್ಸು ಬರುವುದಿಲ್ಲ "ಪೆಮ್ಮನಹಳ್ಳಿ" ಎಂದು ಹೇಳುತ್ತಾನೆ.

"ಓ, ಪೆಮ್ಮನಹಳ್ಳಿ ತಿಮ್ಮನೋ ನೀನು ?" ಮೇಷ್ಟರ ಕ್ರೂರ ವ್ಯಂಗ್ಯ ಹೃದಯ ತಾಕುತ್ತದೆ. ಪೆಮ್ಮನಹಳ್ಳಿಯ ಬಗ್ಗೆ ಇವರಿಗೆಷ್ಟು ತಾತ್ಸಾರ ಎಂದು ಕೋಪವುಕ್ಕುತ್ತದೆ, ಆದರೇನು ಮಾಡಬಲ್ಲ?

"ಯಾಕೋ ಲೇಟು ?"

"ಮಳೆ ಬಂತು ಸಾರ್"

"ಉಹ್ಞ, ಈ ಎಲ್ಲ ಹುಡುಗರಿಗೆ ಬರದೆ ಇರೋ ಮಳೆ ನಿಂಗೊಬ್ಬನಿಗೇ ಬಂತಾ ? ಮುಂಚೆ ಮನೆ ಬಿಡಕ್ಕಾಗಲ್ಲವಾ ? ಹಿಡಿ"

ಮೇಷ್ಟರು ಕೊಡುವ ಶಿಕ್ಷೆಯ ಪರಿಚಯವನ್ನ ಕಣ್ಣಾರೆ ಮಾಡಿಕೊಂಡಿದ್ದ ಸೀನು ಅವರು ಕೋಲನ್ನು ಬೀಸುವಾಗ ಕೈ ಹಿಂದಕ್ಕೆಳೆದುಕೊಳ್ಳುತ್ತಾನೆ. "ತಪ್ಪಿಸ್ಕೋತೀಯೇನೋ ಸುವ್ವರ್" ಎಂದು ಎಡಗೈಯಲ್ಲಿ ಅವನ ಅಂಗೈ ತುದಿ ಹಿಡಿದು ಒಂದೇಟು ಹಾಕುತ್ತಾರೆ. ಬೆರಳು ಗಿಣ್ಣುಗಳಿಗೆ ತಾಕಿ ಸೀನುವಿಗೆ ಅಳು ಬಂದಂತಾಗುತ್ತದೆ. ಸುಮ್ಮಸುಮ್ಮನೆ ಈ ಮೇಷ್ಟರು ಹೊಡೀತಾರಲ್ಲ, ಇಲ್ಲಿಯೂ ಮಳೆ ಬಂದದ್ದು ನೆನೆದ ನೆಲದಿಂದ ಕಾಣಿಸುತ್ತಿದೆ, ತಾನೆಲ್ಲಿ ಸುಳ್ಳು ಹೇಳಿದೆ ? ಈ ಊರ ಮೇಷ್ಟರುಗಳೆಲ್ಲ ಹೀಗೇನೇನೋ. ಪೆಮ್ಮನಹಳ್ಳಿಯ ಮೇಷ್ಟರುಗಳ ನೆನಪಾಗುತ್ತದೆ. ಮರುಳಪ್ಪ ಮೇಷ್ಟರು, ಭರಮಪ್ಪ ಮೇಷ್ಟರು, ಕೆಂಚಪ್ಪ ಮೇಷ್ಟರು, ಸೋಮಶೇಖರಶೆಟ್ಟಿ ಮೇಷ್ಟರು ಒಬ್ಬೊಬ್ಬರಾಗಿ ಅವನ ಮನಸ್ಸಿನಲ್ಲಿ ಸುಳಿಯುತ್ತಾರೆ. ಅವರೂ ಯಾವತ್ತೂ ತನ್ನನ್ನು ಹೊಡೆದಿರಲಿಲ್ಲ, ಭರಮಪ್ಪ ಮೇಷ್ಟರು

ಅವತ್ತು ಜುಂಜನಿಂದ ಹೊಡೆಸ್ದಿರು. ಆದರೆ ಪೆಟ್ಟೇನು ಹೆಚ್ಚಿಗೆ ತಾಕಿರಲಿಲ್ಲ. ಆದರೆ ಅವರನ್ನು ಮಾವ ಹೇಗೆ ಬೈದಿದ್ದರು ! ಪಾಪ ತನ್ನಿಂದ ಅವರು ಬೈಸಿಕೊಂಡಿದ್ದರು. ಕ್ಲಾಸಿಗೆ ನಡೆಯುವಾಗ, ಕ್ಲಾಸಲ್ಲಿ ಕೂತಾಗ ಪೆಮ್ಮನಹಳ್ಳಿಯ ಸ್ಕೂಲು ಅವನನ್ನು ಕಾಡುತ್ತದೆ. ತಾನು ಫೇಲಾಗಿದ್ದಿದ್ದರೇ ಚೆನ್ನಾಗ್ರಿರ್ತಿತ್ತೇನೋ, ಇನ್ನೊಂದು ವರ್ಷ ಅಲ್ಲೇ ಓದಬಹುದಾಗಿತ್ತು ದರಿದ್ರ ಫಸ್ಟ್‌ಕ್ಲಾಸ್ ಯಾಕೆ ಬಂತೋ ಅನ್ನಿಸುತ್ತದೆ.

ಈ ಸ್ಕೂಲಲ್ಲಿ ಮೇಷ್ಟರುಗಳು ತಾನು ತಪ್ಪು ಮಾಡದಿದ್ದರೂ ಹೊಡೆಯುತ್ತಾರೆ. ಮನೇಲಿ ತನ್ನಿಂದೇನಾದರೂ ತಪ್ಪು ನಡೆದರೆ, ತನ್ನನ್ನು ಯಾರೂ ಏನೂ ಅನ್ನೋದಿಲ್ಲ ಯಾಕೆ ಈ ಬೆಂಗಳೂರಿನ ಜನ ಹೀಗೆ ವಿಚಿತ್ರ ಎನಿಸಿ, ನಾಲ್ಕು ದಿನಗಳ ಹಿಂದೆ ನಡೆದ ಘಟನೆ ಅವನ ನೆನಪಿಗೆ ಬರುತ್ತದೆ. ಅವತ್ತು ಬೆಳಿಗ್ಗೆ ಸ್ನಾನಮಾಡಿ ತಲೆಬಾಚಿಕೊಳ್ಳಲು ಹೋದಾಗ, ಗೂಡಿನಲ್ಲಿದ್ದ ಕೊಬ್ಬರಿಎಣ್ಣೆಯ ಸೀಸೆ ಬೇಕಾಗುತ್ತದೆ. ಸ್ವಲ್ಪ ಎತ್ತರದಲ್ಲಿ ದ್ದುದರಿಂದ ಕಾಲು ಹೆಬ್ಬೆರಳಿನ ಮೇಲೆ ನಿಂತು ಅದನ್ನೆಟುಕಿಸಿಕೊಳ್ಳಲು ಪ್ರಯತ್ನ ಪಡುತ್ತಾನೆ. ತಲೆ ಎತ್ತಿ ನೋಡಿದರೆ ಕೈಗೆಟುಕದು. ಮುಖ ಗೋಡೆಯತ್ತ ಮಾಡಿ ಬೆರಳುಗಳನ್ನು ಗೂಡಲ್ಲಿ ಆಡಿಸಿದಾಗ ಸೀಸೆ ತಾಕುತ್ತದೆ. ಬೆರಳುಗಳಿಂದಲೇ ಸೀಸೆಯನ್ನು ಮುಂದೆ ನೂಕುತ್ತಾನೆ. ಆದರೆ ಹಾಗೆ ಮೀಟುವಾಗ ಬಾಟಲು ಕೆಳಗೆ ಬಿದ್ದು ಒಡೆದು ಹೋಗುತ್ತದೆ. ಅಣ್ಣ ತಮ್ಮಂದಿರೂ ತಂದೆಯೂ ಶಬ್ದ ಕೇಳಿ ಬರುತ್ತಾರೆ. ತನ್ನ ಎರಡನೇ ಅಣ್ಣ ಇದ್ದಿದ್ದ ಗಾಜಿನ ಚೂರುಗಳನ್ನು ಒಂದೆಡೆ ಸರಿಸುತ್ತಿರುತ್ತಾನೆ, ತಂದೆ ಬಂದು ಅವನ ಬೆನ್ನ ಮೇಲೆ ಗುದ್ದಿ ಕೋಪದಿಂದ.

"ಅಯ್ಯೋ ಅನಿಷ್ಟ ಮುಂಡೇದೆ, ಬಾಟಲು ಒಡೆದುಹಾಕಿಬಿಟ್ಟೆಯಾ?" ಎಂದು ಕಿರುಚುತ್ತಾರೆ. ಅವನು ಕೋಪ ನೋವುಗಳಿಂದ,

"ನಾನಲ್ಲ ಒಡೆದದ್ದು ಇವನು. ಗಾಜಿನ ಚೂರು ಎತ್ತಿ ಹಾಕ್ತಾ ಇದ್ದರೆ..." ಎಂದು ಸೀನುವಿನ ಕಡೆ ಮುಖ ಊದಿಸಿಕೊಂಡು ತೋರಿಸುತ್ತಾನೆ. ತಪ್ಪು ಮಾಡಿದ್ದ ಸೀನು ಭಯ ನಾಚಿಕೆಗಳಿಂದ ಮುಖ ಕೆಳಗೆ ಹಾಕುತ್ತಾನೆ. ಅಪ್ಪನ ಮುಖದ ಕ್ರೌರ್ಯ ಕಡಮೆಯಾಗಿ ದಂತೆನಿಸುತ್ತದೆ.

"ನೀನೇನೋ ? ಹೋಗಲಿ ಬಿಡು" ಎಂದು ಹೊರಟು ಹೋಗುತ್ತಾರೆ. ಬಾಟಲು ಒಡೆಯದಿದ್ದರೂ ಅಣ್ಣನಿಗೆ ಏಟು ಕೊಟ್ಟ ಅಪ್ಪ ತಾನೇ ಬಾಟಲು ಒಡೆದಿದ್ದೆಂದು ತಿಳಿದರೂ ತನ್ನನ್ನೇಕೆ ಹೊಡೆಯಲಿಲ್ಲ ಎಂಬ ಚಿಂತೆ ಅವನನ್ನು ಕಾಡುತ್ತದೆ.

ಇವರೆಲ್ಲ ರಾತ್ರಿ ಮಲಗಿದ ಸೀನುವಿನ ಮನಸ್ಸನ್ನು ಗಾಢವಾಗಿ ಚುಚ್ಚುತ್ತವೆ. ಜೊತೆಗೆ ಶಕೆ ಬೇರೆ, ಮನೆಗೆ ಇರೋದು ಎರಡೇ ಕಿಟಕಿಗಳು, ಗಾಳೀನೇ ಬರಲ್ಲ ಸೊಳ್ಳೆಯೆಂದು ಗುಬುರು ಹಾಕಿಕೊಂಡರೆ ಶಕೆ ಜಾಸ್ತಿಯಾದಾಗ ಜೋಯಿಸರ ಮನೆಯವರ ಜೊತೆ ಹೊರಗೆ ಮಲಗುತ್ತಿದ್ದದ್ದು ನೆನಪಾಗಿ ಶಕೆ ವಿಪರೀತವಾಗುತ್ತದೆ. ಪೆಮ್ಮನಹಳ್ಳಿಯಲ್ಲಿ ಶಕೆ ಇನ್ನಷ್ಟು ಜಾಸ್ತಿಯಾದಂತೆನಿಸುತ್ತದೆ. ಇಲ್ಲಿ ಹೊರಗೆ ಮಲಗಲು

ಸಾಧ್ಯವೇ ಇಲ್ಲ. ಏಕೆಂದರೆ ಹೊರಗೆ ಜಾಗವಿಲ್ಲ. ತಮ್ಮ ಮನೆಯ ಎದುರಿಗೇ ಇನ್ನೊಂದು ಮನೆ. ಓಡಾಡಕ್ಕೇ ಜಾಗ ಸಾಲಲ್ಲ, ಇನ್ನು ಮಲಗಕ್ಕೆ ಸಾಧ್ಯವೇ ? ಜೊತೆಗೆ ಮಣ್ಣು ನೆಲ ಬೇರೆ. ಬೆಂಗಳೂರು ಇಷ್ಟೊಂದು ದೊಡ್ಡ ಊರು, ಆದರೆ ಗಾಳಿ ಬರೋ ಕಡೆ ಮಲಗಕ್ಕೂ ತನಗೆ ಸಾಧ್ಯವಿಲ್ಲವಲ್ಲ, ಪೆಮ್ಮನಹಳ್ಳಿಯಲ್ಲಾದರೆ ಎಷ್ಟು ಚೆನ್ನಾಗಿರ್ತಿತ್ತು. ಜ್ಞಾಪಕದಿಂದ ಕಣ್ಣುಮಂಜಾಗುತ್ತದೆ. ಜೋಯಿಸರ ಮನೆ ಅಜ್ಜಿ ತನ್ನನ್ನು ತಬ್ಬಿಕೊಂಡು ಮಲಗುತ್ತಿದ್ದದ್ದು ಎಷ್ಟು ಹಿತವಾಗಿರುತ್ತಿತ್ತು! ಥೂ ಥೂ ಥೂ, ಹಾಳು ಬೆಂಗಳೂರು, ಹಾಳು ಬೆಂಗಳೂರು!

೧೭

ಸ್ಕೂಲಲ್ಲಿ ಸೀನುವಿಗೆ ಒಂದಿಬ್ಬರು ಗೆಳೆಯರಾಗಿದ್ದರು, ಅವರ ಮೂಲಕ ಸ್ಕೂಲು ಆಫೀಸಿನಲ್ಲಿ ಗುಮಾಸ್ತರಾಗಿದ್ದ ಶಿವರಾಂ ಅನ್ನುವವರು ತುಂಬ ಒಳ್ಳೆಯವರೆನಿಸಿತ್ತು ಅವನಿಗೆ. ಯಾಕೆಂದರೆ ಒಂದೆರಡು ಸಲ ತಾವಿಬ್ಬರು ಮೂವರು ಹುಡುಗರಿಗೆ ತಿಂಡಿಯೆಲ್ಲ ಕೊಡಿಸಿದ್ದರು. ಅವನ ಬಳಿ ಇನ್ನೂ ಮಾವ ಕೊಟ್ಟ ದುಡ್ಡಿನಲ್ಲಿ ಉಳಿದಿತ್ತಲ್ಲ, ಅದು ಹಾಗೇ ಇತ್ತು. ಒಂದು ಎಂಟಾಣೆಯ ಬಿಲ್ಲೆಯನ್ನು ಮಾತ್ರ ಅವನು ಖರ್ಚುಮಾಡಿದ್ದ; ಕಳ್ಳೇಕಾಯಿ ಬೀಜ, ಬೀದಿಯಲ್ಲಿ ಮಾರುವ ಸೌತೇಕಾಯಿ ಚೇಪೆಕಾಯಿಗಳನ್ನು ತೆಗೆದುಕೊಳ್ಳಲ ಅವನ್ನು ಬಳಸಿದ್ದ. ಮಧ್ಯಾಹ್ನದ ಹೊತ್ತು ಬಿಡುವಿನ ಕಾಲದಲ್ಲಿ ಬೇರೆಯ ಹುಡುಗರೆಲ್ಲ ಅದೂ ಇದೂ ಕೊಂಡುಕೊಳ್ಳುತ್ತಿದ್ದಾಗ ಸೀನುವಿಗೂ ಅದನ್ನೆಲ್ಲ ತೆಗೆದುಕೊಳ್ಳುವ ಆಸೆಯಾಗಿತ್ತು. ಆದರೆ ಜ್ಯಾಮಿಟ್ರಿ ಬಾಕ್ಸಲ್ಲಿದ್ದ ದುಡ್ಡು ಕರಗಿ ಹೋಗುತ್ತದೆಂಬ ಭಯವಾಗಿ ಹೆಚ್ಚು ಖರ್ಚು ಮಾಡಿರಲಿಲ್ಲ. ಸ್ನೇಹಿತ ಹುಡುಗ ರಾದರೂ ಏನಾದರೂ ತೆಗೆದುಕೊಂಡಾಗ ಇವನಿಗೂ ಒಂದು ಚೂರು ಪಾಲಿರುತ್ತಿತ್ತು. ಆದರೆ ಹುಡುಗರೊಂದಿಗೆ ಎಂದೂ ಹೋಟೆಲಿಗೆ ಹೋಗಿರಲಿಲ್ಲ. ಒಬ್ಬನೇ ಹೋಗುವುದಕ್ಕೆ ಅವನಿಗೆ ಭಯವಾಗುತ್ತಿತ್ತು. ಹಿಂಜರಿಕೆ ಯಾಗುತ್ತಿತ್ತು. ಹೋಟೆಲಿನ ಷೋಕೇಸಿನಲ್ಲಿ ದೀಪದಡಿ ಆಕರ್ಷಕವಾಗಿ ಕಾಣುತ್ತಿದ್ದ ತಿಂಡಿಗಳು ಅವನನ್ನು ಸೆಳೆಯುತ್ತಿ ತ್ತಾದರೂ ಎಂದೂ ಒಬ್ಬನೇ ಹೋಗುವ ಧೈರ್ಯ ಬಂದಿರಲಿಲ್ಲ. ಹೀಗಾಗಿ, ಶಿವರಾಂ ಅವನಿಗೆ ಇತರ ಹುಡುಗರೊಂದಿಗೆ ತಿಂಡಿ ಕೊಡಿಸಿದ್ದಾಗ ಸಂತೋಷವೂ ಆಗಿತ್ತು, ಆಶ್ಚರ್ಯವೂ ಆಗಿತ್ತು; ಎಂಥ ಒಳ್ಳೆಯವರು ಅವರು ಅನ್ನಿಸಿತ್ತು.

ಅವತ್ತಿನ ದಿನ ಮಧ್ಯಾಹ್ನ ಸ್ಕೂಲಿಗೆ ರಜಕೊಟ್ಟುಬಿಟ್ಟರು, ಯಾರೋ ಸತ್ತು ಹೋದರಂತೆ, ಅದಕ್ಕೇ ಕ್ಲಾಸುಗಳೆಲ್ಲ ಬಿಟ್ಟುಬಿಟ್ಟಾಗ ಹುಡುಗರು ಸಂತೋಷದಿಂದ ಮನೆಗಳಿಗೆ ಹೋಗತೊಡಗಿದರು. ಸೀನು ತನ್ನ ತರಗತಿಯಿಂದ ಹೊರಬಂದು ಮೆಟ್ಟಿಲಿಳಿಯುವಾಗ ಸ್ಕೂಲಿನ ಆಫೀಸು ಮುಂದೇ ಬರಬೇಕು ಬರುವಾಗ ಶಿವರಾಮ್ ಅವನನ್ನು ಕಂಡರು, "ಏನೋ ಮರಿ" ಅಂದರು. ಪರಿಚಯವಾಗಿ ಅವರೊಡನೆ ಹೋಟಲಲ್ಲಿ ಅವರು ಕೊಡಿಸಿದ ತಿಂಡಿ ತಿಂದಿದ್ದರೂ ಒಬ್ಬನೇ ಅವರನ್ನೆಂದೂ

ಮಾತಾಡಿಸಿದವನಲ್ಲ, ಜೊತೆಗೆ ಗೆಳೆಯರಿರುತ್ತಿದ್ದರು, ಆದುದರಿಂದ ಆಗ ಅವನಿಗೆ ಸಂಕೋಚ. ''ಏನಿಲ್ಲ'' ಎಂದ ಮೃದುವಾಗಿ. ''ಇನ್ನೇನು ಸ್ಕೂಲಿಲ್ಲವಲ್ಲ'' ಅಂದರು. ''ಹ್ಞೂ'' ''ನಿಮ್ಮನೆ ಎಲ್ಲಿ?'' ''ಮಾವಳ್ಳಿ, ಐದನೇ ಕ್ರಾಸು'' ''ಸ್ಕೂಲು ಹೊರಗಡೆ ಇರು, ನಾನೂ ಬಂದ್ಬಿಡ್ತೀನಿ. ಹೋಗಿಬಿಡಬೇಡ'' ಅಂದರು. ಸೀನುವಿಗೆ ಆಶ್ಚರ್ಯ. ಅಷ್ಟು ದೊಡ್ಡವರು ತನ್ನ ಜೊತೆಯಲ್ಲಿ ಬರ್ತಾರೆ ಅಂತ, ಆದರೆ ಏನು ಹೇಳಲೂ ಅವನಿಗೆ ತೋಚಲಿಲ್ಲ, ಸುಮ್ಮನಿದ್ದ. ''ಇರ್ತೀಯ ತಾನೇ ?'' ಎಂದು ಅವರು ಮತ್ತೆ ಕೇಳಿದಾಗ ನಿರ್ವಾಹವಿಲ್ಲದೆ ''ಹ್ಞೂ'' ಅಂದ. ''ಆ ಮರದ ಹತ್ರ ಇರು'' ಅಂದರು, ದೂರದ ಮರ ತೋರಿಸಿ.

ಸೀನು ಮರದ ನೆರಳಲ್ಲಿ ಕಾಯುತ್ತಾ ನಿಂತ. ಅವನಿಗೆ ಭಯವಾಗತೊಡಗಿತ್ತು. ಯಾಕೆ ತನಗೆ ಇರಲು ಹೇಳಿದರು. ಒಂದೆರಡು ಬಾರಿ ಸ್ನೇಹಿತರೊಂದಿಗೆ ತಿಂಡಿ ಕೊಡಿಸಿದ್ದರು ತನಗೆ, ಆದರೆ ಹೆಚ್ಚು ಪರಿಚಯವಿರಲಿಲ್ಲ, ಅವರಿಗೆ ತನ್ನ ಪರಿಚಯವಾದದ್ದೂ ಆಕಸ್ಮಿಕವಾಗಿ, ತನ್ನ ಕ್ಲಾಸಲ್ಲೇ ಅವರ ಸಂಬಂಧೀಕನಾದ ಹುಡುಗನೊಬ್ಬನಿದ್ದ. ಅವನು ಬೆಂಚಲ್ಲಿ ತನ್ನ ಪಕ್ಕದಲ್ಲೇ ಕುಳಿತುಕೊಳ್ಳುತ್ತಿದ್ದವನು. ಹೆಸರು ಸುಧಾಕರಾಂತ. ಅವತ್ತೊಂದು ದಿನ ಅವನ ಜೊತೆ ಮೆಟ್ಟಿಲಿಳಿಯುವಾಗ ಸುಧಾಕರನ್ನ ಶಿವರಾಂ ಕರೆದಾಗ ತಾನೂ ಅವನ ಜೊತೆ ಹೋಗಿದ್ದ ಸೀನು ಆಗ ಪರಿಚಯವಾಗಿತ್ತು. ಆಮೇಲೆ ಅವನೂ ಮತ್ತೊಬ್ಬ ಗೆಳೆಯನೂ ಜೊತೆಗಿದ್ದಾಗ ಹೋಟಲಿಗೆ ಕರಕೊಂಡು ಹೋಗಿದ್ದರು. ಇವತ್ತು ಸುಧಾಕರ ಕ್ಲಾಸಿಗೇ ಬಂದಿರಲಿಲ್ಲ, ತಾನೊಬ್ಬನೇ ಆಗಿಬಿಟ್ಟಿದ್ದಾನೆ. ಯಾಕೆ ಇರಕ್ಕೆ ಹೇಳಿದ್ದರು ಅಂತ ಸೀನುವಿಗೆ ಗಾಬರಿ. ಏನಾದರೂ ಮಾಡಿಬಿಟ್ಟರೆ ? ಛೇ, ತಿಂಡಿಕೊಡಿಸಿದರು, ಎಷ್ಟು ವಿಶ್ವಾಸವಾಗಿ ಮಾತಾಡಿಸ್ತಾರೆ, ಅವರು ಎಷ್ಟೊಂದು ಒಳ್ಳೆಯವರು ಎಂದುಕೊಂಡಾಗ ಮನೆಗೆ ಓಡಿಬಿಡೋಣ ಅನ್ನಿಸಿದ್ದ ಸೀನುವಿನ ಮನಸು ಅವರನ್ನು ಕಾಯುವಂತೆ ಮಾಡಿತ್ತು.

ಕಾಯಲು ತೊಡಗಿ ಸಾಕಷ್ಟು ಹೊತ್ತಾಗಿತ್ತು. ಹುಡುಗರೆಲ್ಲ ಆಗಲೇ ಸ್ಕೂಲಿಂದ ಹೊರಟು ಹೋಗಿ ಎಲ್ಲ ಬಿಕೋ ಎನಿಸುತ್ತಿತ್ತು. ಮೇಷ್ಟರುಗಳ ಒಂದು ಗುಂಪು ಜೋರಾಗಿ ನಗುತ್ತ ಮಾತಾಡುತ್ತ ಈ ಕಡೆಯೇ ಬಂದಾಗ ಸೀನು ಮರದ ಹಿಂದೆ ಕಣ್ತಪ್ಪಿಸಿ ನಿಂತುಕೊಂಡ. ಅವರೆಲ್ಲ ಮುಂದೆ ಹೋದ ಮೇಲೆ ಈಚೆ ಬಂದು ಮತ್ತೆ ಶಿವರಾಂಗೆ ಕಾಯುತ್ತ ನಿಂತ. ಶಿವರಾಂ ಆಕಡೆ ಈ ಕಡೆ ನೋಡುತ್ತ ಕೊನೆಗೂ ಬಂದರು. ಇವನ ಕಡೆ ಕೈಬೀಸಿ ''ಬಾ'' ಎಂದರು. ಇವನು ಜೊತೆಯಲ್ಲಿ ಹೊರಟ.

ಆದರೆ ಅವರು ಹೊರಟ ದಾರಿ ಮಾವಳ್ಳಿಯ ಕಡೆ ಅಲ್ಲ, ಇನ್ನೊಂದು ದಿಕ್ಕಿಗೆ. ''ನಮ್ಮನೆ ಈ ಕಡೆ ಸಾರ್'' ಅಂದ ಸೀನು. ''ಇರಲಿ ಬಾ, ಹೋಗೋಣವಂತೆ'' ಎಂದು ಕೈಹಿಡಿದುಕೊಂಡು ಎಳೆದರು. ಮತ್ತೆ ಸೀನುವಿಗೆ ಗಾಬರಿಯಾಗತೊಡಗಿತು. ಆದರೆ ಅವರು ಕರೆತಂದದ್ದು ಎಂದಿನಂತೆ ಹೋಟಲ್ ಬಳಿ ; ಈಗ ಸೀನುವಿನ ಗಾಬರಿ ಸ್ವಲ್ಪ ಕಡಿಮೆಯಾಗಿತ್ತು. ಒಳ ಹೋಗುವಾಗ ಅವನಿಗೆ ನಾಚಿಕೆಯೋ ನಾಚಿಕೆ. ಅಷ್ಟೊಂದು

ಪರಿಚಯವಿಲ್ಲದಿದ್ದ ಶಿವರಾಂ ನನಗೇಕೆ ತಿಂಡಿ ಕೊಡಿಸಬೇಕು ಎಂದು ಅವನಿಗೆ ಆಶ್ಚರ್ಯವಾಗಿತ್ತು. ಅಪ್ಪ ಎಂದೂ ತನ್ನನ್ನು ಹೋಟಲಿಗೆ ಕರೆದುಕೊಂಡು ಹೋದವರಲ್ಲ ಎಂದು ಅಂದುಕೊಂಡ. ಸೀನು ಊಟಮಾಡಿ ಆಗಲೇ ಹೊತ್ತಾಗಿತ್ತು. ಕೆಲವು ಸಾಹುಕಾರ ಹುಡುಗರು ಬೇಕಾದಷ್ಟು ದುಡ್ಡು ಖರ್ಚುಮಾಡಿ ಅದೂ ಇದೂ ತಿನ್ನುತ್ತಿದ್ದರು. ತನಗೆ ಅಪ್ಪನೆಂದೂ ದುಡ್ಡುಕೊಟ್ಟವರಲ್ಲ, ಜ್ಯಾಮಿಟ್ರಿ ಬಾಕ್ಸಿನ ದುಡ್ಡು ಖರ್ಚು ಮಾಡಲು ಇಷ್ಟವಿಲ್ಲ. ಹೀಗಾಗಿ ಇವತ್ತು ಹೋಟಲಿನ ತಿಂಡಿ ಅವನಿಗೆ ಆಪ್ಯಾಯವಾಗಿ ಕಂಡಿತು. ಆದರೆ ತಿನ್ನುವಾಗಲೂ ನಾಚಿಕೆಯ ಮುದ್ದೆಯಾಗಿಯೇ ಕುಳಿತಿದ್ದ. ಅದೂ ಇದೂ ಶಿವರಾಂ ಕೇಳುತ್ತಿದ್ದರು ; ಆಗ ಮಾತ್ರ ಇವನು ಮಾತಾಡಲೇಬೇಕಾಗಿತ್ತು.

ಹೋಟಲಿಂದ ಹೊರಬಂದ ಮೇಲೆ ಶಿವರಾಂ ಅವರು "ಸಿನಿಮಾಕೆ ಕರ್ಕೊಂಡು ಹೋಗ್ತೀನಿ ಬರ್ತೀಯಾ ?" ಅಂದರು. ಈಗಂತೂ ಸೀನು ಬೆವರತೊಡಗಿದ. ತಿಂಡಿಕೊಡಿಸಿದ್ದೂ ಅಲ್ಲದೆ ಸಿನಿಮಾಕ್ಕೆ ಕರ್ಕೊಂಡು ಹೋಗ್ತಾರಂತೆ. ಅವನು ಈ ಊರಿಗೆ ಬಂದ ಮೇಲೆ ಸಿನಿಮಾ ನೋಡಿರಲೇ ಇಲ್ಲ, ಹೊನ್ನಕುಡಿಕೆ ಜಾತ್ರೆಯಲ್ಲಿ ನೋಡಿದ ಸಿನಿಮಾ ಆದಮೇಲೆ ಯಾವುದಕ್ಕೂ ಹೋಗಿರಲಿಲ್ಲ, ಇಲ್ಲಿ ಯಾರೂ ತನ್ನನ್ನು ಕರೆದುಕೊಂಡು ಹೋಗಿರಲಿಲ್ಲ, ಸಿನಿಮಾ ನೋಡುವ ಆಸೆಯೇನೂ ಅವನನ್ನು ಅಲುಗಾಡಿಸಿತು. "ದುಡ್ಡಿಲ್ಲ" ಅಂದ ಮೃದುವಾಗಿ. "ನಾನು ಕರ್ಕೊಂಡು ಹೋಗ್ತೀನಿ ಅಂದೆನಲ್ಲ ಬಾ, ಪರವಾಗಿಲ್ಲ" ಅಂದರು ಶಿವರಾಂ, ಸೀನುವಿಗೆ ಮನೆಯಲ್ಲಿ ಹೇಳದೇ ಕೇಳದೆ ಹೋದರೇನೋ ಎನಿಸಿತು.

"ಮನೇಲಿ ಬಯ್ತಾರೆ" ಎಂದ.

"ಯಾಕ ಬಯ್ತಾರೆ. ಇವತ್ತು ಮಧ್ಯಾಹ್ನ ರಜಾ ತಾನೇ ಕೊಟ್ಟಿರೋದು ? ಸ್ಕೂಲು ಬಿಡೋ ಹೊತ್ತಿಗೆ ಸಿನಿಮಾ ಬಿಡತ್ತಲ್ಲ"

"ಮಧ್ಯಾಹ್ನಾನೇ ಸ್ಕೂಲು ಬಿಟ್ಟರೆ ಇಷ್ಟೊತ್ತಾಗ್ತಿ ಯಾಕೆ ಬಂದರೆ ಅಂದರೆ."

"ನಿಮ್ಮ ಮನೆಯೋರಿಗೆ ಹೇಗೆ ಗೊತ್ತಾಗತ್ತೆ, ಎಲ್ಲ ಸ್ಕೂಲುಗಳಿಗೂ ರಜ ಇಲ್ಲ, ನಮ್ಮ ಸ್ಕೂಲಿಗೆ ಮಾತ್ರ. ಸತ್ತೋದೋರು ಹಿಂದೆ ನಮ್ ಸ್ಕೂಲ್ ಹೆಡ್ಮಾಸ್ಟ್ರಾಗಿದ್ದೋರು. ಆದಕ್ಕೆ ನಮಗ ಮಾತ್ರ ರಜ."

ಸೀನುವಿಗೆ ಏನು ಉತ್ತರ ಕೊಡಬೇಕೋ ತಿಳಿಯಲಿಲ್ಲ, ಸುಮ್ಮನಿದ್ದ. ಶಿವರಾಂ ಅವರೇ ಕೇಳಿದರು. "ನಿಮ್ಮನೇ ಹತ್ರ ನಮ್ಮ ಸ್ಕೂಲಿಗೆ ಬರೋಹುಡುಗರು ಯಾರಾದ್ರೂ ಇದಾರಾ ?" ಸೀನು ಜ್ಞಾಪಿಸಿಕೊಂಡ, ತನಗೆ ಗೊತ್ತಿದ್ದಂತೆ ಯಾರೂ ಇರಲಿಲ್ಲ "ಊಹ್ಞೂ" ಅಂದ

"ಮತ್ತೆ ನಿಮ್ಮನೆಯೋರಿಗೆ ಗೊತ್ತಾಗ್ತೋದೇ ಇಲ್ಲ, ನಡಿ."

ಸೀನು ಅವರ ಮಾತಿಗೆ ಸೋತಿದ್ದ. ಮಾರ್ಕೆಟ್ ಹತ್ತಿರ ಬಂದರು. ಅಲ್ಲಿನ ಸಿನಿಮಾಕ್ಕೆ ಹೋದರು. ಹೊನ್ನಕುಡಿಕೆ ಜಾತ್ರೆಯಲ್ಲಿ ನೋಡಿದ್ದ ಸಿನಿಮಾಕ್ಕಿಂತ ಇದು

ಚೆನ್ನಾಗಿತ್ತು, ಬಣ್ಣದ ಸಿನಿಮಾ ಬೇರೆ, ಒಳ್ಳೆ ಸೀಟುಗಳು. ಅಲ್ಲಿ ನೋಡಿದ್ದು ನೆಲದ ಮೇಲೆ ಕತು, ಇಲ್ಲಿ ಕುರ್ಚಿಯ ಮೇಲೆ ಕೂತು ಕಾಲು ಇಳಿಬಿಟ್ಟುಕೊಂಡು ಮಜವಾಗಿ ಸಿನಿಮಾ ನೋಡಬಹುದು. ಸಿನಿಮಾ ನೋಡುವುದರಲ್ಲಿ ಸೀನು ತನ್ಮಯನಾಗಿ ಬಿಡುತ್ತಿದ್ದ. ಆದರೆ ಶಿವರಾಂ ಮಧ್ಯೆ ಮಧ್ಯೆ ಏನಾದರೂ ಮಾತಾಡುತ್ತಿದ್ದರು. ಅವನಿಗೆ ಬೇಜಾರು, ಕೋಪ. ಆದರೆ ಅವರೇ ತನ್ನನ್ನು ಇಲ್ಲಿಗೆ ಕರಕೊಂಡು ಬಂದಿರುವುದು ಎಂಬ ಪ್ರಜ್ಞೆ ಅವನು ಉತ್ತರಿಸುವಂತೆ ಮಾಡುತ್ತಿತ್ತು.

ಸಿನಿಮಾ ಮುಗಿಯುವ ಹೊತ್ತಿಗಾಗಲೇ ಸಂಜೆಯಾಗಿತ್ತು. ಶಿವರಾಂ ಮಾವಳ್ಳಿಯ ಕಡೆಗೇ ಕರೆದುಕೊಂಡು ಹೋದರು. ಆದರೆ ಈ ಸಲವೂ ತಮ್ಮ ಮನೆಯ ದಾರಿ ತುಳಿಯುತ್ತಿರಲಿಲ್ಲ, ಒಂದನೇ ಮೈನ್‌ಗೆ ಬಂದರು. ''ನಾನು ಈ ಕಡೇನೇ ಹೋಗ್ತೀನಿ ಸಾರ್'' ಎಂದು ಸೀನು ನಿಂತಾಗ ''ಬಾ ಇರ್ಲಿ, ಇನ್ನೂ ತುಂಬ ಹೊತ್ತಾಗಿಲ್ಲ; ನಮ್ಮ ರೂಂ ನೋಡಿಕೊಂಡು ಹೋಗು'' ಎಂದು ಕೈ ಹಿಡಿದೆಳೆದರು. ಒಂದನೇ ಮೈನ್‌ನ ತುದಿಯ ಮನೆಯ ಮಹಡಿ ಮೇಲೆ ಶಿವರಾಂ ಅವರ ರೂಮು. ಅವರೊಬ್ಬರೇನಂತೆ ಅಲ್ಲಿರೋದು, ಒಂದು ಹಾಸಿಗೆ, ಕುರ್ಚಿ ಕೆಲವು ಪಾತ್ರೆಗಳು, ಒಂದು ಸ್ಟವ್ ಅಲ್ಲಿತ್ತು. ಹೀಗೆ ಒಬ್ಬರೇ ಇದ್ದರೆ ಚೆನ್ನಾಗಿರುತ್ತೇನೋ ಎಂದು ಸೀನುವಿಗನ್ನಿಸಿತು.

ರೂಮಿಗೆ ಬಂದ ಮೇಲೆ ''ಕೂತುಕೋ'' ಎಂದರು ''ಕಾಫಿ ಮಾಡಲಾ ? ಕುಡೀತೀಯಾ'' ಎಂದರು. ಇವನು ಕೂತ, ಕಾಫಿ ಬೇಡ ಎಂದ, ಹೊತ್ತಾಯಿತು, ಮನೆಗೆ ಹೋಗಬೇಕು ಎಂದು ಚಡಪಡಿಸಿದ. ''ಹೊತ್ತೇನೂ ಜಾಸ್ತಿ ಆಗಿಲ್ಲ, ಸುಮ್ನಿರು ನಾನು ನಿನ್ನನ್ನು ನಿಮ್ಮ ಮನೇವರೆಗೂ ಬಿಟ್ಟುಬರ್ತೀನಿ, ಹೆದರ್ಕೋ ಬೇಡ'' ಅಂದರು ಆದರೂ ಸೀನುವಿಗೆ ಕಳವಳ. ಇಷ್ಟು ದಿನವೂ ಸ್ಕೂಲು ಬಿಟ್ಟ ಮೇಲೆ ನೇರವಾಗಿ ಮನೆಗೆ ಹೋಗುತ್ತಿದ್ದವನು, ಇವತ್ತು ಕ್ರಮ ತಪ್ಪಿತ್ತು. ಮಧ್ಯಾಹ್ನವೇ ಸ್ಕೂಲು ಮುಗಿದಿದ್ದರೂ ತಾನಿನ್ನೂ ಮನೆಗೇ ಹೋಗಿಲ್ಲವೆಂಬ ನೆನಪು ಅವನಲ್ಲಿ ಭಯವುಂಟುಮಾಡಿತ್ತು. ಆದರೆ ಇವರು ತನ್ನನ್ನು ಹೋಗಲು ಬಿಡುತ್ತಿಲ್ಲವೆಂದು ಶಿವರಾಂ ಅವರ ಮೇಲೆ ಕೋಪಬರುತ್ತಿತ್ತು.

ಶಿವರಾಂ ಪ್ಯಾಂಟು ಬಿಚ್ಚಿ ಪಂಚೆ ಉಟ್ಟುಕೊಂಡು. ''ಇಲ್ಲೇ ಕೂತಿರು'' ಎಂದು ಹೇಳಿ ರೂಮಿಂದ ಹೊರಹೋಗಿ ಮುಖ ತೊಳೆದು ಬಂದರು. ಆ ಮೇಲೆ ರೂಮು ಬಾಗಿಲು ಹಾಕಿದರು. ಸೀನುವಿಗೆ ಈಗ ಭಯ ಜಾಸ್ತಿಯಾಯಿತು. ತನ್ನ ಹತ್ತಿರವೇ ಅವರು ಬಂದು ಕೂತಾಗಲಂತೂ ಇವನ ಮೈ ಹಿಡಿಯಷ್ಟಾಯಿತು. ಸರಿದುಕೂತ, ಗೋಡೆಯ ಹತ್ತನಾಗಿ ಸರಿದ. ''ಯಾಕೆ ಇಷ್ಟು ಸಂಕೋಚ'' ಎಂದು ಶಿವರಾಂ ಇವನ ಭುಜದ ಮೇಲೆ ಕೈ ಹಾಸಿದರು. ಇವನಿಗೆ ಹೇಗೆ ಹೇಗೋ ಆಯಿತು, ಕೊಸರಿಕೊಂಡರೂ ಅವರು ಮತ್ತೆ ಮತ್ತೆ ಮುಟ್ಟುತ್ತಲೇ ಇದ್ದರು. ಕೊನೆಗೆ ಅವರ ಕೈ ಚಡ್ಡಿಯಿಂದ ಹೊರತಾಗಿ ಉಳಿದಿದ್ದ ತೊಡೆಯ ಮೇಲೆ ಬಂತು. ಇವನಿಗೆ ವಿಪರೀತ ನಾಚಿಕೆಯಾಯ್ತು. ಅವರು ಇನ್ನೂ ಮುಂದುವರಿಯಲು ತೊಡಗಿದಾಗ ಸೀನು ಎದ್ದು ನಿಂತ. ಹೊತ್ತಾಗತ್ತೆ ಮನೇಲಿ ಬಯ್ತಾರೆ ಎಂದು ಬಾಗಿಲಿನೆಡೆ

ಹೊರಟ, ಅವರು ಕೈಹಿಡಿದೆಳೆದರು. ಕೆನ್ನೆ ಚಿವುಟಿದರು. "ನಿನ್ನೇನೂ ಮಾಡಲ್ಲ ಕಣೋ" ಎಂದರು, ಆದರೂ ಎಲ್ಲೆಲ್ಲೋ ಅವರ ಕೈ ತನ್ನ ಮೈಮೇಲೆ ಸುಳಿಯತೊಡಗಿದಾಗ ಸೀನು ಬೆವರುವಂತಾಯಿತು, ಎದೆ ಡವಗುಟ್ಟಲು ತೊಡಗಿತು. ಪ್ರತಿಭಟಿಸತೊಡಗಿದ. ಅವರು ಇನ್ನೂ ತೀವ್ರವಾಗಿ ತಮ್ಮ ಚಟುವಟಿಕೆ ಮುಂದುವರಿಸಿದರು. ಇವರ ತನ್ನನ್ನು ಕತ್ತು ಹಿಸುಕಿ ಕೊಂದೇಬಿಡುತ್ತಾರೇನೋ ಅನ್ನಿಸಿತು ಸೀನುವಿಗೆ. ಹೋಟೆಲಿಗೆ ಕರೆದುಕೊಂಡು ಹೋದಾಗ ಹೂವಿನಂತೆ ಕಂಡಿದ್ದ ಅವರೀಗ ಬೆಳೆದು ಬೆಳೆದು ಹಾವಾಗುತ್ತಿದ್ದಾರೇನೋ ಎಂದು ಅವನಿಗೆ ಭಾಸವಾಯ್ತು. ತನ್ನನ್ನು ಅವರು ಕೊಂದು ಬಿಡುವುದಕ್ಕೆ ಮುಂಚೆ ಇಲ್ಲಿಂದ ತಪ್ಪಿಸಿಕೊಂಡು ಹೋಗಿಬಿಡ ಬೇಕೆಂದೆನಿಸಿ ಅವರನ್ನು ನೂಕಿ ಬಾಗಿಲಿನೆಡೆಗೆ ಬಂದ. ಅವರು ಕೋಪದಿಂದ "ರ‍್ಯಾಸ್ಕಲ್ ತಿಂಡಿ ತಿಂದು, ಸಿನಿಮಾ ನೋಡಿ ಈಗ ನನ್ನೇ ನೂಕ್ತೀಯಾ !" ಎಂದು ಇವನನ್ನು ಹಿಡಿದರು. ತನ್ನ ಕೊನೆಗಾಲ ಬಂತೇನೋ ಎಂಬ ಭಯದ ಜೊತೆಗೆ ಆವೇಶ ಸೀನುವಿನಲ್ಲಿ ಹೊಕ್ಕಿತ್ತು, ತನ್ನ ರೆಟ್ಟೆ ಹಿಡಿದ ಅವರ ಕೈ ಬೆರಳುಗಳನ್ನು ಜೋರಾಗಿ ಕಚ್ಚಿದ, ಅವರು ನೋವಿನಿಂದ ಕೈಬಿಟ್ಟರು. ಸೀನು ಮಿಂಚಿನಂತೆ ಚಿಲಕ ತೆಗೆದು ಮೆಟ್ಟಿಲಿಳಿದು ದಾರಿಯಲ್ಲಿ ನಡೆದುಬಿಟ್ಟ.

ಎದೆ ಭಯಂಕರವಾಗಿ ಹೊಡೆದುಕೊಳ್ಳುತ್ತಿತ್ತು, ತನ್ನನ್ನು ಯಾಕೆ ಅವನು ಕೊಲ್ಲಲು ಪ್ರಯತ್ನಪಟ್ಟ ಅನ್ನಿಸಿ ತನ್ನ ಅಸಹಾಯಕತೆಗೆ ಅಳು ಬರುವಂತಾಯಿತು. ಎದೆಯ ಬಡಿತಕ್ಕೆ ತಕ್ಕಂತೆ ಹೆಜ್ಜೆ ವೇಗವಾಯಿತು. ಕಾಲುಗಳು ಅವಿಗರಿವಿಲ್ಲದೆಯೇ ಮನೆಯೆಡೆಗೆ ಬಂದುವು. ಅವನ ಮನಸ್ಸಿನಲ್ಲಿ ಭಯ ಗಾಬರಿಬಿಟ್ಟು ಇನ್ನೇನೂ ಇರಲಿಲ್ಲ.

ಮನೆಗೆ ಬಂದಾಗ ತಂದೆ "ಯಾಕೆ ಇಷ್ಟೊತ್ತು ?" ಎಂದರು. ಅವರ ಧ್ವನಿ ಗಡುಸಾಗಿದ್ದಂತೆ ಸೀನುವಿಗೆ ತೋರಿದಾಗ ಅವನ ಭಯ ಹೆಚ್ಚಾಯಿತು. ಅವರ ಮುಖದೆಡೆಗೆ ತಿರುಗಿದಾಗ ಶಿವರಾಂ ಮುಖ ಕಂಡಂತಾಗಿ ಬೆವರಲಾರಂಭಿಸಿದ. ತಾನು ಯಾಕೆ ಲೇಟಾಗಿ ಬಂದೆ ಎಂದು ಸುಳ್ಳು ಉತ್ತರಹೇಳಲು ಅವನಿಗೆ ತೋಚಲಿಲ್ಲ. ಇಲ್ಲಿಯವರೆಗೆ ಅವನು ಭಯಗ್ರಸ್ತನಾಗಿದ್ದುದರಿಂದ ಈ ಪ್ರಶ್ನೆಗೆ ಉತ್ತರ ತಯಾರಿಸಿ ಕೊಳ್ಳಲಾಗಿರಲಿಲ್ಲ , ಅವನೇನೂ ಉತ್ತರಿಸದಿದ್ದಾಗ ತಂದೆ "ನಿನ್ನೇ ಕೇಳ್ತಿರೋದು ; ಯಾಕೋ ಇಷ್ಟು ಹೊತ್ತು ?" ಏನು ಹೇಳಬೇಕೆಂದು ಸೀನುವಿಗೆ ಹೊಳೆಯಲೇ ಇಲ್ಲ. ಸೀನುವಿನ ತುಟಿಗಳು ಅದುರಿದವೇ ಹೊರತು ಮಾತು ಹೊರಡಲಿಲ್ಲ. "ಕೇಳಿಸ್ಲಿಲ್ಲೇನೋ ?" ಅಪ್ಪನ ಕೋಪ ಜಾಸ್ತಿಯಾದಂತೆನಿಸಿ ಇವನೂ ತನ್ನನ್ನು ಕೊಲ್ತುತ್ತಾನೇನೋ ಎಂಬ ಭಯ ಅವನಿಗಾಯಿತು. ಯಾಕೆ ಇವರೆಲ್ಲ ತನ್ನನ್ನು ಕೊಲ್ಲಲು ಯೋಚಿಸುತ್ತಿದ್ದಾರೆ. ಇವರೆಲ್ಲರಿಗೂ ತನ್ನ ಮೇಲೇಕೆ ಕಣ್ಣು, ತನ್ನನ್ನು ರಕ್ಷಿಸುವವರೇ ಇಲ್ಲವೆಂದು ಅವನಿಗೆ ಅಳು ಬಂತು. "ಲೇಟಾಗಿ ಯಾಕೋ ಬಂದೆ ಅಂದರೆ, ಅಳ್ತೀಯಾ ?" ಅಪ್ಪನ ಮೈ ಮೇಲೆ ಹೋದಾಗ ಅಮ್ಮ ಬಂದು ನಿಲ್ಲಿಸಿದರು. "ಏನೋ ಪಾಪ ಅಂದ್ರೆ, ಹೇಳೋರು ಕೇಳೋರು ಇಲ್ಲವಾ ನಿಂಗೆ ? ಹೀಗೆ ಮಾಡಿದರೆ ಪೆಮ್ಮನಹಳ್ಳೀಗೇ ಸಾಗುಹಾಕ್ತೀನಿ ನಿನ್ನ" ಅಪ್ಪನ ಗೊಣಗಾಟ

ಕೇಳುತ್ತಿತ್ತು. ಹುಡುಗರೆಲ್ಲ ಬಿಟ್ಟಗಣ್ಣಿಂದ ನೋಡುತ್ತಿರುವಾಗ ಇವರೆಲ್ಲರೂ ತನ್ನನ್ನು ಸುತ್ತುವರಿದುಬಿಟ್ಟಿದ್ದಾರೆ ಅನ್ನಿಸಿತು ಸೀನುವಿಗೆ.

ಮಲಗಿಕೊಂಡರೆ ಸೀನುವಿಗೆ ನಿದ್ದೆಯೇ ಬಾರದು. ಶಿವರಾಂನ ಕೈಗಳು ಎರಡೂ ಕಡೆಗಳಿಂದ ತನ್ನ ಕತ್ತನ್ನು ಬಳಸುತ್ತಿರುವಂತನಿಸಿ ಹಲವಾರು ಬಾರಿ ಬೆಚ್ಚಿದ. ಅವನು ನನ್ನನ್ನು ಯಾವತ್ತಾದರೂ ಕೊಂದೆಬಿಡ್ತಾನೇನೋ. ಇವತ್ತು ತಪ್ಪಿಸಿಕೊಂಡರೂ ಪ್ರತಿನಿತ್ಯ ಸ್ಕೂಲಿಗೆ ಹೋಗಲೇಬೇಕಲ್ಲ, ಇನ್ನು ಯಾವತ್ತಾದರೂ ಅವನ ಕೈಗೆ ಸಿಕ್ಕಿ ಹಾಕಿಕೊಂಡೇ ತೀರುತ್ತೇನಲ್ಲ. ಎಲ್ಲ ಕಡೆಯೂ ಶಿವರಾಮ್‌ನ ಕೈಗಳು ಕಾಣಿಸತೊಡಗಿದವು. ಅವನ ಬೆರಳನ್ನು ತಾನು ಕಚ್ಚಿದಂತೆ ಎರಡು ಕೈಗಳ ಎಲ್ಲಾ ಬೆರಳುಗಳನ್ನು ಕಚ್ಚಿ ಕಚ್ಚಿ ಉದುರಿಸಿ ಬಿಟ್ಟರೆ ತನ್ನನ್ನು ಅವನು ಹಿಡಿದುಕೊಳ್ಳಲು ಸಾಧ್ಯವೇ ಆಗುವುದಿಲ್ಲವಲ್ಲ. ಆದರೆ ಅವನ ಎಲ್ಲ ಬೆರಳುಗಳನ್ನೂ ಕಡಿದು ಹಾಕಲು ತನಗೆ ಶಕ್ತಿಯಿದೆಯೇ ? ಅವನಿಂದ ತಪ್ಪಿಸಿಕೊಂಡು ಬರಲು ಎಷ್ಟು ಕಷ್ಟವಾಯಿತು ; ಇನ್ನು ಬೆರಳನ್ನೆಲ್ಲ ಕಚ್ಚಿ ಹಾಕಲು ಸಾಧ್ಯವೇ? "ಹಿಟ್ಟಂ ಬಿಟ್ಟಂ ಕೆಟ್ಟಂ ; ಹಿಟ್ಟಂ ತಿಂದಂ ಬೆಟ್ಟಂ ಕಿತ್ತಿಟ್ಟಂ" ಎಂಬ ಧ್ವನಿ ಎಲ್ಲೋ ಕೇಳಿಸಿತು, ಯಾರದು ಆ ಧ್ವನಿ ಎಂದು ಸೀನು ಜ್ಞಾಪಿಸಿಕೊಳ್ಳಲು ತೊಡಗಿದ, ಯಾರೋ ಪರಿಚಿತರದ್ದೇ ಇದ್ದ ಹಾಗಿದೆಯಲ್ಲ, ಹ್ಞಾ, ಹೌದು ಮಾವ ಹೇಳುತ್ತಿದ್ದ ಪದ್ಯ ಅದು. ಹಿಟ್ಟು ತಿಂದರೆ ಮೈಗಟ್ಟಿಯಾಗುತ್ತೆ ಬೆಂಗಳೂರಲ್ಲಿ ರಾಗಿ ಮುದ್ದೆ ಊಟ ಇಲ್ಲ, ಇಲ್ಲೆ ಬಾ, ಎಂದು ಮಾವ ಕರೆಯುತ್ತಿದ್ದಂತಾಯಿತು. ಅತ್ತೆ ತನ್ನ ಕಡೆ ಕೈಚಾಚುತ್ತಿದ್ದರೆ ಅವರ ಕೈ ಉದ್ದವಾಗುತ್ತ ಉದ್ದವಾಗುತ್ತ ಬಂತು. ತನ್ನ ಕಾಲುಗಳ ಕೆಳಗೆ ಅವರ ಅಂಗೈ ಬಂತು. ತನ್ನನ್ನು ಎತ್ತಿ ಆಕಾಶದಷ್ಟು ಮೇಲೆತ್ತಿ ತಿರುಗಿಸಿದಾಗ ತನಗೆ ಬಸ್ಸಲ್ಲಿ ಕೂತು ಹೋಗುತ್ತಿರುವಂತೆ ಭಾಸವಾಗುತ್ತದೆಯಲ್ಲ ! ಅಂಗೈಯನ್ನು ಮತ್ತೆ ನೆಲದ ಮೇಲಿರಿಸಿದಾಗ ಅತ್ತೆ ಮನೆಯ ನಡುಮನೆಯಲ್ಲಿ ಊಟಕ್ಕೆ ಕುಳಿತಿದ್ದಾನೆ! ಮುದ್ದೆಗಳು, ರಾಗಿ ಮುದ್ದೆಗಳು ಎಲೆಯ ಮೇಲೆ ಉರುಳಾಡುತ್ತಿವೆ. ಗೊಜ್ಜನ್ನು ಅವುಗಳ ಮೇಲೆ ಯಾರೋ ಸುರಿಯುತ್ತಿದ್ದಾರೆ. ಮುದ್ದೆಗಳು ಒಂದೊಂದಾಗಿ ಜಿಗಿದು ಜಿಗಿದು ತನ್ನ ಬಾಯಲ್ಲಿ ಬಂದು ಬೀಳುತ್ತಿವೆ. ತನ್ನ ಕೈ ಕಾಲ ಮೈಯೆಲ್ಲ ಬೆಳೆದು ಬೆಳೆದು ದೊಡ್ಡದಾಗಿಬಿಟ್ಟಿವೆ. ಎದ್ದು ನಿಂತರೆ ತಾನು ಬೆಟ್ಟದ ಹಾಗೆ ಆಗಿಬಿಟ್ಟಿದ್ದಾನೆ! ದೂರದಲ್ಲಿ ಶಿವರಾಮ್‌ನ ಕಡೆಗೆ ಕೈ ಚಾಚಿ ಮೇಲೆತ್ತಿ ಒಂದೇಟು ಕೊಟ್ಟಾಗ ಅವನ ಕಚಕ್ ಎಂದು ನೆಲಕ್ಕೆ ಅಂಟಿಕೊಂಡುಬಿಡುತ್ತಾನೆ. ಸ್ಕೂಲುಬೆಲ್ಲು ಹೊಡೆದಂತಾಗುತ್ತದೆ. ಆದರೆ ಅದರಿಂದ ಶಬ್ದಕ್ಕೆ ಬದಲು "ಪೆಮ್ಮನಹಳ್ಳಿಗೇ ಸಾಗು ಹಾಕ್ತೀನಿ, ಪೆಮ್ಮನಹಳ್ಳಿಗೆ ಸಾಗುಹಾಕ್ತೀನಿ" ಎಂಬ ಮಂತ್ರ ಕೇಳಿಸುತ್ತದೆ. ಇದು ಹಾಗಾದರೆ ಸ್ಕೂಲು ಬೆಲ್ಲಲ್ಲ, ಕಿವಿಗೊಟ್ಟು ಕೇಳಿದರೆ ಅದು ಜೋಯಿಸರು ಈಶ್ವರನ ಗುಡಿಯಲ್ಲಿ ಪೂಜೆ ಮಾಡುವಾಗ ಹೇಳುತ್ತಿದ್ದ ಮಂತ್ರದ ಹಾಗೆ ಕೇಳಿಸುತ್ತದೆ.

ಬೆಳಿಗ್ಗೆ ಎಚ್ಚರಾದ ಮೇಲೆ ಹೊರಗಿನ ಮನೆಯ ವಾತಾವರಣ ಕಂಡು ತಾನು ನೋಡಿದ್ದು ಕನಸೆನಿಸುತ್ತದೆ. ಆದೇ ಮೈಯನ್ನೆಲ್ಲ ತುಂಬಿಕೊಂಡಿದೆಯೇನೋ ಇನ್ನೂ ಅನ್ನಿಸುತ್ತದೆ. ಇದ್ದಕ್ಕಿದ್ದಂತೆ ಉತ್ಸಾಹ ಬಂದಂತೆನಿಸುತ್ತದೆ.

ಬ್ಯಾಗು ಹೆಗಲಿಗೇರಿಸಿಕೊಂಡು ಸ್ಕೂಲಿನಡೆಗೆ ಯಥಾಪ್ರಕಾರ ಹೊರಡುತ್ತಾನೆ. ಅವತ್ತು ಮಳೆ ಬಂದಾಗ ನಿಂತಿದ್ದನಲ್ಲ, ಆ ಅಂಗಡಿಗಳ ಹತ್ತಿರ ಬಂದಾಗ ಪಾವಗಡದ ಬಸ್ ಡ್ರೈವರ್ ಅಲ್ಲಿ ನಿಂತಿರುವಂತೆ ಕಾಣುತ್ತದೆ. ಹನ್ನೊಂದು ಗಂಟೆಗೆ ಪಾವಗಡದ ಬಸ್ ಪ್ರತಿನಿತ್ಯ ಹೋಗುತ್ತಂತಲ್ಲ. ಸೀನು ಬ್ಯಾಗು ತೆರೆದು ನೋಡುತ್ತಾನೆ. ಜ್ಯಾಮಿಟ್ರಿಬಾಕ್ಸ್ ಎಂದಿನಂತೆ ಕಾಣಿಸುತ್ತದೆ. ಅದನ್ನು ಲೊಟಕ್ ಎಂದು ತೆಗೆದು ನೋಡಿದಾಗ ದುಡ್ಡು ಅಲ್ಲೇ ಇದೆ ; ಐದು ರೂಪಾಯಿಯ ಒಂದು ನೋಟು, ಒಂದು ರೂಪಾಯಿಯ ಎರಡು ನೋಟು, ಒಂದು ಎಂಟಾಣೆಯ ನಾಣ್ಯ ! ಆ ನಾಣ್ಯವನ್ನು ತೆಗೆದುಕೊಂಡು ಚಡ್ಡಿ ಜೇಬಿಗೆ ಇಳಿಬಿಡುತ್ತಾನೆ. ಅವನ ಮನಸ್ಸಿಗೆ ಏನೋ ಹೊಳೆದ ಹಾಗಾಗುತ್ತದೆ, ಅವನೇನೋ ನಿರ್ಧಾರ ಕೈಗೊಳ್ಳುತ್ತಾನೆ. ಸ್ಕೂಲು ದಾರಿಬಿಟ್ಟು ಸಿಟಿ ಬಸ್‌ಸ್ಟಾಪ್‌ಗೆ ಬಂದಾಗ ಬಸ್ಸೊಂದು ನಿಂತಿರುತ್ತದೆ. ಜನಗಳ ಮಧ್ಯೆ ತೂರಿ ಬಸ್ಸು ಹತ್ತುತ್ತಾನೆ. ಕಂಡಕ್ಟರ್ ಬಂದಾಗ "ಗೌರ್ಮೆಂಟ್ ಬಸ್‌ಸ್ಟಾಂಡು ಅರ್ಧ ಟಿಕೆಟ್" ಎಂದು ಎಂಟಾಣೆಯ ನಾಣ್ಯ ಕೊಡುತ್ತಾನೆ. ಬಸ್ ಢರ್ ಎಂದು ಹೊರಡುತ್ತದೆ. ಅದರ ವೇಗಕ್ಕೆ ಸರಿಯಾಗಿ "ಪಾವಗಡದ ಬಸ್ ಹನ್ನೊಂದು ಗಂಟೆಗೆ, ಪಾವಗಡದ ಬಸ್ ಹನ್ನೊಂದು ಗಂಟೆಗೆ" ಎಂಬ ಹಾಡು ಅವನ ಕಿವಿಗೆ ಬಿದ್ದಂತಾಗುತ್ತದೆ.
